ಭಾನುವಾರ, ಜೂನ್ 14, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 164 | ಪುಟ 16
www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಚೊಚ್ಚಲ ಪಂದ್ಯದಲ್ಲೇ ಮಿಂಚು

ಹರ್ಷ್ ದುಬೆ ಮತ್ತು ಗುರ್ನೂರ್ ಬ್ರಾರ್ ಅವರು ಶನಿವಾರ ಭಾರತ ಏಕದಿನ ತಂಡಕ್ಕೆ ಪದಾರ್ಪಣೆ ಮಾಡಿದರು. ಅಫ್ಗಾನಿಸ್ತಾನ ವಿರುದ್ಧದ ಪಂದ್ಯದಲ್ಲಿ ಇಬ್ಬರೂ ತಲಾ 3 ವಿಕೆಟ್ ಗಳಿಸಿದರು

ಪ್ರಧಾನಿ 'ಅಘೋರಿ': ರಾವುತ್ ಕಿಡಿ 7

ಖಾತೆ ಬಗ್ಗೆ ಸ್ಪಷ್ಟತೆ ಬೇಕು: ಕೃಷ್ಣ 5



ಸೇನಾ ವಿಮಾನ ಪತನ: ಐವರು ಸಿಬ್ಬಂದಿ ಸಾವು

ನವದೆಹಲಿ (ಪಿಟಿಐ): ರಷ್ಯಾ ನಿರ್ಮಿತ ಆಂಟೊನೊವ್ 'ಎನ್‌–32' ಸೇನಾ ಸಾರಿಗೆ ವಿಮಾನವು ಅಸ್ಸಾಂನ ಜೋರ್ಹಾಟ್‌ನಲ್ಲಿ ಶನಿವಾರ ಪತನಗೊಂಡಿದ್ದು, ಭಾರತೀಯ ವಾಯುಪಡೆಯ (ಐಎಎಫ್) ಐವರು ಸಿಬ್ಬಂದಿ ಮೃತಪಟ್ಟಿದ್ದಾರೆ.

ವಿಮಾನ ಪತನಗೊಳ್ಳುತ್ತಿದ್ದಂತೆಯೇ ಭಾರಿ ಸ್ಫೋಟ ಸಂಭವಿಸಿ ದಟ್ಟ ಹೊಗೆ ಆವರಿಸಿಕೊಂಡಿತು. ದುರಂತ ಸಂಭವಿಸಿದ ತಕ್ಷಣವೇ ಇಡೀ ವಿಮಾನ ನಿಲ್ದಾಣವನ್ನು ಮುಚ್ಚಲಾಯಿತು. ರಕ್ಷಣಾ ತಂಡದವರು ಸ್ಥಳಕ್ಕೆ ಧಾವಿಸಿ, ರಕ್ಷಣಾ ಕಾರ್ಯಾಚರಣೆ ಕೈಗೊಂಡರು.

ಬೆಳಿಗ್ಗೆ 10 ಗಂಟೆ ವೇಳೆಗೆ ನಿಯಮಿತ ಹಾರಾಟ ಮುಗಿಸಿ ಜೋರ್ಹಾಟ್ ನಗರದಿಂದ 7 ಕಿ.ಮೀ. ದೂರದಲ್ಲಿರುವ ರೋರಿಯಾದ ವಾಯುನೆಲೆಯಲ್ಲಿ ಕೆಳಗಿಳಿಯುವ ವೇಳೆ ಈ ಅಪಘಾತ ಸಂಭವಿಸಿದೆ ಎಂದು ಐಎಎಫ್ ತಿಳಿಸಿದೆ.

'ವಿಮಾನವು ನಿಯಂತ್ರಣ ಕಳೆದುಕೊಂಡು ರನ್‌ವೇಯಿಂದ ಜಾರಿ, ಸಮಾನಾಂತರವಾದ ಟ್ಯಾಕ್ಸಿವೇ ನಲ್ಲಿ ಹಾದುಹೋಗಿ ಎರಡು ಭಾಗಗಳಾಗಿ ಛಿದ್ರವಾಗಿ ಬೆಂಕಿ ಹೊತ್ತಿಕೊಂಡಿತು' ಎಂದು ಮೂಲಗಳು ತಿಳಿಸಿವೆ.

'ಎಎನ್‌–32' ಪತನಗೊಂಡು ಐವರು ಸಿಬ್ಬಂದಿ ಮೃತಪಟ್ಟಿದ್ದಕ್ಕೆ ಭಾರತೀಯ ವಾಯುಪಡೆಯು ತೀವ್ರ ವಿಷಾದ ವ್ಯಕ್ತಪಡಿಸುತ್ತದೆ' ಎಂದು ವಾಯುಪಡೆಯು ಪ್ರಕಟಣೆಯಲ್ಲಿ ತಿಳಿಸಿದೆ. 6

'ಗ್ಯಾರಂಟಿ'ಗೆ ಹೊಸ ಅರ್ಜಿ

'ಗೃಹ ಲಕ್ಷ್ಮಿ', 'ಗೃಹ ಜ್ಯೋತಿ'ಯಿಂದ ಅನರ್ಹರ ಹೊರದಬ್ಬಲು ಕ್ರಮ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚ ಗ್ಯಾರಂಟಿ ಯೋಜನೆ ಗಳ ಪೈಕಿ, ಮನೆಯ ಯಜಮಾನಿಗೆ ಪ್ರತಿ ತಿಂಗಳು ₹ 2,000 ನೀಡುವ 'ಗೃಹ ಲಕ್ಷ್ಮಿ' ಮತ್ತು 200 ಯುನಿಟ್‌ವರೆಗೆ ಉಚಿತ ವಿದ್ಯುತ್ ಸೌಲಭ್ಯದ 'ಗೃಹ ಜ್ಯೋತಿ'ಯೋಜನೆಯ ಎಲ್ಲ ಫಲಾನುಭವಿಗಳಿಂದ ಹೊಸದಾಗಿ ಅರ್ಜಿ ಆಹ್ವಾನಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಕುರಿತು ಮಾಹಿತಿ ನೀಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಅರ್ಹ ಫಲಾನುಭವಿಗಳಿಗೆ ಯೋಜನೆ ಗಳು ತಲುಪಬೇಕೆಂಬ ಕಾರಣಕ್ಕೆ ಈ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ, ಯೋಜನೆಯ ಫಲಾನುಭವಿ ಗಳಿಗೆ ಗುರುತಿನ ಚೀಟಿ ನೀಡಲು ಕೂಡಾ ಉದ್ದೇಶಿಸಲಾಗಿದೆ. ಕೆಲವೇ ದಿನಗಳಲ್ಲಿ ಅರ್ಜಿ ಆಹ್ವಾನಿಸಲಾಗುವುದು' ಎಂದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಎಲ್ಲ ಇಲಾಖೆಗಳ ಮುಖ್ಯಸ್ಥರು, ಜಿಲ್ಲಾಧಿಕಾರಿ ಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿ ಗಳ ಜೊತೆ ಶನಿವಾರ ಸುದೀರ್ಘ ಸಭೆ ನಡೆಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಲ್ಲಿ ಕೆಲವರು ನಿಧನರಾಗಿದ್ದಾರೆ. ಆದರೆ, ಅವರ ಹೆಸರಿನಲ್ಲಿ ಬೇರೆಯವರು ಹಣ ಪಡೆಯುತ್ತಿದ್ದಾರೆ. ಹೀಗೆ ₹100 ಕೋಟಿಗೂ ಹೆಚ್ಚು ಹಣ ಫಲಾನು ಭವಿಗಳಲ್ಲದವರ ಪಾಲಾಗಿರುವುದು ಗಮನಕ್ಕೆ ಬಂದಿದೆ. ಹೀಗಾಗಿ, ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪುತ್ತಿ ದೆಯೇ ಇಲ್ಲವೇ ಎಂದು ಪರಿಶೀಲಿಸಿ, ಫಲಾನುಭವಿಗಳ ಪಟ್ಟಿಯನ್ನು ಪರಿಷ್ಕರಿಸಬೇಕಾಗಿದೆ. ನಾವು ಈ ಯೋಜನೆಯನ್ನು ನಿಲ್ಲಿಸುವುದಿಲ್ಲ. ಯಾರನ್ನೂ ತೆಗೆದುಹಾಕುವ ಉದ್ದೇಶವೂ ಸರ್ಕಾರಕ್ಕೆ ಇಲ್ಲ. ಆದರೆ, ಸರಿಯಾದ ಮಾಹಿತಿ ನೀಡುವ ಅರ್ಹ ಫಲಾನುಭವಿ ಗಳಿಗೆ ಯೋಜನೆ ತಲುಪಬೇಕು ಎಂಬ ಉದ್ದೇಶದಿಂದ ಎಲ್ಲ ಫಲಾನುಭವಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸಬೇಕು' ಎಂದು ಅವರು ವಿವರಿಸಿದರು.

'ಗೃಹಜ್ಯೋತಿ ಯೋಜನೆಯ ಫಲಾನುಭವಿಗಳಲ್ಲೂ, ಒಬ್ಬರ ಹೆಸರಿನಲ್ಲಿ ಐದಾರು ಮೀಟರ್‌ಗಳು ಇರುವುದು ಪತ್ತೆಯಾಗಿದೆ' ಎಂದು ಹೇಳಿದರು. 7

ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡೆಸಿದ ಜಿಲ್ಲಾಡಳಿತದ ಮುಖ್ಯಸ್ಥರ ಜತೆಗಿನ ಸಭೆಯಲ್ಲಿ ಸಚಿವರಾದ ಯು.ಟಿ.ಖಾದರ್, ಸತೀಶ ಜಾರಕಿಹೊಳಿ, ಕೆ.ಜೆ.ಜಾರ್ಜ್, ಕೆ.ಎಚ್.ಮುನಿಯಪ್ಪ ಪಾಲ್ಗೊಂಡಿದ್ದರು

ಲಂಚ ಮುಕ್ತ ನಾಡು: ಸಿ.ಎಂ ಪಣ

ಕರ್ನಾಟಕವನ್ನು ಭ್ರಷ್ಟಾಚಾರ ಮುಕ್ತ ರಾಜ್ಯವನ್ನಾಗಿ ರೂಪಿಸಲು ಮುಖ್ಯಮಂತ್ರಿ ಶಿವಕುಮಾರ್ ಪಣತೊಟ್ಟಿದ್ದು, ಸಂಪುಟದ ಸಚಿವರು, ಶಾಸಕರೂ ಈ ಅಭಿಯಾನದಲ್ಲಿ ಕೈಜೋಡಿಸುವಂತೆ ಸೂಚಿಸಿದ್ದಾರೆ.

ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವ ಭಾಗವಾಗಿ ಎಲ್ಲ ಇಲಾಖೆ, ಜಿಲ್ಲಾ, ತಾಲ್ಲೂಕು ಅಧಿಕಾರಿಗಳೂ ಸೇರಿದಂತೆ ಎಲ್ಲ ಸರ್ಕಾರಿ ಕಚೇರಿಗಳಲ್ಲೂ ದೊಡ್ಡ ಫಲಕ ಅಳವಡಿಸಿ, ಲಂಚ ಕೇಳವವರ ವಿರುದ್ಧ ಸಾರ್ವಜನಿಕರು ದೂರು ನೀಡಲು ಅನುಕೂಲವಾಗುವಂತೆ ದೂರವಾಣಿ ಸಂಖ್ಯೆಗಳನ್ನು ಪ್ರದರ್ಶಿಸಲು ಮುಂದಾಗಿದ್ದಾರೆ. 'ಯಾವುದೇ ಕೆಲಸಕ್ಕೂ ಯಾರೂ ಹತ್ತು ರೂಪಾಯಿಯನ್ನೂ ಲಂಚವಾಗಿ ನೀಡಬಾರದು. ಯಾರಾದರೂ ಲಂಚ ಕೇಳಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಚಿವರು, ಶಾಸಕರೂ ನಿಯಮ ಬಾಹಿರ ಕೆಲಸ ಮಾಡುವಂತೆ ಅಧಿಕಾರಿಗಳ ಮೇಲೆ ಒತ್ತಡ ಹಾಕಬಾರದು' ಎಂದರು. 7

ಮಾವು ಬೆಳೆದವರ ನೋವು

ಬೆಳೆಯೂ ಇಲ್ಲ, ಬೆಲೆಯೂ ಇಲ್ಲ, ವೆಚ್ಚವೂ ಸಿಗುತ್ತಿಲ್ಲ

● ಕೆ.ಓಂಕಾರಮೂರ್ತಿ

ಒಳನೋಟ

ಕೋಲಾರ: 'ಚಿಕ್ಕಂದಿನಿಂದಲೂ ಗಮನಿಸಿಕೊಂಡು ಬಂದಿದ್ದೇನೆ. ಮಾವಿನ ಋತುವಿನಲ್ಲಿ ಉತ್ತಮ ಧಾರಣೆ ಸಿಕ್ಕರೆ ರೈತರು ಶುಭ ಕಾರ್ಯ ನಡೆಸುತ್ತಾರೆ. ಇಳುವರಿ ಕಡಿಮೆಯಾದರೆ, ಮಾರುಕಟ್ಟೆಯಲ್ಲಿ ಧಾರಣೆ ಕೈಕೊಟ್ಟರೆ ಮಗಳ ಮದುವೆ ಮುಂದೂಡಿದ್ದುಂಟು, ಮನೆ ಕಟ್ಟುವ ಕಾರ್ಯ ರದ್ದು ಮಾಡಿದ್ದುಂಟು. ಮೂರ್ನಾಲ್ಕು ವರ್ಷಗಳಿಂದ ಬೆಳೆ ನಷ್ಟ, ಬೆಲೆಯಿಲ್ಲದೆ ಸಾಲದ ಶೂಲಕ್ಕೆ ಸಿಲುಕಿದ್ದಾರೆ. ಒಡವೆಗಳನ್ನು ಬ್ಯಾಂಕ್‌ನಲ್ಲಿಟ್ಟು ಬಡ್ಡಿ ಕಟ್ಟುತ್ತಿದ್ದಾರೆ. ಗುಳೆ ಹೋಗುವುದೊಂದೇ ಬಾಕಿ' ಎಂದು ಹೇಳುತ್ತಾರೆ ಕೋಲಾರ ಜಿಲ್ಲಾ ಮಾವು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ನೀಲಟೂರು ಚಿನ್ನಪ್ಪರೆಡ್ಡಿ.

ರಾಜ್ಯದ ಒಟ್ಟು ಮಾವಿನ ಬೆಳೆಯಲ್ಲಿ 3ನೇ ಒಂದು ಭಾಗ ಶ್ರೀನಿವಾಸಪುರ-ದಲ್ಲೇ ವ್ಯಾಪಿಸಿದೆ. 'ಮಾವಿನ ನಗರಿ' ಎಂದೇ ಕರೆಯುವ ಈ ಪ್ರದೇಶದಲ್ಲಿ ಶೇ 90ರಷ್ಟು ರೈತರಿಗೆ ಮಾವು ಬೆಳೆ ಬಿಟ್ಟರೆ ಮತ್ತೊಂದು ಆದಾಯವಿಲ್ಲ. 60ಕ್ಕೂ ಹೆಚ್ಚು ವರ್ಷಗಳಿಂದ ಮಾವಿನ ಕೃಷಿ ನಂಬಿ ಜೀವನ ಸಾಗಿಸುತ್ತಿರುವ ಬೆಳೆಗಾರರು ತಮ್ಮ ಮಕ್ಕಳ ಮದುವೆ ಇರಬಹುದು, ಉನ್ನತ ಶಿಕ್ಷಣ ಕೊಡಿಸುವುದು ಆಗಿರಬಹುದು, ಮನೆ ನಿರ್ಮಾಣ ಇರಬಹುದು, ಆಸ್ಪತ್ರೆ ಖರ್ಚು, ಸಂಸಾರದ ಆಗುಹೋಗು ಮಾವು ಹಂಗಾಮಿನ ಫಸಲು ಹಾಗೂ ಧಾರಣೆ ಮೇಲೆ ಅವಲಂಬಿತ ವಾಗಿರುತ್ತದೆ.

ರೈತರಷ್ಟೇ ಅಲ್ಲ; ಮಂಡಿ ಮಾಲೀಕರು, ವರ್ತಕರು, ಮಧ್ಯವರ್ತಿಗಳು, ಸಾಗಣೆ ವಾಹನಗಳ ಮಾಲೀಕರು, ಚಾಲಕರು, ಕೂಲಿಕಾರರು, ಹಮಾಲಿಗಳು ಸೇರಿದಂತೆ ಅದೆಷ್ಟೊ ಜನರ ಬದುಕಿಗೆ ಮಾವಿನ ಕೃಷಿ ಆಸರೆಯಾಗಿದೆ. ಆದರೆ, ಇಳುವರಿ ಹಾಗೂ ಧಾರಣೆ ಕುಸಿತ ಇಡೀ ಮಾರುಕಟ್ಟೆ ವ್ಯವಸ್ಥೆಗೆ ಹಾಗೂ ಅವಲಂಬಿತರಿಗೆ ಪೆಟ್ಟು ನೀಡಿದೆ.

ಈ ವರ್ಷವೂ ಹವಾಮಾನ ವೈಪರೀತ್ಯದಿಂದ ಬೆಳೆ ಹಾನಿ ಆಗಿದ್ದು, ಮಾರುಕಟ್ಟೆಯಲ್ಲಿನ ಧಾರಣೆ ಕುಸಿತವು ಮಾವು ಬೆಳೆಗಾರರನ್ನು ಹೈರಾಣಾಗಿಸಿದೆ. ಪ್ರಮುಖವಾಗಿ ಕೋಲಾರ, ಚಿಕ್ಕಬಳ್ಳಾ ಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಗಳಲ್ಲಿ ನಾಲ್ಕೈದು ವರ್ಷಗಳಿಂದ ಹವಾಮಾನ ವೈಪರೀತ್ಯ, ಧಾರಣೆಯ ಹಗ್ಗಜಗ್ಗಾಟ, ಕೀಟಬಾಧೆ, ಅಕಾಲಿಕ ಮಳೆ, ಆಲಿಕಲ್ಲು ಮಳೆ, ಬಿರುಗಾಳಿ, ವಿಪರೀತ ಬಿಸಿಲಿನ ಕಾರಣ ಮಾವು ಬೆಳೆಗಾರರಿಗೆ ಭಾರಿ ಆರ್ಥಿಕ ನಷ್ಟ ಉಂಟಾಗಿದೆ. 4

'ವಿಶೇಷ ಪ್ಯಾಕೇಜ್ ಘೋಷಿಸಿ'

ಮೂರ್ನಾಲ್ಕು ವರ್ಷಗಳಿಂದ ಮಾವು ಬೆಳೆಗಾರರು ಸಂಕಷ್ಟದಲ್ಲಿ ಕೈತೊಳೆಯುತ್ತಿದ್ದಾರೆ. ಬೆಳೆಯೂ ಇಲ್ಲ, ಬೆಲೆಯೂ ಇಲ್ಲದಂತಾಗಿದೆ. ಈ ಬಾರಿಯೂ ಮಾವಿನ ಧಾರಣೆ ಸಂಪೂರ್ಣ ಕುಸಿತ ಕಂಡಿದ್ದು, ಶೇ 70ರಷ್ಟು ಇಳುವರಿ ಕುಂಠಿತವಾಗಿದೆ. ಜನಪ್ರತಿನಿಧಿ ಗಳು ಗಮನ ಹರಿಸುತ್ತಿಲ್ಲ. ಮಾವು ಮಂಡಳಿಗೆ ಅನುದಾನ-ವಿಲ್ಲದೆ ಏನೂ ಕೆಲಸ ಮಾಡಲು ಆಗುತ್ತಿಲ್ಲ. ತೋತಾಪುರಿ ಮಾವಿಗೆ 1 ಟನ್‌ಗೆ ಕನಿಷ್ಠ ₹10 ಸಾವಿರ ಬೆಂಬಲ ಬೆಲೆ ಘೋಷಿಸಬೇಕು. ರಾಜ್ಯ ಹಾಗೂ ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್ ನೀಡಬೇಕು.

ಚಿನ್ನಪ್ಪರೆಡ್ಡಿ, ಅಧ್ಯಕ್ಷ, ಕೋಲಾರ ಜಿಲ್ಲಾ ಮಾವು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘ

ಶಾಂತಿ ಒಪ್ಪಂದಕ್ಕೆ ಇಂದು ಸಹಿ: ಟ್ರಂಪ್

ವಾಷಿಂಗ್ಟನ್/ಇಸ್ಲಾಮಾಬಾದ್ (ಎಎಫ್‌ಪಿ/ ಪಿಟಿಐ): ಪಶ್ಚಿಮ ಏಷ್ಯಾ ಯುದ್ಧವನ್ನು ಕೊನೆಗೊಳಿಸಲು ಇರಾನ್‌ನೊಂದಿಗಿನ ಶಾಂತಿ ಒಪ್ಪಂದಕ್ಕೆ ಭಾನುವಾರ ಸಹಿ ಹಾಕಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಹೇಳಿದ್ದಾರೆ.

'ಒಪ್ಪಂದಕ್ಕೆ ಸಹಿ ಹಾಕಲು ನಿರ್ಧರಿಸ ಲಾಗಿದೆ. ಸಹಿ ಮಾಡಿದ ತಕ್ಷಣವೇ ಹೊರ್ಮುಜ್ ಜಲಸಂಧಿ ಎಲ್ಲರಿಗೂ ಮುಕ್ತವಾಗಲಿದೆ' ಎಂದು ಟ್ರಂಪ್ ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಮುಂದಿನ 24 ಗಂಟೆಗಳಲ್ಲಿ ಸಹಿ: 'ಅಮೆರಿಕ–ಇರಾನ್ ಶಾಂತಿ ಒಪ್ಪಂದಕ್ಕೆ ಮುಂದಿನ 24 ಗಂಟೆಗಳಲ್ಲಿ ಸಹಿ ಹಾಕುವ ನಿರೀಕ್ಷೆ ಇದೆ' ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ. 7

ಇರಾನ್ ಡ್ರೋನ್‌ಗಳು ಧ್ವಂಸ: ಅಮೆರಿಕ

ಹೊರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಹಡಗುಗಳನ್ನು ಗುರಿಯಾಗಿಸಿ ದಾಳಿ ನಡೆಸಲು ಉದ್ದೇಶಿಸಿದ್ದ ಇರಾನ್‌ನ ಡ್ರೋನ್‌ಗಳನ್ನು ಹೊಡೆದು ಉರುಳಿಸಲಾಗಿದೆ ಎಂದು ಅಮೆರಿಕ ಸೇನೆ ಹೇಳಿದೆ. ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ನಿಟ್ಟಿನಲ್ಲಿ ಪ್ರಗತಿ ಕಂಡುಬಂದಿದೆ ಎಂಬ ಹೇಳಿಕೆಗಳು ಹೊರಬೀಳುತ್ತಿರುವ ಸಂದರ್ಭದಲ್ಲಿಯೇ ಈ ದಾಳಿ ನಡೆದಿದೆ.

ಧೀರಜ್ ಸೇಠ್ ಮುಂದಿನ ಸೇನಾ ಮುಖ್ಯಸ್ಥ

ನವದೆಹಲಿ (ಪಿಟಿಐ): ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರು ಭಾರತದ ಭೂಸೇನೆಯ ಮುಂದಿನ ಮುಖ್ಯಸ್ಥ ರಾಗಲಿದ್ದಾರೆ.



ಧೀರಜ್ ಸೇಠ್

ಧೀರಜ್ ಸೇಠ್ ಅವರು ಸದ್ಯ ಭಾರತೀಯ ಭೂಸೇನಾ ಉಪ ಮುಖ್ಯಸ್ಥರಾಗಿದ್ದಾರೆ. ಹಾಲಿ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಜೂನ್ 30ರಂದು ನಿವೃತ್ತರಾಗಲಿದ್ದಾರೆ. ಅಂದೇ ಧೀರಜ್ ಅವರು ಜವಾಬ್ದಾರಿ ವಹಿಸಿ ಕೊಳ್ಳಲಿದ್ದಾರೆ.

ನಾಲ್ಕು ದಶಕಗಳ ಅನುಭವ: ಭಾರತೀಯ ಭೂಸೇನೆಯಲ್ಲಿ ಧೀರಜ್ ಸೇಠ್ ಅವರಿಗೆ ನಾಲ್ಕು ದಶಕಗಳ ಅನುಭವ ಇದೆ. ಕಾರ್ಯಾಚರಣೆ, ಕಾರ್ಯತಂತ್ರ, ಸಾಮರ್ಥ್ಯ ಅಭಿವೃದ್ಧಿ ಮತ್ತು ಸಾಂಸ್ಥಿಕ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಮಹಾರಾಷ್ಟ್ರದ ರಾಷ್ಟ್ರೀಯ ಭದ್ರತಾ ಅಕಾಡೆಮಿಯಲ್ಲಿ ಸೇನಾಧಿಕಾರಿ ತರಬೇತಿ ಮುಗಿಸಿದ್ದ ಧೀರಜ್ ಸೇಠ್ ಅವರು, 1986ರಲ್ಲಿ ಸೇನಾ ಸಶಸ್ತ್ರ ಪಡೆಗೆ ಸೇರ್ಪಡೆ ಆಗಿದ್ದರು. 6

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಇದೆ

ಕೆಂಪು ಮಾರ್ಗ: ₹2,920 ಕೋಟಿ ವೆಚ್ಚ ಕಡಿತ

ಹೆಬ್ಬಾಳ-ಸರ್ಜಾಪುರ ಮೆಟ್ರೊ: ಪಶುವೈದ್ಯಕೀಯ ಕಾಲೇಜು ನಿಲ್ದಾಣವನ್ನು ಕೈಬಿಟ್ಟು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಕೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ಹೆಬ್ಬಾಳ- ಸರ್ಜಾಪುರ ಡಬಲ್ ಡೆಕರ್ ಕಾರಿಡಾರ್ (ಕೆಂಪು ಮಾರ್ಗ) ಯೋಜನೆಯ ಅಂದಾಜು ವೆಚ್ಚ ಅಧಿಕವಿದೆ ಎಂಬ ಕಾರಣ ನೀಡಿ ಕೇಂದ್ರ ಸರ್ಕಾರ ಅನುಮೋದನೆ ನೀಡಲು ಎರಡನೇ ಬಾರಿ ನಿರಾಕರಿಸಿದ ಬಳಿಕ, ಬಿಎಂಆರ್‌ಸಿಎಲ್ ಯೋಜನೆಯ ವೆಚ್ಚದಲ್ಲಿ ₹2,920 ಕೋಟಿ ಕಡಿತ ಮಾಡಿದೆ.

ಮೇಖ್ರಿ ಸರ್ಕಲ್ ಮತ್ತು ಗಂಗಾನಗರ ನಡುವೆ ನಿರ್ಮಿಸಲು ಉದ್ದೇಶಿಸಿದ್ದ ಪಶುವೈದ್ಯಕೀಯ ಕಾಲೇಜು ಭೂಗತ ನಿಲ್ದಾಣವನ್ನು ಪರಿಷ್ಕೃತ ವರದಿಯಲ್ಲಿ ಕೈಬಿಡಲಾಗಿದೆ.



ಸರ್ಜಾಪುರ–ಹೆಬ್ಬಾಳ ಮಾರ್ಗದ ಮೂಲನಕ್ಷೆ

₹28,405 ಕೋಟಿ ವೆಚ್ಚದ ಈ ಯೋಜನೆಗೆ 2024ರಲ್ಲಿ ರಾಜ್ಯ ಸರ್ಕಾರ ಒಪ್ಪಿಗೆ ನೀಡಿತ್ತು. ಆನಂತರ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ಕಳುಹಿಸಲಾಗಿತ್ತು. 36.59 ಕಿ.ಮೀ ಉದ್ದದ 'ಕೆಂಪು' ಮಾರ್ಗವು 22.14 ಕಿ.ಮೀ. ಎತ್ತರಿಸಿದ, 14.45 ಕಿ.ಮೀ. ಸುರಂಗ ಮಾರ್ಗ ಒಳಗೊಂಡಿದೆ. ಎತ್ತರಿಸಿದ ಮಾರ್ಗದಲ್ಲಿ 17 ನಿಲ್ದಾಣ, ಸುರಂಗ ಮಾರ್ಗದಲ್ಲಿ 11 ನಿಲ್ದಾಣಗಳು ಇರಲಿವೆ. ₹28,405 ಕೋಟಿ ಅಂದಾಜು ವೆಚ್ಚ ಅಂದರೆ ಪ್ರತಿ ಕಿಲೋ ಮೀಟರ್‌ಗೆ ₹776.3 ಕೋಟಿ ಎಂದು ವಿಸ್ತೃತ ಯೋಜನಾ ವರದಿಯಲ್ಲಿ ತಿಳಿಸಲಾಗಿತ್ತು.

ಯೋಜನೆಯ ಅಂದಾಜು ವೆಚ್ಚ ಅಧಿಕವಾಗಿದೆ. ಈ ಬಗ್ಗೆ ವಿವರ ನೀಡುವಂತೆ ಸಚಿವಾಲಯವು ಬಿಎಂಆರ್‌ಸಿಎಲ್‌ಗೆ ಸೂಚನೆ ನೀಡಿತ್ತು. ಸಚಿವಾಲಯದ ಸೂಚನೆಯಂತೆ ಬಿಎಂಆರ್‌ಸಿಎಲ್ ಸ್ವತಂತ್ರ ಸಮಿತಿ ನೇಮಕ ಮಾಡಿತ್ತು.

'ನಿರ್ಮಾಣ ಹಂತದಲ್ಲಿರುವ ಕಾಳೇನ ಅಗ್ರಹಾರ–ನಾಗವಾರ ನಡುವಿನ ಗುಲಾಬಿ ಮಾರ್ಗವನ್ನು ಮಾನದಂಡವಾಗಿ ಇಟ್ಟುಕೊಂಡು ಕೆಂಪು ಮಾರ್ಗಕ್ಕೆ ಅಂದಾಜು ವೆಚ್ಚ ತಯಾರಿಸಲಾಗಿದೆ. ನಗರದ ಹೊರಗೆ ನಡೆಯುವ ಮೆಟ್ರೊ ಕಾಮಗಾರಿಗೆ ವೆಚ್ಚವು ಕಡಿಮೆ ಇರುತ್ತದೆ. ನಗರದ ಒಳಗೆ ಕಾಮಗಾರಿ ನಡೆಸಲು ಭಾರಿ ವೆಚ್ಚ ಮಾಡಬೇಕಾಗುತ್ತದೆ. ಕೆಂಪು ಮಾರ್ಗದಲ್ಲಿ ಸುರಂಗ ಕೊರೆದು ಹಳಿ ನಿರ್ಮಿಸಬೇಕು. 11 ಭೂಗತ ನಿಲ್ದಾಣಗಳನ್ನು ನಿರ್ಮಿಸಬೇಕು. ಭೂಸ್ವಾಧೀನ, ಮಾರ್ಗ ರಚನೆ, ಹಳಿ ಜೋಡಣೆ, ನಿಲ್ದಾಣ ನಿರ್ಮಾಣ, ವಿದ್ಯುತ್ ಸರಬರಾಜು ವ್ಯವಸ್ಥೆ, ಸಿಗ್ನಲಿಂಗ್, ದೂರಸಂಪರ್ಕ, ಡಿಪೊಗಳು, ರೈಲು ಕೋಚ್ ಪೂರೈಕೆ ಹೀಗೆ ಒಟ್ಟು 13 ಅಂಶಗಳನ್ನು ಪರಿಗಣಿಸಿ ಅಂದಾಜು ವೆಚ್ಚ ತಯಾರಿಸಲಾಗಿದೆ' ಎಂದು ಆಗ ಬಿಎಂಆರ್‌ಸಿಎಲ್ ಸಮರ್ಥಿಸಿಕೊಂಡಿತ್ತು.

ಅದೆಲ್ಲವನ್ನು ಕ್ರೋಡೀಕರಿಸಿ ಸ್ವತಂತ್ರ ಸಮಿತಿಯು (ಸಿಸ್ಟ್ರಾ) ವರದಿ ಸಲ್ಲಿಸಿತ್ತು. ವೆಚ್ಚ ಅಧಿಕವಾಗಿದೆ. ಡಬಲ್ ಡೆಕರ್ ರಸ್ತೆಯು ಅಗತ್ಯ ಇರುವಲ್ಲಿ ಮಾತ್ರ ನಿರ್ಮಿಸುವ ಬದಲು ಎತ್ತರಿಸಿದ ಮಾರ್ಗ ಇರುವಲ್ಲೆಡೆಯೂ ಏಕೆ ಬೇಕು ಎಂದು ಪ್ರಶ್ನಿಸಿ ಎರಡನೇ ಬಾರಿ ತಿರಸ್ಕರಿಸಿತ್ತು.

'ನಿಲ್ದಾಣಗಳು ಹತ್ತಿರವಿದ್ದವು'

'ಮೇಖ್ರಿ ಸರ್ಕಲ್, ಪಶುವೈದ್ಯಕೀಯ ಕಾಲೇಜು, ಗಂಗಾನಗರ ನಿಲ್ದಾಣಗಳ ನಡುವಿನ ಅಂತರ ಕಡಿಮೆ ಇದ್ದಿದ್ದರಿಂದ ಈ ಮೂರು ನಿಲ್ದಾಣಗಳಲ್ಲಿ ಮಧ್ಯದಲ್ಲಿರುವ ಪಶುವೈದ್ಯಕೀಯ ಕಾಲೇಜು ನಿಲ್ದಾಣವನ್ನು ಕೈಬಿಡಲಾಗಿದೆ. ನಾಲ್ಕು ದಿನಗಳ ಹಿಂದೆ ಪರಿಷ್ಕೃತ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಅನುಮೋದನೆ ಸಿಗುವ ನಿರೀಕ್ಷೆ ಇದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ಯೋಜನೆ ಸುಸ್ಥಿರವಾಗಿರಲಿ'

'ಬೆಂಗಳೂರಿಗೆ ಹೆಬ್ಬಾಳ-ಸರ್ಜಾಪುರ ಮೆಟ್ರೊ ಕಾರಿಡಾರ್ ಅಗತ್ಯವಿದೆ. ತಾಂತ್ರಿಕ ಕಾರ್ಯಸಾಧ್ಯತೆ, ಪ್ರಯಾಣಿಕರ ಸಂಖ್ಯೆ ಮತ್ತು ಆರ್ಥಿಕ ವಿವೇಕದ ಪರೀಕ್ಷೆಗಳಲ್ಲಿ ಉತ್ತೀರ್ಣವಾಗಬೇಕು. ಕೇಂದ್ರ ಅನುಮೋದನೆ ನೀಡುವ ಮೊದಲು ಕಠಿಣ ಪರಿಶೀಲನೆ ಮಾಡುವುದು ಒಳ್ಳೆಯದು. ಸಾರ್ವಜನಿಕ ಮೂಲಸೌಕರ್ಯವು ಸುಸ್ಥಿರವಾಗಿರಬೇಕು' ಎಂದು ಸಂಸದ ಪಿ.ಸಿ. ಮೋಹನ್ ತಮ್ಮ 'ಎಕ್ಸ್' ಖಾತೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಬಿಡಿಎ ವಿಲ್ಲಾಗಳ ಇ–ಹರಾಜು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಹುಣ್ಣಿಗೆರೆಯಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಯೋಜನೆ ಅಡಿ ನಿರ್ಮಿಸಿರುವ ವಿಲ್ಲಾಗಳನ್ನು ಇ-ಹರಾಜು ಮೂಲಕ ಮಾರಾಟ ಮಾಡಲಿದ್ದು, ಜೂನ್ 15ರಿಂದ ಪ್ರಕ್ರಿಯೆ ಆರಂಭವಾಗಲಿದೆ.

ಈ ವಸತಿ ಯೋಜನೆಯಲ್ಲಿ ಒಟ್ಟು 322 ವಿಲ್ಲಾಗಳನ್ನು ನಿರ್ಮಿಸಲಾಗಿದ್ದು, ಈಗಾಗಲೇ 184 ಮಾರಾಟವಾಗಿದೆ. ಅಲ್ಲದೇ ಪ್ರೀಮಿಯಂ ಮಾದರಿಯ 59 ವಿಲ್ಲಾಗಳನ್ನು ಇ ಹರಾಜು ಮೂಲಕ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ಇ-ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಜೂನ್ 30ರ ವರೆಗೆ ಅವಕಾಶ ಇದೆ. ಜುಲೈ 2ರ ಬೆಳಿಗ್ಗೆ 11ರಿಂದ ನೇರ ಬಿಡ್ಡಿಂಗ್ ಆರಂಭವಾಗಲಿದೆ.

ಬಿಡ್ ದರದ ಕನಿಷ್ಠ ಏರಿಕೆ ಒಂದು ಲಕ್ಷ ರೂಪಾಯಿ ಆಗಿರಲಿದೆ. ಇ-ಹರಾಜಿನಲ್ಲಿ ಪಾಲ್ಗೊಂಡು ಬಿಡ್ ಕರೆಯಲು ವಿಲ್ಲಾವೊಂದಕ್ಕೆ ₹4 ಲಕ್ಷ ಮುಂಗಡ ಠೇವಣಿ ಪಾವತಿ ಮಾಡಬೇಕು. ಬಿಡ್ ಯಶಸ್ವಿಯಾದಲ್ಲಿ ವಿಲ್ಲಾ ಮೌಲ್ಯದ ಶೇಕಡ 25ರಷ್ಟು ಹಣವನ್ನು 72 ತಾಸುಗಳಲ್ಲಿ ಆನ್‌ಲೈನ್‌ನಲ್ಲಿ ಪಾವತಿಸಬೇಕು. ಬಾಕಿ ಮೊತ್ತ ಪಾವತಿಗೆ 45 ದಿನ ಅವಕಾಶ ನೀಡಲಾಗುತ್ತದೆ. ವಿಲ್ಲಾಗಳ ದರ ₹1.26 ಕೋಟಿಯಿಂದ ಆರಂಭವಾಗಲಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಈ ವಸತಿ ಯೋಜನೆಯಲ್ಲಿ ಪರಿಸರ ಸ್ನೇಹಿ ಕಚ್ಚಾವಸ್ತುಗಳನ್ನು ಬಳಸಲಾಗಿದೆ. ಪ್ರತಿ ವಿಲ್ಲಾಗೆ ಕಾರು ನಿಲುಗಡೆ ಸೌಲಭ್ಯ, ಲಾನ್ ಒಳಗೊಂಡ ಕಿರು ಉದ್ಯಾನ, ಪ್ರತ್ಯೇಕ ನೀರಿನ ಪಂಪ್, ಓವರ್ ಹೆಡ್ ಟ್ಯಾಂಕ್ ಕಲ್ಪಿಸಲಾಗಿದೆ. ವಿವಿಧ ಸೌಲಭ್ಯವುಳ್ಳ ಕ್ಲಬ್ ಹೌಸ್ ಕಲ್ಪಿಸಲಾಗಿದ್ದು, ಮನರಂಜನೆಗೂ ಸೌಲಭ್ಯ ಇದೆ.

'ಈ ಬಾರಿ ಸಚಿವ ಸ್ಥಾನ ಖಚಿತ'

ಬೆಂಗಳೂರು: 'ಇದೇ 18ರಂದು ವಿಧಾನ ಪರಿಷತ್ ಚುನಾವಣೆ, 21ರಂದು ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ನಡೆಯಲಿದೆ. ಆ ನಂತರ, ಸಂಪುಟ ವಿಸ್ತರಣೆ ಬಗ್ಗೆ ಮುಖ್ಯಮಂತ್ರಿ ಮತ್ತು ಪಕ್ಷದ ನಾಯಕರು ನಿರ್ಧರಿಸಲಿದ್ದಾರೆ' ಎಂದು ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, '2023ರಲ್ಲಿಯೇ ನನಗೆ ಸಚಿವ ಸ್ಥಾನ ಸಿಗಬೇಕಾಗಿತ್ತು. ಈ ಬಾರಿ ಸಿಗುವ ಖಚಿತ ವಿಶ್ವಾಸವಿದೆ' ಎಂದರು.

'ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಪೂರ್ವಭಾವಿ ಸಭೆ ನಡೆಸಿದ್ದೇವೆ. ಸಭೆಯಲ್ಲಿ ಪಕ್ಷದ ಪದಾಧಿಕಾರಿಗಳು, ಶಾಸಕರು, ಮಾಜಿ ಸಚಿವರು ಭಾಗವಹಿಸಿದ್ದರು' ಎಂದರು.

'ಕೆಪಿಸಿಸಿ ಹೊಸ ಸಾರಥಿ ಬರುತ್ತಿರುವ ಬಗ್ಗೆ ಎಲ್ಲರೂ ತುಂಬಾ ಹುಮ್ಮಸ್ಸಿನಲ್ಲಿದ್ದಾರೆ. ಕಾರ್ಯಕ್ರಮದಲ್ಲಿ ನೂತನ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಮತ್ತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ' ಎಂದರು.

ಮುಖೇಶ್ ಬಂಧನಕ್ಕೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತರಪ್ರದೇಶದ ಬಿಜೆಪಿ ಸರ್ಕಾರವು ವಿಕಾಸಶೀಲ ಇನ್ಸಾನ್ ಪಕ್ಷದ ಸ್ಥಾಪಕ ಮುಖೇಶ್ ಸಾಹ್ನಿ ಅವರನ್ನು ಬಂಧಿಸಿ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಿದೆ' ಎಂದು ವಿಐಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ಕೆ.ಮೋಹನ್ ಕುಮಾರ್ ಆರೋಪಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಸಾಮಾನ್ಯ ನಾಗರಿಕರು ಪ್ರಶ್ನಿಸಿದರೆ ಬೆದರಿಕೆ ಒಡ್ಡಲಾಗುತ್ತಿದೆ. ಕಮಲೇಶ್ ಬಿಂಡ್ ಎಂಬುವರನ್ನು ಎನ್‌ಕೌಂಟರ್ ಮಾಡಲಾಗಿದೆ. ನಿಶಾದ್ ಸಮುದಾಯದ ನಾಯಕರ ಮೇಲೆ ಕೃತ್ಯಗಳು ನಡೆಯುತ್ತಿದ್ದರೂ ಅಲ್ಲಿನ ಸಚಿವ ಸಂಜಯ್ ನಿಶಾದ್ ಬಿಜೆಪಿಯ ಕೈಗೊಂಬೆಯಾಗಿದ್ದು, ಕೂಡಲೇ ರಾಜಿನಾಮೆ ನೀಡಬೇಕು' ಎಂದರು.

'ನಿಶಾದ್, ಕೋಲಿ ಸಮುದಾಯದ ವಿರುದ್ಧ ಬಿಜೆಪಿಯು ದೌರ್ಜನ್ಯ ನಿಲ್ಲಿಸದಿದ್ದರೆ ಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸಲಾಗುವುದು. ನರೇಂದ್ರ ಮೋದಿ, ಯೋಗಿ ಆದಿತ್ಯನಾಥ್ ವಿರುದ್ಧ ಬೃಹತ್ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದರು.

ಕಾರಿಡಾರ್–2, 4ರ ರೋಲಿಂಗ್ ಸ್ಟಾಕ್ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಟೆಂಡರ್

ಸೋಲದೇವನಹಳ್ಳಿ: ಬಿಎಸ್‌ಟಿಪಿ ಡಿಪೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ಸಾರಿಗೆ ಯೋಜನೆಯ (ಬಿಎಸ್‌ಟಿಪಿ) ಕಾರಿಡಾರ್–2 ಮತ್ತು 4ಕ್ಕೆ ಸಂಬಂಧಿಸಿದ ರೋಲಿಂಗ್ ಸ್ಟಾಕ್ (ಬೋಗಿಗಳು) ಕಾರ್ಯಾಚರಣೆ, ನಿರ್ವಹಣೆಯ ಡಿಪೊ ಸೋಲದೇವನಹಳ್ಳಿಯಲ್ಲಿ ನಿರ್ಮಾಣಗೊಳ್ಳಲಿದೆ.

ಅದಕ್ಕಾಗಿ ಬೈ-ರೈಡ್ (ಬೆಂಗಳೂರು ಇಂಟಿಗ್ರೇಟೆಡ್ ರೈಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಎಂಟರ್‌ಪ್ರೈಸಸ್) ಟೆಂಡರ್ ಆಹ್ವಾನಿಸಿದೆ. ಉಪನಗರ ರೈಲ್ವೆ ಕಾರ್ಯಾಚರಣೆಗಳಿಗೆ ಅಗತ್ಯ ಮತ್ತು ನಿರ್ಣಾಯಕ ಮೂಲಸೌಕರ್ಯ ಅಂಶಗಳು ಸೇರಿದ್ದು, ₹200.03 ಕೋಟಿ (ಜಿಎಸ್‌ಟಿ ಹೊರತುಪಡಿಸಿ) ವೆಚ್ಚ ಅಂದಾಜಿಸಲಾಗಿದೆ. ಬಿಡ್‌ಗಳ ಸಲ್ಲಿಕೆ ಆಗಸ್ಟ್ 12ಕ್ಕೆ ಮುಕ್ತಾಯಗೊಳ್ಳಲಿದೆ.

ಚಿಕ್ಕಬಾಣಾವರ ಉಪನಗರ ನಿಲ್ದಾಣದ ಬಳಿಯ ಸೋಲದೇವನಹಳ್ಳಿಯಲ್ಲಿ ನಿರ್ವಹಣಾ ಡಿಪೊ ನಿರ್ಮಿಸಲು 26 ಎಕರೆ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಡಿಪೊದಲ್ಲಿ ಸ್ಟೇಬ್ಲಿಂಗ್ ಲೈನ್‌ಗಳು, ವರ್ಕ್‌ಶಾಪ್ ಲೈನ್‌ಗಳು, ಇನ್‌ಸ್ಪೆಕ್ಷನ್ ಬೇ, ದುರಸ್ತಿ ಬೇ, ಸ್ವಯಂಚಾಲಿತ ಕೋಚ್ ವಾಷಿಂಗ್ ಪ್ಲಾಂಟ್ ಸಹಿತ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುವುದು. ಬೈ-ರೈಡ್‌ನ ಶೂನ್ಯ ಇಂಗಾಲದ ನೀತಿಯ ಪ್ರಯತ್ನವಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಸೌರಶಕ್ತಿ ಮತ್ತು ಮಳೆ ನೀರು ಸಂಗ್ರಹ ವ್ಯವಸ್ಥೆ ಒದಗಿಸಲಾಗುವುದು. ಈ ಡಿಪೊ ನಿರ್ಮಾಣವನ್ನು ಜರ್ಮನಿಯ ಕೆಎಫ್‌ಡಬ್ಲ್ಯು ಅಭಿವೃದ್ಧಿ ಬ್ಯಾಂಕ್ ಮಂಜೂರು ಮಾಡಿದ ಸಾಲದಿಂದ ನಿರ್ಮಿಸಲಾಗುವುದು ಎಂದು ಬೈ-ರೈಡ್/ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ತಿಳಿಸಿದ್ದಾರೆ.

ಪಿಎಂಜಿ ಪರಿಶೀಲನೆ: ಭಾರತದ ಮೂಲಸೌಕರ್ಯ ಯೋಜನೆಗಳ ಅನುಷ್ಠಾನವನ್ನು ವೇಗಗೊಳಿಸಲು ಸಚಿವಾಲಯದ ಅಡಿಯಲ್ಲಿ ಸ್ಥಾಪಿಸಲಾದ ಯೋಜನಾ ಮೇಲ್ವಿಚಾರಣಾ ಗುಂಪು (ಪಿಎಂಜಿ) ಅಧಿಕಾರಿಗಳು ಬೆಂಗಳೂರು ಉಪನಗರ ಸಾರಿಗೆ ಯೋಜನೆಯ (ಬಿಎಸ್‌ಟಿಪಿ) ಪ್ರಗತಿಯನ್ನು ಪರಿಶೀಲಿಸಲು ಆರಂಭಿಸಿದ್ದಾರೆ. ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ಅಧ್ಯಕ್ಷತೆಯಲ್ಲಿ ಪ್ರಗತಿಪರಿಶೀಲನಾ ಸಭೆ ಶನಿವಾರ ನಡೆಯಿತು.

ಆನಂತರ ಪಿಎಂಜಿ ತಂಡವು ಯಶವಂತಪುರದಲ್ಲಿ ಕಾರಿಡಾರ್ -2 ಸ್ಥಳ ಪರಿಶೀಲನೆ ನಡೆಸಿ ಕಾಮಗಾರಿಗಳ ಪ್ರಗತಿಯನ್ನು ವೀಕ್ಷಿಸಿತು ಎಂದು ಕೆ-ರೈಡ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

153 ಕೋಚ್‌ಗಳ ಪೂರೈಕೆ ಆದೇಶ

ಬೆಂಗಳೂರು ಉಪನಗರ ಸಾರಿಗೆ ಯೋಜನೆಗೆ 153 ರೈಲು ಕೋಚ್‌ಗಳ ಪೂರೈಕೆಗಾಗಿ ಚೆನ್ನೈಯ ಇಂಟಿಗ್ರಲ್ ಕೋಚ್ ಫ್ಯಾಕ್ಟರಿಗೆ (ಐಸಿಎಫ್) ಕೆಲಸದ ಆದೇಶವನ್ನು ಬೈ-ರೈಡ್ ನೀಡಿದೆ.

ಎರಡನೇ ಕಾರಿಡಾರ್‌ನಲ್ಲಿ ಮೊದಲ ಹಂತವಾಗಿ ಚಿಕ್ಕಬಾಣಾವರದಿಂದ ಯಶವಂತಪುರವರೆಗೆ ರೈಲು ಸಂಚಾರ 2027ರಲ್ಲಿ ಆರಂಭಗೊಳ್ಳಲಿದೆ. ಇದಕ್ಕೆ 9 ರೈಲು ಕೋಚ್‌ಗಳು ಅಗತ್ಯ ಇದೆ. ಎಲ್ಲ ನಾಲ್ಕು ಕಾರಿಡಾರ್‌ಗಳಿಗೆ 153 ಕೋಚ್‌ಗಳು ಪೂರೈಕೆಯಾಗಲಿವೆ.

ಯೋಜನೆಯ ರೈಲಿನ ಮಾದರಿ

'ನಿರ್ವಹಣಾ ಘಟಕವು ಹೃದಯವಿದ್ದಂತೆ'

ಉತ್ತಮ ಉಪನಗರ ರೈಲು ಜಾಲಕ್ಕೆ ಅತ್ಯಾಧುನಿಕ ರೈಲು ನಿರ್ವಹಣಾ ಘಟಕವು ಹೃದಯವಿದ್ದಂತೆ. ಇತ್ತೀಚೆಗಷ್ಟೇ 153 ಅತ್ಯಾಧುನಿಕ ಬೋಗಿಗಳಿಗೆ ಆದೇಶ ನೀಡಲಾಗಿದ್ದು, ಅವುಗಳ ನಿಯಮಿತ ನಿರ್ವಹಣೆ ಮತ್ತು ಸುರಕ್ಷತಾ ತಪಾಸಣೆಗೆ ಅಗತ್ಯವಿರುವ ವಿಶ್ವದರ್ಜೆಯ ಕಾರ್ಯಾಗಾರವನ್ನು ಸೋಲದೇವನಹಳ್ಳಿ ಡಿಪೊ ಒದಗಿಸಲಿದೆ. ಬೆಂಗಳೂರಿನ ಜನರಿಗೆ ಉತ್ತಮ, ವಿಶ್ವಾಸಾರ್ಹ ಮತ್ತು ಸುರಕ್ಷಿತ ಉಪನಗರ ಸಾರಿಗೆಯನ್ನು ಒದಗಿಸುವ ಕಾರ್ಯತಂತ್ರದ ಭಾಗ ಇದಾಗಿದೆ ಎಂದು ಬೈ-ರೈಡ್/ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ತಿಳಿಸಿದ್ದಾರೆ.

ಸಿಎಂಟಿಐನ ನೂತನ ಸುಧಾರಿತ ಎಂಜಿನಿಯರಿಂಗ್ ಸಾಮಗ್ರಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳೊಂದಿಗೆ ಎಚ್‌.ಡಿ.ಕುಮಾರಸ್ವಾಮಿ

ಉತ್ಪಾದನೆ–ಉದ್ಯೋಗ ಸೃಷ್ಟಿಗೆ ಒತ್ತು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕೇಂದ್ರ ಸರ್ಕಾರವು ಉತ್ಪಾದನೆ ಮತ್ತು ಉದ್ಯೋಗ ಸೃಷ್ಟಿಯ ದರ ಹೆಚ್ಚು ಇರುವ ಕೈಗಾರಿಕೆಗಳಿಗೆ ಉತ್ತೇಜನ ನೀಡುತ್ತಿದೆ. ಈ ಕಾರಣದಿಂದ ಕೈಗಾರಿಕಾ ಕ್ಷೇತ್ರವು ಗಣನೀಯ ಮಟ್ಟದ ಬೆಳವಣಿಗೆ ದಾಖಲಿಸುತ್ತಿದೆ' ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ನಗರದ ಕೇಂದ್ರೀಯ ತಯಾರಿಕಾ ತಂತ್ರಜ್ಞಾನ ಸಂಸ್ಥೆಯ (ಸಿಎಂಟಿಐ) 65ನೇ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕೇಂದ್ರದಲ್ಲಿ ಮೋದಿ ನೇತೃತ್ವದ ಸರ್ಕಾರ ಬಂದ ನಂತರ ಕೈಗಾರಿಕಾ ಸಂಶೋಧನೆಗೆ ಒತ್ತು ನೀಡುತ್ತಿದೆ. ಎಂಜಿನಿಯರಿಂಗ್, ಡಿಪ್ಲೊಮಾ ವಿದ್ಯಾರ್ಥಿಗಳ ಕೌಶಲ ಹೆಚ್ಚಿಸುವ ಕೆಲಸವಾಗಿದೆ. ಪರಿಣಾಮವಾಗಿ ತಯಾರಿಕಾ ವಲಯದ ಕಾರ್ಯಕ್ಷಮತೆ ಹೆಚ್ಚಾಗಿದ್ದು, ಉದ್ಯೋಗಗಳೂ ಸೃಷ್ಟಿಯಾಗುತ್ತಿವೆ. ಕೌಶಲ ಇರುವ ಕಾರಣಕ್ಕೆ ಯುವಜನರಲ್ಲಿ ಉದ್ಯೋಗಾರ್ಹತೆ ಹೆಚ್ಚಾಗಿದೆ' ಎಂದರು.

'ಬೆಂಗಳೂರಿನ ಕೈಗಾರಿಕಾ ಹೆಮ್ಮೆಗಳಲ್ಲಿ ಸಿಎಂಟಿಐಗೂ ಮಹತ್ವದ ಸ್ಥಾನವಿದೆ. ಸಣ್ಣ ಸಂಸ್ಥೆಯಾಗಿ ಆರಂಭವಾದ ಸಿಎಂಟಿಐ ಈಗ ಅಗಾಧವಾಗಿ ಬೆಳೆದಿದೆ. ಬಾಹ್ಯಾಕಾಶ, ರಕ್ಷಣಾ ಕ್ಷೇತ್ರಗಳು ಮಾತ್ರವಲ್ಲದೆ ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳಿಗೆ ಅಗತ್ಯವಿರುವ ತಂತ್ರಜ್ಞಾನ ಹಾಗೂ ಉಪಕರಣಗಳ ಅಭಿವೃದ್ಧಿಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಕೈಗಾರಿಕೆಗಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸುತ್ತಿದೆ. ಸಿಎಂಟಿಐ ಅನ್ನು ವಿಸ್ತರಿಸುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದೆ ಇದೆ' ಎಂದರು.

> **ಎಚ್‌ಎಂಟಿ ಕಾರ್ಖಾನೆಗೆ ಪುನಃಶ್ಚೇತನ ನೀಡುವ ಸಲುವಾಗಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ. ಅದು ಅಂತಿಮವಾದ ನಂತರ ಹಣಕಾಸು ಸಚಿವರ ಜತೆಗೆ ಸಭೆ ನಡೆಸಿ, ಕ್ರಮ ತೆಗೆದುಕೊಳ್ಳಲಾಗುತ್ತದೆ**
>
> **ಎಚ್‌.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಮಳೆ: ನಿಧಾನಗತಿಯ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ರಾತ್ರಿಯಿಂದ ಶನಿವಾರ ರಾತ್ರಿವರೆಗೆ ಆಗಾಗ ಮಳೆ ಸುರಿದಿದ್ದು, ಹಲವು ಕಡೆಗಳಲ್ಲಿ ರಸ್ತೆಯಲ್ಲಿಯೇ ನೀರು ನಿಂತಿದ್ದರಿಂದ ವಾಹನಗಳ ಸಂಚಾರ ನಿಧಾನವಾಯಿತು. ಕೆಲವೆಡೆ ರಸ್ತೆಗೆ ಅಡ್ಡಲಾಗಿ ಮರಗಳು ಬಿದ್ದಿದ್ದು, ಸಂಚಾರಕ್ಕೆ ತೊಡಕಾಯಿತು.

ಶುಕ್ರವಾರ ರಾತ್ರಿ ಮೂರು ಗಂಟೆಯವರೆಗೆ ಮಳೆ ಸುರಿಯಿತು. ಶನಿವಾರ ಬೆಳಿಗ್ಗೆ ವಿರಾಮ ನೀಡಿದ್ದ ಮಳೆಯು ಮಧ್ಯಾಹ್ನ ಕೆಲಹೊತ್ತು ಸುರಿಯಿತು. ಸಂಜೆಯಾಗುತ್ತಿದ್ದಂತೆ ಜೋರಾಗಿ ಮಳೆ ಬಂತು.

ಕೋರಮಂಗಲ 60 ಅಡಿ ರಸ್ತೆಯಲ್ಲಿ ಮರ ಬಿದ್ದ ಪರಿಣಾಮ ಕೆನರಾ ಬ್ಯಾಂಕ್ ಸರ್ಕಲ್ ಕಡೆಗೆ ಸಾಗುವ ವಾಹನಗಳಿಗೆ ತೊಂದರೆ ಉಂಟಾಯಿತು. ಆರ್‌ಆರ್‌ಎಂಆರ್ ಜಂಕ್ಷನ್, ಕೊತ್ತನೂರು ಜಂಕ್ಷನ್, ಸಂಪಿಗೆ ರಸ್ತೆ 6ನೇ ಅಡ್ಡರಸ್ತೆ ಸಹಿತ ಅನೇಕ ಕಡೆಗಳಲ್ಲಿ ಮರಗಳು ಮುರಿದು ಬಿದ್ದವು.

ಬಿ. ನಾರಾಯಣಪುರ, ಕೆ.ಆರ್. ಪುರದ ಜಿ.ಆರ್. ಟಿ ಜಂಕ್ಷನ್, ದೇವೇಗೌಡ ವೃತ್ತ, ಫೀನಿಕ್ಸ್ ಮಾಲ್, ನಾಯಂಡಹಳ್ಳಿ, ಜಯಮಹಲ್ ಕೆಳಸೇತುವೆ, ಆರ್‌.ಪಿ. ರಸ್ತೆ, ಖೋಡೆ ಕೆಳಸೇತುವೆ, ಸಂಜಯನಗರ ಕ್ರಾಸ್, ವಿಂಡ್ಸರ್‌ಮ್ಯಾನರ್, ಆರ್‌.ವಿ. ಶಿಕ್ಷಕರ ಕಾಲೊನಿ ಮುಂತಾದ ಕಡೆಗಳಲ್ಲಿ ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಉಂಟಾಯಿತು.

ಹಲವು ರಸ್ತೆಗಳಲ್ಲಿ ಚರಂಡಿ ತುಂಬಿ ಹರಿದರೆ, ಇನ್ನು ಕೆಲವೆಡೆ ಚರಂಡಿ ದುರಸ್ತಿ ಮಾಡದೇ ನೀರು ಸರಾಗವಾಗಿ ಹರಿಯಲು ಅಡ್ಡಿಯಾಯಿತು.

ಮಳೆ ವಿವರ: ಶನಿವಾರ ಹೇರೋಹಳ್ಳಿ 3.7 ಸೆಂ.ಮೀ., ಕೆಂಗೇರಿ 2.4 ಸೆಂ.ಮೀ., ಹಂಪಿನಗರ 2 ಸೆಂ.ಮೀ., ದೊಡ್ಡಬಿದಿರಕಲ್ಲು 1.8 ಸೆಂ.ಮೀ., ಪೀಣ್ಯ ಕೈಗಾರಿಕಾ ವಲಯ 1.8 ಸೆಂ.ಮೀ., ಅಂಜನಾಪುರ 1.6 ಸೆಂ.ಮೀ., ರಾಜರಾಜೇಶ್ವರಿನಗರ 1.6 ಸೆಂ.ಮೀ., ಎಚ್‌ಎಎಲ್ ಏರ್‌ಪೋರ್ಟ್ 1 ಸೆಂ.ಮೀ. ಮಳೆಯಾಗಿದೆ.

ವಿಧಾನಸೌಧದ ಮುಂಭಾಗ ಶನಿವಾರ ಸುರಿದ ತುಂತುರು ಮಳೆಯಲ್ಲೇ ದ್ವಿಚಕ್ರ ವಾಹನ ಸವಾರರು ಸಾಗಿದರು
– ಪ್ರಜಾವಾಣಿ ಚಿತ್ರ: ರಂಜು ಪಿ.

ಕೋರಮಂಗಲದಲ್ಲಿ ರಸ್ತೆಗೆ ಅಡ್ಡಲಾಗಿ ಮರ ಬಿದ್ದಿತ್ತು

ನ್ಯಾಯಮೂರ್ತಿಗಳ ವಸತಿಗೃಹಕ್ಕೆ ಜಮೀನು ಹಂಚಿಕೆ: ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ವಸತಿಗೃಹ ನಿರ್ಮಾಣಕ್ಕಾಗಿ ಹೆಬ್ಬಾಳ ಸಮೀಪ ಪಶುವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಸೇರಿದ 4 ಎಕರೆ ಜಮೀನು ಹಂಚಿಕೆ ಮಾಡಿರುವುದನ್ನು ರದ್ದುಗೊಳಿಸಬೇಕು' ಎಂದು ಕೋರಲಾದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಾದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ ಆದೇಶವನ್ನು ಪ್ರಕಟಿಸಿರುವ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ನ್ಯಾಯಾಂಗ ಸ್ವತಂತ್ರ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ನ್ಯಾಯಮೂರ್ತಿಗಳಿಗೆ ಅಧಿಕೃತ ವಸತಿ, ಸಾರಿಗೆ, ಗ್ರಂಥಾಲಯ ಮತ್ತು ಭತ್ಯೆಯಂತಹ ಸೌಲಭ್ಯಗಳು ಅತ್ಯಗತ್ಯ' ಎಂದು ಪ್ರತಿಪಾದಿಸಿದೆ.

'ಹೈಕೋರ್ಟ್ ನ್ಯಾಯಮೂರ್ತಿಗಳ ಸಾಂವಿಧಾನಿಕ ಅಧಿಕಾರದ ಸ್ಥಾನಮಾನಕ್ಕೆ ಸೂಕ್ತವಾದ ಸಂಪೂರ್ಣ ಸುಸಜ್ಜಿತ ಅಧಿಕೃತ ವಸತಿ ಸೌಕರ್ಯವನ್ನು ಒದಗಿಸುವುದು ರಾಜ್ಯದ ಕರ್ತವ್ಯ' ಎಂದು ನ್ಯಾಯಪೀಠ ವಿವರಿಸಿದೆ.

'ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ಮಂಜೂರಾತಿ ಸಂಖ್ಯೆ ಒಟ್ಟು 62. ಇಷ್ಟು ಜನರಿಗೆ ಸದ್ಯ ಕೇವಲ 19 ಅಧಿಕೃತ ನಿವಾಸಗಳು ಮಾತ್ರ ಲಭ್ಯ ಇವೆ. ಹಲವು ನ್ಯಾಯಮೂರ್ತಿಗಳು ಬಾಡಿಗೆ ವಸತಿಗಳಲ್ಲಿ ವಾಸಿಸುತ್ತಿದ್ದಾರೆ. ಇದು ಹೈಕೋರ್ಟ್ ನ್ಯಾಯಮೂರ್ತಿಗಳಂತಹ ಸಾಂವಿಧಾನಿಕ ಅಧಿಕಾರದಲ್ಲಿ ಇರುವವರಿಗೆ ಹೊಂದಿಕೆಯಾಗುವುದಿಲ್ಲ' ಎಂದು ಪೀಠ ಹೇಳಿದೆ.

'ನ್ಯಾಯಮೂರ್ತಿಗಳ ವಸತಿ ಗೃಹ ನಿರ್ಮಿಸಲು ಮಂಜೂರು ಮಾಡಲಾದ ನಾಲ್ಕು ಎಕರೆ ಹೆಚ್ಚುವರಿ ಭೂಮಿಯಾಗಿದೆ. ಅಂತಹ ಭೂ ವರ್ಗಾವಣೆಯು ಕರ್ನಾಟಕ ಪಶು ವೈದ್ಯಕೀಯ ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.' ಎಂದು ನ್ಯಾಯಪೀಠ ತಿಳಿಸಿದೆ.

'ಕರ್ನಾಟಕ ವೆಟರ್ನರಿ ಅಸೋಸಿಯೇಷನ್'ನ ಅಧಿಕೃತ ಪ್ರತಿನಿಧಿ ವಿ.ಗಿರೀಶ್ ಕುಮಾರ್, 'ಬೆಂಗಳೂರು ಪಶುವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘ'ದ ಅಧ್ಯಕ್ಷ ಎಂ.ಎಸ್.ವಸಂತ, 'ಸೀನಿಯರ್ ವೆಟರ್ನರಿಯನ್ ಅಸೋಸಿಯೇಷನ್ಸ್' ಉಪಾಧ್ಯಕ್ಷ ವಿ. ರಘುರಾಮೇಗೌಡ ಮತ್ತು 'ಡೈರಿ ಸೈನ್ಸ್ ಕಾಲೇಜ್'ನ 'ಹಳೆಯ ವಿದ್ಯಾರ್ಥಿಗಳ ಸಂಘ'ದ ಅಧ್ಯಕ್ಷ ರಾಮಚಂದ್ರ ಈ ಅರ್ಜಿ ಸಲ್ಲಿಸಿದ್ದರು.

ಆಸ್ಪತ್ರೆ: ತಕರಾರಿನ ಅಂಶವೂ ವಜಾ

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕಾಗಿ ಮೂರು ಎಕರೆ ಕಾಲೇಜು ಭೂಮಿ ವರ್ಗಾವಣೆ ಮಾಡಿದ ತಕರಾರಿನ ಅಂಶವನ್ನೂ ನ್ಯಾಯಪೀಠ ವಜಾಗೊಳಿಸಿದೆ. 'ಪಶುವೈದ್ಯ ಕಾಲೇಜಿನಲ್ಲಿ ಪ್ರಸ್ತುತ ಅಗತ್ಯವಿರುವ ಭೂಮಿಗಿಂತ ಹೆಚ್ಚುವರಿ ಭೂಮಿ ಇದೆ. ಹೀಗಿರುವಾಗ, ಸಾರ್ವಜನಿಕರಿಗಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲು ಮಂಜೂರು ಮಾಡಲಾದ 3 ಎಕರೆ ಭೂಮಿಯನ್ನು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ನಡೆ ಎಂದು ಹೇಳಲಾಗುವುದಿಲ್ಲ. ವಾಸ್ತವವಾಗಿ ರಾಜ್ಯವು ಬಹುದೊಡ್ಡ ಸಾರ್ವಜನಿಕ ಹಿತಾಸಕ್ತಿಯನ್ನು ಪೂರೈಸುತ್ತಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಐಸಿಎಆರ್–ರಾಷ್ಟ್ರೀಯ ಡೈರಿ ಸಂಶೋಧನಾ ಸಂಸ್ಥೆ
ದಕ್ಷಿಣ ಪ್ರಾದೇಶಿಕ ಕೇಂದ್ರ, ಬೆಂಗಳೂರು–560030
F.No.2-1/CDN/LRC/T-Coconut/NDRI/25-26/726 Date: 12/06/2026

ತೆಂಗಿನ ಮರಗಳಿಂದ ಏಳನೀರು ಕೊಯ್ಲು ಮಾಡಲು ದರಪಟ್ಟಿಗಳನ್ನು ಸಲ್ಲಿಸಲು ಪ್ರಕಟಣೆ

ಈ ಮೇಲ್ಕಂಡ ಸಂಸ್ಥೆಯಲ್ಲಿರುವ ಸುಮಾರು 420 ತೆಂಗಿನ ಮರಗಳಿಂದ ಹನ್ನೊಂದು ತಿಂಗಳವರೆಗೆ ಏಳನೀರು ಕೊಯ್ಲು ಮಾಡಲು ಮೊಹರು ಮಾಡಿದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ನಿಯಮಗಳು ಮತ್ತು ಷರತ್ತುಗಳೊಂದಿಗೆ ಖಾಲಿ ದರಪಟ್ಟಿಯನ್ನು ಕೆಳಗೆ ಸಹಿ ಮಾಡಿದ ಕಚೇರಿಯಿಂದ ದಿ: 03-07-2026 ರಂದು ಮಧ್ಯಾಹ್ನ 2.00 ಗಂಟೆಗೆ ಅಥವಾ ಅದಕ್ಕೂ ಮೊದಲು ಪಡೆಯಬಹುದು.

ಸಹಿ/–ಸಹಾಯಕ ಆಡಳಿತ ಅಧಿಕಾರಿ
ದೂರವಾಣಿ ಸಂಖ್ಯೆ.080 22631405

ಭಾರತೀಯ ತಂತ್ರಜ್ಞಾನ ಸಂಸ್ಥೆ ಖರಗ್‌ಪುರ

ಜಾಹೀರಾತು ಸಂ.: ಆರ್/03/2026 ದಿನಾಂಕ ಜೂನ್ 01, 2026

ಸದರಿ ಸಂಸ್ಥೆಯು, ಡೆಪ್ಯುಟೇಶನ್ ನಿಬಂಧನೆಗಳ ಮೇರೆಗೆ ಅಥವಾ ಗುತ್ತಿಗೆ ಆಧಾರದಲ್ಲಿ, **ಲೆವೆಲ್–14ರ** ವೇತನ ಶ್ರೇಣಿ 144200–218200/–ರಲ್ಲಿನ **ರಿಜಿಸ್ಟ್ರಾರ್** ಹುದ್ದೆಗಾಗಿ ಭಾರತೀಯ ನಾಗರಿಕರಿಂದ **ಆನ್‌ಲೈನ್ ಅರ್ಜಿಗಳನ್ನು** ಆಹ್ವಾನಿಸಿದ್ದಾರೆ.

ಹೆಚ್ಚಿನ ವಿವರಗಳು ಮತ್ತು ಅಪ್‌ಡೇಟ್‌ಗಳಿಗಾಗಿ ಭೇಟಿ ಕೊಡಿ: (http://www.iitkgp.ac.in>>Jobs>>Staff Opening). ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **30.06.2026**

CBC 21255/11/0001/2627 ಡೀನ್ (ಅಡ್ಮಿನ್)

ಹೆಣ್ಣು ಮರಿಗೆ ಜನ್ಮ ನೀಡಿದ 'ಕಬಿನಿ'

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಕಳೆದ ಒಂದು ತಿಂಗಳಲ್ಲಿ ಜೀಬ್ರಾ ಹಾಗೂ ನೀರಾನೆಯು ಮರಿಗಳಿಗೆ ಜನ್ಮ ನೀಡಿದೆ.

ಉದ್ಯಾನದ ಜೀಬ್ರಾ 'ಕಬಿನಿ'ಯು ಹೆಣ್ಣು ಮರಿಗೆ ಮೇ 14ರಂದು ಜನ್ಮ ನೀಡಿದೆ. 'ದೃಶ್ಯ' ನೀರಾನೆಯು ಮೇ 28ರಂದು ಮರಿಗೆ ಜನ್ಮ ನೀಡಿದೆ. ಎರಡೂ ಮರಿಗಳು ಆರೋಗ್ಯವಾಗಿದ್ದು, ಉದ್ಯಾನದ ಸಿಬ್ಬಂದಿ ಜತನದಿಂದ ಆರೈಕೆ ಮಾಡುತ್ತಿದ್ದಾರೆ.

ಜೀಬ್ರಾ ಮರಿ

ಜೀಬ್ರಾ ಮರಿ ಚುರುಕಾಗಿ ಓಡಾಡಿಕೊಂಡಿದ್ದು, ಇತರೆ ಜೀಬ್ರಾಗಳೊಂದಿಗೆ ಹೊಂದಿಕೊಳ್ಳುತ್ತಿದೆ. ನೂತನ ಅತಿಥಿಯ ಆಗಮನದಿಂದಾಗಿ ಜೀಬ್ರಾಗಳ ಸಂಖ್ಯೆ 11ಕ್ಕೆ ಏರಿಕೆಯಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಎ.ವಿ.ಸೂರ್ಯಸೇನ್ ತಿಳಿಸಿದರು.

ಅಂತರರಾಷ್ಟ್ರೀಯ ಪ್ರಾಣಿ ವಿನಿಮಯ ಯೋಜನೆಯಡಿ ದಕ್ಷಿಣ ಆಫ್ರಿಕಾದಿಂದ ತರಲಾದ ಚೀತಾಗಳು ಬನ್ನೇರುಘಟ್ಟದ ವಾತಾವರಣಕ್ಕೆ ಹೊಂದಿಕೊಳ್ಳುತ್ತಿವೆ. ಕಳೆದ ವಾರ ಕ್ವಾರಂಟೈನ್ ಅವಧಿ ಮುಗಿದಿದ್ದು, ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗಿವೆ.

ಚಿಕ್ಕಬಿದರಕಲ್ಲು ಮೆಟ್ರೊ ನಿಲ್ದಾಣ ಎದುರಿನ ರಸ್ತೆ ದಾಟಲು ಹರಸಾಹಸ

ಟ್ರಾಫಿಕ್ ಚಕ್ರವ್ಯೂಹದಲ್ಲಿ ಪಾದಚಾರಿ

• ಪ್ರಸನ್ನಕುಮಾರ್ ಯಾದವ್

ಪೀಣ್ಯದಾಸರಹಳ್ಳಿ: ತುಮಕೂರು ರಸ್ತೆಯ ಚಿಕ್ಕಬಿದರಕಲ್ಲು ಮೆಟ್ರೊ ನಿಲ್ದಾಣದ ರಸ್ತೆ ದಾಟುವುದು ಪಾದಚಾರಿಗಳಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ಒಂದೆಡೆ ಮುಖ್ಯರಸ್ತೆ, ಮತ್ತೊಂದೆಡೆ ಸರ್ವಿಸ್ ರಸ್ತೆ –ಹೀಗೆ ವಿರುದ್ಧ ದಿಕ್ಕಿನಲ್ಲಿ ಬರುವ ವಾಹನಗಳನ್ನು ತಪ್ಪಿಸಿ ರಸ್ತೆ ದಾಟಬೇಕಾಗಿದೆ.

ಇಲ್ಲಿ ಸರ್ವಿಸ್ ರಸ್ತೆ ಮತ್ತು ಮುಖ್ಯ ರಸ್ತೆ ಒಟ್ಟೊಟ್ಟಿಗೆ ಇದೆ. ಸರ್ವಿಸ್ ರಸ್ತೆಯಲ್ಲಿ ಬರುವ ವಾಹನಗಳನ್ನು ನೋಡಿಕೊಂಡು ರಸ್ತೆ ದಾಟಿದ ತಕ್ಷಣ ಮುಖ್ಯರಸ್ತೆಯ ವಾಹನಗಳು ನುಗ್ಗಿ ಬರುತ್ತವೆ. ಎರಡೂ ಕಡೆಯ ವಾಹನಗಳ ಸಂಚಾರ ಕಡಿಮೆಯಾಗಲು ಹೆಚ್ಚು ಹೊತ್ತು ಕಾಯಬೇಕು ಎಂಬ ಕಾರಣಕ್ಕೆ ಪಾದಚಾರಿಗಳು 'ಏನಾದರಾಗಲಿ' ಎನ್ನುತ್ತಾ ಮುನ್ನುಗ್ಗಿ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ.

ಸಂಚರಿಸುವ ವಾಹನಗಳ ನಡುವೆಯೇ ಪಾದಚಾರಿಗಳು ರಸ್ತೆ ದಾಟಿದರು

ಮೆಟ್ರೊ ನಿಲ್ದಾಣದ ಎದುರಿನ ಈ ರಸ್ತೆಯಲ್ಲಿ ಬೆಳಿಗ್ಗೆ ಮತ್ತು ಸಂಜೆ ಹೆಚ್ಚು ಜನಸಂಚಾರವಿರುತ್ತದೆ. ನಿಲ್ದಾಣದ ಎದುರಿಗೆ ಇರುವ ಕೆಳಸೇತುವೆ ಮೂಲಕ ಚಿಕ್ಕಬಿದರಕಲ್ಲು ಕಡೆಗೆ ಮತ್ತು ಮೆಟ್ರೊ ನಿಲ್ದಾಣದ ಕಡೆಗೆ ಜನ ಸಂಚರಿಸುತ್ತಾರೆ. ಇಂಥ ಅಪಾಯಕಾರಿ ಸ್ಥಳದಲ್ಲಿ ಸಂಚಾರಿ ಪೊಲೀಸರು, ಟ್ರಾಫಿಕ್ ಸಿಗ್ನಲ್ ಕೂಡ ಇಲ್ಲ.

ಮೆಟ್ರೊ ನಿಲ್ದಾಣದ ರಸ್ತೆಯಲ್ಲಿ ನೆಲಮಂಗಲದಿಂದ ನಗರದ ಕಡೆಗೆ ಭಾರಿ ವೇಗದಲ್ಲಿ ವಾಹನಗಳು ಸಂಚರಿಸುತ್ತವೆ. ಸರ್ವಿಸ್ ರಸ್ತೆಯಲ್ಲೂ ಅದೇ ಪರಿಸ್ಥಿತಿ. ರಸ್ತೆ ಉಬ್ಬುಗಳಿಲ್ಲದಿರುವುದು ಕೂಡ ಅಪಾಯವನ್ನು ಹೆಚ್ಚಿಸುವಂತಿದೆ.

ಮೆಟ್ರೊ ನಿಲ್ದಾಣ ಬರುವ ಮುಂಚೆ ಬಸ್ ಪ್ರಯಾಣಿಕರಷ್ಟೇ ರಸ್ತೆ ದಾಟುತಿದ್ದರು. ಆದರೆ ಕಳೆದ ವರ್ಷ ಮೆಟ್ರೊ ಆರಂಭವಾದ ನಂತರ ಜನ ಸಂಚಾರ ಹೆಚ್ಚಿದೆ. ವೃದ್ಧರು, ಮಕ್ಕಳು ಮತ್ತು ಅಂಗವಿಕಲರಿಗೆ ರಸ್ತೆ ದಾಟುವುದು ಸವಾಲಾಗಿದೆ. ಹೀಗಾಗಿ ಸಿಗ್ನಲ್ ಹಾಕಿ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

> **ಪ್ರತಿ ದಿನ ಇಲ್ಲಿ ರಸ್ತೆ ದಾಟಲು ಭಯವಾಗುತ್ತದೆ. ಟ್ರಾಫಿಕ್ ಸಿಗ್ನಲ್ ದೀಪಗಳನ್ನು ಶೀಘ್ರ ಅಳವಡಿಸಬೇಕು**
>
> **ಗೀತಾಶ್ರೀ,** ಶಾಲಾ ವಿದ್ಯಾರ್ಥಿನಿ

> **ಮೆಟ್ರೊ ನಿಲ್ದಾಣಕ್ಕೆ ಹೋಗುವ ಮುನ್ನ ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು ರಸ್ತೆ ದಾಟುವ ಸಂಕಟವನ್ನು ಪರಿಹರಿಸಬೇಕು**
>
> **ಮಧುಸೂದನ್,** ಖಾಸಗಿ ಕಂಪನಿ ಉದ್ಯೋಗಿ

ಪ್ರತ್ಯೇಕ ಅಪಘಾತ: ಏಳು ಮಂದಿ ಸಾವು

ಬೆಂಗಳೂರು ನಗರ, ಗ್ರಾಮಾಂತರ ಭಾಗದಲ್ಲಿ ಸಂಭವಿಸಿದ ದುರ್ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಹಾಗೂ ನಗರದ ಹೊರವಲಯದಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ.

ಕೆಂಗೇರಿ ಆರ್.ಆರ್. ದಂತ ವೈದ್ಯಕೀಯ ಕಾಲೇಜು, ಮೈಸೂರು ರಸ್ತೆಯ ಇಂದ್ರಪ್ರಸ್ಥ ಅಪಾರ್ಟ್‌ಮೆಂಟ್ ಬಳಿ, ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣೆಯ ಮಾರತ್‌ಹಳ್ಳಿ, ನೆಲಮಂಗಲದ ನವಯುಗ ಟೋಲ್ ಹಾಗೂ ಬೆಂಗಳೂರು ಗ್ರಾಮಾಂತರ ಭಾಗದ ಹೊಸಕೋಟೆಯಲ್ಲಿ ಶುಕ್ರವಾರ ರಾತ್ರಿ, ಶನಿವಾರ ಬೆಳಿಗ್ಗೆ ಅಪಘಾತ ಸಂಭವಿಸಿದೆ.

ಶಾಲಾ ಬಸ್ ಹಾಗೂ ಸ್ಕೂಟರ್ ಮಧ್ಯೆ ಅಪಘಾತ: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶಾಲಾ ಬಸ್ ಹಾಗೂ ಸ್ಕೂಟರ್ ನಡುವೆ ಶನಿವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ಸ್ಕೂಟರ್‌ನಲ್ಲಿ ಮಗಳನ್ನು ಕಾಲೇಜಿಗೆ ಕರೆದೊಯ್ಯುತ್ತಿದ್ದ ತಾಯಿ ಮೃತಪಟ್ಟಿದ್ದಾರೆ.

ಕಾಂತಾ

ಮಾರತ್‌ಹಳ್ಳಿಯ ಕಾಂತಾ (42) ಮೃತರು. ಅವರ ಪುತ್ರಿ ನೇಹಾ (16) ಗಾಯಗೊಂಡಿದ್ದಾರೆ. ನರಸಾಪುರ ಬಳಿಯ ಖಾಸಗಿ ಕಂಪನಿಯಲ್ಲಿ ಕಾಂತಾ ಕೆಲಸ ಮಾಡುತ್ತಿದ್ದರು. ಅವರ ಪತಿ ಎಚ್‌ಎಎಲ್ ಸಿಬ್ಬಂದಿ. ದಂಪತಿಯ ಏಕೈಕ ಪುತ್ರಿ ನೇಹಾ, ಪ್ರಥಮ ಪಿಯುಸಿ ಓದುತ್ತಿದ್ದಾರೆ.

ಕಾಂತಾ ಅವರು ಶನಿವಾರ ಬೆಳಿಗ್ಗೆ 7.45ಕ್ಕೆ ಸ್ಕೂಟರ್‌ನಲ್ಲಿ ಪುತ್ರಿಯನ್ನು ಕಾಲೇಜಿಗೆ ಕರೆದುಕೊಂಡು ಹೋಗುತ್ತಿದ್ದರು. ವರ್ತೂರಿನಿಂದ ಮಾರತ್‌ಹಳ್ಳಿ ಕಡೆಗೆ ಹೋಗುತ್ತಿದ್ದಾಗ ಮಾರ್ಗ ಮಧ್ಯೆ ಸಿದ್ದಾಪುರದ ಮೀನಾಕ್ಷಿ ಲೇಔಟ್ ಬಳಿ ರಸ್ತೆಯಲ್ಲಿ ಮಳೆ ನೀರು ನಿಂತಿರುವುದನ್ನು ಗಮನಿಸಿ, ಸ್ಕೂಟರ್ ಅನ್ನು ಪಕ್ಕಕ್ಕೆ ತೆಗೆದುಕೊಂಡಿದ್ದರು. ಅದೇ ವೇಳೆ ಹಿಂದಿನಿಂದ ಬರುತ್ತಿದ್ದ ಶಾಲಾ ಬಸ್, ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಸ್ಕೂಟರ್‌ನಿಂದ ರಸ್ತೆಗೆ ಬಿದ್ದ ಕಾಂತಾ ಅವರ ತಲೆಗೆ ಗಂಭೀರವಾಗಿ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಕುಳಿತಿದ್ದ ನೇಹಾಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

'ಕಾಂತಾ ಅವರು ಹೆಲ್ಮೆಟ್ ಧರಿಸಿಯೇ ಸ್ಕೂಟರ್ ಚಲಾಯಿಸಿದ್ದರು. ಶಾಲಾ ಬಸ್, ಸ್ಕೂಟರ್ ಅನ್ನು ಸ್ವಲ್ಪ ದೂರದವರೆಗೆ ಎಳೆದುಕೊಂಡು ಹೋಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಕಾರ್ಪೆಂಟರ್ ಸಾವು: ಕೆಂಗೇರಿ ಬಳಿ ಶನಿವಾರ ಮುಂಜಾನೆ ಅತಿವೇಗವಾಗಿ ಹೋಗುತ್ತಿದ್ದ ಕಾರೊಂದು ನಿಯಂತ್ರಣ ತಪ್ಪಿ ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆದು ಪಲ್ಟಿಯಾದ ಪರಿಣಾಮ ಕಾರಿನಲ್ಲಿದ್ದ ವ್ಯಕ್ತಿ ಮೃತಪಟ್ಟಿದ್ದಾರೆ.

ಮೃತಪಟ್ಟ ಸುಖದೇವ್ (45) ಅವರು ವೃತ್ತಿಯಲ್ಲಿ ಕಾರ್ಪೆಂಟರ್ ಆಗಿದ್ದು, ಮೂವರು ಸ್ನೇಹಿತರೊಂದಿಗೆ ಇಕೊ ಕಾರಿನಲ್ಲಿ ಶನಿವಾರ ಮುಂಜಾನೆ ಬೆಂಗಳೂರಿನಿಂದ ಮೈಸೂರಿಗೆ ತೆರಳುತ್ತಿದ್ದರು. ಮೈಸೂರು ರಸ್ತೆಯ ಇಂದ್ರಪ್ರಸ್ಥ ಅಪಾರ್ಟ್‌ಮೆಂಟ್ ಬಳಿ ಚಾಲಕನ ನಿಯಂತ್ರಣ ತಪ್ಪಿ ಮುಂದೆ ನಿಂತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ನಂತರ, ಕಂಬಕ್ಕೆ ಡಿಕ್ಕಿ ಹೊಡೆದು ಕಾರು ಪಲ್ಟಿಯಾಗಿತ್ತು. ಕಾರಿನ ಹಿಂಬದಿ ಸೀಟಿನ ಮಧ್ಯದಲ್ಲಿ ಕುಳಿತಿದ್ದ ಸುಖದೇವ್ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ. ಬೈಕ್ ಸವಾರ ಹಾಗೂ ಕಾರಿನಲ್ಲಿದ್ದ ಚಾಲಕ ಸೇರಿ ಇತರೆ ಮೂವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೆಂಗೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಬ್ಬರು ನರ್ಸಿಂಗ್ ವಿದ್ಯಾರ್ಥಿಗಳ ಸಾವು: ಮೈಸೂರು ರಸ್ತೆಯ ಆರ್.ಆರ್. ದಂತ ವೈದ್ಯಕೀಯ ಕಾಲೇಜು ಬಳಿ ರಸ್ತೆಯ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದು ಇಬ್ಬರು ನರ್ಸಿಂಗ್ ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಕೇರಳದ ಅತುಲ್ (21), ಗೌರಿಶಂಕರ್ (21) ಮೃತರು. ಇಬ್ಬರೂ ದೊಡ್ಡಬೆಲೆಯಲ್ಲಿ ವಾಸಿಸುತ್ತಿದ್ದರು.

ಶುಕ್ರವಾರ ತಡರಾತ್ರಿ ಮೈಸೂರು ಕಡೆಯಿಂದ ಇಬ್ಬರೂ ಬೈಕ್‌ನಲ್ಲಿ ಅತಿ ವೇಗವಾಗಿ ಹೆಲ್ಮೆಟ್ ಧರಿಸದೇ ಬರುತ್ತಿದ್ದರು. ಮಾರ್ಗ ಮಧ್ಯೆ ಆರ್.ಆರ್. ದಂತ ವೈದ್ಯಕೀಯ ಕಾಲೇಜು ಬಳಿ ನಿಯಂತ್ರಣ ತಪ್ಪಿ ರಸ್ತೆಯ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದಿತ್ತು. ಪರಿಣಾಮ ರಸ್ತೆಗೆ ಬಿದ್ದ ಇಬ್ಬರೂ ತೀವ್ರವಾಗಿ ಗಾಯಗೊಂಡಿದ್ದರು. ಇಬ್ಬರನ್ನೂ ಸ್ಥಳೀಯ ಆಸ್ಪತ್ರೆಗೆ ಸಾರ್ವಜನಿಕರು ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ಕೆಂಗೇರಿ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೆಂಜ್ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಯುವಕ– ಯುವತಿ ಸಾವು

ಹೊಸಕೋಟೆ: ತಾಲ್ಲೂಕಿನ ದೊಡ್ಡ ಹುಲ್ಲೂರು ಬಳಿಯ ಚೆನ್ನೈ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಶನಿವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಬೆಂಜ್ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಯುವಕ–ಯುವತಿ ಮೃತಪಟ್ಟಿದ್ದಾರೆ.

ರಿಜ್ವಾನ್


ಶಹಾಜಿಯಾ

ಬೆಂಗಳೂರಿನ ಕಮ್ಮನಹಳ್ಳಿ ನಿವಾಸಿ ಶಹಾಜಿಯಾ ಶೇಖ್ (28), ಎಚ್‌ಬಿಆರ್ ಲೇಔಟ್‌ನ ನಾಗವಾರ ವಾಸಿ, ಸೆಕೆಂಡ್ ಹ್ಯಾಂಡ್ ಕಾರ್ ಡೀಲರ್ ರಿಜ್ವಾನ್ (32) ಮೃತರು.

ದೇವನಹಳ್ಳಿ ಕಡೆಯಿಂದ ಹೊಸಕೋಟೆ ಕಡೆಗೆ ಬೆಂಜ್ ಕಾರಿನಲ್ಲಿ ವೇಗವಾಗಿ ಚಲಿಸುತ್ತಿದ್ದ ಸಂದರ್ಭ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಕಾರು, ಪಲ್ಟಿಯಾಗಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಪಘಾತದ ತೀವ್ರತೆಗೆ ಬೆಂಜ್ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಕಾರು ಚಾಲಕನ ಅಜಾಗರೂಕ ಹಾಗೂ ಬೇಜವಾಬ್ದಾರಿತನವೇ ಅಪಘಾತಕ್ಕೆ ಕಾರಣವಾಗಿರಬಹುದು ಎಂದು ಪೊಲೀಸರು ಹೇಳಿದರು.

ಡಿವೈಡರ್‌ಗೆ ಡಿಕ್ಕಿ ಹೊಡೆದ ರಭಸಕ್ಕೆ ಮರ್ಸಿಡಿಸ್ ಬೆಂಜ್ ಕಾರ್‌ನಲ್ಲೇ ಯುವತಿ ಮೃತಪಟ್ಟಿದ್ದರು. ಆದರೆ, ಚಾಲಕ ರಿಜ್ವಾನ್ ಅವರ ಸುಳಿವು ಸಿಕ್ಕಿರಲಿಲ್ಲ. ಪರಾರಿ ಆಗಿರಬಹುದು ಎಂದು ಶಂಕಿಸಲಾಗಿತ್ತು. ಘಟನಾ ಸ್ಥಳದ ಸುತ್ತಲೂ ಶನಿವಾರ ಬೆಳಿಗ್ಗೆ ತನಿಖಾ ತಂಡ ಸ್ಥಳ ಮಹಜರು ನಡೆಸಿದಾಗ, ಸುಮಾರು 20 ಅಡಿ ದೂರದಲ್ಲಿ ಸೇತುವೆ ಕೆಳಗೆ ನೀರು ನಿಂತಿದ್ದ ಮೋರಿ ಹತ್ತಿರ ರಿಜ್ವಾನ್ ಶವ ಬಿದ್ದಿರುವುದು ಗೊತ್ತಾಯಿತು ಎಂದು ಡಿವೈಎಸ್‌ಪಿ ಮಲ್ಲೇಶ್ ಮಾಹಿತಿ ನೀಡಿದರು.

ನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ಎಂವಿಜೆ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಸಿ, ಕುಟುಂಬಸ್ಥರಿಗೆ ಪಾರ್ಥಿವ ಶರೀರವನ್ನು ಒಪ್ಪಿಸಲಾಗಿದೆ. ಅಪಘಾತದ ನಿಖರ ಕಾರಣ ತಿಳಿಯಲು ತನಿಖೆ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಹಿಂಬದಿ ಸವಾರ ಸಾವು

ರಂಜನ್

ನೆಲಮಂಗಲ: ರಾಷ್ಟ್ರೀಯ ಹೆದ್ದಾರಿ–48ರ ನೆಲಮಂಗಲ ಟೋಲ್ ಬಳಿ ಶುಕ್ರವಾರ ರಾತ್ರಿ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್‌ನ ಹಿಂಬದಿ ಸವಾರ ಮೃತಪಟ್ಟಿದ್ದಾರೆ.

ತುಮಕೂರು ಜಿಲ್ಲೆ ಹನುಮಂತಪುರ ನಿವಾಸಿಗಳಾದ ರಂಜನ್ (21) ಮತ್ತು ಮಾರುತಿ (26) ಮಾದಾವರದ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ನಡೆಯುತ್ತಿರುವ ವಸ್ತು ಪ್ರದರ್ಶನವನ್ನು ನೋಡಿಕೊಂಡು ತುಮಕೂರಿಗೆ ವಾಪಸ್ ತೆರಳುತ್ತಿದ್ದರು. ಅಡ್ಡ ಬಂದ ನಾಯಿಯನ್ನು ತಪ್ಪಿಸಲು ತಕ್ಷಣ ಬ್ರೇಕ್ ಹಾಕಿದ್ದರು. ಹಿಂದೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್, ಬೈಕ್‌ಗೆ ಗುದ್ದಿದ ಪರಿಣಾಮ, ಹಿಂಬದಿ ಸವಾರ ರಂಜನ್ ಕೆಳಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ. ನೆಲಮಂಗಲ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜೂನ್ 21–ಜುಲೈ 10ರ ವರೆಗೆ ವಿಶೇಷ ಕಾರ್ಯಾಚರಣೆ

ರಿಯಾಯಿತಿ ದಂಡ: ವಿಶೇಷ ಕೌಂಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರ ಮತ್ತೊಮ್ಮೆ ಅವಕಾಶ ಕಲ್ಪಿಸಿದ್ದು, ನಗರದಲ್ಲಿ ವಿಶೇಷ ಕೌಂಟರ್ ತೆರೆಯಲು ಸಂಚಾರ ಪೊಲೀಸರು ಮುಂದಾಗಿದ್ದಾರೆ.

ಜೂನ್ 21ರಿಂದ ಜುಲೈ 10ರ ವರೆಗೆ ವಾಹನಗಳ ಮಾಲೀಕರು ದಂಡ ಪಾವತಿಸಬಹುದು. ದಂಡ ಸಂಗ್ರಹಣೆ ಯಶಸ್ವಿಗೊಳಿಸಲು ಬೆಂಗಳೂರು ನಗರ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆಗೂ ಮುಂದಾಗಿದ್ದಾರೆ.

ಹೆಚ್ಚು ವಾಹನ ಸಂಚಾರವಿರುವ ಪ್ರಮುಖ ಪ್ರದೇಶಗಳಲ್ಲಿ ವಿಶೇಷ ಕೌಂಟರ್‌ಗಳನ್ನು ತೆರೆಯಲು ಪೊಲೀಸರು ಯೋಜನೆ ರೂಪಿಸಿದ್ದಾರೆ. ಈ ಹಿಂದೆಯೂ ರಿಯಾಯಿತಿ ಅಡಿ ದಂಡ ಪಾವತಿಗೆ ಅವಕಾಶ ಕಲ್ಪಿಸಲಾಗಿತ್ತು. ರಾಜ್ಯದಲ್ಲಿ ಸುಮಾರು ₹2,827 ಕೋಟಿ ದಂಡ ಬಾಕಿ ಇದೆ. ಆದ್ದರಿಂದ, ಸಂಚಾರ ದಂಡ ಪಾವತಿಗೆ ಶೇ 50 ರಿಯಾಯಿತಿ ಅವಕಾಶ ನೀಡಿದೆ.

2026ರ ಮೇ ತಿಂಗಳಿಗೂ ಮೊದಲು ಪೊಲೀಸ್ ಇಲಾಖೆಯ ಸಂಚಾರ ಇ–ಚಲನ್‌ಗಳಲ್ಲಿ ದಾಖಲಾಗಿ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಮತ್ತು ಸಾರಿಗೆ ಇಲಾಖೆಯಲ್ಲಿ 1991ರಿಂದ 2022ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ರಿಯಾಯಿತಿ ನೀಡಿ ಸರ್ಕಾರ ಆದೇಶಿಸಿದೆ.

'ಸಂಚಾರ ನಿಯಮ ಉಲ್ಲಂಘನೆಗಳಿಗೆ ದಂಡ ಪಾವತಿಸುವಂತೆ ಸಾಮಾಜಿಕ ಜಾಲತಾಣಗಳು ಸೇರಿದಂತೆ ವಿವಿಧ ಮಾಧ್ಯಮಗಳ ಮೂಲಕ ವಿಶೇಷ ಅಭಿಯಾನ ನಡೆಸಲಾಗಿದೆ. ಈ ಬಾರಿ ನಗರದಲ್ಲಿ ಹೆಚ್ಚಿನ ವಾಹನ ಸಂಚಾರ ಇರುವ ಪ್ರದೇಶಗಳಲ್ಲಿ ವಿಶೇಷ ಕೌಂಟರ್‌ಗಳನ್ನು ಸ್ಥಾಪಿಸಲಾಗುತ್ತಿದ್ದು, ವಾಹನ ಸವಾರರು ದಂಡ ಪಾವತಿಸಬಹುದು. ರಿಯಾಯಿತಿ ಅವಕಾಶ ಇರುವ ಸಂದರ್ಭದಲ್ಲಿ ನಗರದಲ್ಲಿ ವಾಹನ ತಪಾಸಣೆಯನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು. ತಪಾಸಣೆ ವೇಳೆ, ಯಾವುದೇ ಬಾಕಿ ದಂಡವಿದ್ದರೆ ಸ್ಥಳದಲ್ಲೇ ಪಾವತಿಸುವಂತೆ ಸೂಚಿಸಲಾಗುತ್ತದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ವಿಶೇಷ ಕೌಂಟರ್‌ಗಳ ಜತೆಗೆ ಕರ್ನಾಟಕ ಸ್ಟೇಟ್ ಪೊಲೀಸ್ (ಕೆಎಸ್‌ಪಿ) ಆ್ಯಪ್, ಬಿಟಿಪಿ-ಅಸ್ತ್ರಂ ಆ್ಯಪ್, ಹತ್ತಿರದ ಸಂಚಾರ ಪೊಲೀಸ್ ಠಾಣೆಗಳು, ಸಂಚಾರ ನಿರ್ವಹಣಾ ಕೇಂದ್ರ, ಕರ್ನಾಟಕ ಒನ್/ ಬೆಂಗಳೂರು ಒನ್ ವೆಬ್‌ಸೈಟ್ ಮೂಲಕವೂ ದಂಡ ಪಾವತಿ ಮಾಡಬಹುದಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಬೆಂಗಳೂರು ರೇಸ್

ಮಾರ್ಗರೆಟ್ಟಾ ಗೆಲ್ಲುವ ನಿರೀಕ್ಷೆ

ಝುವಾರೆ ಎಸ್. ಪೂನಾವಾಲ ಫಿಲ್ಲೀಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಾರ್ಗರೆಟ್ಟಾ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಟಾಲಿನ್‌ಗಾರ್ಡ್ 4, ಅಜಾಲಿಯಾ 5, ಸ್ಟಾರ್ಮ್ ಶ್ಯಾಡೊ 1
2ನೇ ರೇಸ್: ಸ್ಯಾಂಟೋರಿಯಸ್ 1, ಶಾಕ್ ಆ್ಯಂಡ್ ಆವ್ 7, ಅಗಾಪೆ 2
3ನೇ ರೇಸ್: ರಾವಿಶಿಂಗ್ ಕ್ವೀನ್ 8, ಗಾರ್ಜಿಯನ್ 6, ಅಟ್ಮಾನ್ 2
4ನೇ ರೇಸ್: ಅಕ್ವಾಸ್ಟಿಕ್ 2, ಸಿಲಿಕಾನ್ ಸ್ಟಾರ್ 3, ಸ್ಮಾಲ್ ಡ್ರೀಮ್ಸ್ 8
5ನೇ ರೇಸ್: ಎಲಿಸಿಯಂ 5, ಸ್ಟೆಲ್ಲಾಂಟಿಸ್ 3, ಡಾನ್ ಕಾರ್ಲೋಸ್ 1
6ನೇ ರೇಸ್: ಮಾರ್ಗರೆಟ್ಟಾ 3, ಮೂನ್‌ವೀಲ್ 4, ಸ್ಟಾರ್‌ಝಿಲ್ಲಾ 5
7ನೇ ರೇಸ್: ಗ್ಲೋರಿಯಸ್‌ನೆಸ್ 2, ಪರ್ಫೆಕ್ಟ್ ಲೆಜೆಂಡ್ 1, ಫ್ಲೆಮಿಂಗ್ ಸ್ವೋರ್ಡ್ 3
8ನೇ ರೇಸ್: ಲಾಟ್ಸ್ ಆಫ್ ಲಕ್ 8, ರೀಗಲ್ ಅರಿಸ್ಟೊಕ್ರಸಿ 3, ಥ್ರಿಲ್ ಆಫ್ ಬ್ರೆಜಿಲ್ 1

ಉತ್ತಮ ಬೆಟ್: ಎಲಿಸಿಯಂ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

₹63.13 ಲಕ್ಷ ದೋಚಿದ ವಂಚಕರು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದಲ್ಲಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸೈಬರ್ ವಂಚಕರ ಆಮಿಷಕ್ಕೆ ಒಳಗಾಗಿ 59 ಹಾಗೂ 52 ವರ್ಷದ ಇಬ್ಬರು ಪುರುಷರು ₹63.13 ಲಕ್ಷ ಕಳೆದುಕೊಂಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯ ಪೊಲೀಸರು, ಆರೋಪಿಗಳ ಪತ್ತೆಗೆ ಶೋಧ ಕಾರ್ಯ ನಡೆಸಿದ್ದಾರೆ.

ನಂಬಿಸಿ ₹55 ಲಕ್ಷ ದೋಚಿದರು: ಮಹದೇವಪುರ ಸಮೀಪದ ನಾರಾಯಣಪುರದ ನಿವಾಸಿ ಪಿ.ಕೆ. ಪಟೇಲ್‌ಗೆ ಮೇ 22ರಂದು ಕರೆ ಮಾಡಿದ್ದ ಸೈಬರ್ ವಂಚಕರು, ವಾಟ್ಸ್‌ಆ್ಯಪ್ ಗ್ರೂಪ್‌ವೊಂದಕ್ಕೆ ಸೇರ್ಪಡೆ ಮಾಡಿದ್ದರು. ಅದೇ ಗ್ರೂಪ್‌ನಲ್ಲಿ ರಾನು ವ್ಹೋರಾ ಹಾಗೂ ಮೀರಾ ಐಯ್ಯರ್ ಎಂಬುವವರೂ ಇದ್ದರು. ಇಬ್ಬರೂ ಗ್ರೂಪ್‌ನಲ್ಲಿ ಟ್ರೇಡಿಂಗ್ ಬಗ್ಗೆ ಚರ್ಚಿಸುತ್ತಿದ್ದರು. ಅದಾದ ಕೆಲವೇ ದಿನಗಳಲ್ಲಿ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ದೂರುದಾರರಿಗೆ ಹೂಡಿಕೆ ಸಂಬಂಧಿಸಿದ ಲಿಂಕ್‌ವೊಂದನ್ನು ಕಳುಹಿಸಿ, ಆ್ಯಪ್‌ವೊಂದನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ಸೂಚಿಸಿದ್ದರು. ಹೂಡಿಕೆ ಮಾಡಿದ ಹಣಕ್ಕೆ ಅಧಿಕ ಲಾಭಾಂಶ ನೀಡಲಾಗುವುದು ಎಂದೂ ನಂಬಿಸಿದ್ದರು.

'ಆರಂಭದಲ್ಲಿ ದೂರುದಾರರು ₹50 ಸಾವಿರ ಹೂಡಿಕೆ ಮಾಡಿದ್ದರು. ಇನ್ನೂ ಹೆಚ್ಚಿನ ಹೂಡಿಕೆ ಮಾಡಿದರೆ, ಅಧಿಕ ಲಾಭ ಸಿಗಲಿದೆ ಎಂದು ದೂರುದಾರರಿಗೆ ಸೈಬರ್ ವಂಚಕರು ಆಮಿಷವೊಡ್ಡಿದ್ದರು. ವಂಚಕರ ಮಾತು ನಂಬಿದ್ದ, ಪಿ.ಕೆ. ಪಟೇಲ್ ಬೇರೆ ಬೇರೆ ಬ್ಯಾಂಕ್‌ನ ಆರು ಖಾತೆಗಳಿಗೆ ₹55.88 ಲಕ್ಷ ವರ್ಗಾವಣೆ ಮಾಡಿದ್ದರು' ಎಂದು ಸೈಬರ್ ಪೊಲೀಸರು ತಿಳಿಸಿದರು.

'ಕೆಲವು ದಿನ ಕಳೆದ ಮೇಲೆ, ಹಣವನ್ನು ಡ್ರಾ ಮಾಡಿಕೊಳ್ಳಲು ದೂರುದಾರರು ಪ್ರಯತ್ನಿಸಿದ್ದರು. ಆಗ ಇನ್ನೂ ಹೆಚ್ಚಿನ ಹಣ ನೀಡುವಂತೆ ಆರೋಪಿಗಳು ಕೇಳಿದ್ದರು. ದೂರುದಾರರಿಗೆ ವಂಚನೆ ನಡೆದಿರುವ ಸಂದೇಹ ಬಂದು ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಎಪಿಕೆ ಫೈಲ್ ವಂಚನೆ: ಕಳೆದ ಕೆಲವು ತಿಂಗಳಿಂದ ಎಪಿಕೆ ಫೈಲ್ ಡೌನ್‌ಲೋಡ್ ಮಾಡಿಸಿ, ವಂಚಿಸುತ್ತಿದ್ದ ಪ್ರಕರಣಗಳು ಕಡಿಮೆ ಆಗಿದ್ದವು. ಇದೀಗ ಮತ್ತೆ ಅದೇ ರೀತಿಯಲ್ಲಿ ವಂಚನೆ ನಡೆಸಲಾಗುತ್ತಿದೆ.

ಆವಲಹಳ್ಳಿಯ ನಿವಾಸಿ ಎನ್.ಸುರೇಶ್‌ಗೆ ವಂಚಕರು ಎಪಿಕೆ ಫೈಲ್ ಲಿಂಕ್ ಕಳುಹಿಸಿದ್ದರು. ಜೂನ್ 1ರಂದು ದೂರುದಾರರ ಮೊಬೈಲ್ ಸಂಖ್ಯೆಗೆ ಪದೇ ಪದೇ ಒಟಿಪಿಗಳು ಬಂದಿದ್ದವು. ಅದಾಗಿ ಕೆಲವು ನಿಮಿಷದಲ್ಲಿ ಕೆವೈಸಿ ಅಪ್‌ಡೇಟ್ ಸಂದೇಶವೊಂದು ಬಂದಿತ್ತು. ಮರುದಿನ ಕೆವೈಸಿ ಯಶಸ್ವಿಯಾಗಿ ಅಪ್‌ಡೇಟ್ ಆಗಿದೆ ಎಂಬ ಸಂದೇಶವೂ ಬಂದಿತ್ತು. ಜೂನ್ 3ರಂದು ಡೆಬಿಟ್ ಕಾರ್ಡ್ ಅಪ್‌ಡೇಟ್ ಮಾಡಿ ಎನ್ನುವ ಸಂದೇಶ ದೂರುದಾರರ ಮೊಬೈಲ್ ಸಂಖ್ಯೆಗೆ ಬಂದಿತ್ತು. ಆಗ ಎನ್.ಸುರೇಶ್ ಡೆಬಿಟ್ ಕಾರ್ಡ್ ವಿವರನ್ನು ಭರ್ತಿ ಮಾಡಿದ್ದರು. ಅಂದೇ ರಾತ್ರಿ ಆನ್‌ಲೈನ್ ಮೂಲಕ ಬ್ಯಾಂಕ್ ಖಾತೆಯನ್ನು ಪರಿಶೀಲಿಸಿದಾಗ, ಹಂತಹಂತವಾಗಿ ₹7.53 ಲಕ್ಷ ಕಡಿತಗೊಂಡಿತ್ತು ಎಂದು ಮೂಲಗಳು ತಿಳಿಸಿವೆ.

'ಎಪಿಕೆ ಫೈಲ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ತಿಳಿಸಿ, ವಂಚನೆ ನಡೆಸಲಾಗಿದೆ ಎಂಬುದಾಗಿ ದೂರು ನೀಡಿದ್ದಾರೆ. ದೂರು ಆಧರಿಸಿ, ತನಿಖೆ ನಡೆಸಲಾಗುತ್ತಿದೆ' ಎಂದು ಸೈಬರ್ ಪೊಲೀಸರು ಹೇಳಿದರು.

ಸಿಜೆಪಿ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್ ಪರೀಕ್ಷೆಗಳನ್ನು ಸರಿಯಾಗಿ ನಿರ್ವಹಿಸದೇ ಕೋಟ್ಯಂತರ ವಿದ್ಯಾರ್ಥಿಗಳ ಜೀವನದಲ್ಲಿ ಕೇಂದ್ರ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿರುವ ಕಾಕ್ರೋಚ್ ಜನತಾ ಪಾರ್ಟಿಯು (ಸಿಜೆಪಿ) ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಜೂನ್ 14ರಂದು ಪ್ರತಿಭಟನೆ ಹಮ್ಮಿಕೊಂಡಿದೆ.

ಬೆಳಿಗ್ಗೆ 11 ಗಂಟೆಗೆ ಸಿಜೆಪಿ ಕಾರ್ಯಕರ್ತರು ಪುನೀತ್ ರಾಜಕುಮಾರ್ ಸಮಾಧಿಯಲ್ಲಿ ಪುಷ್ಪ ನಮನ ಸಲ್ಲಿಸಲಿದ್ದಾರೆ. ಮಧ್ಯಾಹ್ನದ ಬಳಿಕ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಲಿದೆ ಎಂದು ಸಿಜೆಪಿ ಮುಖ್ಯ ವಕ್ತಾರ ಸೌರವ್ ದಾಸ್ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

'ಕೇಂದ್ರ ಶಿಕ್ಷಣ ಇಲಾಖೆಯ ಬೇಜವಾಬ್ದಾರಿಯಿಂದಾಗಿ ದೇಶದಲ್ಲಿ ಒಂದು ಕೋಟಿ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಏಳೆಂಟು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಹೊಣೆಗಾರಿಕೆಯನ್ನು ಧರ್ಮೇಂದ್ರ ಪ್ರಧಾನ್ ಹೊರಬೇಕು' ಎಂದು ಆಗ್ರಹಿಸಿದರು.

'ನೀಟ್ ಮಾತ್ರವಲ್ಲ, ಸಿಬಿಎಸ್‌ಇ ಫಲಿತಾಂಶದಲ್ಲಿಯೂ ಗೋಲ್‌ಮಾಲ್ ನಡೆದಿವೆ. ಆಡಳಿತ ನಡೆಸುವವರ ಕುಮ್ಮಕ್ಕಿನಿಂದಾಗಿಯೇ ಪ್ರಶ್ನೆ ಪತ್ರಿಕೆ ಸೋರಿಕೆ, ಫಲಿತಾಂಶದಲ್ಲಿ ತಿರುಚುವಿಕೆ ನಡೆಯುತ್ತವೆ. ಇದನ್ನು ವಿರೋಧಿಸಿ ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ಸಾವಿರಾರು ಯುವಜನರು ಭಾಗವಹಿಸಲಿದ್ದಾರೆ' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಿಜೆಪಿ ಕಾರ್ಯಕರ್ತರಾದ ದೆಹಲಿಯ ರತ್ನ, ಬೆಂಗಳೂರಿನ ಆಫ್ರಿನ್, ರಾಹುಲ್, ಮೈಸೂರಿನ ಪೂರ್ಣಾನಂದ, ಕೆ.ಆರ್. ಗೋಪಾಲಕೃಷ್ಣ, ಅಹಿಂದ ಜವರಪ್ಪ, ಅಪೂರ್ವ ಡಿಸಿಲ್ವ ಇದ್ದರು.

ತಮಿಳು ಪೋಸ್ಟರ್‌ಗೆ ವಿರೋಧ

ಕಾಕ್ರೋಚ್ ಜನತಾ ಪಾರ್ಟಿಯು ಭಾನುವಾರ ಹಮ್ಮಿಕೊಂಡಿರುವ ಪ್ರತಿಭಟನೆಗೆ ಆಹ್ವಾನ ನೀಡುವ ಪೋಸ್ಟರ್, ತಮಿಳು ಭಾಷೆಯಲ್ಲಿರುವುದನ್ನು ಕನ್ನಡ ಪರ ಸಂಘಟನೆಗಳು ಖಂಡಿಸಿವೆ.

'ಇಂಥ ಭಾಷಾ ನಿರ್ಲಕ್ಷ್ಯ ಹಾಗೂ ಪ್ರಚೋದನಾತ್ಮಕ ನಡೆ ಮುಂದಿನ ದಿನಗಳಲ್ಲಿ ಗಂಭೀರ ಪರಿಣಾಮಗಳನ್ನು ಬೀರಲಿವೆ. ಈ ನಡೆಗೆ ಕನ್ನಡಪರ ಸಂಘಟನೆಗಳ ತೀವ್ರ ವಿರೋಧವಿದೆ. ನಮ್ಮ ಭಾಷೆ, ನಮ್ಮ ಅಸ್ತಿತ್ವ ನಮ್ಮ ಹಕ್ಕು. ಹಾಗಾಗಿ ಸಿಜೆಪಿ ಪ್ರತಿಭಟನೆಗೆ ಪೊಲೀಸರು ಅವಕಾಶ ನೀಡಿದರೆ ಅಲ್ಲಿ ಅನಾಹುತ ಉಂಟಾದರೆ ಪೊಲೀಸರೇ ಪೂರ್ಣ ಜವಾಬ್ದಾರರಾಗುತ್ತಾರೆ' ಎಂದು ಕನ್ನಡಪರ ಸಂಘಟನೆಗಳ ಪರವಾಗಿ ಬೈರಪ್ಪ ಹರೀಶ್ ಕುಮಾರ್ ತಿಳಿಸಿದ್ದಾರೆ.

'ಭಾಷಾ ಸಮುದಾಯಗಳ ಮಧ್ಯೆ ಬೆಂಕಿ ಹಚ್ಚುವ ಕೆಲಸಕ್ಕೆ ಮುಂದಾಗಿರುವ, ಕನ್ನಡದ ಸಾರ್ವಭೌಮತೆಗೆ ಧಕ್ಕೆ ತಂದಿರುವ ಸಿಜೆಪಿಯ ಭಾಷಾ ತಾರತಮ್ಯಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಅಧ್ಯಕ್ಷ ಟಿ.ಎ. ನಾರಾಯಣಗೌಡರ ಆದೇಶದಂತೆ ನಾವು ವಿರೋಧ ವ್ಯಕ್ತಪಡಿಸುತ್ತಿದ್ದೇವೆ. ಯಾವುದೇ ಕಾರಣಕ್ಕೂ ಇವರ ಹೋರಾಟಕ್ಕೆ ಪೊಲೀಸ್ ಇಲಾಖೆ ಅನುಮತಿ ನೀಡಬಾರದು' ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಆಂಜನಪ್ಪ ಆಗ್ರಹಿಸಿದ್ದಾರೆ.

PM SHRI
ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ
ಎ.ಎಸ್.ಸಿ. ಕೇಂದ್ರ (ದಕ್ಷಿಣ), ಬೆಂಗಳೂರು
ನಂ.1, ವಿಕ್ಟೋರಿಯಾ ರಸ್ತೆ, ಬೆಂಗಳೂರು–560047
E-mail:kvascbgr@gmail.com website:https://ascbangalore.kvs.ac.in/
Ph No. 080-25302862

ಒಪ್ಪಂದ ಆಧಾರಿತ ಶಿಕ್ಷಕರಿಗಾಗಿ ವಾಕ್–ಇನ್ ಸಂದರ್ಶನ

ಕ್ರ.ಸಂ	ಹುದ್ದೆ	ನೋಂದಣಿ ಸಮಯ
1	• ಪಿಜಿಟಿ: ರಸಾಯನಶಾಸ್ತ್ರ, ಭೌತಶಾಸ್ತ್ರ • ಟಿಜಿಟಿ: ಹಿಂದಿ, ಇಂಗ್ಲಿಷ್, ಸಮಾಜ ವಿಜ್ಞಾನ, ಸಂಸ್ಕೃತ • ಇತರೆ: ವೃತ್ತಿಪರ ಬೋಧಕ, ಕಲೆ/ಕರಕುಶಲ ತರಬೇತುದಾರ, ಸಂಗೀತ/ನೃತ್ಯ ತರಬೇತುದಾರ, ಯೋಗ ಬೋಧಕ, ಕನ್ನಡ ಶಿಕ್ಷಕ, ವಿಶೇಷ ಶಿಕ್ಷಕ • ಪಿಆರ್‌ಟಿ ಮತ್ತು ಬಲವಟಿಕಾ ಶಿಕ್ಷಕಿ	24/06/2026 (ಬುಧವಾರ) ವರದಿ ಮಾಡುವ ಸಮಯ: ಬೆಳಿಗ್ಗೆ 8:30–10:30

- **ಪಿಆರ್‌ಟಿಗೆ ಅರ್ಹತೆ:** ಡಿ.ಎಲ್.ಎಡ್. ಮತ್ತು ಸಿಟಿಇಟಿ (ಪೇಪರ್ 1) ಮತ್ತು ಬಲವಟಿಕಾ: ನರ್ಸರಿ ಶಿಕ್ಷಕರ ಶಿಕ್ಷಣದಲ್ಲಿ ಡಿಪ್ಲೊಮಾ / ಪ್ರಿ–ಸ್ಕೂಲ್ ಶಿಕ್ಷಣ / ಆರಂಭಿಕ ಬಾಲ್ಯ ಶಿಕ್ಷಣ ಕಾರ್ಯಕ್ರಮ (ಡಿ.ಇ.ಸಿ.ಎಡ್) ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿ ಅಥವಾ ಎನ್‌ಸಿಟಿಇ ಮಾನ್ಯತೆ ಪಡೆದ ಸಂಸ್ಥೆಯಿಂದ ಬಿ.ಎಡ್ (ನರ್ಸರಿ).
- ನೋಂದಣಿಗಾಗಿ ದಯವಿಟ್ಟು ಸಂವಿದ ಸತಿ ಪೋರ್ಟಲ್‌ಗೆ ಭೇಟಿ ನೀಡಿ (https:// samvida-sathi.kvs.gov.in)
- ಅರ್ಹತಾ ಮಾನದಂಡಗಳು ಮತ್ತು ದಾಖಲೆ ಪರಿಶೀಲನೆಗಳನ್ನು ಪೂರೈಸುವ ಅಭ್ಯರ್ಥಿಗಳಿಗೆ ಸಂದರ್ಶನಗಳನ್ನು ಒಳಪಡಿಸಲಾಗುತ್ತದೆ.

ಗಮನಿಸಿ: ಅರ್ಹತೆಗಳು ಮತ್ತು ಇತರ ವಿವರಗಳಿಗಾಗಿ ದಯವಿಟ್ಟು https://: ascbangalore.kvs.ac.in ವೆಬ್‌ಸೈಟ್‌ಗೆ ಭೇಟಿ ನೀಡಿ.

ಪ್ರಾಂಶುಪಾಲರು



ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

SITES FOR SALE
DC Converted with E Khata
Near Factory Circle & Tafe Factory, 2 KM from Doddabalapura Main Road, Near Bashettihalli
100% Clear Title
Ready for Registration
Banks Loan Available
7022446922

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU Approved by AICTE
KCET CODE: E087

A NAAC Accredited Colleges Engg. | Law | Degree
Admission Open 2026-27
B.E: ENGINEERING
CSE | ISE | AI&ML
ECE | MECH | CIVIL
VIVEKANANDA COLLEGES
PHARMA: D.PHARM, B.PHARM, M. PHARM
LAW: 3 YEAR LL.B, 5 YEAR: B.A | B.COM LL.B
DEGREE: B.A | B.SC | B.ED, B.COM: REG. | BDA | LSCM, M.COM
MANAGEMENT: BCA, BBA, MBA
95139 53482
76250 13637
R & D Centers | Excellent Placement | 4.4 Lac Avg. P.A CTC | Skill Lab | Campus Hostel
VKIT Campus: Gudimavu, Kumbalagodu, Off. Mysuru Road, Bengaluru-74. Email : principal@vitb.ac.in Web : vitb.ac.in
JES Main Campus: Dr. Rajkumar Road, Next to Orion Mall, Rajajinagar, Bengaluru-55 E-mail : admission@vivekanandacolleges.in Web : vivekanandacolleges.in

PRM/KA/RERA/1251/310/PR/150223/005721
DS MAX SAMYAK
SUPER LUXURIOUS
2 & 3-BHK APARTMENTS
DS MAX®
MYSORE RD.
NEAR CHALLAGHATTA METRO
2-BHK HOMES STARTS @
₹75L*
BDA APPROVED | G+14 FLOORS

8880 461 461
www.dsmaxproperties.com

REAL ESTATE BUYING

House

Magadi Road

WANTED READY
Building for outright purchase build-up area around 20,000 sq feet suitable for PG/ Hostel in and around Summanahalli to Kadabagere Cross on Magadi Main Road, Contact: 9972144556

Sites

Vishweshwariah Layout

BUYING/ SELLING
20x30,30x40,40x60 50x80 BDA sites VISHVESHWARAIAH LAYOUT,BSK 6th-stage KEMPEGOWDA-LAYOUT.Contact: 9844533371/ 9341733480

Residential/ Commercial

Malleshwaram

WANTED-1500-TO-2400 SQ.FT. RESIDENTIAL LAND: in and around Malleshwaram, Sheshadripuram, RMV 2ndStage, Kumara Park. Mob: 9740852433

RENTAL PROPERTIES

Accommodation Available

Commercial

FOR RENT
Commercial corner east facing 2200 sqft. Available on Sheshadripuram 1st main road immediate occupancy. Contact:- 9535385777 / 9448190344.

BUILDING 4500 Sqft ground and first floor with glass and Ac suitable for hotel, super market, show room, burger or pizza outlet for lease or rent in Mangalore city prime roadside place. Contact: 9886789567

Flats

TWO BHK flat JP Nagar 5th phase, Rent 30,000 plus maintenance. Call: 9886425997

TWO BHK, 3rd floor / veg / JP nagar 2nd phase, rent 22,000. Call: 9886425997

REAL ESTATE SELLING

Agricultural Land Converted

Anjanapura

BDA SITE FOR SALE, IN ANJANAPURA 10TH BLOCK. 40X60 EAST FACING. EXCELLENT LOCATION CONTACT: 7975829784

Agricultural Land

Mysore Road

LAND FOR SALE 30 Acres. from Mysore 50 Kms Direct registration only Contact : 9739627282

Mysore

MYSORE 1 ACRE LAND available, Near New Mysore-Bangalore Highway, suitable for all Commercial Purposes. Contact: 7348831599

Commercial Building

Jayanagar

SALE JAYANAGAR
4th Block 30x40 Commercial Complex 3 Floors on 60feet Road Ct:9844134068

Majestic And Around

SALE COMMERCIAL LAND/ SHOP 840 Sqft (80×10.6ft) 56/1, 3rd Main Road NT Pet, Blr-02. Wholesale Hub Buyers: 8777591526

Malleshwaram

FULLY FURNISHED
16,000sft. A/C Showroom For RENT/SALE On Prime Busy Commercial Area, 8th Cross, Malleshwaram. 9845358544/ 9448477419

Commerical

BTM Layout

FOR SALE commercial building 17250 sq.ft. newly constructed building on site 4500 sqft. Near Hulimavu Lake. Price Expected 17.5Cr. Contact: +91 6360919527

Vishweshwariah Layout

26X80 VISHWESHWARAIAH Layout, Commercial BDA Site, 3rd Block North, 80ft Ullal Main Road 22,000/- Psqft Negotiable: 9845793121

Yeshwanthpur

FOR SALE:
Premium 4500SFT fully-furnished office`space with OC`pre-leased to`150`year old Switzerland Company fetching 3.2L.monthly rental`income in`Yeshwanthpur Price:15k/sft. Call:9916055055

Farm House/ Land/ Resorts

Kanakapura Road

KANAKAPURA ROAD
PTCL land, very prime location 36 acres available for sale/JV. 9739778973 8088593281

Villas/Bunglows

Banashankari

35X55 BDA house east bsk 2nd stage 7cr 30x40 west bda 9th Block jayanagar 5.5cr house 8310521466

Industrial & Factory

Tumkur Road

SALE/ BUILT to Suit 10/ 50 Acres Industrial Converted Warehouse Land Facing National Highway. 9141326819

Residential/ Commercial

Old Madras Road

FOR SALE A KHATA OMR MAIN ROAD FACING SHOWROOM/ COMMERCIAL PROPERTY. SUITABLE FOR OFFICE/INSTITUTE/BPO/CLINIC CONTACT 9948661379

House

Jayanagar

SALE JAYANAGAR
9th Block 30x40 1st,2nd,3rd Floor 2 BHK, 4th Floor 3 BHK Duplex House With Lift Ct:9844134068

Basaveshwaranagar

GROUND + 3 Floors west 1450 sft. All 3 BHK north house sale. 5,65,00,000 Negotiable. Or available for lease ground 2/ 3 BHK 25,00,000/ 35,00,000. First 3 BHK 45,00,000, Third 3 BHK 42,00,000 Negotiable. Lift provision made. Contact:- 9845596542.

Vijayanagar

BDA 20X25 Ground First Floor House East Facing, RPC Layout, Vijayanagar, Rs. 1.25Cr Contact: 9739957911

Mysore

SALE 60X40 MUDA site 2BHK house behind Sankranthi Circle HEBBAL, MYSORE. 11,500/- sqft. 9900850729

Vishweshwariah Layout

20X30 BUILDING for SALE. NORTH FACE, G+3, #2377, Vishveshwaraiah Layout, 8th Block, 1.45 Crore. 9731177977

Flat

Jigani

DLF MAIDEN HEIGHTS

2 BHK FLAT SALE
937 SQFT. 1st Floor, Fully Furnished, Stilt Parking, Club House, Swimming Pool, etc. Near JIGANI. **Call : 9840286535, 9952916455.**

Banashankari

KATHRIGUPPE EAST, GH RESIDENCY, 3BHK FLATS For Sale, Ready to Move. 9000/ SFT. 80507-27159/ 96065-03064

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

Whitefield

GOPALAN ATLANTIS, WHITEFIELD Semi furnished 3 BHK for SALE| 1,755 sq.ft.| High Floor| North- East entrance, Good ventilation, sunlight. 1330 carpet. Large car park. Single owner. Immaculate. Rarely available in this configuration. 3 sunset- view balconies| Custom pooja unit Vaastu compliant| Walk-in wardrobe| Modular kitchen Clubhouse, Gym, Pool, Tennis, Metro– all close Contact: +91 9880413134/ 6362718455

KAMMAGONDANAHALLI SRI MARUTHI SEVA SAMITHI (R) KARNATAKA-INDIA

Dr. Sri. Sri. Sri. Shivakumara Mahaswamy College of Engineering

(Affiliated to VTU, Belgaum & Approved by AICTE, New Delhi)
Ph: 080-2770 1250 / 2773 9251/ 52 / 53 / 54, Fax : 080 -2773 9250. E-mail: principaldrsmce@gmail.com

ADMISSION NOTIFICATION FOR B.E., M.Tech, MBA & Diploma : 2026-27

CET CODE : BE-E174, MBA-B165, M.Tech-T921 & Diploma-566

Sl No	Program	College Fees Structure Management Quota
01	Computer Science & Engineering	RS. 1,15,000/ Year
02	Information Science & Engineering	RS. 1,10,000/ Year
03	Electronics & Communication Engineering	RS. 85,000/ Year
04	Electrical & Electronics Engineering	RS. 80,000/ Year
05	Mechanical Engineering	RS. 65,000/ Year
06	CIVIL Engineering	RS. 65,000/ Year
07	M.TECH	RS. 65,000/ Year
08	MBA	RS. 65,000/ Year
09	Diploma	Rs. 20,000/ Year

GOLD MEDALIST
Congratulations TOPPERS

PRAKASH 1CC22EE002 CGPA:8.35
RADHAKRISHNA P 1CC23ME411 CGPA- 8.35
JEEVAN N 1CC22IS022 CGPA-8.95
MANOJ H S 1CC22EC015 CGPA:9.08
RENUKA B 1CC22CS079 CGPA: 9.15
Ankith K J 1CC23BA005 CGPA: 8.46

Sri. D.C. Venugopal
Chairman
Dr. K.S.Jagadeesh Gowda
Principal
Contact :
+91 9663170764 / 8453392559
7760268213 / 6361871177 / 7204824495

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಕೃಷ್ಣಬೈರೇಗೌಡ
ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು

ಹಸಿರು ಬೆಂಗಳೂರಿಗಾಗಿ ನೀವು ಗಿಡ ನೆಡುವಿರಾ?

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸಮನ್ವಯದಲ್ಲಿ ನಡೆಯುತ್ತಿರುವ **ಗಿಡ ನೆಡುವ ಬೃಹತ್ ಅಭಿಯಾನ**ಕ್ಕೆ ಕೈಜೋಡಿಸುವ ಮೂಲಕ, ಉದ್ಯಾನ ನಗರಿಯ ವೈಭವವನ್ನು ಒಟ್ಟಾಗಿ ಮರುಸೃಷ್ಟಿಸೋಣ

50,000 ಜಾಗೃತ ನಾಗರಿಕರು

15 ಲಕ್ಷ ಸ್ಥಳೀಯ ತಳಿಯ ಗಿಡಗಳು

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ನೋಂದಾಯಿಸಿಕೊಳ್ಳಿ, ಗಿಡ ನೆಡಿ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳ ಹಸ್ತಾಕ್ಷರವುಳ್ಳ ಡಿಜಿಟಲ್ ಪ್ರಮಾಣಪತ್ರವನ್ನು ನಿಮ್ಮದಾಗಿಸಿಕೊಳ್ಳಿ

ಶನಿವಾರ
27
ಜೂನ್ 2026

ಸಸಿಗಳ ನೆಡುವಿಕೆಗೆ ಗುರುತಿಸಲ್ಪಟ್ಟ ಜಾಗಗಳು

ಡಾ. ಶಿವರಾಮ ಕಾರಂತ ಬಡಾವಣೆ – ಬೆಂಗಳೂರು ಉತ್ತರ
ನಾಡಪ್ರಭು ಕೆಂಪೇಗೌಡ ಬಡಾವಣೆ – ಬೆಂಗಳೂರು ಪಶ್ಚಿಮ
ಬನಶಂಕರಿ 6ನೇ ಹಂತದ ಬಡಾವಣೆ – ಬೆಂಗಳೂರು ದಕ್ಷಿಣ



ಒಟ್ಟಾಗಿ ನಾವೆಲ್ಲರೂ ಹಸಿರು ಮತ್ತು ಆರೋಗ್ಯಪೂರ್ಣ ಬೆಂಗಳೂರನ್ನು ಭವಿಷ್ಯದ ಪೀಳಿಗೆಗೆ ಕೊಡುಗೆಯಾಗಿ ನೀಡೋಣ

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಸಮನ್ವಯ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)

ಸಹಭಾಗಿತ್ವ
ಗ್ರೇಟರ್ ಬೆಂಗಳೂರು ಪ್ರಾಧಿಕಾರದ 5 ಮಹಾನಗರ ಪಾಲಿಕೆಗಳು
ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಉನ್ನತ ಶಿಕ್ಷಣ ಇಲಾಖೆ

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ:
www.GreenBengaluruByBDA.in

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರು ಪ್ಲಾಸ್ಟಿಕ್ ಬಾಟಲಿಗಳು ಸೇರಿದಂತೆ, ಯಾವುದೇ ರೀತಿಯ ಒಂದು ಬಾರಿ ಬಳಸಿ ಬಿಸಾಡುವ ಪ್ಲಾಸ್ಟಿಕ್ ವಸ್ತುಗಳನ್ನು ತರದಿರಿ

ಬಿಡಿಎ ಅಧ್ಯಕ್ಷರಾದ **ಶ್ರೀ ಎನ್.ಎ. ಹ್ಯಾರಿಸ್** ಅವರು **ಹಸಿರು ಬೆಂಗಳೂರು** ಅಭಿಯಾನದ ನಿಮಿತ್ತ ಸಸಿ ನೆಡುತ್ತಿರುವುದು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

WANTED BDA & BDA Approved Sites Anjanapura, Banashankari 6th Stage, JP-Nagar 8th/ 9th Phase, Kanakapura Road, NPKL, SMV Layout ANY MEASUREMENT CONTACT: 9845298419

WANTED BDA & BDA Approved Sites Anjanapura, Banashankari 6th Stage, Jp-Nagar 8th/ 9th Phase, Kanakapura Road, NPKL, SMV Layout ANY MEASUREMENT CONTACT: 9845298419

ANJANAPURA 6TH Block, 40x60 East 80 Feet Road, Commercial Property for Sale. Contact: 9483748768/ 9880448478.

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

"BUYING AND Selling of Residency/ Commercial/ Industrial Properties in Bangalore only genuine Buyers/ Sellers Call: 9845286505"

BDA_AUCTION CORNER SITE 50x80 S/W Corner 40ft Road BANASHANKARI 6th Stage 4th B`Block. Contact`Owner: 9980041072

BANASHANKARI 6TH stage. 50x80. Commercial 100 Feet Road. And 40x60. Corners Sites For Sale. -9916817739

COMMERCIAL BANASHANKRI 6th Stage 1st Block 6600 Sft West Facing 13,000/-sft 30x40 East 2 Crores. 98456-09477

BANASHANKARI 6TH Stage 11th Block, 40x60 Site Sale, Close to 80 Feet Road, 9972338060/ 9880448478.

Bannerghatta Road

35X45 SITE with GF house behind IIMB, Bannerghatta Road S/F 3.10 Cr. Call: 9886425997

Hosur Road

SALE DC CONVERSION SITE 20X25 AT ATTIBELLE HOSUR TOLL DEVELOPED AREA Rs.28LAKHS 7892531744 9448369117

Jakkur

30X40 BDA site for sale Arkhavathi Layout north facing jakkur 7th block very good location contact 9945866245, 9743322555.

Kempegowda Layout

DIRECT OWNER BDA 30x40 Site SALE KEMPEGOWDA LAYOUT 5th Block near Metro- Challagatta. M:-9845146279/ 9632966556

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

BDA SITE for Sale at Kempegowda Layout, 3rd Block, F Sector, 30x40 North Mob: 9901549488

Uttarahalli

UTTARAHALLI PLOT Sale 55'x65' BBMP A Khatha. North Facing, Lake View Rs.15,000/- sft. Call: 6362348146.

Sahakarnagar

50X80 COMMERCIAL Site Near CBI Ganganagar, Also40x60 Sahakaranagar Residential SiteFor Immediate Sale. 9164565566

BDA SITE-SALE SAHAKARNAGAR 30X40 Rs. 21500 40X60 Rs. 24000 30X20 Rs. 25000 BROKERS EXCUSE 9449970278

Sadashiva Nagar

LOWER PALACE Arcade Sadashivnagar old-House 20X25 R.T.NAGAR BDA-SITE 40X60, 50X88 RMV 35X88 Sale, 9448473358 9740183922

Vishweshwariah Layout

SITE FOR SALE 50x80 West Facing Residential 8th Block. 50x80 6th Block Commercial Vishveshwaraiya Layout 8105688602.

VISVESHWARAIAH LAYOUT BDA SITE 40X60 Nr Oxford School 6th Stage Sale, Call: 9740183922 9448473358 Thomas

VISHWESHWARAIAH LAYOUT 7th Block 20x30 East facing BDA site sale, near to KA41-RTO. 7829404659

Kumbalgodu

KUMBALGODU SITES SALE: TWO ADJACENT 30X40 WEST FACING SITES. RERA & BDA APPROVED A-KHATA SUPERIOR SITES. READY TO REGISTER AND BUILD. CALL 9900049591 OR 9900094872

Electronic City

KHB Sites
Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

Nelamangala

FEW SITES FOR SALE
Sondekoppa Road
Nelamangala Town Limits
Nagarasabha E-Katha
Ready for Registration
Rs.3300/- per sqft.
Negotiable
Bank Loan Available.
Contact : 9611525588, 9945390709

BYRASHETTYHALLI VILLAGE. Aiswarya County. BMRDA. 40X60. East facing site for sale. loan available. Owner. 9620117773

Mysore

50X40 AREA 2000 Sqft 'A-Khatha' at (MANTE) Mogarahalli, KRS Road, 6.7 kms from Railway Station availe for sale. 2500/- Sqft Negotiable next to Kusumachandru Kalayana Matap: 9886782390.

MYSORE KHB KENCHALGUD 30X40 SITE. SOUTH FACING, 43 LAKHS OWNER CONTACT: 8105683396/ 9606866368

Yelahanka

SALE 40X60 West South Corner Judicial Layout Near Mall of Asia Rs. 23,000/- Psqft Negotiable: 9916826976

SITE FOR Sale Yelahanka Byalakere, Shivaram Karanth Badavane, 100ft Road, 60x80 Commercial Corner Site, East North South 3side Road BDA Katha: 9945694783/ 7975780825

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

NARGUND COLLEGE OF PHARMACY
Dattatreyanagar, Hosakerehalli, BSK-3rd Stage, Bengaluru-560085.

APPLY NOW – LIMITED SEATS!

ADMISSION NOW OPEN

ACADEMIC YEAR 2026 2027

COURSES WE OFFER
- Diploma in Pharmacy
- Bachelors in Pharmacy
- Master of Pharmacy
- Pharm D
- Ph. D

WHY US
✅Modern Labs & Advanced Research Facilities
✅Expert Faculty with Industry Partnerships
✅100% Placement & Internship Support
✅Merit-Based Scholarships Available
📚Practical Learning | 💼 Career-Ready Training

SCAN FORREGISTRATION

AFFLIATIONS & RECOGNITIONS

Contact Us
7019425622 www.nargund.edu.in nargundcop@gmail.co

JOB OPPORTUNITIES

Accounts & Finance

RUPASHREE HEALTH Care, Bengaluru requires JUNIOR ACCOUNTANT for immediate appointment. Experienced candidates, Male/ Female, below 30 years with full knowledge of TALLY can contact/ send resume. Attractive salary with PF, Gratuity, Bonus and coverage under Health/ accident policies. Rupashree Health care pvt Ltd, opp to Galaxy Appt, Uttarahalli main road, Kengeri, Bengaluru- 560060 Mob: 9449060528, 9353806144 Email Id: rupashreehealthcare@gmail.com

Teachers/ Professors

ACHARYA SRI RAKUM HIGH SCHOOL
Margondanahalli, Devanahalli Taluk, Bengaluru Rural District
JOB VACANCIES
NTT / Montessori Teachers – 25,000 per month Primary School Teachers with D.Ed. Qualification – 30,000 per month High School Teachers with B.Ed. Qualification – 35,000 per month School Bus Drivers holding a Heavy Vehicle (H.V.) Licence – 20,000 per month
FACILITIES & BENEFITS
Free food and accommodation will be provided. A job will be provided for the driver's wife, and the driver's children will receive free English-medium education up to 10th Standard.
CONTACT DETAILS
Phone / WhatsApp: 98453 01354
E-mail: rakumacharya@gmail.com

ST BENEDICT'S GROUP OF INSTITUTIONS
Asirvanam, Anchepalya, Kumbalgodu PO, Bengaluru - 560074
TEACHERS WANTED
Maths, English, Hindi, Kannada, Computer, for High School
Call: 7259746027
Please post your resumes to jeromeosb@gmail.com

LR-CAMBRIDGE SCHOOL, Wilson Garden, Mobile:9663355532 WANTED NURSERY ENGLISH HIGHER PRIMARY TEACHERS ADMIN, ACCOUNTANT

A REPUTED_STATE syllabus school in Banasawadi Bangalore invites applications from qualified and experienced teachers for English, Kannada Hindi/Maths/Science/ Social Studies and Economics Wanted School_Principal Candidates with good communication skills and passion for teaching_can_apply Contact_9242453706

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2026-27 for Primary Classes & Computer Teacher for High School(ICSE). STATE & ICSE Qualification: B.A./B.Sc., B.Ed., M.A./M.Sc, M.Ed. Only English Medium Candidates need to apply.

URGENTLY REQUIRED experienced TEACHERS for Computer and PT for MOTHER MARY ENGLISH SCHOOL, Thippasandra, Bangalore. Contact: 080-25281661, 8762038545.

MORNING STAR English School Ramachandrapuram (Rajajinagar Entrance) Requires B.A. B.Ed Kannada Lady Teacher to handle primary classes Contact: 9242494544

HRD & Admin

WANTED HR-ADMIN Experience 5-10years Salary 30000/- Plus_Incentive Call:7338084555 8296037433 9845053636_Mail glprojects7889@ gmail.com Interview_Time 10am`to`6pm

Marketing & Sales

MARKETING ENGR no2 for Bangalore/ Chennai B E Mech 2years exp with local & Hindi language Ct 9840042085 bangalore@rotocastgroup.com

FORTUNE MATTRESS Company requires AREA SALES MANAGER, SALES OFFICERS, DRIVER. Mattress industry experience will be preferred. Wanted Distributors for out station market. Interested can send resume to: The Managing Director, M/s. Forutune Mattress & Leather Sofas Pvt Ltd, No. 342, 6th Main KHB I Stage, Basaveshwaranagar, Bangalore- 560079. 9845596542.

Engg/ Production Technical

URGENT REQUIREMENT– PEENYA, BANGALORE. Sales Manager, Quality Executive & NPD Engineer. For the Leading OEM Automotive Mfg Company. BE/ Dipl in Mech Eng with 3-5 years' Exp in Automotive Mfg Industry. Candidates should possess relevant functional knowledge, communication skills, and industry exposure. Send CV to: hr@devilog-group.com, accounts2@devilog-group.com Call/ Watsapp: 7204894432/ 9035337644

JOB
To Place your Classified Ads Contact: 9886213331

MATRIMONIAL

Brides Wanted

Hindu

37 YEAR old Naidu (Balija), divorced Groom (B.E. Mechanical, government employee) is seeking a Bride. Caste is not a consideration. Hindu (Kannada) speaking must. For more details, contact directly by phone. Mobile: 9741155051/ 9483861886.

Grooms Wanted

Hindu

SUITABLE MATCH for good looking very fair dentist MDS Manipal girl 31 from reputed dentist family of UP. Girl has own clinic in Delhi. Looking for successful boy from status educated family. Contact vmortho@hotmail.com

PQSM FOR smart fair Agrawal girl, Jan1998/5'3.5", B Tech, PG from IIM-Trichy (EGMP), Project Mgr in FinTech Mumbai, Father in Central Govt. Reply with biodata & photo to 7888432589

BUSINESS

Business to Business

Finance

WE ARRANGE Loan against Commerical/ Residential Building/ School Building/ Hospital Building / Convention Hall/ Bar & Restaurant Property. Business loan from Schedule Banks. Jyothi 8971132289, 9380509779.

URGENT LOAN AVAIL @ 5.5% P.a PERSONAL BUSINESS EDUCATION TAKEOVER ALL TYPES LOAN CAPITAL ONE FINANCE. CALL/ WHATSAPP. 7678360713

WE ARRANGE LOANS for Mortgage of Site, Buildings, Construction, Completion, Takeover of Loans in Co-op Banks and NBFC. Contact: 9353705002.

PERSONAL

Change of Name

CHANGE OF NAME
I, KRUPA DHARANEESH, residing at Flat No. 3, 3rd Cross, AECS HAL Layout, Geddalahalli, RMV 2nd Stage, Bengaluru- 560094 have changed my name to KRUPA K (KRUPA KODANDARAMU) vide affidavit dated 11-06-2026 sworn before notary Jalandhara, Bengaluru. Henceforth I shall be called as KRUPA K only.

VINITHA JAIN, R/o 21-A Adarsh Vista, Basavanagar Main Road, Bangalore, changed my name as Vinita Jain W/o Anil Baradia.

CHANGE OF NAME
I, ROHAN SANGANAGOUDA ADAPUR, residing at SNR SAFA, B Block 206, Chikkadunnasandra, Sarjapura Hobli, Bengaluru- 562125 have changed my name to ROHAN ADAPUR vide affidavit dated 11-06-2026 sworn before notary Roopa G Bhandare, Bengaluru. Henceforth I shall be called as ROHAN ADAPUR only.

Lost

DOCUMENT LOST
I, N M Palani Vel, No. 28, 3rd Cross, Near Anjaneya Temple, Vayu Nandha Layout, Hebbal Kempapura, Benglaurt-560024, have lost my Original Land Mother deed Document No./ Identification: 1562/2015, 1366/2015 and 1053/2020. While travelling Bhuvaneshwar Nagar to Esteem Mall (10-06-2026), Bengaluru. If found please contact: 7639091293
(Lost Report No. 2252042/2026)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds
DECCAN HERALD
More value, more impact
REAL ESTATE
ಪ್ರಜಾವಾಣಿ
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY - ON SATURDAY + SUNDAY
@ 2481/-*
FOR 15 WORDS
www.dhclassifieds.com BOOK NOW
*Conditions apply
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

ಚಿಟಿಕೆ ಸುದ್ದಿ

ಅಜಿತ್, ದಾನಮ್ಮಗೆ ಬಿ.ಎಂ.ಶ್ರೀ. ಪ್ರತಿಷ್ಠಾನ ಪ್ರಶಸ್ತಿ


ಅಜಿತ್ ಹನುಮಕ್ಕನವರ್

ದಾನಮ್ಮ ಚಿಚಕಂಡಿ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಬೆ.ಸು.ನಾ. ಮಲ್ಯ ಪ್ರಶಸ್ತಿ'ಗೆ ಪತ್ರಕರ್ತ ಅಜಿತ್ ಹನುಮಕ್ಕನವರ್ ಹಾಗೂ 'ಮಹಾಮಾನವ ಅಗೋಳಿ ಮಂಜಣ್ಣ ಪ್ರಶಸ್ತಿ'ಗೆ ಸೈಕ್ಲಿಂಗ್ ಕ್ರೀಡಾಪಟು ದಾನಮ್ಮ ಚಿಚಕಂಡಿ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಗಳು ತಲಾ ₹ 5 ಸಾವಿರ ನಗದು ಒಳಗೊಂಡಿದೆ. 'ಬೆ. ಸು.ನಾ. ಮಲ್ಯ ಪ್ರಶಸ್ತಿ'ಯನ್ನು ಕೆ. ಮೋಹನ್‌ದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ದಂಪತಿ ಸ್ಥಾಪಿಸಿದ್ದಾರೆ. ಇದೇ ಭಾನುವಾರ ಬೆಳಿಗ್ಗೆ 10 ಗಂಟೆಗೆ ಪ್ರತಿಷ್ಠಾನದ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ನಿವೃತ್ತ ಐಪಿಎಸ್ ಅಧಿಕಾರಿ ಶಂಕರ್ ಬಿದರಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

'ವಿದ್ಯಾರ್ಥಿ-ರೈತ ವಾಕಥಾನ್' ಇಂದು

ಬೆಂಗಳೂರು: 'ಯುವಜನರನ್ನು ಕೃಷಿಯತ್ತ ಸೆಳೆಯಲು 'ವಿದ್ಯಾರ್ಥಿ-ರೈತ ವಾಕಥಾನ್' ಅನ್ನು ಜೂನ್ 14ರ ಬೆಳಿಗ್ಗೆ 9ಕ್ಕೆ ಫ್ರೀಡಂ ಪಾರ್ಕ್‌ನಲ್ಲಿ ಆಯೋಜಿಸಲಾಗಿದೆ' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಜಿ.ಎ.ಲಕ್ಷ್ಮೀ ನಾರಾಯಣಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಫುಡ್ ಚೈನ್ ಕ್ಯಾಂಪೇನ್ ಆಯೋಜಿಸಿರುವ ವಾಕಥಾನ್‌ಗೆ ಗೌಶುಭಂ ಫೌಂಡೇಷನ್ ಸಹಯೋಗ ವಿದೆ. ಕೃಷಿಯನ್ನು ಲಾಭದಾಯಕ ಉದ್ಯಮವೆಂದು ಬಿಂಬಿಸಿ, ಯುವಕರು ಮತ್ತು ರೈತರ ಮೂಲಕ ಅರಿವು ಮೂಡಿಸುವುದು ಜಾಥಾದ ಉದ್ದೇಶ' ಎಂದರು.ಗೋಷ್ಠಿಯಲ್ಲಿ ನರೇಂದ್ರ, ಯತೀಶ್ ತುಕಾರಾಂ, ಎ.ಬಿ.ಪಾಟೀಲ, ಸಿ.ಎನ್. ಶಿವಪ್ರಕಾಶ್, ಪಿ.ಎಸ್.ಕಾಂತರಾಜು, ಕೆ.ಅಮರನಾರಾಯಣ, ಅಲೆನ್ ಜೋಸೆಫ್ ಪಾಲ್ಗೊಂಡಿದ್ದರು.

ದಕ್ಷಿಣ ನಗರ ಪಾಲಿಕೆಗೆ ಪ್ರಶಂಸೆ

ಬೆಂಗಳೂರು: ನಾಗರಿಕರ ದೂರುಗಳನ್ನು ಪರಿಹರಿಸುವಲ್ಲಿ ಶೇ 98.8ರಷ್ಟು ಸಾಧನೆ ಮಾಡಿರುವ ಬೆಂಗಳೂರು ದಕ್ಷಿಣ ನಗರ ಪಾಲಿಕೆಯನ್ನು ಜಿಬಿಎ ಪ್ರಶಂಸಿಸಿದೆ.

'ಜೂನ್ 12ರಂದು ಆಡಳಿತಾತ್ಮಕ ಕ್ರಮಗಳ ಬಗ್ಗೆ ವಿಮರ್ಶೆ ನಡೆಸಿದಾಗ, ಎರಡು ವಾರಗಳಲ್ಲಿ 732 ದೂರುಗಳು ದಕ್ಷಿಣ ನಗರ ಪಾಲಿಕೆಗೆ ಬಂದಿದ್ದವು. ಅದರಲ್ಲಿ 723 ದೂರುಗಳನ್ನು ಪರಿಹರಿಸಲಾಗಿರುವುದು ದಾಖಲಾಗಿದೆ. ಇದಕ್ಕಾಗಿ ನಿಮಗೆ ಮತ್ತು ನಿಮ್ಮ ಸಿಬ್ಬಂದಿಗೆ ಅಭಿನಂದನೆಗಳು' ಎಂದು ಜಿಬಿಎ ಕಂದಾಯ ಹಾಗೂ ಐಟಿ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅವರಿಗೆ ಬರೆದಿರುವ 'ಪ್ರಶಂಸನಾ ಪತ್ರ'ದಲ್ಲಿ ತಿಳಿಸಿದ್ದಾರೆ. 'ಜಂಟಿ ಆಯುಕ್ತರು, ಅಧಿಕಾರಿಗಳು, ಸಿಬ್ಬಂದಿ ಯವರು ನಾಗರಿಕರ ಸಮಸ್ಯೆ ಪರಿಹರಿಸಲು ಸ್ಪಂದಿಸಿದ ರೀತಿ ಪ್ರಶಂಸನಾರ್ಹ. ಸಾರ್ವಜನಿಕ ಕೇಂದ್ರೀಕೃತ ಆಡಳಿತ ಮತ್ತು ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರಗಳನ್ನು ನೀಡುವಲ್ಲಿ ನಗರ ಪಾಲಿಕೆಗಳ ಬದ್ಧತೆ ಕುರಿತಂತೆ ಕಳೆದ ವಾರ ಕಾರ್ಯಾಗಾರದಲ್ಲಿ ಪ್ರಾತ್ಯಕ್ಷಿಕೆ ನೀಡಲಾಗಿತ್ತು. ಸಮಯಕ್ಕೆ ಅನುಗುಣವಾಗಿ ಪರಿಹಾರ ಕಲ್ಪಿಸುವುದು ಒಳ್ಳೆಯ ಪ್ರಗತಿಯಾಗಿದೆ' ಎಂದಿದ್ದಾರೆ.

'ಟ್ರೋಲಿಗರನ್ನು ಜೈಲಿಗಟ್ಟುತ್ತಿರುವ ಖರ್ಗೆ'

ಕೋಲಾರ: ಪ್ರತಿ ತಾಲ್ಲೂಕು, ಜಿಲ್ಲೆಗಳಲ್ಲಿ ಸಾಮಾಜಿಕ ಜಾಲ ತಾಣಗಳಲ್ಲಿ ಸಕ್ರಿಯರಾಗಿರುವವರ ಮೇಲೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ನಿಗಾ ಇಟ್ಟಿದ್ದಾರೆ. ಸಚಿವರ ಕುರಿತು ಮಾತನಾಡುವವರನ್ನು, ಟ್ರೋಲ್ ಮಾಡುವವರನ್ನು ಪಟ್ಟಿ ಮಾಡಿ ಜೈಲಿಗಟ್ಟಲಾಗುತ್ತಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಶನಿವಾರ ಮಾತನಾಡಿ, 'ದ್ವೇಷ ಭಾಷಣ ಮಾಡುವವರು, ತಪ್ಪು ಮಾಹಿತಿ ನೀಡುವವರ ಮೇಲೆ ಕ್ರಮಕ್ಕೆ ರಾಜ್ಯ ಸರ್ಕಾರ ಈಗಾಗಲೇ ಮಸೂದೆ ಕೂಡ ರೂಪಿಸಿದೆ. ಪ್ರಿಯಾಂಕ್ ಖರ್ಗೆ ಅವರಿಗೆ ತಾಕತ್ತಿದ್ದರೆ, ಪ್ರಧಾನಿ ನರೇಂದ್ರ ಮೋದಿ ಅಭಿಮಾನಿಗಳು ಹಾಗೂ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ 'ದೇಶದ್ರೋಹಿಗಳು' ಎಂದು ಪ್ರಚೋದನಕಾರಿ ಹೇಳಿಕೆ ನೀಡಿದ ಚಿಕ್ಕಬಳ್ಳಾಪುರ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಅವರನ್ನು ಮೊದಲು ಜೈಲಿಗೆ ಕಳುಹಿಸಲಿ. ಆಮೇಲೆ ಬೇರೆಯವರ ಮೇಲೆ ಪ್ರಕರಣ ದಾಖಲಿಸಲಿ' ಎಂದು ಸವಾಲು ಹಾಕಿದರು.

ಬಿಡದಿ ಟೌನ್‌ಶಿಪ್: ಜಟಾಪಟಿ ತೀವ್ರ

ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆಗಾಗಿ ಮೊದಲ ಹಂತದಲ್ಲಿ 499 ಎಕರೆ ಭೂಸ್ವಾಧೀನಕ್ಕೆ ರಾಜ್ಯ ಸರ್ಕಾರವು ಅಂತಿಮ ಅಧಿಸೂಚನೆ ಹೊರಡಿಸಿರುವುದಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮೇಲೆ ಮುಗಿಬಿದ್ದಿದ್ದಾರೆ. ಶಿವಕುಮಾರ್ ಅವರು ಕುಮಾರಸ್ವಾಮಿ ಅವರ ಕನಸಿನಂತೆಯೇ ಟೌನ್‌ಶಿಪ್ ನಿರ್ಮಾಣವಾಗಲಿದೆ ಎಂದು ತಿವಿದಿದ್ದಾರೆ

ಕಾನೂನು ಹೋರಾಟ: ಎಚ್‌ಡಿಕೆ

'ಬಿಡದಿ ಟೌನ್‌ಶಿಪ್ ಹೆಸರಿನಲ್ಲಿ ರೈತರ ಫಲವತ್ತಾದ ಭೂಮಿಯನ್ನು ಕಬಳಿಸಲು ಬಿಡುವುದಿಲ್ಲ. ಭೂಸ್ವಾಧೀನದ ವಿರುದ್ಧ ಕಾನೂನು ಹೋರಾಟ ನಡೆಸುತ್ತೇವೆ' ಎಂದು ಕೇಂದ್ರ ಸಚಿವ ಮತ್ತು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಅವರು ಮಾತನಾಡಿದರು.

'ಡಿ.ಕೆ.ಶಿವಕುಮಾರ್ ಅವರು ಪ್ರತಿದಿನ ಬೆಳಿಗ್ಗೆ ಅಜ್ಜಯ್ಯನನ್ನು ಸ್ಮರಿಸುತ್ತಾರಂತೆ. ರೈತರನ್ನು ಒಕ್ಕಲೆಬ್ಬಿಸಿ, ಫಲವತ್ತಾದ ಭೂಮಿ ಕಸಿದುಕೊಳ್ಳಿ ಎಂದು ಅಜ್ಜಯ್ಯ ಅವರು ಹೇಳಿದ್ದಾರಾ? ಸ್ವಲ್ಪವೂ ಕರುಣೆ ಇಲ್ಲವೇ' ಎಂದು ಪ್ರಶ್ನಿಸಿದರು.

'2006ರಲ್ಲಿ ನಾನು ಬಿಡದಿ ಸೇರಿ ಐದು ಕಡೆ ಟೌನ್‌ಶಿಪ್ ಮಾಡಲು ಹೊರಟಿದ್ದೆ. ರೈತರ ವಿರೋಧದ ಕಾರಣಕ್ಕೆ ಕೈಬಿಟ್ಟಿದ್ದೆ. ಈ ಟೌನ್‌ಶಿಪ್ ನನ್ನದೇ ಕೂಸು ಎಂದು ಶಿವಕುಮಾರ್ ಹೇಳುತ್ತಿದ್ದಾರೆ. ಆದರೆ, ನಾನು ಮಾಡಲು ಹೊರಟಿದ್ದ ಟೌನ್‌ಶಿಪ್ ಬೇರೆ. ಇವರು ರಿಯಲ್ ಎಸ್ಟೇಟ್ ದಂಧೆ ಮಾಡಲು ಹೊರಟಿದ್ದಾರೆ' ಎಂದು ಆರೋಪಿಸಿದರು. 'ಹಸನಾದ ಭೂಮಿಯಲ್ಲಿ ಕೃಷಿ, ಹೈನುಗಾರಿಕೆ ಮಾಡುತ್ತಿರುವವರು ರೈತರೇ ಅಲ್ಲ ಎಂದು ಮುಖ್ಯಮಂತ್ರಿ ಶಿವಕುಮಾರ್ ಹೇಳುತ್ತಿದ್ದಾರೆ. ಆ ರೈತರ ಮನೆಗೆ ಹೋಗೋಣ ಬನ್ನಿ. ಅವರು ರೈತರು ಅಲ್ಲವೋ ಎಂಬುದು ನಿಮಗೇ ಗೊತ್ತಾಗುತ್ತದೆ' ಎಂದು ಸವಾಲು ಹಾಕಿದರು.

'ರೈತರ ಆಕ್ರೋಶಕ್ಕೆ, ಕಣ್ಣೀರಿಗೆ ಬೆಲೆ ಕೊಡದೆ ಏಕಪಕ್ಷೀಯವಾಗಿ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿದೆ. ಇದರ ವಿರುದ್ಧ ಹೋರಾಟ ನಡೆಸುತ್ತೇವೆ. ಅಗತ್ಯಬಿದ್ದರೆ ನಾನೂ ಬೀದಿಗಿಳಿದು ಹೋರಾಡುತ್ತೇನೆ. ಕಾನೂನು ಹೋರಾಟವನ್ನೂ ನಡೆಸುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮೋದಿಯೇ ಮೆಚ್ಚಿದ್ದಾರೆ: ಡಿಕೆಶಿ

'ಬಿಡದಿ ಟೌನ್‌ಶಿಪ್ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ಮೆಚ್ಚಿಕೊಂಡಿದ್ದಾರೆ' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯ ವೇಳೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು. 'ಈಚೆಗೆ ಮೋದಿ ಅವರನ್ನು ಭೇಟಿ ಮಾಡಿದ್ದಾಗ, ಬಿಡದಿ ಟೌನ್‌ಶಿಪ್ ಬಗ್ಗೆ ಪ್ರಸ್ತಾಪಿಸಿದ್ದೆ. ಆಗ ಮೋದಿ ಅವರು, 'ನಾನೂ 7–8 ಟೌನ್‌ಶಿಪ್‌ಗಳನ್ನು ಮಾಡಿದ್ದೆ. ಅವೆಲ್ಲವೂ ಸಫಲವಾಗಿವೆ. ನೀವೂ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಅದನ್ನು ಮುಂದುವರೆಸಿ' ಎಂದು ತಿಳಿಸಿದ್ದಾರೆ' ಎಂದರು.

'ಬಿಡದಿ ಟೌನ್‌ಶಿಪ್ ಕುಮಾರಸ್ವಾಮಿ ಅವರ ಕನಸಿನ ಕೂಸು. ಅದನ್ನೇ ನಾವು ಅನುಷ್ಠಾನಕ್ಕೆ ತರುತ್ತಿದ್ದೇವೆ. ಅವರ ಮಾರ್ಗದರ್ಶನ ಪಡೆದುಕೊಂಡೇ ಟೌನ್‌ಶಿಪ್ ನಿರ್ಮಾಣ ಮಾಡುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಒಕ್ಕಲೆಬ್ಬಿಸುವುದಿಲ್ಲ': 'ಬಿಡದಿ ಟೌನ್‌ಶಿಪ್‌ಗಾಗಿ ರೈತರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ನಾವು ಮಾಡುತ್ತಿಲ್ಲ. ಯಾರಿಗೂ ಕಡಿಮೆ ಪರಿಹಾರ ಮೊತ್ತ ನೀಡುತ್ತಿಲ್ಲ. ಕಾನೂನುಬದ್ಧವಾಗಿ ಕೊಡಬೇಕಾದ ಪರಿಹಾರವನ್ನು ಸರ್ಕಾರ ಕೊಡುತ್ತಿದೆ. ಕುಮಾರಸ್ವಾಮಿ ಅವರೂ ಇದೇ ಯೋಜನೆ ಮಾಡಲು ಹೊರಟಿದ್ದರು. ಈಗ ಸುಮ್ಮನೆ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ ಸುರೇಶ್ ಹೇಳಿದರು.

'ರೈತರ ಆಕ್ರೋಶಕ್ಕೆ ಭಸ್ಮವಾಗಲಿದ್ದೀರಿ'

'ರೈತರ ಜಮೀನಿನ ಮೇಲೆ ಬುಲ್ಡೋಜರ್ ಓಡಿಸಿ, ರಿಯಲ್ ಎಸ್ಟೇಟ್ ಸಾಮ್ರಾಜ್ಯ ಕಟ್ಟಲು ಹೊರಟಿರುವ 'ಕಮಿಷನ್ ಮಿನಿಸ್ಟರ್' ಡಿ.ಕೆ.ಶಿವಕುಮಾರ್ ಅವರ ಸರ್ಕಾರವು, ಅನ್ನದಾತರ ಆಕ್ರೋಶದ ಜ್ವಾಲೆಯಲ್ಲಿ ಭಸ್ಮವಾಗಲಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ರೈತರ ತೀವ್ರ ವಿರೋಧದ ನಡುವೆಯೂ ಭೂಮಿ ಕಬಳಿಸಲು ಹೊರಟಿರುವುದರ ಹಿಂದಿನ ರಹಸ್ಯವೇನು? ನಿಮ್ಮ ಬಿಲ್ಡರ್ ಮಾಫಿಯಾದ ಜೇಬು ತುಂಬಿಸುವ ಉದ್ದೇಶವಾ? 2028ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ತಕ್ಷಣ ಈ ಅಕ್ರಮ ಭೂಸ್ವಾಧೀನವನ್ನು ರದ್ದುಪಡಿಸುತ್ತೇವೆ' ಎಂದಿದ್ದಾರೆ.

22ಕ್ಕೆ ರೈತಸಂಘದಿಂದ 'ಬೈರಮಂಗಲ ಚಲೋ'

ಪ್ರಜಾವಾಣಿ ವಾರ್ತೆ

ರಾಮನಗರ: 'ಬಿಡದಿ ಹೋಬಳಿಯ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆಗೆ ಭೂ ಸ್ವಾಧೀನ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಜೂನ್ 22ರಂದು ಬೈರಮಂಗಲ ಚಲೋ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ' ಎಂದು ರೈತ ಸಂಘದ ವಿಭಾಗೀಯ ಉಪಾಧ್ಯಕ್ಷ ಕೆ.ಮಲ್ಲಯ್ಯ ಇಲ್ಲಿ ಶನಿವಾರ ಹೇಳಿದರು.

ಬಿಡದಿ ಪಟ್ಟಣದ ಬಿಜಿಎಸ್ ವೃತ್ತದಲ್ಲಿ ಬೈರಮಂಗಲ ಚಲೋಗೆ ಚಾಲನೆ ನೀಡಲಾಗುವುದು. ಅದಕ್ಕೂ ಮುಂಚೆ ರಾಮನಗರದ ಎಪಿಎಂಸಿಯಿಂದ ಬಿಡದಿವರೆಗೆ ರೈತರು ಬೈಕ್ ರ‍್ಯಾಲಿಯಲ್ಲಿ ತೆರಳಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನನೆಗುದಿಗೆ ಬಿದ್ದಿದ್ದ ಉಪನಗರಕ್ಕಾಗಿ ಹೋಬಳಿಯ ಎರಡು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 26 ಗ್ರಾಮಗಳ ಕೃಷಿ ಮತ್ತು ತೋಟಗಾರಿಕೆ ಭೂಮಿ ಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ಯೋಜನೆಗೆ ಸರ್ಕಾರ ಕಳೆದ ವರ್ಷ ಪ್ರಾಥಮಿಕ ಅಧಿಸೂಚನೆ ಹೊರಡಿಸಿದಾಗಿನಿಂದಲೂ ಯೋಜನಾ ಪ್ರದೇಶದ ರೈತರು ಅನಿರ್ದಿಷ್ಟ ಅವಧಿ ಧರಣಿ ನಡೆಸುತ್ತಿದ್ದಾರೆ. ಅವರ ಹೋರಾಟಕ್ಕೆ ರೈತ ಸಂಘ, ಕನ್ನಡಪರ, ದಲಿತಪರ, ಪ್ರಗತಿಪರ ಸಂಘಟನೆಗಳ ಜೊತೆ ರಾಜಕೀಯ ಪಕ್ಷಗಳೂ ಬೆಂಬಲ ಸೂಚಿಸಿವೆ. ಆದರೂ, ಸರ್ಕಾರ ರೈತರ ಕೂಗಿಗೆ ಸ್ಪಂದಿಸಿಲ್ಲ ಎಂದು ಟೀಕಿಸಿದರು.

ಶಾಸಕ ದರ್ಶನ್ ಸೇರಿ ಹಲವರು ಭಾಗಿ

ಬೈರಮಂಗಲ ಚಲೋ ಪ್ರತಿಭಟನೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ರೈತರಷ್ಟೇ ಅಲ್ಲದೆ ಮಂಡ್ಯ, ಮೈಸೂರು, ಚಾಮರಾಜನಗರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ ರೈತರು ಭಾಗವಹಿಸಲಿದ್ದಾರೆ.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಗೌರವಾಧ್ಯಕ್ಷ ಚಾಮರಸಮಾಲಿ ಪಾಟೀಲ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಪಾಲ್ಗೊಳ್ಳುವರು ಎಂದು ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುಮಾರಸ್ವಾಮಿ ಹೇಳಿದರು.

ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ ಸಮಾರಂಭ

ಕನ್ನಡ ಶಾಲೆ ಮುಚ್ಚದಿರಿ: ಸಿದ್ಧರಾಮಯ್ಯ

ಪ್ರಜಾವಾಣಿ ವಾರ್ತೆ


ಸಾಹಿತಿಗಳಾದ ಗುರುನಾಥ ಅಕ್ಕಣ್ಣ, ಸುಜಾತಾ ಚಲವಾದಿ, ಓರಗಲ್ಲಯ್ಯ ದ್ವಾರನಕುಂಟೆ, ವಿನಯ ಗುಂಟೆ ಅವರಿಗೆ 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ದ್ವಾರನಕುಂಟೆ ಪಾತಣ್ಣ, ಆರ್. ಸುನಂದಮ್ಮ, ವೂಡೇ ಪಿ. ಕೃಷ್ಣ, ಎಸ್.ಜಿ. ಸಿದ್ಧರಾಮಯ್ಯ, ಎಂ. ತಿಮ್ಮಯ್ಯ, ಸಂತೋಷ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಸರ್ಕಾರ ಕನ್ನಡ ಶಾಲೆಗಳನ್ನು ಮುಚ್ಚುವ ಕೆಲಸ ಮಾಡುತ್ತಿದೆ. ಇದು ನೋವಿನ ಸಂಗತಿ' ಎಂದು ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಹೇಳಿದರು.

ಸ್ವಾಭಿಮಾನಿ ಕರ್ನಾಟಕ ವೇದಿಕೆ ಶನಿವಾರ ಆಯೋಜಿಸಿದ್ದ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

'ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಕಳೆದು ಹೋಗುತ್ತಿದೆ. ರಕ್ಷಿಸಬೇಕಾದ ಸರ್ಕಾರವೇ ಕನ್ನಡವನ್ನು ದಮನಿಸುವ ಕಾರ್ಯ ಮಾಡುತ್ತಿದೆ. ಈಗ ಶಿಕ್ಷಣ ವ್ಯಾಪಾರೀಕರಣವಾಗಿದ್ದು, ಕನ್ನಡ ಶಾಲೆಗಳು ಮುಚ್ಚಿ ಹೋಗುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿದರು.

'ಉಚಿತ ಮತ್ತು ಕಡ್ಡಾಯ ಶಿಕ್ಷಣದ ಪರಿಣಾಮ ನಾವು ಶಾಲೆಗೆ ಹೋಗಿ ಅಕ್ಷರ ಕಲಿತೆವು. ಇಲ್ಲವಾಗಿದ್ದರೆ ದನ, ಕುರಿ ಮೇಯಿಸಲು ಕಳುಹಿಸುತ್ತಿದ್ದರು. ಶೇಕಡ 80ರಷ್ಟು ಮಕ್ಕಳು ಶಿಕ್ಷಣ ಕಲಿಯುವ ವಾತಾವರಣವನ್ನು ಸರ್ಕಾರವೇ ಸೃಷ್ಟಿಸಿತ್ತು' ಎಂದರು.

'ಹಳ್ಳಿಯಲ್ಲಿ ಒಂದು ಮಗು ಇದ್ದರೂ ಶಿಕ್ಷಣ ಕೊಡುವುದು ಸರ್ಕಾರದ ಜವಾಬ್ದಾರಿ. ಸಂವಿಧಾನ ಸಹ ಶಿಕ್ಷಣಕ್ಕೆ ಒತ್ತು ನೀಡಿದೆ. 50 ಮಕ್ಕಳಿರುವ ಶಾಲೆಯನ್ನು ಮುಚ್ಚಲಾಗುತ್ತಿದೆ. ಶಿಕ್ಷಕರ ನೇಮಕಾತಿ ಆಗುತ್ತಿಲ್ಲ, ಶಾಲೆಗಳಿಗೆ ಮೂಲಸೌಲಭ್ಯ ಕಲ್ಪಿಸುತ್ತಿಲ್ಲ. ಹಳ್ಳಿಗಾಡಿನ ಹೆಣ್ಣು ಮಕ್ಕಳು ಹೆಚ್ಚು ಶಾಲೆಯಿಂದ ಹೊರಗೆ ಉಳಿಯುತ್ತಿದ್ದಾರೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 8–10 ಪ್ರಾಥಮಿಕ ಶಾಲೆಗಳು ಉಳಿದಿದ್ದರೆ ಹೆಚ್ಚು' ಎಂದರು.

'ಅಧಿಕಾರಿಗಳ ಕಾರಣದಿಂದ ಈ ರೀತಿ ಆಗುತ್ತಿದೆ. ಸರ್ಕಾರಿ ಶಾಲೆಯಲ್ಲಿ ಓದಿದವರನ್ನು ಶಿಕ್ಷಣ ಸಚಿವರಾಗಿ ಮಾಡಬೇಕು. ಕಾನ್ವೆಂಟ್‌ನಲ್ಲಿ ಓದಿದವರನ್ನು ಮಾಡಬಾರದು. ಕನ್ನಡ ರಕ್ಷಣೆಗಾಗಿ ಖಾಸಗಿ ಸಂಘಟನೆಗಳು ಇದ್ದರೂ ಕನ್ನಡ ಕಳೆದು ಹೋಗುತ್ತಿದೆ. ತಮಿಳಿಗರಿಗೆ ಭಾಷಾ ಪ್ರೇಮ ಹೆಚ್ಚು. ಹಾಗಾಗಿಯೇ ಅವರು ಪ್ರಾದೇಶಿಕ ಪಕ್ಷಗಳಿಗೆ ಮನ್ನಣೆ ನೀಡುತ್ತಿರುವುದು' ಎಂದರು.

ಕರ್ನಾಟಕ ಲೇಖಕಿಯ ಸಂಘದ ಅಧ್ಯಕ್ಷೆ ಆರ್.ಸುನಂದಮ್ಮ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಸ್ವಾಭಿಮಾನಿ ಕರ್ನಾಟಕ ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ಹಾಜರಿದ್ದರು.

ಸಾಹಿತಿಗಳಾದ ಡಿ.ಎಸ್.ಚೌಗಲೆ, ಸುಕನ್ಯಾ ಸೂನಗಹಳ್ಳಿ, ಓರ್ಗಲ್ಲಯ್ಯ ದ್ವಾರನಕುಂಟೆ, ಗುರುನಾಥ ಅಕ್ಕಣ್ಣ, ವಿನಯ ಗುಂಟೆ, ಡಾ. ಶೋಭಾ ನಾಯಕ, ಸುಜಾತಾ ಚಲವಾದಿ ಅವರಿಗೆ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಾಸಕರ ತನಿಖೆಗೆ ಸಭಾಧ್ಯಕ್ಷರ ಪೂರ್ವಾನುಮತಿ ಕಡ್ಡಾಯ: ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕರನ್ನು ನೇಮಕ ಮಾಡುವ ಅಧಿಕಾರ ನನಗಿಲ್ಲ ಎಂಬ ಕಾರಣಕ್ಕೆ, ಶಾಸಕರ ವಿರುದ್ಧದ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಆಗದು' ಎಂಬ ವಿಧಾನ ಸಭಾಧ್ಯಕ್ಷರ ನಿಲುವನ್ನು ಹೈಕೋರ್ಟ್ ತಳ್ಳಿಹಾಕಿದೆ.

ಬಿಜೆಪಿ ಸೇರಲು ಜೆಡಿಎಸ್ ಶಾಸಕರಿಗೆ ಹಣದ ಆಮಿಷ ಒಡ್ಡಿದ ಆರೋಪಕ್ಕೆ ಸಂಬಂಧಿಸಿದಂತೆ ಶಾಸಕರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನಿರಾಕರಿಸಿದ್ದ ಸಭಾಧ್ಯಕ್ಷರ ಕಚೇರಿಯ ಕ್ರಮವನ್ನು ಪ್ರಶ್ನಿಸಿ ಸಾಮಾಜಿಕ ಹೋರಾಟಗಾರ ಟಿ.ಜೆ. ಅಬ್ರಾಹಂ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಲೇವಾರಿ ಮಾಡಿದೆ.

'ತಾಂತ್ರಿಕ ಕಾರಣಗಳನ್ನು ಮುಂದು ಮಾಡದೆ, ದೂರುದಾರರ ಅರ್ಜಿಯನ್ನು ಕಾನೂನು ಚೌಕಟ್ಟಿನಲ್ಲಿ ಮರು ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಬೇಕು' ಎಂದು ಪ್ರಕರಣವನ್ನು ಪುನಃ ಸಭಾಧ್ಯಕ್ಷರ ಕಚೇರಿಗೆ ಹಿಂದಿರುಗಿಸಿದೆ.

'ಸಂಸದರು, ಶಾಸಕರು ಸಾರ್ವಜನಿಕ ಸೇವಕರು ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಹೀಗಾಗಿ, ತನಿಖಾ ಸಂಸ್ಥೆಗಳು ಅಥವಾ ಖಾಸಗಿ ದೂರುದಾರರ ಪ್ರಕರಣಗಳಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವ ಮುನ್ನ ಸಭಾಧ್ಯಕ್ಷರ ಅನುಮತಿ ಪಡೆಯುವುದು ಕಡ್ಡಾಯ' ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?

'ಬಿಜೆಪಿಗೆ ಸೇರ್ಪಡೆಯಾದರೆ ₹30 ಕೋಟಿ ನೀಡುವುದಾಗಿ ತಿಳಿಸಿದ್ದು, ಮುಂಗಡವಾಗಿ ₹5 ಕೋಟಿ ನೀಡಲಾಗಿದೆ. ಈ ಹಣವನ್ನು ಎರಡು ತಿಂಗಳು ನನ್ನ ಮನೆಯಲ್ಲಿ ಇರಿಸಿಕೊಂಡು ನಂತರ ಎಚ್.ಡಿ.ಕುಮಾರ ಸ್ವಾಮಿ ಸಮ್ಮುಖದಲ್ಲಿ ಹಿಂದಿರುಗಿಸಿದ್ದೆ' ಎಂದು ಕೋಲಾರದ ಶಾಸಕ ಕೆ. ಶ್ರೀನಿವಾಸ ಗೌಡ ಮಾಧ್ಯಮಗಳ ಮುಂದೆ ಬಹಿರಂಗ ಹೇಳಿಕೆ ನೀಡಿದ್ದರು.

ಈ ಸಂಬಂಧ ಅಬ್ರಾಹಂ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ನೀಡಿದ್ದರು. ಎಸಿಬಿ ದೂರು ದಾಖಲಿಸಿಕೊಳ್ಳದ ಹಿನ್ನೆಲೆಯಲ್ಲಿ ಬಿಜೆಪಿಯ ಮುಖಂಡರಾದ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಶಾಸಕ ಎಸ್.ಆರ್. ವಿಶ್ವನಾಥ್, ವಿಧಾನ ಪರಿಷತ್ ಸದಸ್ಯರಾಗಿದ್ದ ಸಿ.ಪಿ.ಯೋಗೇಶ್ವರ್ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ವಿಶೇಷ ನ್ಯಾಯಾಲಯ, ದೂರಿನ ಕುರಿತಂತೆ ತನಿಖೆ ಮುಂದುವರಿಸಲು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿ ಸಭಾಧ್ಯಕ್ಷರಿಂದ ಪೂರ್ವಾನುಮತಿ ಪಡೆಯುವಂತೆ ದೂರುದಾರರಿಗೆ ನಿರ್ದೇಶಿಸಿತ್ತು.

ಇದರನ್ವಯ ಅಬ್ರಾಹಂ ಅನುಮತಿ ಕೋರಿ ಸಭಾಧ್ಯಕ್ಷರಿಗೆ ಮನವಿ ಸಲ್ಲಿಸಿದ್ದರು. ಮನವಿ ತಿರಸ್ಕರಿಸಿದ್ದ ಸಭಾಧ್ಯಕ್ಷರ ಕಚೇರಿ, 'ವಿಧಾನಸಭಾ ಸದಸ್ಯರು, ಸಭಾಧ್ಯಕ್ಷರಿಂದ ನೇಮಕಾತಿ ಹೊಂದಿದವರಲ್ಲ. ಅವರು ಚುನಾಯಿತ ಪ್ರತಿನಿಧಿಗಳು. ಸಭಾಧ್ಯಕ್ಷರು ವಿಧಾನಭಾ ಸದಸ್ಯರನ್ನು ನೇಮಕ ಮಾಡುವ ಪ್ರಾಧಿಕಾರವಲ್ಲ. ಆದ್ದರಿಂದ, ಸದಸ್ಯರ ವಿರುದ್ಧದ ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 19ರ ಅಡಿಯಲ್ಲಿನ ಆಪಾದನೆಗಳಿಗೆ ಸಂಬಂಧಿಸಿದಂತೆ ತನಿಖೆ ಕೈಗೊಳ್ಳಲು ಮತ್ತು ವಿಚಾರಣೆಗೆ ಒಳಪಡಿಸಲು ಸಭಾಧ್ಯಕ್ಷರು ಅನುಮತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದು ತಿಳಿಸಿದ್ದರು. ಸಚಿವಾಲಯದ ಈ ಆದೇಶವನ್ನು ಅರ್ಜಿದಾರರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು

'ಅಗತ್ಯಕ್ಕಿಂತ ಹೆಚ್ಚು ಗೊಬ್ಬರ ಪೂರೈಕೆ'

ಪ್ರಜಾವಾಣಿ ವಾರ್ತೆ

ಪ್ರಲ್ಹಾದ ಜೋಶಿ

ಬೆಂಗಳೂರು: 'ಮುಂಗಾರು ಹಂಗಾಮಿಗೆ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದ ರಸಗೊಬ್ಬರವನ್ನು ಕರ್ನಾಟಕಕ್ಕೆ ಖಾತರಿಪಡಿಸಲಾಗಿದೆ. ರಾಜ್ಯ ಸರ್ಕಾರವು ಕಾಳಸಂತೆ ಮಾರಾಟ ತಡೆಯುವಲ್ಲಿ ವಿಫಲವಾಗಿದ್ದು, ಕೇಂದ್ರದ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದೆ' ಎಂದು ಕೇಂದ್ರ ರಸಗೊಬ್ಬರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

'ಮುಂಗಾರು ಹಂಗಾಮಿನಲ್ಲಿ ಕೊರತೆ ಉಂಟಾಗಬಾರದು ಎಂದು ಕರ್ನಾಟಕವು ಮುಂಗಡ ದಾಸ್ತಾನು ಆರಂಭಿಸಿತ್ತು. ಹೀಗಾಗಿ ಜನವರಿ–ಮಾರ್ಚ್ ಅವಧಿಯಲ್ಲಿಯೇ ಹೆಚ್ಚುವರಿಯಾಗಿ 0.33 ಲಕ್ಷ ಟನ್ ಯೂರಿಯಾ, 1.29 ಲಕ್ಷ ಟನ್ ಡಿಎಪಿ ಮತ್ತು 1.58 ಲಕ್ಷ ಟನ್ ಎನ್‌ಪಿಕೆಎಸ್ ಪಡೆದುಕೊಂಡಿತ್ತು. ಜೂನ್ 10ರವರೆಗೂ ಬೇಡಿಕೆಗಿಂತ ಹೆಚ್ಚು ಗೊಬ್ಬರ ಖಾತರಿಪಡಿಸಲಾಗಿದೆ' ಎಂದು ಅವರು 'ಎಕ್ಸ್' ಪೋಸ್ಟ್‌ನಲ್ಲಿ ವಿವರಿಸಿದ್ದಾರೆ.

'ಜೂನ್ 10ರವರೆಗೆ 3.13 ಲಕ್ಷ ಟನ್ ಯೂರಿಯಾಗೆ ಬೇಡಿಕೆ ಇದ್ದರೆ, 5.59 ಲಕ್ಷ ಟನ್ ಲಭ್ಯತೆಯನ್ನು ಖಾತರಿಪಡಿಸಲಾಗಿದೆ. 2.47 ಲಕ್ಷ ಟನ್ ಮಾರಾಟದ ನಂತರವೂ 3.12 ಲಕ್ಷ ಟನ್ ದಾಸ್ತಾನು ಇದೆ. 17,190 ಟನ್ ಸಾಗಣೆಯಲ್ಲಿದೆ. ಎನ್‌ಪಿಕೆಎಸ್‌ಗೆ ಬೇಡಿಕೆ ಇದ್ದದ್ದು 4.36 ಲಕ್ಷ ಟನ್. ಆದರೆ 9.28 ಲಕ್ಷ ಟನ್ ಖಾತರಿಪಡಿಸಲಾಗಿದೆ. ಮಾರಾಟದ ನಂತರ 5.6 ಲಕ್ಷ ಟನ್ ದಾಸ್ತಾನು ಇರಬೇಕು. 1,89 ಲಕ್ಷ ಟನ್ ಡಿಎಪಿ ಅಗತ್ಯವಿದ್ದರೆ, 2.57 ಲಕ್ಷ ಟನ್ ಖಾತರಿ ಖಾತರಿಪಡಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ಇಸ್ರೇಲ್–ಇರಾನ್ ಯುದ್ಧದ ಕಾರಣದಿಂದ ರಸಗೊಬ್ಬರ ಆಮದಿನಲ್ಲಿ ವ್ಯತ್ಯಯವಾಗಿದೆ. ಇದರ ಮಧ್ಯೆಯೂ ಕರ್ನಾಟಕಕ್ಕೆ ಅಗತ್ಯಕ್ಕಿಂತ ಹೆಚ್ಚು ಗೊಬ್ಬರ ಖಚಿತಪಡಿಸಲಾಗಿದೆ. ಅಕ್ರಮ ದಾಸ್ತಾನು, ಕಾಳಸಂತೆ ಮಾರಾಟ, ಕೃತಕ ಅಭಾವ ಸೃಷ್ಟಿಯನ್ನು ತಡೆಯಲು ವಿಫಲವಾಗಿರುವ ಕಾಂಗ್ರೆಸ್ ಸರ್ಕಾರವು, ಕೇಂದ್ರವೇ ಗೊಬ್ಬರ ಪೂರೈಸಿಲ್ಲ ಎಂದು ಸುಳ್ಳು ಹೇಳುತ್ತಿದೆ' ಎಂದು ಆರೋಪಿಸಿದ್ದಾರೆ.

'ಅಧಿಕಾರ ಉಳಿಸಿಕೊಳ್ಳಲು ಅಶೋಕ ಆರೋಪ'

ಪ್ರಜಾವಾಣಿ ವಾರ್ತೆ

ಎಂ.ಲಕ್ಷ್ಮಣ್

ಬೆಂಗಳೂರು: 'ಬೆಂಗಳೂರಿನ ಘನತ್ಯಾಜ್ಯ ವಿಲೇವಾರಿ ಗುತ್ತಿಗೆಯಲ್ಲಿ ₹39,000 ಕೋಟಿ ಅಕ್ರಮವಾಗಿದೆ ಎಂಬ ಬಿಜೆಪಿಯ ಆರೋಪ ಆಧಾರ ರಹಿತ. ವಿಧಾನಸಭೆ ವಿರೋಧ ಪಕ್ಷದ ಸ್ಥಾನ ಕಳೆದುಕೊಳ್ಳುವ ಭೀತಿಯಲ್ಲಿರುವ ಆರ್.ಅಶೋಕ ಅವರು ಬಿಜೆಪಿ ವರಿಷ್ಠರ ಗಮನ ಸೆಳೆಯಲು ಇಂತಹ ಆರೋಪ ಮಾಡಿದ್ದಾರೆ' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ದೂರಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ಪ್ರತಿದಿನ ಸುಮಾರು 6,000 ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಅದರಲ್ಲಿನ ಸುಮಾರು 4,000 ಟನ್ ತ್ಯಾಜ್ಯವನ್ನು ಭೂಭರ್ತಿ ಪ್ರದೇಶಗಳಿಗೆ ಸಾಗಿಸಲಾಗುತ್ತಿದೆ. 2026ರ ಘನತ್ಯಾಜ್ಯ ನಿರ್ವಹಣಾ ನಿಯಮಗಳ ಪ್ರಕಾರ ಭೂಭರ್ತಿ ವಿಲೇವಾರಿ ಮಾಡುವಂತಿಲ್ಲ. ಹಾಗಾಗಿ, ಕಸ ಮರುಬಳಕೆಯ 30 ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಬೆಂಗಳೂರಿನ ಎರಡು ಭಾಗಗಳಲ್ಲಿ ಸಮಗ್ರ ತ್ಯಾಜ್ಯ ಸಂಸ್ಕರಣಾ ಕೇಂದ್ರ ಸ್ಥಾಪಿಸುವ ಉದ್ದೇಶವಿದೆ. ಗೊಬ್ಬರ ಉತ್ಪಾದನೆ, ಬಯೊ-ಸಿಎನ್‌ಜಿ, ವಿದ್ಯುತ್ ಉತ್ಪಾದನೆ, ವೈಜ್ಞಾನಿಕ ಭೂಭರ್ತಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು 30 ವರ್ಷಗಳಿಗೆ ಗುತ್ತಿಗೆ ನೀಡಲಾಗಿದೆ. ಕೇಂದ್ರದ ನಿಯಮ ಹಾಗೂ ಒಪ್ಪಂದದ ಷರತ್ತುಗಳ ಅನ್ವಯವೇ ಟೆಂಡರ್ ಪ್ರಕ್ರಿಯೆ ನಡೆದಿದೆ' ಎಂದು ಮಾಹಿತಿ ನೀಡಿದರು.

'ಪ್ರಸ್ತುತ ಘನತ್ಯಾಜ್ಯ ಸಾಗಣೆ, ಸಂಸ್ಕರಣೆ ಹಾಗೂ ಭೂಭರ್ತಿ ಪ್ರದೇಶಗಳ ಸುತ್ತಮುತ್ತಲಿನ ಅಭಿವೃದ್ಧಿ ಕಾರ್ಯಗಳಿಗೆ ಪ್ರತಿ ಟನ್‌ಗೆ ಸುಮಾರು ₹4,670 ವೆಚ್ಚವಾಗುತ್ತಿದೆ. ವರ್ಷಕ್ಕೆ 1,344 ಕೋಟಿ ಆಗುತ್ತದೆ. ಹೊಸ ಟೆಂಡರ್‌ನಲ್ಲಿ ಪ್ರತಿ ಟನ್‌ಗೆ ₹2,565 (ಉತ್ತರ ಬೆಂಗಳೂರು) ಹಾಗೂ ದಕ್ಷಿಣ ₹2,151 (ದಕ್ಷಿಣ ಬೆಂಗಳೂರು) ದರ ನಿಗದಿಯಾಗಿದೆ. ಹೊಸ ಗುತ್ತಿಗೆಯಲ್ಲಿ ಅರ್ಧದಷ್ಟು ಹಣ ಉಳಿತಾಯವಾಗಲಿದೆ. ಅಶೋಕ ಅವರಿಗೆ ಇದುವರೆಗೂ ಸಿಗುತ್ತಿದ್ದ ಮಾಮೂಲಿ ಸ್ಥಗಿತಗೊಳ್ಳುವ ಆತಂಕಕ್ಕೆ ಒಳಗಾಗಿ ಹುರುಳಿಲ್ಲದ ಆರೋಪ ಮಾಡುತ್ತಿದ್ದಾರೆ. ವಿರೋಧ ಪಕ್ಷದ ಜವಾಬ್ದಾರಿಯುತ ನಾಯಕರಾಗಿ ಆಧಾರವಿಲ್ಲದೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಆರೋಪ ಮಾಡುವುದು ಸರಿಯಲ್ಲ' ಎಂದರು.

'2022ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ದಂಡ ವಿಧಿಸಿದಾಗ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. ಆ ಕುರಿತು ಉತ್ತರ ನೀಡುವ ಬದಲು ಆಧಾರರಹಿತ ಆರೋಪ ಮಾಡಿದ್ದಾರೆ. ಬಿಜೆಪಿ ನಾಯಕರ ಬಳಿ ದಾಖಲೆಗಳಿದ್ದರೆ ತನಿಖಾ ಸಂಸ್ಥೆಗಳಿಗೆ ಸಲ್ಲಿಸಲಿ. ಎಲ್ಲ ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ ಅಧೀನದಲ್ಲಿವೆ. ಅಕ್ರಮ ನಡೆದಿದ್ದರೆ ತನಿಖೆ ನಡೆಸಿ ಸತ್ಯವನ್ನು ಹೊರತರಲಿ' ಎಂದು ಸವಾಲು ಹಾಕಿದರು.

'ಬಿಜೆಪಿ ನಾಯಕರು ನೀಟ್ ರದ್ದತಿ, ಸಿಬಿಎಸ್‌ಇ ಸಮಸ್ಯೆಗಳು, ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆಯ ಪ್ರಮುಖ ವಿಷಯಗಳ ಬಗ್ಗೆ ಮೌನ ವಹಿಸಿ, ಕಾಂಗ್ರೆಸ್ ವಿರುದ್ಧ ರಾಜಕೀಯ ಆರೋಪ ಮಾಡುತ್ತಿದ್ದಾರೆ' ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

'ಬೆಂಗಳೂರು ಕೆರೆ ಓಟ': ಚಾಲನೆ: ಕೃಷ್ಣಬೈರೇಗೌಡ, ಸ್ಥಳ: ಜಕ್ಕೂರು ಕೆರೆ, ಬೆಳಿಗ್ಗೆ 6.15

'ಓರೆಕೋರೆ– ದೊಡ್ಡ ಬೆಂಗಳೂರಿನ ಸಣ್ಣ ಆತ್ಮಕಥೆ' ಕೃತಿ ಬಿಡುಗಡೆ: ಜಿ.ಪರಮೇಶ್ವರ, ಎ.ವಿ.ಚಂದ್ರಶೇಖರ್, ನರೇಶ್ ನರಸಿಂಹನ್, ಸುರೇಶ್‌ಕುಮಾರ್, ಕೆ.ಈ.ರಾಧಾಕೃಷ್ಣ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ವಿಜ್ಞಾನ ಕೇಂದ್ರ, ಜೈನ್ ವಿಶ್ವವಿದ್ಯಾಲಯ, ಜೆ.ಸಿ.ರಸ್ತೆ, ಬೆಳಿಗ್ಗೆ 9.30

'ಗರ್ಲ್ಸ್ ಫಸ್ಟ್' ಹ್ಯಾಕಥಾನ್: ಉದ್ಘಾಟನೆ: ಪ್ರಿಯಾಂಕ್ ಖರ್ಗೆ, ರಾಮಲಿಂಗಾರೆಡ್ಡಿ, ಆಯೋಜನೆ: ಹೋಪ್‌ವರ್ಕ್ಸ್ ಫೌಂಡೇಷನ್, ಸ್ಥಳ: ಜ್ಯೋತಿ ನಿವಾಸ್ ಕಾಲೇಜು, ಕೋರಮಂಗಲ, ಬೆಳಿಗ್ಗೆ 9.45

ಬಸವಣ್ಣನವರ ಜಯಂತ್ಯುತ್ಸವ, ಬಸವ ಸೇವಾರತ್ನ ಪುರಸ್ಕಾರ: ಸಿ.ಎನ್.ಮಂಜುನಾಥ್, ಸಾನ್ನಿಧ್ಯ: ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಆಯೋಜನೆ: ವಿಮಾನ ಕಾರ್ಖಾನೆ ಬಸವ ಸೇವಾ ಸಮಿತಿ, ಸ್ಥಳ: ತರಳಬಾಳು ಕೇಂದ್ರ, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, 2ನೇ ಬ್ಲಾಕ್, ಆರ್.ಟಿ.ನಗರ, ಬೆಳಿಗ್ಗೆ 10

ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ಮಹಾಮಾನವ ಅಗೋಳಿ ಮಂಜಣ್ಣ, ಬೆ.ಸು.ನಾ ಮಲ್ಯ ದತ್ತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಕೆ.ಮೋಹನ್ ಆಳ್ವ, ಪ್ರಶಸ್ತಿ ಪ್ರದಾನ: ಶಂಕರ ಬಿದರಿ, ಪುರಸ್ಕೃತರು: ಅಜಿತ್ ಹನುಮಕ್ಕನವರ್, ದಾನಮ್ಮ ಚಿಚಕಂಡಿ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್.ಕಾಲೊನಿ, ಬೆಳಿಗ್ಗೆ 10

ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಆರ್.ಪಿ.ರವಿಕುಮಾರ್, ಡಾ.ಟಿ.ಎಚ್.ಆಂಜನಪ್ಪ, ಆಯೋಜನೆ: ಮಂಗಳ ಶಿಕ್ಷಣ ಸಮಿತಿ, ಸ್ಥಳ: ಬಿಎಂಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ದೊಡ್ಡಬಳ್ಳಾಪುರ ಮುಖ್ಯರಸ್ತೆ, ಯಲಹಂಕ, ಬೆಳಿಗ್ಗೆ 10

ಪ್ರಮುಖ ನಾಗರಿಕ ಗೋಷ್ಠಿ: ಸಂವಾದ: ಸುರೇಶ್ ನಾಯಕ್, ಆಯೋಜನೆ: ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಸ್ಥಳ: ಜೆಎಸ್‌ಎಸ್ ಪಬ್ಲಿಕ್ ಶಾಲೆ, 22ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

'ಉದಯಭಾನು' ವಜ್ರ ಮಹೋತ್ಸವ: ಲಾಂಛನ ಲೋಕಾರ್ಪಣೆ: ನ್ಯಾ.ಎನ್.ಕುಮಾರ್, ಸಿ.ಜಿ.ಚಂದ್ರಶೇಖರ್, ಲೀಲಾದೇವಿ ಆರ್.ಪ್ರಸಾದ್, ಆಯೋಜನೆ ಮತ್ತು ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ಗವಿಪುರ ಸಾಲುಛತ್ರಗಳ ಎದುರು, ಕೆಂಪೇಗೌಡನಗರ, ಬೆಳಿಗ್ಗೆ 10

'ಮಹಾಪೀಡೆ ಮಹಾಬಲ' ನಾಟಕ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಯುವಪಥ, ಯುವಕ ಸಂಘ, ಜಯನಗರ ನಾಲ್ಕನೇ ಹಂತ, ಸಂಜೆ 4.30 ಮತ್ತು 7.30

'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ: ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ಬಿ.ಅಶೋಕ, ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ , ಸಂಜೆ 5 ಮತ್ತು 7

'ಅಡವಿ' ನಾಟಕ ಪ್ರದರ್ಶನ: ನಿರ್ದೇಶನ: ಅರುಣ್ ಸೂರ್ಯ, ಆಯೋಜನೆ: ಪಯಣ, ಸ್ಥಳ: ಢಮರು ಸಭಾಂಗಣ, ಶಂಕರ ಫೌಂಡೇಷನ್, ದೊಡ್ಡಕಲ್ಲಸಂದ್ರ ಮೆಟ್ರೊ ನಿಲ್ದಾಣದ ಹತ್ತಿರ, ಸಂಜೆ 7.15, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಸಂಜೆ 7

'ವೆನ್ ದಿ ರಿವರ್ ಸ್ಪೋಕ್' ಕಥಾ ವಾಚನ ಮತ್ತು 'ಚಿಪ್ಪಿ, ದ ಚಿಪ್ಕಲಿ', 'ತಿಲ' ನಾಟಕಗಳ ಪ್ರದರ್ಶನ: ಕಥಾ ವಾಚನ: ಸೀಮಾ ಕಾರಂತ, ನಿರ್ದೇಶಕರು: ಗರ್ಟ್ರ್ಯೂಡ್ ಟ್ರೊಬಿಂಗರ್, ಮಿಷೆಲ್ ಪೋಗೆಲ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಬೆಳಿಗ್ಗೆ 11, ಮಧ್ಯಾಹ್ನ 3.30 ಮತ್ತು ಸಂಜೆ 7.30

'ಬಣ್ಣ' ನಾಟಕ ಪ್ರದರ್ಶನ: ರಚನೆ: ಭೀಮಣ್ಣ ಹಟ್ಟಿಕುನಿ, ನಿರ್ದೇಶನ: ಜೆ.ರಾಘವೇಂದ್ರ, ಆಯೋಜನೆ: ಚಿಗುರು, ಕುಸುಮಾಲೆ– ಗಿರೀಶ್ ಕಾರ್ನಾಡ್ ಕನ್ನಡ ನಾಟಕ ರಚನಾ ಫೆಲೋಶಿಪ್, ಭಾಷಾ ಕೇಂದ್ರ, ಸಮಾಗತ ಫೌಂಡೇಷನ್, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಅಂಜನಾದ್ರಿ ಬಡಾವಣೆ, ಕೋಣನಕುಂಟೆ, ಸಂಜೆ 7.30

ಅನುಪಮಾ ನಿರಂಜನ ಮತ್ತು ಕೋ.ವೆಂ.ರಾಮಕೃಷ್ಣೇಗೌಡ ಹುಟ್ಟುಹಬ್ಬ ಮತ್ತು ಪ್ರಶಸ್ತಿ ಪ್ರದಾನ: ಉದ್ಘಾಟನೆ: ಮಾನಸ, ಎಚ್.ಎಲ್.ಪುಷ್ಪಾ, ರಾಮಣ್ಣ ಎಚ್.ಕೋಡಿಹೊಸಹಳ್ಳಿ, ಪುರಸ್ಕೃತರು: ದು.ಸರಸ್ವತಿ, ಆರ್.ಸದಾಶಿವಯ್ಯ ಜರಗನಹಳ್ಳಿ, ಕಥಾಸ್ಪರ್ಧೆ ವಿಜೇತರು: ಜ್ಯೋತಿರ್ಲಕ್ಷ್ಮಿ, ರೇಷ್ಮಾ ಗುಳೇದಗುಡ್ಡಾಕರ್, ಆಶಾ ನಾಗರಾಜ್, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ವಿದ್ಯಾರ್ಥಿ ಸಾಧಕರಿಗೆ ಸನ್ಮಾನ: ನ್ಯಾ.ಶ್ರೀಶಾನಂದ, ಟಿ.ಎ. ಬಾಲಕೃಷ್ಣ, ಆಯೋಜನೆ: ವಿಜಯ ಕಾಲೇಜು ನಿವೃತ್ತ ಅಧ್ಯಾಪಕರ ಬಳಗ, ಸ್ಥಳ: ವಿಜಯ ಕಾಲೇಜು, ಆರ್.ವಿ.ರಸ್ತೆ, ಬೆಳಿಗ್ಗೆ 10.30

ಅರ್ಚನಾ– ಸಮನ್ವಿ

ಯುವ ಸಂಗೀತೋತ್ಸವ: ಕೊಳಲು ವಾದನ: ಸಿ.ಎಸ್. ಕೇಶವಚಂದ್ರ, ಕರ್ನಾಟಕ ಸಂಗೀತ ದ್ವಂದ್ವ ಗಾಯನ: ಅರ್ಚನಾ– ಸಮನ್ವಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಸಂಜೆ 5.15

'ಗಂಗ ಅರಸರು ಮತ್ತು ಗಜಶಾಸ್ತ್ರ ಪ್ರಾವೀಣ್ಯತೆ' ಕುರಿತು ಉಪನ್ಯಾಸ: ಸ್ಮಿತಾ ರೆಡ್ಡಿ, ಅಧ್ಯಕ್ಷತೆ: ಸಂಧ್ಯಾ ರೆಡ್ಡಿ, ಆಯೋಜನೆ: ಗೌಡತಿಯರ ಸೇನೆ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣ, ಬೆಳಿಗ್ಗೆ 10.45

ಕನ್ನಡ ಜಾಗೃತಿ ಸಮಾವೇಶ, ವ.ಚ.ಚನ್ನೇಗೌಡ ಅಭಿನಂದನಾ ಸಮಾರಂಭ: ಉದ್ಘಾಟನೆ: ಹಿ.ಚಿ.ಬೋರಲಿಂಗಯ್ಯ, ಮನು ಬಳಿಗಾರ, ಆಯೋಜನೆ: ಕೆಎಸ್‌ಆರ್‌ಟಿಸಿ– ಕೇಂದ್ರ ಕನ್ನಡ ಕ್ರಿಯಾ ಸಮಿತಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 10.30

'ಶ್ರೀಲ ಪ್ರಭುಪಾದ ಚರಿತಾಮೃತಾಮ್' ಕನ್ನಡ ಮಹಾಕಾವ್ಯ ಕೃತಿ ಬಿಡುಗಡೆ: ಸಾನ್ನಿಧ್ಯ: ಈಶಪ್ರಿಯ ಸ್ವಾಮೀಜಿ, ಸ್ತೋಕ ಕೃಷ್ಣಸ್ವಾಮಿ, ಅತಿಥಿ: ಗುರುರಾಜ ಕರಜಗಿ, ಕಬ್ಬಿನಾಲೆ ವಸಂತ ಭಾರದ್ವಾಜ್, ಆಯೋಜನೆ ಮತ್ತು ಸ್ಥಳ: ಮಲ್ಟಿವಿಷನ್ ಥಿಯೇಟರ್, ಇಸ್ಕಾನ್, ರಾಜಾಜಿನಗರ, ಬೆಳಿಗ್ಗೆ 11


ಗುರುರಾಜ ಕರಜಗಿ

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಮಧ್ಯಕಾಲೀನ ಕರ್ನಾಟಕದಲ್ಲಿ ಪ್ರಾಯೋಗಿಕ ಜ್ಞಾನ' ಕುರಿತು ಉಪನ್ಯಾಸ: ಎರಿಕ್ ಮೊಸೆಸ್ ಗ್ಯೂರ್ವಿಚ್, ಆಯೋಜನೆ ಮತ್ತು ಸ್ಥಳ: ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

'ಎ ಕ್ರಿಟಿಕಲ್ ಹಿಸ್ಟರಿ ಆಫ್ ಕನ್ನಡ ಲಿಟ್ರೇಚರ್' ಕೃತಿ ಕುರಿತು ಸಂವಾದ: ರಾಜೇಂದ್ರ ಚೆನ್ನಿ, ಇ.ವಿ.ರಾಮಕೃಷ್ಣನ್, ವನಮಾಲಾ ವಿಶ್ವನಾಥ್, ಎನ್.ಎಸ್.ಗುಂಡೂರು, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11.30

ರಾಜೇಂದ್ರ ಚೆನ್ನಿ

ನ್ಯಾ.ಎನ್.ಸಂತೋಷ್ ಹೆಗ್ಡೆ 86ನೇ ಜನ್ಮದಿನ: ಅಧ್ಯಕ್ಷತೆ: ವೂಡೇ ಪಿ.ಕೃಷ್ಣ, ಸತ್ಯರಾವ್ ಮಾನೆ, ಸ್ಥಳ: ಪ್ರಿಯಾಂಕ ರೆಸಿಡೆನ್ಸಿ, ಜೈ ಭಾರತ್ ನಗರ್ ಬಸ್‌ನಿಲ್ದಾಣದ ಎದುರು, ಬಾಣಸವಾಡಿ ಮುಖ್ಯರಸ್ತೆ, ಬೆಳಿಗ್ಗೆ 11.30

ತಿಂಗಳ ಕವಿಗೋಷ್ಠಿ, ಗೀತಗಾಯನ: ಪ್ರಶಸ್ತಿ ಪ್ರದಾನ: ವಿ.ಮಲ್ಲಿಕಾರ್ಜುನಯ್ಯ, ಬಿ.ಶೃಂಗೇಶ್ವರ್, ಆಯೋಜನೆ: ಸಮ್ಮಿಲನ ಕಲೆ– ಸಾಹಿತ್ಯ– ಸಾಂಸ್ಕೃತಿಕ ವೇದಿಕೆ, ಸ್ಥಳ: ಕೆನ್ ಕಲಾಶಾಲೆ, ಅಂಚೆ ಕಚೇರಿ ಪಕ್ಕ, ಶೇಷಾದ್ರಿಪುರಂ, ಬೆಳಿಗ್ಗೆ 11.30

'ಥಾಮಸ್ ಯಂಗ್ ಮತ್ತು ಬೆಳಕಿನ ಸ್ವಭಾವ' ಕುರಿತು ವಿಜ್ಞಾನ ಕೂಟ: ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಸಂಜೆ 4

ಎ.ಕೆ.ವತ್ಸಲಾ ನೆನಪಿನ ವೀಣೆ ಕಛೇರಿ: ವಾದನ: ಜ್ಯೋತಿ ಚೇತನ್, ಆಯೋಜನೆ: ನಾದಬ್ರಹ್ಮ ಕಲಾ ಕೇಂದ್ರ, ಸ್ಥಳ: ನಾದಬ್ರಹ್ಮ ಪ್ರಾರ್ಥನಾ ಮಂದಿರ, ಜಿ.ಪಿ.ರಾಜರತ್ನಂ ರಸ್ತೆ, ವೇಣುಗೋಪಾಲ ರೆಡ್ಡಿ ಬಡಾವಣೆ, ಅರಕೆರೆ, ಸಂಜೆ 4.30

'ಮುತ್ತು ಬಂದಿದೆ ಕೇರಿಗೆ' ಕನಕದಾಸರ ಕುರಿತ ನೃತ್ಯರೂಪಕ: ಪ್ರಸ್ತುತಿ: ಭ್ರಮರಿ ನೃತ್ಯ ಸಂಸ್ಥೆ, ಪರಿಕಲ್ಪನೆ ಮತ್ತು ಸಾಹಿತ್ಯ: ಕಾ.ತ.ಚಿಕ್ಕಣ್ಣ, ಸಂಗೀತ: ಪ್ರವೀಣ್ ಡಿ.ರಾವ್, ಉಪಸ್ಥಿತಿ: ಎಚ್.ಎಂ.ರೇವಣ್ಣ, ಬಿ.ಎಸ್.ಮಂಜುನಾಥ, ಆಯೋಜನೆ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6.30

ಕಾ.ತ.ಚಿಕ್ಕಣ್ಣ

ಕನಕದಾಸರ ವಿರಚಿತ 'ಕೇಶವನಾಮ' ಪ್ರವಚನ: ಕಲ್ಯಾ ನರಸಿಂಹಮೂರ್ತಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ,

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಮಾವು ಬೆಳೆದವರ ನೋವು

ಒಂದನೇ ಪುಟದಿಂದ...

ಮಾವು ಕೃಷಿಗೆ ಹೆಚ್ಚು ಒತ್ತು ನೀಡುವ ಇನ್ನುಳಿದ ಜಿಲ್ಲೆಗಳಾದ ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಗದಗ, ಕೊಪ್ಪಳ, ಧಾರವಾಡ, ಬಾಗಲಕೋಟೆ, ಬೆಳಗಾವಿಯಲ್ಲೂ ಒಂದಿಲ್ಲೊಂದು ಸಮಸ್ಯೆ ಕಾಡುತ್ತಿದೆ. ಮಾವಿನ ಗಿಡ ಹೂ ಬಿಡುವ ಹಾಗೂ ಕಾಯಿ ಕಚ್ಚುವ ಸಂದರ್ಭದಲ್ಲಿ ವಾಡಿಕೆಯಂತೆ ಮಳೆಯಾಗಿಲ್ಲ. ಕಾಯಿ ಆಗಬೇಕಿದ್ದ ಪಿಂದೆಗಳು ರಣ ಬಿಸಿಲಿನ ತಾಪಕ್ಕೆ ಹಳದಿ ಬಣ್ಣಕ್ಕೆ ತಿರುಗಿ ನೆಲಕ್ಕೆ ಉದುರಿದ್ದವು. ತುಸು ದೊಡ್ಡದಾಗಿ ಬಲಿತ ಮಾವಿನ ಕಾಯಿಗಳು ನೀರಿನ ಅಂಶ ಸಿಗದೆ ಸೊರಗಿದ್ದವು. ಜೊತೆಗೆ ಆಲಿಕಲ್ಲು ಮಳೆ ಹಾಗೂ ಬಿರುಗಾಳಿ ಬಂದಾಗ ಉದುರಿದ್ದವು. ಕೆಲವೆಡೆ ಮಾವಿನ ಕಾಯಿಗಳ ಗಾತ್ರ ಕಡಿಮೆಯಾಗಿ ಗುಣಮಟ್ಟ ಕಳೆದುಕೊಂಡಿವೆ.

ಉಳಿದ ಜಿಲ್ಲೆಗಳಲ್ಲಿ ಹಂಗಾಮು ಬಹುತೇಕ ಮುಗಿಯುತ್ತಾ ಬಂದಿದ್ದು, ಕೋಲಾರ ಹಾಗೂ ಚಿಕ್ಕಬಳ್ಳಾಪುರದಲ್ಲಿ ಮಾವಿನ ಸುಗ್ಗಿ ಈಗ ಬಿರುಸು ಪಡೆದುಕೊಂಡಿದೆ. ಮಾವಿನ ಇಳುವರಿ ಕಡಿಮೆಯಾದರೆ ದರ ಹೆಚ್ಚಳವಾಗುವುದು ಸಾಮಾನ್ಯ. ಆದರೆ ಈ ವರ್ಷ ಇಳುವರಿ ಮತ್ತು ಧಾರಣೆ ಎರಡೂ ಕುಸಿತ ಕಂಡಿದೆ. ಇದಕ್ಕೆ ಕಾರಣವೇನು ಎನ್ನುವುದು ರೈತರಿಗೂ ಗೊತ್ತಿಲ್ಲ ವ್ಯಾಪಾರಿಗಳ ಬಳಿಯೂ ಉತ್ತರ ಸಿಗುತ್ತಿಲ್ಲ. ಇಷ್ಟೆಲ್ಲಾ ನಡೆದರೂ ಸರ್ಕಾರ ಇನ್ನೂ ಸಹ ಮಧ್ಯೆ ಪ್ರವೇಶಿಸಿ ಬೆಂಬಲ ಬೆಲೆ ಘೋಷಿಸಿಲ್ಲ.

ರಾಜ್ಯದಲ್ಲಿ ಸುಮಾರು ಒಂದೂವರೆ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಅದರಲ್ಲಿ ಕೋಲಾರ ಜಿಲ್ಲೆಯಲ್ಲಿ 50 ಸಾವಿರ ಹೆಕ್ಟೇರ್ ಪ್ರದೇಶವಿದೆ. ಈ ಪೈಕಿ ಶ್ರೀನಿವಾಸಪುರ ತಾಲ್ಲೂಕಿನಲ್ಲೇ 40 ಸಾವಿರಕ್ಕೂ ಅಧಿಕ ಹೆಕ್ಟೇರ್‌ನಲ್ಲಿ ಮಾವಿನ ಕೃಷಿ ನಡೆಯುತ್ತದೆ. ಪಕ್ಕದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸುಮಾರು 15 ಸಾವಿರ ಹೆಕ್ಟೇರ್, ರಾಮನಗರದಲ್ಲಿ ಸುಮಾರು 28 ಸಾವಿರ ಹೆಕ್ಟೇರ್ ಮಾವು ಬೆಳೆಯಲಾಗುತ್ತಿದೆ.

ಕಳೆದ ವರ್ಷ ಧಾರಣೆ ಇಲ್ಲದೇ ಮಾವಿನ ಹಣ್ಣುಗಳನ್ನು ತೋಟದಲ್ಲೇ ಬಿಡಲಾಗಿತ್ತು. ರೈತರ ಪ್ರತಿಭಟನೆ ಬಳಿಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬೆಂಬಲ ಬೆಲೆ ಘೋಷಿಸಿದ್ದವು. ಈ ವರ್ಷವೂ ಶೇ 70ರಷ್ಟು ಫಸಲು ಕುಂಠಿತಗೊಂಡಿದ್ದು, ಹಂಗಾಮಿನ ಆರಂಭದಲ್ಲೇ ಧಾರಣೆ ಕುಸಿತ ಉಂಟಾಗಿದೆ. ಜ್ಯೂಸ್ ಉದ್ದೇಶಕ್ಕೆ ಸಂಸ್ಕರಣಾ ಘಟಕಗಳಿಗೆ ಪೂರೈಕೆ ಆಗುವ ತೋತಾಪುರಿ ಮಾವಿಗೆ ಎಪಿಎಂಸಿ ಮಾರುಕಟ್ಟೆಯಲ್ಲಿ ರೈತರಿಗೆ ಪ್ರತಿ ಕೆ.ಜಿಗೆ ಕೇವಲ ₹ 4 ದರ ಸಿಗುತ್ತಿದೆ. ಅದರಲ್ಲೂ ರೈತರು 40 ಪೈಸೆಯನ್ನು ದಲ್ಲಾಳಿಗೆ ನೀಡಬೇಕು. ರೈತರು ತಾವು ಹೂಡಿದ ಬಂಡವಾಳಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವ ಅನಿವಾರ್ಯಕ್ಕೆ ಸಿಲುಕಿ ನಷ್ಟ ಅನುಭವಿಸುತ್ತಿದ್ದಾರೆ.

ಒಂದು ಟನ್ ತೋತಾಪುರಿ ಮಾವು ಬೆಳೆಯಲು ಸುಮಾರು ₹ 12 ಸಾವಿರ ಖರ್ಚು ಬರುತ್ತದೆ. ಆದರೆ, ಈಗ ಟನ್ ಮಾವು ಎಪಿಎಂಸಿಯಲ್ಲಿ ಕೇವಲ ₹4 ಸಾವಿರಕ್ಕೆ ಮಾರಾಟವಾಗುತ್ತಿದೆ. ಕೂಲಿ ಹಾಗೂ ಸಾಗಣೆ ವೆಚ್ಚವಾದರೂ ಉಳಿಯಲಿ ಎಂದು ಹಲವು ರೈತರು ಕೊಯ್ಲಿಗೆ ಮುಂದಾಗುತ್ತಿಲ್ಲ.

‘ರಾಜ್ಯದಲ್ಲಿ ವಾರ್ಷಿಕ 15 ಲಕ್ಷ ಟನ್ ಮಾವು ಉತ್ಪಾದನೆಯಾದರೆ, ಕೋಲಾರ ಜಿಲ್ಲೆಯೊಂದರಲ್ಲೇ 10 ಲಕ್ಷ ಟನ್ ಮಾವು ಸಿಗುತ್ತದೆ. ಬೆಳೆ ಕುಸಿತದಿಂದ ಈ ಬಾರಿ ಕೋಲಾರದಲ್ಲಿ ಕೇವಲ 4 ಲಕ್ಷ ಟನ್ ಉತ್ಪಾದನೆಯಾಗುವ ಸಂಭವವಿದೆ. ಎಪಿಎಂಸಿ ಮಾರುಕಟ್ಟೆಯಲ್ಲಿ ರೈತರು ಕೆ.ಜಿ ಸೇಂದೂರವನ್ನು ₹ 6ಕ್ಕೆ, ಕೆ.ಜಿ ಅಲ್ಫೋನ್ಸೊವನ್ನು ₹ 16ಕ್ಕೆ ಮಾರಾಟ ಮಾಡುತ್ತಿದ್ದಾರೆ. ಇದೇ ದರ ಮುಂದುವರಿದರೆ ರೈತರು ಭಾರಿ ನಷ್ಟ ಅನುಭವಿಸಬೇಕಾಗುತ್ತದೆ’ ಎನ್ನುತ್ತಾರೆ ಮಾವು ಬೆಳೆಗಾರ ಚಿನ್ನಪ್ಪರೆಡ್ಡಿ.

ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮಾವಿನ ಹಂಗಾಮು ಆರಂಭವಾಗುವುದೇ ಮೇ ಅಂತ್ಯದಲ್ಲಿ. ಅಷ್ಟರಲ್ಲಿ ಬೆಳಗಾವಿ, ಕೊಪ್ಪಳ ಸೇರಿದಂತೆ ಉಳಿದ ಜಿಲ್ಲೆಗಳಲ್ಲಿ ಅರ್ಧ ಹಂಗಾಮು ಮುಗಿದಿರುತ್ತದೆ. ಜೂನ್, ಜುಲೈನಲ್ಲಿ ಆರ್ಥಿಕ ಚಟುವಟಿಕೆಗಳು ಗರಿಗೆದರಿ ಶ್ರೀನಿವಾಸಪುರ ಎಪಿಎಂಸಿ ಹಾಗೂ ಮಾವಿನ ಮಂಡಿ ಸದಾ ಗಿಜಿಗುಡುತ್ತಿರುತ್ತವೆ. ನಿತ್ಯ ನೂರಾರು ಲಾರಿಗಳು ದೇಶದ ವಿವಿಧೆಡೆಯಿಂದ ಬಂದು ಹೋಗುತ್ತವೆ. ರೈತರು, ಹಮಾಲಿಗಳು, ವ್ಯಾಪಾರಿಗಳು ಸೇರಿದಂತೆ ಸುಮಾರು 3 ಸಾವಿರ ಜನ ಬರುತ್ತಾರೆ.

ಕೋಲಾರ ತಾಲ್ಲೂಕಿನ ತೊಟ್ಲಿ ಸಮೀಪ ಕಾರ್ಮಿಕರು ಮಾವಿನ ಕಾಯಿಯನ್ನು ಟ್ರ್ಯಾಕ್ಟರ್‌ಗೆ ತುಂಬಿದ ಸಂದರ್ಭ

ಹವಾಮಾನ ವೈಪರೀತ್ಯ, ಕೀಟ ಬಾಧೆಯಿಂದಾಗಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು ಫಸಲಿನಲ್ಲಿ ಪ್ರತಿ ವರ್ಷ ಶೇ 10ರಷ್ಟು ನಷ್ಟ ಸಾಮಾನ್ಯ. ಈ ವರ್ಷ ಕೊಲ್ಲಿ ರಾಷ್ಟ್ರಗಳ ಯುದ್ಧದಿಂದಾಗಿ ಲಾಭದ ಪ್ರಮಾಣ ತಗ್ಗಿದೆ

ಕೃಷ್ಣ ಸಿ.ಉಕ್ಕುಂದ, ಜಂಟಿ ನಿರ್ದೇಶಕ, ತೋಟಗಾರಿಕಾ ಇಲಾಖೆ, ಕೊಪ್ಪಳ

ಮಾವಿನ ಬೆಳೆ ಹಾನಿ ಸಂಬಂಧ ರೈತರಿಗೆ ಪರಿಹಾರ, ವಿಮೆ ಲಭ್ಯವಾಗಲಿದೆ. ತೋತಾಪುರಿ ಮಾವು ಈಗ ಮಾರುಕಟ್ಟೆ ಪ್ರವೇಶಿಸುತ್ತಿದ್ದು, ಧಾರಣೆ ಕುಸಿತ ಸಂಬಂಧ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ

ಕುಮಾರಸ್ವಾಮಿ, ಉಪನಿರ್ದೇಶಕ, ತೋಟಗಾರಿಕೆ ಇಲಾಖೆ, ಕೋಲಾರ

ಮಾವಿನ ತೋಟ ಗುತ್ತಿಗೆ ಆಧಾರದಲ್ಲಿ ಪಡೆದಿರುವ ಸಣ್ಣಪುಟ್ಟ ವ್ಯಾಪಾರಸ್ಥರೂ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೆಲ ರೈತರು ತಮ್ಮ ತೋಟಗಳನ್ನು ಗುತ್ತಿಗೆಗೆ ಕೊಡುತ್ತಾರೆ. ಮಾವಿನ ಗಿಡ ಹೂ ಬಿಟ್ಟಾಗಲೇ ವ್ಯಾಪಾರಸ್ಥರು ಮುಂಗಡ ಹಣ ನೀಡಿ ಗುತ್ತಿಗೆ ಪಡೆಯುತ್ತಾರೆ. ನಂತರ ಮಾವಿನ ಕಾಯಿ ಕೊಯ್ದು ಮಾರಾಟ ಮಾಡುತ್ತಾರೆ. ಹಲವು ವರ್ತಕರು ರೈತರಿಂದ ಮುಂಗಡವಾಗಿ ಮಾವಿನ ಕಾಯಿ ಖರೀದಿಸುತ್ತಾರೆ. ಇಂಥ ಸಂದರ್ಭದಲ್ಲಿ ವರ್ತಕರಿಗೆ ಹೊಡೆತ ಬೀಳುತ್ತಿದೆ.

ಕೊರತೆ ಏನು?: ಕೋಲಾರ ಜಿಲ್ಲೆಯಲ್ಲಿ ಶೇ 70ರಷ್ಟು ತೋತಾಪುರಿ ಮಾವು ಬೆಳೆಯುತ್ತಿದ್ದು, ಇದನ್ನು ತಿರುಳು (ಪಲ್ಪ್) ಹಾಗೂ ಜ್ಯೂಸ್ ಮಾಡಲು ಬಳಸಲಾಗುತ್ತದೆ. ಜಿಲ್ಲೆಯಲ್ಲಿ ನೀರಾವರಿ ಕೊರತೆ ಕಾರಣ ಈ ತಳಿಗೆ ಒತ್ತು ನೀಡುತ್ತಾರೆ. ಶೇ 10ರಷ್ಟು ಅಲ್ಫೋನ್ಸೊ, ಶೇ 10ರಷ್ಟು ಮಲ್ಲಿಕಾ, ಶೇ 10ರಷ್ಟು ಇನ್ನಿತರ ತಳಿ ಬೆಳೆಯಲಾಗುತ್ತಿದೆ. ಸೇಂದೂರ, ನೀಲಂ, ರಸಪೂರಿ, ಬೇನಿಷಾ, ಮಲಗೋಬಾ, ರಾಜಗಿರ ತಳಿಗಳೂ ಇದರಲ್ಲಿ ಸೇರಿವೆ.

ತೋತಾಪುರಿ ಉತ್ಪಾದನೆಗೆ ಅನುಗುಣವಾಗಿ ಜಿಲ್ಲೆಯಲ್ಲಿ ಕನಿಷ್ಠ 20 ಜ್ಯೂಸ್ ಫ್ಯಾಕ್ಟರಿಗಳು ಇರಬೇಕಿತ್ತು. ಈಗ ಕೇವಲ ಎರಡು ಇವೆ. ಖಾಸಗಿ ಫ್ಯಾಕ್ಟರಿಗಳು ಇದ್ದರೂ ಅವುಗಳೇ ಸಮಸ್ಯೆಯಲ್ಲಿವೆ.

ಹೊರರಾಜ್ಯಗಳ ಮೇಲೆ ಅವಲಂಬನೆ: ಜಿಲ್ಲೆಗೆ ಹೊಂದಿಕೊಂಡಿರುವ ತಮಿಳುನಾಡಿನ ಕೃಷ್ಣಗಿರಿ, ಆಂಧ್ರಪ್ರದೇಶದ ಚಿತ್ತೂರಿನಲ್ಲಿ ನೂರಾರು ಜ್ಯೂಸ್ ಫ್ಯಾಕ್ಟರಿಗಳಿದ್ದು ಅಲ್ಲಿಗೆ ಮಾವು ಸಾಗಿಸುತ್ತಾರೆ. ಈಚೆಗೆ ಆಯಾ ರಾಜ್ಯಗಳಲ್ಲಿಯೇ ಹೆಚ್ಚು ಮಾವು ಬೆಳೆಯುತ್ತಿದ್ದು, ಕೋಲಾರದ ಮಾವು ಖರೀದಿಸಲು ಬರುತ್ತಿಲ್ಲ. ಹಿಂದಿನ ವರ್ಷಗಳ ಸಂಗ್ರಹ ಇನ್ನೂ ಆ ಕಾರ್ಖಾನೆಗಳಲ್ಲಿ ಇದೆ. ಕಳೆದ ವರ್ಷ ಆಂಧ್ರದಲ್ಲಿ ಕೋಲಾರ ಜಿಲ್ಲೆಯ ತೋತಾಪುರಿ ಮಾವಿಗೆ ನಿರ್ಬಂಧ ಹೇರಲಾಗಿತ್ತು. ಈ ವರ್ಷ ಅಲ್ಲಿನ ಕಾರ್ಖಾನೆಗಳು ಖರೀದಿಯಲ್ಲಿ ತೊಡಗಿದ್ದು, ಹೆಚ್ಚು ಮಾವು ಪೂರೈಕೆ ಆಗುತ್ತಿದ್ದಂತೆ ಮತ್ತಷ್ಟು ದರ ಕಡಿಮೆ ಮಾಡುತ್ತಾರೆ, ಖರೀದಿ ನಿಲ್ಲಿಸಿಬಿಡುತ್ತಾರೆ. ಆಗ ರೈತರ ಪರಿಸ್ಥಿತಿ ಇನ್ನಷ್ಟು ಚಿಂತಾಜನಕವಾಗುತ್ತದೆ.

ಕೆಲ ರೈತರು ಬೆಂಗಳೂರಿನ ಮಾವಿನ ಮೇಳಗಳಲ್ಲಿ, ವಿವಿಧ ಮಾರುಕಟ್ಟೆಗಳಲ್ಲಿ, ಆನ್‌ಲೈನ್ ಹಾಗೂ ಪೋಸ್ಟಲ್ ಮೂಲಕವೂ ಮಾರಾಟ ಮಾಡುತ್ತಾರೆ. ಆದರೆ ಇದಕ್ಕೆ ದೊಡ್ಡ ಮಾರುಕಟ್ಟೆ ಇಲ್ಲ. ಹಿಂದೆಲ್ಲಾ ಗುಣಮಟ್ಟದ ಮಾವಿನ ಹಣ್ಣನ್ನು ಮಾಲೂರಿನ ಇನೋವಾ ಅಗ್ರಿ ಬಯೋಪಾರ್ಕ್ (ಫುಡ್ ಪಾರ್ಕ್) ಮೂಲಕ ‘ಗಾಮಾ’ ಪ್ರಕ್ರಿಯೆಗೆ ಒಳಪಡಿಸಿ ಅಮೆರಿಕ, ಆಸ್ಟ್ರೇಲಿಯಾಕ್ಕೆ ರಫ್ತು ಮಾಡಲಾಗುತ್ತಿತ್ತು. ಆದರೆ, ಹವಾಮಾನ ವೈಪರೀತ್ಯದ ಕಾರಣ ಗುಣಮಟ್ಟದ ಹಣ್ಣು ಈಚೆಗೆ ಸಿಗುತ್ತಿಲ್ಲ. ಹೀಗಾಗಿ, ರಫ್ತು ಮಾಡುವವರು ಖರೀದಿಸುತ್ತಿಲ್ಲ.

ಕೊಲ್ಲಿ ಯುದ್ಧದ ಪರಿಣಾಮ: ಕೊಪ್ಪಳ ಜಿಲ್ಲೆಯಲ್ಲಿ ‘ಕೇಸರ್’ ಮಾವು ಏಜೆಂಟರ ಮೂಲಕ ವಿವಿಧ ದೇಶಗಳಿಗೆ ರಫ್ತಾಗುತ್ತಿತ್ತು. ಈ ಬಾರಿ ಯುದ್ಧದ ಕಾರಣದಿಂದಾಗಿ ಅನೇಕ ಏಜೆಂಟರು ಸಂಕಷ್ಟಕ್ಕೆ ಸಿಲುಕಿದ್ದು, ಅವರು ಜಿಲ್ಲೆಗೆ ಬಂದಿಲ್ಲ. ನವದೆಹಲಿ, ಮುಂಬೈ, ಕೋಲ್ಕತ್ತ, ಗುಜರಾತ್‌ನಿಂದ ಏಜೆಂಟರು ಬರುತ್ತಿದ್ದರು. ಅವರಿಗೆ ‘ಎ’ ದರ್ಜೆಯ ಮಾವು ಕೊಡುತ್ತಿದ್ದ ರೈತರು ನಂತರ ಉಳಿದ ಹಣ್ಣುಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರುತ್ತಿದ್ದರು.

ಪ್ರತಿ ವರ್ಷ ‘ಕೇಸರ್’ ತಳಿ ಪ್ರತಿ ಕೆ.ಜಿ.ಗೆ ₹ 200 ಇರುತ್ತಿತ್ತು. ಈ ಬಾರಿ ಮೊದಲ ದರ್ಜೆಯ ಗುಣಮಟ್ಟದ ಮಾವಿನ ಬೆಲೆಯೇ ₹ 100ರಂತೆ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟವಾಗಿದೆ. ಅಂದರೆ ಶೇ 50ರಷ್ಟು ಬೆಲೆ ಕಡಿಮೆಯಾಗಿದೆ.

ಇಳುವರಿ ಕುಸಿತ: ಬೆಳಗಾವಿ ಜಿಲ್ಲೆಯಲ್ಲಿ 3,077 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗಿದೆ. ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ನಿರಂತರ ಮಂಜು ಬಿದ್ದ ಕಾರಣ ಶೇ 60ರಷ್ಟು ಇಳುವರಿ ಕುಸಿತ ಕಂಡಿದೆ. ಪ್ರಸಕ್ತ ವರ್ಷ ಅಂದಾಜು 15 ಸಾವಿರ ಟನ್ ಇಳುವರಿ ಬಂದಿದೆ. ಈವರೆಗೆ ಶೇ 99ರಷ್ಟು ಕೊಯ್ಲು ಮುಗಿದುಹೋಗಿದೆ.

ಮಹಾರಾಷ್ಟ್ರ ಹಾಗೂ ಉತ್ತರ ಭಾರತದಿಂದ ಹೆಚ್ಚಿನ ಪ್ರಮಾಣದಲ್ಲಿ ಆಮದು ಆಗಿದ್ದರಿಂದ ಹಣ್ಣಿನ ದರವೂ ಕಡಿಮೆಯೇ ಇತ್ತು ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಹಾನಿ ಸಂಬಂಧ ಪ್ರತಿ ಹೆಕ್ಟೇರ್‌ಗೆ ತೋಟಗಾರಿಕಾ ಬೆಳೆಗೆ ₹ 22 ಸಾವಿರ ಪರಿಹಾರ ಸಿಗುವ ನಿರೀಕ್ಷೆ ಇದೆ. ಸರ್ಕಾರದಿಂದ ಪರಿಹಾರ ಘೋಷಿಸಿದ ಬಳಿಕ ವಿತರಣೆ ಮಾಡಲಾಗುವುದು ಎಂದು ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಮಹಾಂತೇಶ ಮುರಗೋಡ ತಿಳಿಸಿದ್ದಾರೆ.

ಕುಗ್ಗುತ್ತಿರುವ ಬೆಳೆ: ಚಿತ್ರದುರ್ಗ ಜಿಲ್ಲೆಯ ಬಹುತೇಕ ರೈತರು ಅಡಿಕೆ ಬೆಳೆಯತ್ತ ಪರಿವರ್ತನೆಯಾಗುತ್ತಿರುವ ಕಾರಣ ಜಿಲ್ಲೆಯ ಮಾವು ಬೆಳೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಈ ಬಾರಿ 1,499 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗಿತ್ತು. ಕಳೆದ ವರ್ಷಕ್ಕಿಂತಲೂ 500 ಹೆಕ್ಟೇರ್‌ನಷ್ಟು ಕಡಿಮೆಯಾಗಿದೆ. ಅಲ್ಫೋನ್ಸೊ, ಮಲಗೋಬಾ, ತೋತಾಪುರಿ, ನೀಲಂ ತಳಿಗಳನ್ನು ಜಿಲ್ಲೆಯಲ್ಲಿ ಬೆಳೆಯಲಾಗುತ್ತದೆ. ಸ್ಥಳೀಯ ಮಾವಿನ ಅವಧಿ ಅಂತಿಮ ಹಂತಕ್ಕೆ ಬಂದಿರುವ ಕಾರಣ ಹೊರಜಿಲ್ಲೆಯಿಂದ ಬಂದ ಹಣ್ಣು ಮಾರಾಟ ಮಾಡಲಾಗುತ್ತಿದೆ.

ಊಜಿ ನೊಣ ಕಾಟ: ತುಮಕೂರು ಜಿಲ್ಲೆಯಲ್ಲಿ ಹವಾಮಾನ ವೈಪರೀತ್ಯದ ಜೊತೆಗೆ ಊಜಿ ನೊಣದ ಬಾಧೆ ಹೆಚ್ಚಾಗಿದ್ದು, ಇಳುವರಿ ಕುಸಿತಕ್ಕೆ ಕಾರಣವಾಗಿದೆ. ‘ಬಾದಾಮಿ ತಳಿಯ ಮಾವಿನ ಬೆಲೆ ಪಾತಾಳ ಕಂಡಿದೆ. ತೋತಾಪುರಿ ಬೆಲೆ ಕೇಳುವಂತಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ದೊಡ್ಡ ಪ್ರಮಾಣದಲ್ಲಿ ಮಾವು ಕೃಷಿ ಮಾಡುವವರ ಪಾಡು ಯಾರಿಗೂ ಬೇಡ ಎಂಬಂತೆ ಆಗಲಿದೆ’ ಎಂದು ತುಮಕೂರು ತಾಲ್ಲೂಕಿನ ಮಷಣಾಪುರ ಗ್ರಾಮದ ಸಾವಯವ ಮಾವು ಕೃಷಿಕ ಚನ್ನಕೇಶವ ಆತಂಕ ವ್ಯಕ್ತಪಡಿಸಿದರು.

ಪ್ರಸಕ್ತ ಸಾಲಿನಲ್ಲಿ 11,140 ಹೆಕ್ಟೇರ್‌ನಲ್ಲಿ ಮಾವು ಕೃಷಿ ಇದ್ದು, ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ಇಳುವರಿ ಪ್ರಮಾಣ ಇನ್ನೂ ಕುಸಿಯುವ ಭೀತಿ ಎದುರಾಗಿದೆ.

ಬೆಳೆ ನಷ್ಟ: ರಾಮನಗರದಲ್ಲಿ ಮಳೆ ಕೊರತೆ ಮತ್ತು ಹವಾಮಾನ ವೈಪರೀತ್ಯದಿಂದಾಗಿ ಶೇ 80ರಷ್ಟು ಮಾವು ಕೈ ಕೊಟ್ಟಿದೆ. ಕೇವಲ ಶೇ 20ರಷ್ಟು ಬೆಳೆ ಮಾತ್ರ ಸಿಕ್ಕಿದೆ. ಅದಕ್ಕೂ ಸೂಕ್ತ ಬೆಲೆ ಇಲ್ಲದೆ ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ರಾಜ್ಯದಲ್ಲಿ ಮಾವಿನ ಋತು ಮೊದಲಿಗೆ ಶುರುವಾಗುವುದೇ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ. ಹೆಚ್ಚು ಮಾವು ಬೆಳೆಯುವ ಜಿಲ್ಲೆಗಳಲ್ಲಿ ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ಇಲ್ಲಿನ ಶೇ 90ರಷ್ಟು ಮಾವು ಪ್ರದೇಶ ಮಳೆಯಾಶ್ರಿತವಾಗಿದೆ.

‘ಬೆಳೆಗಾರರ ಸ್ಥಿತಿಯನ್ನು ಎಪಿಎಂಸಿ, ತೋಟಗಾರಿಕೆ ಅಧಿಕಾರಿಗಳು ಸೇರಿದಂತೆ ಹಲವರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಸರ್ಕಾರ ಸಹ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ’ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಮಾವು ಮತ್ತು ತೆಂಗು ಬೆಳೆ ರೈತ ಉತ್ಪಾದಕರ ಕಂಪನಿ ಅಧ್ಯಕ್ಷ ವೈ.ಜೆ.ರಮೇಶ್ ಬೇಸರ ವ್ಯಕ್ತಪಡಿಸಿದರು.

ಏನು ಸೌಲಭ್ಯ ಅಗತ್ಯ?: ಆಂಧ್ರಪ್ರದೇಶ, ತಮಿಳುನಾಡಿನ ಜ್ಯೂಸ್ ತಯಾರಿಸುವ ಫ್ಯಾಕ್ಟರಿಗಳ ಮೇಲೆ ಅವಲಂಬನೆ ಆಗುವುದು ಬಿಟ್ಟು ನಮ್ಮದೇ ರಾಜ್ಯದಲ್ಲಿ ಜ್ಯೂಸ್ ಫ್ಯಾಕ್ಟರಿಗಳನ್ನು ಪ್ರಾರಂಭಿಸಬೇಕು. ವಿದೇಶಗಳಿಂದ ಬರುವ ಸಾಂದ್ರೀಕೃತ ಹಣ್ಣುಗಳ ರಸ ಆಮದು ನಿಲ್ಲಿಸಬೇಕು. ರಫ್ತಿಗೆ ಸೌಲಭ್ಯ ಕಲ್ಪಿಸಬೇಕು. ಜೊತೆಗೆ ಮೌಲ್ಯವರ್ಧನೆ, ಪ್ಯಾಕೇಜಿಂಗ್, ಬ್ರ್ಯಾಂಡಿಂಗ್ ಕುರಿತು ತರಬೇತಿ ಅಗತ್ಯವಿದೆ. ಮಾರುಕಟ್ಟೆ ತಾಂತ್ರಿಕತೆ, ಕಟಾವು ತಂತ್ರಜ್ಞಾನವನ್ನು ರೈತರಿಗೆ ಹೇಳಿಕೊಡಬೇಕಿದೆ.

‘ಬೆಳೆಯುವ ಮಾವಿಗೆ ಉತ್ತಮ ಮೌಲ್ಯ ಸಿಗಬೇಕಾದರೆ ಉತ್ತಮ ಮಾರುಕಟ್ಟೆ ವ್ಯವಸ್ಥೆ ಇರಬೇಕು. ಸಂಗ್ರಹ, ಸಂಸ್ಕರಣಾ ಘಟಕ ಬೇಕು. ಮೂಲಸೌಕರ್ಯ ಒದಗಿಸಬೇಕು. ಸಾಗಣೆ, ಸಂಚಾರ ವ್ಯವಸ್ಥೆ ಸಮರ್ಪಕವಾಗಿರಬೇಕು. ರೈತರ ಆಧಾರಸ್ತಂಭ ಎನಿಸಿರುವ ಶ್ರೀನಿವಾಸಪುರ ಎಪಿಎಂಸಿ ಮಾರುಕಟ್ಟೆಯನ್ನು ವಾಣಿಜ್ಯ ಕೇಂದ್ರವನ್ನಾಗಿ ಪರಿವರ್ತಿಸಬೇಕು’ ಎಂದು ಮಾವು ಬೆಳೆಗಾರ ಕೋಲಾರ ತಾಲ್ಲೂಕಿನ ತೊಟ್ಲಿ ಗ್ರಾಮದ ಟಿ.ವಿ.ರಮೇಶ್ ಒತ್ತಾಯಿಸುತ್ತಾರೆ.

ಮಾವು ಗುಣಮಟ್ಟ ಕುಸಿತ, ರಫ್ತು ಸಮಸ್ಯೆಗಳು ಹಾಗೂ ಮಾರುಕಟ್ಟೆ ತಿರಸ್ಕಾರದ ಹಿಂದಿನ ಕಾರಣಗಳನ್ನು ನಿಖರವಾಗಿ ಅಧ್ಯಯನ ಮಾಡಲು ತಜ್ಞರ ಸಮಿತಿ ರಚಿಸಲು ಕೋಲಾರ ಜಿಲ್ಲಾಧಿಕಾರಿ ಎಂ.ಆರ್.ರವಿ, ತೋಟಗಾರಿಕಾ ಇಲಾಖೆಗೆ ಸೂಚನೆ ನೀಡಿದ್ದಾರೆ.

ಆಗಬೇಕಿರುವುದೇನು?

ಮಾವಿನ ಆನ್‌ಲೈನ್ ಮಾರಾಟಕ್ಕೆ ಮತ್ತಷ್ಟು ಒತ್ತು ಕೊಡಬೇಕಿದೆ. ಸ್ಥಳೀಯವಾಗಿಯೂ ಗುಡಿ ಕೈಗಾರಿಕೆ ಮೂಲಕ ಮಾವಿನ ಉಪ ಉತ್ಪನ್ನ ತಯಾರಿಕೆಗೆ ವೇದಿಕೆ ಮಾಡಿಕೊಡಬೇಕಿದೆ. ಈಗಾಗಲೇ ಶ್ರೀನಿವಾಸಪುರದಲ್ಲಿ ಕೆಲವರು ಉಪ್ಪಿನ ಕಾಯಿ, ಆಮ್ ಚೂರ್ ಮತ್ತು ಆಮ್ ಪಾಪಡ್ ಮಾಡಿ ಸಣ್ಣ ಮಟ್ಟದ ವಹಿವಾಟು ನಡೆಸುತ್ತಿದ್ದಾರೆ. ಈ ಚಟುವಟಿಕೆ ಸ್ಥಳೀಯ ಜನರಿಗೆ ಆರ್ಥಿಕವಾಗಿ ಬಹಳ ನೆರವಾಗುತ್ತಿದೆ.

‘ಜಿಲ್ಲೆಯ ಹೆಚ್ಚಿನ ರೈತರು ಕೇವಲ ಮಾವು ಬೆಳೆಯನ್ನೇ ಅವಲಂಬಿಸಿ ಬದುಕು ಕಟ್ಟಿಕೊಂಡಿದ್ದಾರೆ. ಬೆಳೆ ನಷ್ಟದ ಸಂದರ್ಭದಲ್ಲಿ ರೈತರು ಆರ್ಥಿಕವಾಗಿ ಕುಸಿಯುವುದನ್ನು ತಪ್ಪಿಸಲು ಮಾವಿನ ತೋಟಗಳಲ್ಲಿ ಮಿಶ್ರಬೆಳೆಯಾಗಿ ರಾಗಿ, ಶೇಂಗಾ ಸೇರಿದಂತೆ ಇತರೆ ಬೆಳೆಗಳನ್ನು ಬೆಳೆಯಲು ಕೃಷಿ, ತೋಟಗಾರಿಕಾ ಇಲಾಖೆಗಳು ಜಂಟಿಯಾಗಿ ರೈತರಿಗೆ ಪ್ರೋತ್ಸಾಹ ನೀಡಬೇಕು. ಅರಣ್ಯ ಇಲಾಖೆಯಿಂದ ಹೆಬ್ಬೇವು, ಶ್ರೀಗಂಧ, ಹಲಸು, ನೇರಳೆ ಸಸಿಗಳು ಲಭ್ಯವಿದ್ದು, ರೈತರು ಇವುಗಳ ಸದುಪಯೋಗ ಪಡೆದುಕೊಳ್ಳಬೇಕು’ ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ಸಲಹೆ ನೀಡಿದ್ದಾರೆ.

ಪರಿಕಲ್ಪನೆ: **ಯತೀಶ್ ಕುಮಾರ್ ಜಿ.ಡಿ**

ಪೂರಕ ಮಾಹಿತಿ: **ಸಂತೋಷ ಈ.ಚಿನಗುಡಿ, ಎಂ.ಎನ್.ಯೋಗೇಶ್, ಓದೇಶ ಸಕಲೇಶಪುರ, ಡಿ.ಎಂ.ಕುರ್ಕೆ ಪ್ರಶಾಂತ್, ಪ್ರಮೋದ ಕುಲಕರ್ಣಿ, ಸತೀಶ ಬೆಳ್ಳಕ್ಕಿ**

ಸರ್ಕಾರಿ ಸಂಸ್ಥೆಗಳು ನಿಸ್ತೇಜ!

ಶ್ರೀನಿವಾಸಪುರ ತಾಲ್ಲೂಕಿನ ಹೊಗಳಗೆರೆಯಲ್ಲಿರುವ ಮಾವು ಅಭಿವೃದ್ಧಿ ಕೇಂದ್ರ, ಉತ್ಕೃಷ್ಟ ಕೇಂದ್ರ, ಚಿಂತಾಮಣಿ ತಾಲ್ಲೂಕಿನ ಬೂರಗಮಾಕಲಹಳ್ಳಿಯ ಮಾವು ಅಭಿವೃದ್ಧಿ ಕೇಂದ್ರ, ಕೋಲಾರದಲ್ಲಿ ತೋಟಗಾರಿಕೆ ಮಹಾವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ತೋಟಗಾರಿಕೆ ಇಲಾಖೆ ಇದ್ದೂ ಪ್ರಯೋಜವಿಲ್ಲದಂತಾಗಿವೆ. ‘ಮಗು ಅತ್ತಾಗ ತೊಟ್ಟಿಲು ತೂಗುವಂತೆ’ ನಷ್ಟಕ್ಕೆ ಒಳಗಾದ ರೈತರು ಪ್ರತಿಭಟನೆ ಮಾಡಿದಾಗ ಮಾತ್ರ ಸಮಸ್ಯೆ ಆಲಿಸಲು ಮುಂದಾಗುತ್ತಾರೆ. ಹಲವಾರು ವರ್ಷಗಳಿಂದ ಸಮಸ್ಯೆ ಇದ್ದರೂ ಕಾರಣ ಪತ್ತೆ ಹಚ್ಚುವ, ಶಾಶ್ವತ ಪರಿಹಾರ ಕಂಡುಕೊಳ್ಳುವ, ವಹಿವಾಟಿಗೆ ಸಹಾಯ ಮಾಡುವ, ರೈತರಿಗೆ ತರಬೇತಿ, ಜಾಗೃತಿ ಮೂಡಿಸುವ ಗೋಜಿಗೆ ಹೋಗುತ್ತಿಲ್ಲ. ಮಾವಿನ ಗುಣಮಟ್ಟ ಸುಧಾರಣೆಗೆ ಯಾವುದೇ ಕ್ರಮ ವಹಿಸಿದಂತಿಲ್ಲ. ವಿಚಾರ ಸಂಕಿರಣ ನಡೆಸಿ ಕೈತೊಳೆದುಕೊಳ್ಳುತ್ತಿವೆ. ಈಗ ರಾಜ್ಯದಲ್ಲಿ ತೋಟಗಾರಿಕೆ ಸಚಿವರೂ ಇಲ್ಲ. ರೈತರಿಗೆ ವಿಮೆಯೂ ಸರಿಯಾಗಿ ಸಿಗುತ್ತಿಲ್ಲ.

ಆರಂಭವಾಗದ ಪಾರ್ಕ್: ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಸಿರವಾರ ಗ್ರಾಮದ ಬಳಿ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಇನ್ನೂ ಆರಂಭವಾಗಿಲ್ಲ. ಈ ಪಾರ್ಕ್ ಆರಂಭವಾದರೆ ತೋಟಗಾರಿಕಾ ಬೆಳೆಗಳ ಸಂಗ್ರಹ, ಮಾರುಕಟ್ಟೆ, ಮೌಲ್ಯವರ್ಧನೆ ಸುಲಭವಾಗುತ್ತದೆ ಎನ್ನುತ್ತಾರೆ ಕೊಪ್ಪಳ ತಾಲ್ಲೂಕಿನ ಕಾಮನೂರು ಗ್ರಾಮದ ಮಾವು ಬೆಳೆಗಾರ ನಾಗರಾಜ ನಾಯಕ.

ಮಾವಿನ ಗುಣಮಟ್ಟ ಕುಸಿತ

ಕೋಲಾರದಲ್ಲಿ ರಫ್ತು ಮಾಡುವ ಗುಣಮಟ್ಟದ ಮಾವು ಕಡಿಮೆ ಆಗಿದೆ. ಗುಣಮಟ್ಟ ಇಲ್ಲವೆಂದು ಕೆಲ ಕಂಪನಿಗಳು, ಕಾರ್ಖಾನೆಗಳು ಖರೀದಿಸುತ್ತಿಲ್ಲ. ಬಹಳ ಹಿಂದಿನಿಂದ ಬೆಳೆ ವಿಧಾನ ಸಂಬಂಧ ಆವಿಷ್ಕಾರವಾಗಲಿ, ಹೊಸ ಸಂಶೋಧನೆಯಾಗಲಿ ನಡೆದಿಲ್ಲ. ಕಳೆದ ವರ್ಷ ಕೋಲಾರ ಜಿಲ್ಲೆಯಲ್ಲಿ ಧಾರಣೆ ಕುಸಿತ ಕಂಡ ಕಾರಣ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದೆವು. ಹೀಗಾಗಿ, ತೋತಾಪುರಿ ಮಾವಿಗೆ ಕೆ.ಜಿ.ಗೆ ₹ 4 ಬೆಂಬಲ ಬೆಲೆ ನೀಡಲಾಗಿತ್ತು. ಒಟ್ಟು ₹ 42 ಕೋಟಿಯನ್ನು ರೈತರಿಗೆ ವಿತರಿಸಲಾಗಿತ್ತು. ಈ ಬಾರಿಯೂ ಬೆಲೆ ಕುಸಿದಿದ್ದು, ತೋತಾಪುರಿ ಮಾವಿಗೆ ಕನಿಷ್ಠ ಖರೀದಿ ದರ ನಿಗದಿಗೆ ‘ಮಾರುಕಟ್ಟೆ ಬೆಲೆ ವ್ಯತ್ಯಾಸ ಪಾವತಿ’ (ಪಿಡಿಪಿಎಸ್) ಯೋಜನೆ ಜಾರಿಗೊಳಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಕಾರ್ಯದರ್ಶಿ ಜೊತೆಗೂ ಮಾತನಾಡಿ ಸಮಸ್ಯೆಯನ್ನು ಮನದಟ್ಟು ಮಾಡಲಾಗಿದೆ.

ಎಂ.ಆರ್.ರವಿ, ಕೋಲಾರ ಜಿಲ್ಲಾಧಿಕಾರಿ

ಬೆಳೆಗಾರರ ಬೇಡಿಕೆಗಳೇನು?

- 2025ರಲ್ಲಿ ಧಾರಣೆ ಕುಸಿದಾಗ ತೋತಾಪುರಿ ಕೆ.ಜಿ.ಗೆ ₹4 ಬೆಂಬಲ ಬೆಲೆ ನೀಡಲಾಗಿತ್ತು. ಈ ಬಾರಿ ₹10 ಬೆಂಬಲ ಬೆಲೆ ಕೊಡಬೇಕು
- ರಾಜ್ಯ ಮಾವು ಮಂಡಳಿಗೆ ಪ್ರತಿವರ್ಷ ಕನಿಷ್ಠ ₹ 500 ಕೋಟಿ ಅನುದಾನ ನೀಡಬೇಕು. ನಂದಿನಿ ಕೇಂದ್ರದಲ್ಲಿ ಮಾವು ಮಾರಾಟಕ್ಕೆ ಅವಕಾಶ ನೀಡಬೇಕು
- ಮಾವು ಸಂಸ್ಕರಣಾ ಘಟಕಗಳ ನಷ್ಟ ತಡೆಯಲು ವಿದ್ಯುತ್ ಶುಲ್ಕ ಮನ್ನಾ ಮತ್ತು ಜಿಎಸ್‌ಟಿ ದರ ಕಡಿತಗೊಳಿಸಬೇಕು
- ಕೊಲ್ಲಿ ರಾಷ್ಟ್ರ ಮತ್ತು ಯೂರೋಪ್‌ಗೆ ರಫ್ತು ಮುಂದುವರಿಸಲು ಸುರಕ್ಷಿತ ಮತ್ತು ಸಬ್ಸಿಡಿ ದರದಲ್ಲಿ ಅವಕಾಶ ಮಾಡಿಕೊಡಬೇಕು
- ಮಾರುಕಟ್ಟೆಯಲ್ಲಿ ಜಿಲ್ಲೆಯ ಮಾವು ತಿರಸ್ಕೃತಗೊಳ್ಳುತ್ತಿರುವ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಬೇಕು

‘ಬೆಳೆಗಾರರ ಕೈಬಿಡಲ್ಲ’

ಮಾವು ಬೆಳೆಗಾರರ ಸಂಕಷ್ಟದ ಅರಿವು ನಮಗಿದ್ದು, ಬೆಳೆ ಹಾಗೂ ಧಾರಣೆ ಕುಸಿತ ಸಂಬಂಧ ತೋಟಗಾರಿಕೆ ಇಲಾಖೆ ಕಾರ್ಯದರ್ಶಿ ಜೊತೆ ಚರ್ಚಿಸಿದ್ದೇವೆ. ಕೋಲಾರದಿಂದಲೂ ರೈತರು ಬಂದು ಮನವಿ ಮಾಡಿದ್ದಾರೆ. ಕೇಂದ್ರದಿಂದ ಬೆಂಬಲ ಬೆಲೆ ಹಾಗೂ ಎನ್‌ಡಿಆರ್‌ಎಫ್‌ನಿಂದ ಬೆಳೆ ಹಾನಿ ಪರಿಹಾರ ಕೊಡಿಸಲು ಪ್ರಯತ್ನಿಸಲಾಗುತ್ತಿದೆ. ಅಧಿಕಾರಿಗಳು ಒಂದು ವಾರದಲ್ಲಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಿದ್ದಾರೆ. ಮಾವು ಬೆಳೆಗಾರರನ್ನು ಕೈಬಿಡುವ ಪ್ರಶ್ನೆಯೇ ಇಲ್ಲ.

ಮುದ್ದು ಗಂಗಾಧರ್, ಅಧ್ಯಕ್ಷ, ರಾಜ್ಯ ಮಾವು ಹಾಗೂ ಮಾರುಕಟ್ಟೆ ಅಭಿವೃದ್ಧಿ ಮಂಡಳಿ

ಶ್ರೀನಿವಾಸಪುರ ಎಪಿಎಂಸಿ ಮಾರುಕಟ್ಟೆಯಲ್ಲಿ ಮಾವಿನ ರಾಶಿ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 14-6-2001

- **ಕಾವೇರಿ: ರಾಜ್ಯದ ಹಿತ ಕಾಪಾಡಲು ಕಟಿ ಬದ್ಧ**

ಮೈಸೂರು, ಜೂನ್ 13– ಕಾವೇರಿ ನದಿ ಜಲಾನಯನ ಪ್ರದೇಶದ ರೈತರ ಹಿತ ಕಾಪಾಡಲು ಹಾಗೂ ಅವರ ಮೂಲಭೂತ ಹಕ್ಕುಗಳನ್ನು ರಕ್ಷಣೆ ಮಾಡಲು ತಮ್ಮ ಸರ್ಕಾರ ಕಟಿ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಇಂದು ಘೋಷಿಸಿದರು.

ನಂಜನಗೂಡಿನಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ‘ಈ ವಿಚಾರದಲ್ಲಿ ಯಾವುದೇ ರಾಜ್ಯ ಪೂರ್ತಿ ಏಕಸ್ವಾಮ್ಯ ಸಾಧಿಸಲು ಅವಕಾಶ ಕೊಡುವುದಿಲ್ಲ. ನದಿ ನೀರಿನ ಮೇಲೆ ನಮ್ಮದೇ ಆದ ಹಕ್ಕುಗಳಿವೆ’ ಎಂದರು.

75 ವರ್ಷಗಳ ಹಿಂದೆ

ಗುರುವಾರ, 14-6-1951

- **ಹತ್ತಿಯ ಮೂಲ ಪರಮಾವಧಿ ಬೆಲೆ ಏರಿಕೆ**

ನವದೆಹಲಿ, ಜೂನ್ 13– 1951–52 ಬೆಳೆಯ ಹತ್ತಿಯ ಮೂಲ ಪರಮಾವಧಿ ಬೆಲೆಯನ್ನು ಖಂಡಿಗೆ 50 ರೂಪಾಯಿಗಳಂತೆ ಹೆಚ್ಚಿಸಿರುವುದಾಗಿ, ಭಾರತ ಸರ್ಕಾರವು ಈ ದಿನ ಪ್ರಕಟಿಸಿರುವ ತನ್ನ ಹೊಸ ಅರೆಳೆ ನೀತಿಯಲ್ಲಿ ತಿಳಿಸಿದೆ.

ಈ ಬೆಲೆ ಏರಿಕೆಯಿಂದ 1949–50ರಲ್ಲಿ ಖಂಡಿಗೆ 620 ರೂಪಾಯಿಗಳಿದ್ದ ಝೂರಿಲ್ಲಾ ಹತ್ತಿಯ ಬೆಲೆ 1950–51ರಲ್ಲಿ 820 ರೂಪಾಯಿಗಳಾಗುವುವು. ಹೋದ ವರ್ಷ ಝೂರಿಲ್ಲ ಹತ್ತಿಯ ಮೂಲ ಪರಮಾವಧಿ ಬೆಲೆಯನ್ನು ಖಂಡಿಗೆ 150 ರೂಪಾಯಿಗಳಂತೆ ಹೆಚ್ಚಿಸಲಾಗಿತ್ತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

14 ಜೂನ್ 2026 ಭಾನುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ಚತುರ್ದಶಿ ಗಂ. 12-20, ನಕ್ಷತ್ರ: ರೋಹಿಣಿ ಗಂ. 22-14, ಯೋಗ: ಧೃತಿ ಗಂ. 13-15, ಕರಣ: ಶಕುನಿ ಗಂ12-20, ವೃಷಭ ಮಾಸದ 31 ನೇ ದಿನ. ಮಳೆ ನಕ್ಷತ್ರ: ಮೃಗಶಿರ 2 ನೇ ಪಾದ. ರಾಹುಕಾಲ: ಸಾಯಂಕಾಲ 04-30 - 06-00, ಸೂರ್ಯೋದಯ: 06-07, ಸೂರ್ಯಾಸ್ತ: 06-54, ಮುಸ್ಲಿಂ ದಿನಾಂಕ: 28 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ: 4, 6.

ಮೇಷ: ಸಹೋದರರಲ್ಲಿನ ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದಾರೆ. ತಂದೆಯವರ ಮಾತಿನಂತೆಯೇ ನಡೆಯುವುದು ಉತ್ತಮ. ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಬದಲಾವಣೆಯಾಗಬಹುದು.

ವೃಷಭ: ಹೋಟೆಲ್ ಉದ್ಯಮದವರಿಗೆ ಅಥವಾ ಬೇಕರಿಯವರಿಗೆ ಸ್ಪರ್ಧಾಳುಗಳು ಹುಟ್ಟಿಕೊಂಡು ವ್ಯಾಪಾರಕ್ಕೆ ಹಿನ್ನಡೆಯಾಗಬಹುದು. ನೀವು ನಿಮ್ಮ ಕೆಲಸದಲ್ಲಿ ಗುಣಮಟ್ಟ ಕಾಯ್ದುಕೊಂಡಲ್ಲಿ ಅಭಿವೃದ್ಧಿ ಖಚಿತ.

ಮಿಥುನ: ಮೇಲುಸ್ತುವಾರಿ ನೋಡುವ ಹುದ್ದೆಯವರಿಗೆ ಕೆಲಸಗಾರರ ಹೊಂದಾಣಿಕೆಯು ತಲೆ ನೋವು ತರಲಿದೆ. ಕೃಷಿ ಕ್ಷೇತ್ರದಲ್ಲಿನ ಚೇತರಿಕೆಯು ರೈತರಿಗೆ ನೆಮ್ಮದಿ ತರುವುದು. ತರಕಾರಿ ಮಾರಾಟಗಾರರಿಗೆ ಶುಭ ದಿನ.

ಕರ್ಕಾಟಕ: ಬಹು ನಿರೀಕ್ಷಿತವಾದ ಫಲಿತಾಂಶ, ಯಶಸ್ಸು ಹಾಗೂ ಹೆಸರು ಈ ದಿನ ಒಲಿದು ಬರಲಿದೆ. ಕೂದಲು ಉದುರುವಿಕೆ ಇಲ್ಲವೇ ಚರ್ಮದಲ್ಲಿನ ಬದಲಾವಣೆಯು ಚಿಂತೆಯನ್ನು ಉಂಟುಮಾಡುವುದು.

ಸಿಂಹ: ಮನೆಯ ವಿಸ್ತರಣೆ ವಿಷಯವಾಗಿ ಆಲೋಚನೆಗಳು ಗರಿಗೆದರಲಿವೆ. ಎಲ್ಲವೂ ನಿಮ್ಮಿಚ್ಛೆಯಂತೆ ನಡೆಯಲಿದೆ. ಸರಿಯಾದ ಮಾರ್ಗವನ್ನು ರೂಪಿಸಿಕೊಳ್ಳಿರಿ. ಆಭರಣ ವ್ಯಾಪಾರಿಗಳಿಗೆ ಧನಲಾಭ ಪ್ರಾಪ್ತಿ.

ಕನ್ಯಾ: ಸ್ವ ಉದ್ಯೋಗಿಗಳು ಕೈತಪ್ಪಿದ ಅವಕಾಶಗಳನ್ನು ಪರಿಶ್ರಮದಿಂದ ಮರಳಿ ಪಡೆಯುವ ಪ್ರಯತ್ನ ಮಾಡಿ. ಕಾಫಿ ಮತ್ತು ಕಾಳುಮೆಣಸಿನ ರಫ್ತು ವಹಿವಾಟು ಹೆಚ್ಚಲಿದೆ. ವೈದ್ಯಕೀಯ ವಿದ್ಯಾಭ್ಯಾಸ ಪ್ರಗತಿ ಪಥದಲ್ಲಿ ನಡೆಯುವುದು.

ತುಲಾ: ಎಲ್ಲಾ ವಿಷಯಗಳಲ್ಲೂ ಹೆಚ್ಚು ಸಮಾಧಾನದಿಂದಿರುವುದು ಉತ್ತಮ. ಲೇವಾದೇವಿ ವ್ಯವಹಾರದಲ್ಲಿ ಅಡ್ಡಿ ಎದುರಾದರೆ, ದುರ್ಗಾದೇವಿಯ ಆರಾಧನೆ ವ್ಯವಹಾರವನ್ನು ಸಹಜವಾಗಿ ಮುಂದುವರಿಯಲು ಅನುಕೂಲ ಮಾಡುತ್ತದೆ.

ವೃಶ್ಚಿಕ: ಗುರು ವಾಕ್ಯವನ್ನು ಪರಿಪಾಲನೆ ಮಾಡುವುದನ್ನು ಮರೆಯದಿರಿ. ಯೋಜನೆಗಳಲ್ಲಿ ಮುಂದಾಳತ್ವ ವಹಿಸಿ ಮತ್ತು ನಿಮ್ಮ ತಂಡ ಎದುರಿಸುತ್ತಿರುವ ಪ್ರಮುಖ ತೊಂದರೆಯನ್ನು ನಿವಾರಣೆ ಮಾಡುವ ಸಾಮರ್ಥ್ಯ ನಿಮಗೆ ಸಿಗಲಿದೆ.

ಧನು: ಆಹಾರ ಪದ್ಧತಿಯನ್ನು ನಿಯಂತ್ರಿಸಿಕೊಂಡು ರಕ್ತದೊತ್ತಡ ಸ್ಥಿತಿಯನ್ನು ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳುವುದು ಉತ್ತಮ. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಅವಕಾಶವೂ ಸಿಗುವುದು ಮತ್ತು ಆಸಕ್ತಿಯೂ ಹೆಚ್ಚಲಿದೆ.

ಮಕರ: ಬೇಡದ ವಿಷಯದಲ್ಲಿ, ಅಪರಿಚಿತ ವ್ಯಕ್ತಿಗಳಲ್ಲಿ, ನಿಮಗೆ ಸಂಬಂಧವಿಲ್ಲದ ವಿಚಾರದಲ್ಲಿ ವಾದ ಮಾಡುವುದು ಸರಿಯಲ್ಲ. ತಮ್ಮವರಿಂದಲೇ ತೋರಿ ಬರುವ ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿಕೊಳ್ಳುವುದು ಒಳ್ಳೆಯದು.

ಕುಂಭ: ಸುಖ-ದುಃಖ, ಲಾಭ-ನಷ್ಟಗಳೆರಡು ಸಮಾನವಾಗಿದ್ದರೂ ಪ್ರತಿಷ್ಠಿತ ಜನರ ಸಹಕಾರದಿಂದ ಸುಧಾರಣೆ ಕಂಡು ಬರಲಿದೆ. ಮಗಳ ಮದುವೆಯ ವಿಚಾರದಲ್ಲಿ ಈ ದಿನ ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾಗಿರುತ್ತದೆ.

ಮೀನ: ಈ ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲ ಮಾರ್ಪಾಟು ಮಾಡಿಕೊಂಡರೆ ಉತ್ತಮ ಧನಲಾಭವನ್ನು ಕಾಣಬಹುದು. ರಾತ್ರಿಯ ಸಮಯದಲ್ಲಿ ಪ್ರಯಾಣ ಮಾಡುವುದು ಒಳ್ಳೆಯದಲ್ಲ.

ಪದಬಂಧ 6433

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರ್ಯಾದೆಯಿರುವ ಹುಟ್ಟುಗುಣ (4)
3.ಕೊನೆಗೆ ಭಾರವಾಗಿರುವ ತಳಪಾಯ (4)
4.ಕಡ ಕೇಳುತ್ತಿರುವ ಘಾಟಿ! (3)
5.ಹರಿಯುವಂಥ ವಸ್ತು (2)
7.ಈ ಮೋಹ ಕೊನೆಗಿದ್ದರೆ ಗೊಂದಲ ಅಥವಾ ಭ್ರಾಂತಿ! (3)
9.ಸಂಗನ ಬದುಕಿನ ಘಟನೆ! (3)
10.ಕಮ್ಮಾರನ ಒಲೆ (3)
11.ಈ ರೀತಿ ಸಂತೈಸು (3)
14.ರಸನದಲ್ಲಿರುವ ದ್ರವ (2)
16.ಪಕ್ಷದೊಳಗಿದ್ದು ದೃಷ್ಟಿಗೆ ದೂರವಾಗಿರುವುದು (3)
18.ಯಾಗದ ಸಮಾಪ್ತಿ (4)
19.ನಿಸ್ಸಾರವಾದುದು ಇದು (4)

ಮೇಲಿಂದ ಕೆಳಕ್ಕೆ

1.ಗಾಳಿ ಸುಳಿದಾಡಲು ಮಾಡಿರುವ ಕಿಂಡಿ (3)
2.ತೇರ್ಗಡೆಯಾಗದಿರುವಿಕೆ (3)
3.ಅಡಗಿಕೊಳ್ಳಲು ಸೂಕ್ತವೆನಿಸಿದ ಜಾಗ (3)
6.ಬೇರೆ ಬೇರೆ ಬಣ್ಣಗಳ ಬೆರಕೆ (5)
8.ಮೋಸಗಾರ ಇಲ್ಲಿದ್ದಾನೆ (5)
12.ಒಳ್ಳೆಯ ದಾರಿಯಿದು (3)
13.ನಾಶವಿಲ್ಲದ ವರ್ಣ (3)
15.ಸಜ್ಜಿಗೆ ತಿನ್ನುತ್ತಿರುವ ಸಭ್ಯ! (3)



6432 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಖುತ್ತಿಕ್ಕು 4.ಸಂಭವ 6.ಕುಟಿಲೋಪಾಯ 7.ನಭ 9.ನವ 10.ಶಿಷ್ಯ 12.ಸುತ 14.ಮನೆವಾಳ್ತನ 16.ಮೆದುಳು 17.ನೆನಪು

ಮೇಲಿಂದ ಕೆಳಕ್ಕೆ: 1.ಋತುಮಾನ 2.ಕುಮ್ಮಕ್ಕು 3.ಅನುಲೋಮ 4.ಸಂಶಯ 5.ವಜ್ರೋತ್ಸವ 8.ಭವಿಷ್ಯ 9.ನನಸು 10.ಶಿರೋನಾಮೆ 11.ಜವಾಹಿರಿ 13.ತಲೆಗಾಪು 14.ಮರಳು 15.ನಮೂನೆ

ಸುಡೊಕು 6816

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1	5			2			8	
	6	7			9		5	2
	8			4				
2							6	
		4		3				1
5								
		5		9			7	6
7			2		6	8		
9	4			7				5

6815 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿಟಿಕೆ ಸುದ್ದಿ

ನಸುಕಿನವರೆಗೆ ಖಾದರ್ ಪ್ರಗತಿ ಪರಿಶೀಲನಾ ಸಭೆ

ಹಾಸನ: ಆರೋಗ್ಯ ಸಚಿವ ಯು.ಟಿ. ಖಾದರ್ ಅವರು ಶುಕ್ರವಾರ ತಡರಾತ್ರಿ 11ರ ಸುಮಾರಿಗೆ ಜಿಲ್ಲೆಯ ಸಕಲೇಶಪುರ ಕ್ರಾಫರ್ಡ್ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು.

ಯು.ಟಿ. ಖಾದರ್

ಅಲ್ಲಿ ತಡರಾತ್ರಿ 11.30ರಿಂದ ಶನಿವಾರ ನಸುಕಿನ 2.30ರವರೆಗೆ ಅಧಿಕಾರಿಗಳು, ಜನಪ್ರತಿನಿಧಿಗಳ ಜೊತೆಗೆ ಸಭೆ ನಡೆಸಿ, ಇಲಾಖೆಯ ಯೋಜನೆಗಳ ಪ್ರಗತಿ ಪರಿಶೀಲಿಸಿದರು. ಸಾರ್ವಜನಿಕರಿಗೆ ಸಮರ್ಪಕ ಆರೋಗ್ಯ ಸೇವೆ ಒದಗಿಸುವಂತೆ ಸೂಚಿಸಿದರು.

'ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಹಾಗೂ ತುರ್ತು ಚಿಕಿತ್ಸೆ ನೀಡುವ ವಿಷಯದಲ್ಲಿ ಯಾರಿಗೆ, ಯಾವುದೇ ಸಮಸ್ಯೆ ಉಂಟಾದರೂ ತಕ್ಷಣ ದೂರು ನೀಡಲು ಶೀಘ್ರದಲ್ಲಿಯೇ ಕಾಲ್ ಸೆಂಟರ್ ಪ್ರಾರಂಭಿಸಲಾಗುವುದು. ಆ ಕಾಲ್ ಸೆಂಟರ್ ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುವ ವ್ಯವಸ್ಥೆ ಮಾಡಲಾಗುವುದು. ಕರೆ ಮಾಡಿದವರಿಗೆ ತಕ್ಷಣವೇ ಸ್ಪಂದಿಸಲಾಗುವುದು' ಎಂದು ತಿಳಿಸಿದರು.

ರಾಜ್ಯ ಪ್ರಾಸಿಕ್ಯೂಟರ್ ಆಗಿ ಜಗದೀಶ್ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರದ ಪ್ರಾಸಿಕ್ಯೂಟರ್–1 ಆಗಿ ಬಿ.ಎನ್.ಜಗದೀಶ್ ಅವರನ್ನು ನೇಮಕ ಮಾಡಿ ರಾಜ್ಯ ಕಾನೂನು ಇಲಾಖೆ ಆದೇಶ ಹೊರಡಿಸಿದೆ.

ಬಿ.ಎನ್. ಜಗದೀಶ್

ಈವರೆವಿಗೂ ರಾಜ್ಯ ಪ್ರಾಸಿಕ್ಯೂಟರ್–1 ಆಗಿದ್ದ ಬಿ.ಎ. ಬೆಳ್ಳಿಯಪ್ಪ ಅವರ ಹುದ್ದೆಗೆ ಜಗದೀಶ್ ಅವರಿಗೆ ಪದೋನ್ನತಿ ನೀಡಲಾಗಿದೆ.

ವಿಜಯಕುಮಾರ್ ಮಜಗೆ ಅವರನ್ನು ರಾಜ್ಯ ಪ್ರಾಸಿಕ್ಯೂಟರ್–2 ಹುದ್ದೆಯಲ್ಲಿ ಮುಂದುವರಿಸಲಾಗಿದೆ. ಮೊಹಮ್ಮದ್ ಆಯುಬ್ ಅಲಿ ಖಾನ್ ಅವರನ್ನು ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಆಗಿ ನೇಮಿಸಲಾಗಿದೆ.

ಶಿವಾನಂದ ನೀಲಣ್ಣವರಗೆ ಜಾಮೀನು

ಬೆಂಗಳೂರು: ಬೆಳಗಾವಿಯ 'ಶಿವಂ ಅಸೋಸಿಯೇಟ್ಸ್' ಮಾಲೀಕ ಶಿವಾನಂದ ನೀಲಣ್ಣವರ ಅವರಿಗೆ ಇಲ್ಲಿನ 92ನೇ ಎಸಿಎಂಎಂ ನ್ಯಾಯಾಲಯವು ಶುಕ್ರವಾರ ಷರತ್ತು ಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಹೆಚ್ಚಿನ ಬಡ್ಡಿ ನೀಡುವುದಾಗಿ ಆಮಿಷವೊಡ್ಡಿ ಹಣ ಪಡೆದುಕೊಂಡಿರುವ ಆರೋಪ ಶಿವಂ ಅಸೋಸಿಯೇಟ್ಸ್ ಮೇಲಿದೆ.

ಆರ್‌ಬಿಐ ನಿಯಮ ಉಲ್ಲಂಘನೆಯಾಗಿದೆಯೆಂದು ಬೆಳಗಾವಿ ಉಪ ವಿಭಾಗಾಧಿಕಾರಿ ನೇತೃತ್ವದಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಮಾಡಲಾಗಿತ್ತು. ಬಳಿಕ, ಸರ್ಕಾರ ಪ್ರಕರಣವನ್ನು ಸಿಐಡಿಗೆ ವಹಿಸಿತ್ತು. ತನಿಖೆ ಕೈಗೊಂಡಿದ್ದ ಸಿಐಡಿ ಅಧಿಕಾರಿಗಳು, ಶಿವಾನಂದ ನೀಲಣ್ಣವರ ಅವರನ್ನು ಬಂಧಿಸಿದ್ದರು.

ವೈಯಕ್ತಿಕ ₹3 ಲಕ್ಷ ಮೌಲ್ಯದ ಬಾಂಡ್ ಮತ್ತು ವ್ಯಕ್ತಿ ಶ್ಯೂರಿಟಿ ಕೊಡಬೇಕು. ವಿಚಾರಣೆ ವೇಳೆ ಊರು ಬಿಟ್ಟು ಹೋಗಬಾರದು. ಸಾಕ್ಷ್ಯ ನಾಶ ಅಥವಾ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು. ಯಾವುದೇ ಹಣಕಾಸಿನ ವ್ಯವಹಾರ ನಡೆಸಬಾರದು. ಕೋರ್ಟ್ ಅನುಮತಿ ಇಲ್ಲದೆ ವಿದೇಶಕ್ಕೆ ತೆರಳಬಾರದು. ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದಲ್ಲಿ ಜಾಮೀನು ರದ್ದಾಗಲಿದೆ ಎಂದು ನ್ಯಾಯಾಲಯ ಎಚ್ಚರಿಕೆ ನೀಡಿ ಜಾಮೀನು ಮಂಜೂರು ಮಾಡಿದೆ.

7 ಮಂದಿ ವಿರುದ್ಧ ಎಫ್‌ಐಆರ್

ವಿವಿಧ ರಾಜ್ಯಗಳಲ್ಲಿ ನಕ್ಸಲ್ ಚಟುವಟಿಕೆ ನಡೆಸಲು ವಿದೇಶದಿಂದ ಹಣ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ವಿವಿಧ ರಾಜ್ಯಗಳಲ್ಲಿ ನಕ್ಸಲ್ ಚಟುವಟಿಕೆ ನಡೆಸಲು ವಿದೇಶದಿಂದ ಹಣಕಾಸು ನೆರವು ನೀಡಿದ್ದ ಆರೋಪದ ಅಡಿ ಅಮೆರಿಕ ಸಂಸ್ಥೆ, ರಾಜ್ಯದ ನಾಲ್ವರು ಸೇರಿ ಒಟ್ಟು 7 ಜನರ ವಿರುದ್ಧ ಇಲ್ಲಿನ ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜಾರಿ ನಿರ್ದೇಶನಾಲಯದ (ಇ.ಡಿ) ಸಹಾಯಕ ನಿರ್ದೇಶಕ ಸುನಿಲ್ ಕುಮಾರ್ ಅವರು ನೀಡಿದ ದೂರಿನ ಮೇಲೆ ಕೊತ್ತನೂರಿನ ಜೊನಾಥನ್ ಎಸ್. ರಾಜನ್, ಅರವಿಂದ ನಗರದ ಮಿಕಾ ಮಾರ್ಕ್, ಬೈರತಿ ಗ್ರಾಮದ ಅಜಿತ್ ವರ್ಗೀಸ್, ಛತ್ತೀಸಗಢದ ವರ್ಗೀಸ್ ಚಾಕೊ, ಅಸ್ಸಾಂನ ಬಬ್ಲು ಕುರ್ಮಿ, ಮೈಸೂರಿನ ಉದಯಗಿರಿ ನಿವಾಸಿ ಸುಪ್ರೀಮ್ ಜಾಯ್, ಅಮೆರಿಕದ ದಿ ತಿಮೋತಿ ಇನ್ಶಿಯೇಟಿವ್ ಸಂಸ್ಥೆ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಇ.ಡಿ ಸಹಾಯಕ ನಿರ್ದೇಶಕರಿಂದ ದೂರು
- ₹95 ಕೋಟಿಗೂ ಅಧಿಕ ವಿದೇಶಿ ಹಣ ಅಕ್ರಮವಾಗಿ ಬಳಕೆ ಪತ್ತೆ
- ಧರ್ಮೋಪದೇಶ, ಎಡಪಂಥೀಯ ಉಗ್ರವಾದ ತರಬೇತಿಗೆ ಹಣ ಬಳಕೆ ಆರೋಪ

ಕಳೆದ ಏಪ್ರಿಲ್‌ನಲ್ಲಿ ಇ.ಡಿ ಅಧಿಕಾರಿಗಳು ನಡೆಸಿದ ದಾಳಿ ವೇಳೆ ₹95 ಕೋಟಿಗೂ ಅಧಿಕ ವಿದೇಶಿ ಹಣವನ್ನು ಅಕ್ರಮವಾಗಿ ಬಳಸಿರುವುದು ಪತ್ತೆ ಆಗಿದೆ. ಸಂತೋಷ್ ಕುಮಾರ್ ಎಂಬ ಸುಳ್ಳು ಹೆಸರಿನ ಯುಎಸ್‌ಎ ಟ್ರೂಯಿಸ್ಟ್ ಬ್ಯಾಂಕ್‌ನ ಸಾವಿರಕ್ಕೂ ಹೆಚ್ಚು ವಿದೇಶಿ ಡೆಬಿಟ್ ಕಾರ್ಡ್‌ಗಳನ್ನು ಭಾರತದಲ್ಲಿ ಅಕ್ರಮವಾಗಿ ವಿತರಿಸಿ, ಹಣ ಡ್ರಾ ಮಾಡಿರುವುದು ತನಿಖೆ ವೇಳೆ ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

2024ರ ಜನವರಿ 1ರಿಂದ 2026ರ ಮಾರ್ಚ್ ನಡುವೆ ಕರ್ನಾಟಕ, ಛತ್ತೀಸಗಢ, ಅಸ್ಸಾಂ ಸೇರಿದಂತೆ ಹಲವು ರಾಜ್ಯಗಳಲ್ಲಿ ವಿದೇಶಿ ಡೆಬಿಟ್ ಕಾರ್ಡ್‌ಗಳನ್ನು ಬಳಸಿಕೊಂಡು ₹44 ಕೋಟಿ ಡ್ರಾ ಮಾಡಿರುವುದೂ ದೃಢಪಟ್ಟಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಏಪ್ರಿಲ್ 18ರಂದು ಮಿಕಾ ಮಾರ್ಕ್ ಅವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಅವರ ಬಳಿ ಟ್ರೂಯಿಸ್ಟ್ ಬ್ಯಾಂಕ್‌ನ 24 ವಿದೇಶಿ ಡೆಬಿಟ್ ಕಾರ್ಡ್‌ಗಳು ಇರುವುದು ಪತ್ತೆಯಾಗಿತ್ತು. ಮಿಕಾ ಮಾರ್ಕ್ ಅವರು ಹಲವು ಬಾರಿ ವಿದೇಶಕ್ಕೆ ಹೋಗಿ ಡೆಬಿಟ್ ಕಾರ್ಡ್‌ಗಳನ್ನು ತಂದಿರುವುದು ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

ನಕ್ಸಲ್ ಪೀಡಿತ ಪ್ರದೇಶಗಳು ಸೇರಿದಂತೆ ಛತ್ತೀಸಗಢದಲ್ಲಿ ಈ ಕಾರ್ಡ್‌ಗಳ ಮೂಲಕ ಶಂಕಾಸ್ಪದ ನಗದು ಚಟುವಟಿಕೆಗಳು ನಡೆದಿರುವುದು ದೃಢಪಟ್ಟಿದೆ. ಆರೋಪಿ ಅಜಿತ್ ವರ್ಗೀಸ್ ವಿಚಾರಣೆ ನಡೆಸಲಾಗಿದ್ದು, ಅವರೂ ಕಂಪನಿಯೊಂದರ ಮೂಲಕ ವಹಿವಾಟು ನಡೆಸಿರುವುದಕ್ಕೆ ಪುರಾವೆ ಸಿಕ್ಕಿದೆ. ನಗರದ ಕೊತ್ತನೂರು ವ್ಯಾಪ್ತಿಯಲ್ಲಿ ಹಣ ವರ್ಗಾವಣೆ ಮಾಡಲಾಗಿದೆ. ಈ ಅಕ್ರಮ ಹಣವನ್ನು ಧರ್ಮೋಪದೇಶ ಹಾಗೂ ಎಡಪಂಥೀಯ ಉಗ್ರವಾದದ ತರಬೇತಿಗೆ ಬಳಸಲಾಗುತ್ತಿತ್ತು ಎಂಬ ಆರೋಪ ಇದೆ ಎಂದು ಮೂಲಗಳು ತಿಳಿಸಿವೆ.

ಎಸ್‌ಸಿ, ಎಸ್‌ಟಿ: ಹೆಚ್ಚಿಸಿದ ಮೀಸಲಾತಿ ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಗೆ ಶೇ 17 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ 7ರಷ್ಟು ಹೆಚ್ಚಿಸಿದ ಮೀಸಲಾತಿಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಮತ್ತು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನೇತೃತ್ವದಲ್ಲಿ ಶಾಸಕರು ಮತ್ತು ಸಮುದಾಯದ ಪ್ರಮುಖರ ನಿಯೋಗವು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಶನಿವಾರ ಮನವಿ ಸಲ್ಲಿಸಿದೆ.

ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಿಸಲು ಸರ್ಕಾರ 'ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಕಾಯ್ದೆ–2022' ರೂಪಿಸಿದೆ. ಆದರೆ, ಹೈಕೋರ್ಟ್‌ನಲ್ಲಿ ಪ್ರಕರಣಗಳು ಬಾಕಿ ಇರುವ ಕಾರಣಕ್ಕೆ ಹೆಚ್ಚಿಸಲಾದ ಮೀಸಲಾತಿ ಅನುಷ್ಠಾನಕ್ಕೆ ತಾತ್ಕಾಲಿಕ ಅಡಚಣೆ ಉಂಟಾಗಿದೆ. ಅದನ್ನು ನಿವಾರಿಸಲು ಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡಿಸಬೇಕಿದೆ. ಆ ಮೂಲಕ ಮಧ್ಯಂತರ ಆದೇಶ ತೆರವುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದೂ ಆಯೋಗ ಆಗ್ರಹಿಸಿದೆ.



ಡಿ.ಕೆ. ಶಿವಕುಮಾರ್ ಅವರಿಗೆ ಸತೀಶ ಜಾರಕಿಹೊಳಿ ಮತ್ತು ಪ್ರಸನ್ನಾನಂದಪುರಿ ಸ್ವಾಮೀಜಿ ನೇತೃತ್ವದ ನಿಯೋಗವು ಮನವಿ ಸಲ್ಲಿಸಿತು

ಪರಿಶಿಷ್ಟ ಸಮುದಾಯಗಳ ಹಿತಾಸಕ್ತಿಯನ್ನು ನ್ಯಾಯಾಲಯದ ಮುಂದೆ ಪರಿಣಾಮಕಾರಿಯಾಗಿ ಪ್ರತಿಪಾದಿಸಲು ಸರ್ಕಾರದ ಪರವಾಗಿ ಕಾನೂನು ತಜ್ಞ ಪ್ರೊ. ರವಿವರ್ಮ ಕುಮಾರ್ ಅವರನ್ನು ನೇಮಿಸಬೇಕು. ಅಲ್ಲದೆ, ರಾಜ್ಯ ಸರ್ಕಾರದಲ್ಲಿ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಲು ಮತ್ತು ವಿಶ್ವವಿದ್ಯಾಲಯಗಳ ಕುಲಪತಿ ನೇಮಕಾತಿಗಳಲ್ಲಿ ಅರ್ಹ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕು ಎಂದೂ ನಿಯೋಗ ಕೋರಿದೆ.

ಶಾಸಕರಾದ ಬಸನಗೌಡ ದದ್ದಲ್, ಟಿ. ರಘುಮೂರ್ತಿ, ಡಾ.ಎನ್. ಟಿ. ಶ್ರೀನಿವಾಸ್, ಜೆ.ಎನ್. ಗಣೇಶ್, ಬಿ. ದೇವೇಂದ್ರಪ್ಪ ಹಾಗೂ ನಿವೃತ್ತ ಜಿಲ್ಲಾಧಿಕಾರಿ ಬಿ .ಶಿವಪ್ಪ, ಕೆ.ಎಸ್. ಮೃತ್ಯುಂಜಯ, ಮಲ್ಲೇಶಪ್ಪ ಮತ್ತಿತರರು ಇದ್ದರು. ಈ ಸಂದರ್ಭದಲ್ಲಿ ಸಮುದಾಯದ ಪರವಾಗಿ ಮುಖ್ಯಮಂತ್ರಿಯನ್ನು ಗೌರವಿಸಲಾಯಿತು.

ಖಾತೆ ಬಗ್ಗೆ ಸ್ಪಷ್ಟತೆ ಬೇಕು: ಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜವಾಬ್ದಾರಿ ವಹಿಸುವಾಗ ಸ್ಪಷ್ಟತೆ ಇದ್ದರೆ ಕೆಲಸ ಮಾಡಲು ಅನುಕೂಲವಾಗುತ್ತದೆ. ಇಲ್ಲವಾದರೆ ನಿರೀಕ್ಷೆಗೆ ತಕ್ಕಂತೆ ಫಲಿತಾಂಶ ಕೊಡಲು ಆಗುವುದಿಲ್ಲ' ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದರು.

ಕೃಷ್ಣ ಬೈರೇಗೌಡ

ತಮಗೆ ವಹಿಸಿರುವ 'ಬೆಂಗಳೂರು ಅಭಿವೃದ್ಧಿ' ಖಾತೆ ಕುರಿತ ಗೊಂದಲ ಪರಿಹರಿಸುವಂತೆ ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ದೆಹಲಿಗೆ ತೆರಳಿದ್ದ ಅವರು, ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದರು.

'ಎಲ್ಲ ವಿಷಯಗಳ ಬಗ್ಗೆ ಮುಖ್ಯಮಂತ್ರಿಗೆ ಮನವರಿಕೆ ಮಾಡಿದ್ದೇನೆ. ಅವರು ಇತ್ಯರ್ಥ ಮಾಡುವುದಾಗಿ ಹೇಳಿದ್ದಾರೆ. ಇನ್ನೆರಡು ದಿನಗಳಲ್ಲಿ ಅವರು ಸ್ಪಷ್ಟವಾಗಿ ಹೇಳುತ್ತಾರೆ' ಎಂದರು.

ಖಾತೆ ಬಗ್ಗೆ ಅಸಮಾಧಾನಗೊಂಡಿರುವ ಕುರಿತು ಕೇಳಿದ ಪ್ರಶ್ನೆಗೆ, 'ಅಸಮಾಧಾನ ಯಾವುದೂ ಇಲ್ಲ. ಬಹಳ ಕಠಿಣವಾದ ಜವಾಬ್ದಾರಿಯನ್ನು ಮುಖ್ಯಮಂತ್ರಿ ಹಾಗೂ ಪಕ್ಷ ವಹಿಸಿದೆ. ಖಾತೆ ಪಡೆಯುವಾಗ ಉತ್ತರದಾಯಿತ್ವ ಇರಬೇಕು. ಅದು ಫಲಿತಾಂಶ ರೂಪದಲ್ಲಿ ಕಾಣಬೇಕು. ನಮ್ಮಿಂದ ಜನ ಹೊಣೆಗಾರಿಕೆ, ಫಲಿತಾಂಶ ನಿರೀಕ್ಷೆ ಮಾಡುತ್ತಾರೆ' ಎಂದರು.

'ಬೆಂಗಳೂರು ಅಭಿವೃದ್ಧಿ ದೊಡ್ಡ ಸವಾಲು. ಬಹಳ ಜವಾಬ್ದಾರಿ ಕೂಡ ಇದೆ. ಜನರ ನಿರೀಕ್ಷೆ, ಪಕ್ಷದ ನಿರೀಕ್ಷೆ ಬಹಳಷ್ಟು ಇದೆ. ಇಂತಹ ಸಂದರ್ಭದಲ್ಲಿ ಜವಾಬ್ದಾರಿ ತೆಗೆದುಕೊಳ್ಳುವಾಗ ಸ್ಪಷ್ಟತೆ ಇರಬೇಕು' ಎಂದರು.

'ಗೊಂದಲ ಬಗೆಹರಿಯುವವರೆಗೂ ಖಾತೆ ವಹಿಸಿಕೊಳ್ಳುವುದಿಲ್ಲವೇ' ಎಂಬ ಪ್ರಶ್ನೆಗೆ ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಖಾತೆ ವಹಿಸಿಕೊಳ್ಳದಿದ್ದರೂ, ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಭೆಯಲ್ಲಿ ಕೃಷ್ಣಬೈರೇಗೌಡ ಭಾಗವಹಿಸಿದರು.

ಬಗೆಹರಿಯದ ಗೊಂದಲ

ಬಿಡಿಎ ಮತ್ತು ಬಿಎಂಆರ್‌ಡಿಎ ಹೊರತುಪಡಿಸಿ ಬೆಂಗಳೂರು ಅಭಿವೃದ್ಧಿ ಖಾತೆ ವಹಿಸಿರುವುದಕ್ಕೆ ತೀವ್ರ ಅಸಮಾಧಾನಗೊಂಡಿದ್ದ ಕೃಷ್ಣ ಬೈರೇಗೌಡ, ದೂರದೃಷ್ಟಿಯೊಂದಿಗೆ ಬೆಂಗಳೂರು ನಗರವನ್ನು ಅಭಿವೃದ್ಧಿಪಡಿಸಲು ಸಮಗ್ರವಾಗಿ ಖಾತೆ ನೀಡಬೇಕೆಂಬ ತಮ್ಮ ಬೇಡಿಕೆಯನ್ನು ಎಐಸಿಸಿ ವರಿಷ್ಠರ ಗಮನಕ್ಕೆ ತರಲು ದಿಲ್ಲಿಗೆ ತೆರಳಿದ್ದರು. ಆದರೆ, ನಾಲ್ಕು ದಿನ ನಿರಂತರ ಪ್ರಯತ್ನ ನಡೆಸಿದರೂ ಹೈಕಮಾಂಡ್ ಕಡೆಯಿಂದ ಸ್ಪಷ್ಟ ಭರವಸೆ ಸಿಗದ ಕಾರಣ ಬೇಸರದಲ್ಲೇ ಅವರು ಶುಕ್ರವಾರ ರಾತ್ರಿ ವಾಪಸಾಗಿದ್ದಾರೆ. ಮುಖ್ಯಮಂತ್ರಿಯ ಜತೆಗೆ ಚರ್ಚಿಸಿ, ಬಗೆಹರಿಸಿಕೊಳ್ಳುವಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಕೃಷ್ಣ ಬೈರೇಗೌಡ ಅವರಿಗೆ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಮುಖ್ಯಮಂತ್ರಿ ಮನವೊಲಿಕೆ ನಿರೀಕ್ಷೆ: ಮುಖ್ಯಮಂತ್ರಿ ಸದ್ಯದಲ್ಲೇ ಕೃಷ್ಣ ಬೈರೇಗೌಡ ಅವರನ್ನು ಕರೆಯಿಸಿಕೊಂಡು ಖಾತೆ ಸಮಸ್ಯೆಯನ್ನು ಬಗೆಹರಿಸಲು ಬಯಸಿದ್ದಾರೆ. ಈ ಸಂಬಂಧ ಹೈಕಮಾಂಡ್ ನಾಯಕರಿಂದಲೂ ಸೂಚನೆಯಿದೆ ಎಂದು ತಿಳಿದುಬಂದಿದೆ.

ಬಿಟಿಡಿಎ ಸಿಬ್ಬಂದಿ ಮೇಲೆ ಚಪ್ಪಲಿಯಿಂದ ಹಲ್ಲೆ

ಬಾಗಲಕೋಟೆ: ಕೃಷ್ಣಾ ಮೇಲ್ದಂಡೆ ಯೋಜನೆ ಅಡಿ ಆಲಮಟ್ಟಿ ಅಣೆಕಟ್ಟೆ ಹಿನ್ನೀರಿನಿಂದ ಜಮೀನು ಮುಳುಗಡೆಯಾಗಿರುವುದಕ್ಕೆ ಪರಿಹಾರ ನೀಡುವಲ್ಲಿ ವಿಳಂಬವಾಗಿದೆ ಎಂದು ಆರೋಪಿಸಿ ರೈತರೊಬ್ಬರು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ (ಬಿಟಿಡಿಎ) ಸಿಬ್ಬಂದಿಗೆ ಚಪ್ಪಲಿಯಿಂದ ಹೊಡೆದಿದ್ದಾರೆ.

ಮುಳುಗಡೆ ಸಂತ್ರಸ್ತರಿಗೆ ಸೌಲಭ್ಯ ಒದಗಿಸುವಲ್ಲಿ ಬಿಟಿಡಿಎ ನಿರ್ಲಕ್ಷ್ಯ ವಹಿಸುತ್ತಿರುವುದನ್ನು ಖಂಡಿಸಿ ಪರಿಶಿಷ್ಟ ಸಮುದಾಯದ ಮುಖಂಡರು ಶನಿವಾರ ಬಿಟಿಡಿಎ ಕಚೇರಿ ಬಳಿ ಪ್ರತಿಭಟನೆ ನಡೆಸುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ಪ್ರಾಧಿಕಾರದ ಬೆರಳಚ್ಚುಗಾರ ನೀಲಕಂಠ ಅಂಕದ ಅವರ ಮೇಲೆ ಸಂತ್ರಸ್ತ ರೈತ ಬಸಪ್ಪ ದೊಡಮನಿ ಚಪ್ಪಲಿಯಿಂದ ಹಲ್ಲೆ ಮಾಡಿದ್ದಾರೆ. ಈ ವಿಡಿಯೊ ಸಾಮಾಜಿಕ ತಾಣದಲ್ಲಿ ಹರಿದಾಡುತ್ತಿದೆ. ಹಲ್ಲೆಗೊಳಗಾದ ನೀಲಕಂಠ ಅಂಕದ ಈ ಬಗ್ಗೆ ನವನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. 'ಪರಿಹಾರ ವಿಳಂಬವಾಗಿದ್ದರೆ ಕೇಳಲಿ. ಹಲ್ಲೆ ಮಾಡಿದ್ದು ಸರಿಯಲ್ಲ' ಎಂದು ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಹೇಳಿದರು.

'ಬಿಜೆಪಿ ವಿರುದ್ಧ ವ್ಯವಸ್ಥಿತ ಸುಳ್ಳು ಸುದ್ದಿ'

ಪ್ರಜಾವಾಣಿ ವಾರ್ತೆ

ಪಡುಬಿದ್ರಿ (ಉಡುಪಿ): 'ಸಾಮಾಜಿಕ ಮಾಧ್ಯಮ ಖಾತೆಗಳಿಗೆ ದೇಶದ ಹೊರಗಿನಿಂದ ಹಣಕಾಸಿನ ನೆರವು ನೀಡಿ ಬಿಜೆಪಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ವ್ಯವಸ್ಥಿತವಾಗಿ ಸುಳ್ಳು ಸುದ್ದಿಗಳನ್ನು ಹರಡಲಾಗುತ್ತಿದೆ. ಕ್ರಮೇಣ ಆ ಸುಳ್ಳು ಮುಖ್ಯವಾಹಿನಿಯ ಮಾಧ್ಯಮಗಳಲ್ಲಿಯೂ ಕಾಣಿಸಿಕೊಳ್ಳುತ್ತಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಉಚ್ಚಿಲ ಶ್ರೀಮಹಾಲಕ್ಷ್ಮಿ ದೇವಸ್ಥಾನದ ಸಭಾಭವನದಲ್ಲಿ ಶನಿವಾರ ಬಿಜೆಪಿ ಉಡುಪಿ ಜಿಲ್ಲಾ ಪ್ರಶಿಕ್ಷಣ ವರ್ಗ ಉದ್ಘಾಟಿಸಿ ಅವರು ಮಾತನಾಡಿದರು.

'ಸಾಮಾಜಿಕ ಜಾಲತಾಣಗಳಲ್ಲಿ ಬಿಜೆಪಿ ವಿರುದ್ಧ ಹರಡಲಾಗುತ್ತಿರುವ ಸುಳ್ಳು ಸುದ್ದಿಗಳ ಬಗೆಗಿನ ಸತ್ಯವನ್ನು ಜನರಿಗೆ ತಿಳಿಸುವ ಅಗತ್ಯವಿದೆ. ಬಿಜೆಪಿ ಕಾರ್ಯಕರ್ತರು ಆ ಸುದ್ದಿಗಳ ಅಧಿಕೃತತೆಯನ್ನು ಪರಿಶೀಲಿಸಬೇಕು. ಅದು ಸುಳ್ಳು ಸುದ್ದಿ ಎಂದು ಗೊತ್ತಾದರೆ ಸುಮ್ಮನಿರಬಾರದು. ಕೇಂದ್ರ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು' ಎಂದರು.

'ಮಧ್ಯಪ್ರಾಚ್ಯ ಬಿಕ್ಕಟ್ಟಿನ ನಡುವೆಯೂ ಭಾರತದ ಜಿಡಿಪಿ ಬೆಳವಣಿಗೆ ದರ ಶೇ 7.7ರಷ್ಟಿದೆ. ದೇಶದ ಆರ್ಥಿಕತೆ ಸಬಲವಾಗಿದೆ ಎಂದು ಸ್ವತಃ ವಿಶ್ವ ಬ್ಯಾಂಕ್ ಹೇಳಿದೆ. ದೇಶದಲ್ಲಿನ ಹೂಡಿಕೆಯ ಪ್ರಮಾಣವೂ ಶೇ 60ರಷ್ಟು ಹೆಚ್ಚಾಗಿದೆ. ಆದರೆ, ಈ ಬೆಳವಣಿಗೆಯನ್ನು ಒಪ್ಪಿಕೊಳ್ಳಲು ಕಾಂಗ್ರೆಸ್ ಸಿದ್ಧವಿಲ್ಲ' ಎಂದು ತಿಳಿಸಿದರು.

'ಅಧ್ಯಕ್ಷರ ಬದಲಾವಣೆ: ನಿರ್ಧಾರ ವರಿಷ್ಠರದು'

ಮಂಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ವಿಷಯವನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ನಿರ್ಧರಿಸುತ್ತಾರೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ ದಾಸ್ ಅಗರ್‌ವಾಲ್ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ರಾಜ್ಯದ ಸ್ಥಿತಿಗತಿ ಬಗ್ಗೆ ಪಕ್ಷದ ವರಿಷ್ಠರಿಗೆ ಮಾಹಿತಿ ಇದೆ. ಈಗಿನ ಅಧ್ಯಕ್ಷರ ಕಾರ್ಯವೈಖರಿಯ ಮೇಲೆಯೂ ಕಣ್ಣಿಡಲಾಗಿದೆ. ಅದನ್ನು ಗಮನಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದರು. ಪಕ್ಷ ಬಿಟ್ಟು ಹೋದ ಪ್ರಮುಖರನ್ನು ವಾಪಸ್ ಕರೆತರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಪಕ್ಷ ಯಾರನ್ನೂ ಉಚ್ಚಾಟಿಸಲು ಬಯಸುವುದಿಲ್ಲ. ಹಾಗೇ ಮಾಡಿದರೂ, 6 ವರ್ಷ ದೂರ ಇರಿಸಲಾಗುತ್ತದೆ. ಅವರ ನಡವಳಿಕೆ ಮೇಲೆ ಕಣ್ಣಿಡಲಾಗುತ್ತದೆ. ವಾಪಸ್ ಕರೆತರುವ ಸಾಧ್ಯತೆ ಇದ್ದೇ ಇರುತ್ತದೆ' ಎಂದರು.

ಸುಮಲತಾಗೆ ಉತ್ತಮ ಸ್ಥಾನ: ಪಕ್ಷದ ಮುಖಂಡರಾದ ಸುಮಲತಾ ಅವರಿಗೆ ರಾಜ್ಯಸಭಾ ಟಿಕೆಟ್ ಕೈ ತಪ್ಪಿದ ಕುರಿತು ಪ್ರತಿಕ್ರಿಯಿಸಿದ ಅವರು, 'ಅವರು ಪಕ್ಷದ ಮೇಲೆ ನಿಷ್ಠೆ ಇರಿಸಿಕೊಂಡಿದ್ದಾರೆ. ಪಕ್ಷಕ್ಕೂ ಅವರ ಬಗ್ಗೆ ಉತ್ತಮ ಅಭಿಪ್ರಾಯ ಇದೆ. ಭವಿಷ್ಯದಲ್ಲಿ ಅವರಿಗೆ ಉತ್ತಮ ಸ್ಥಾನ ಸಿಗಲಿದೆ' ಎಂದರು.

ಕನೇರಿ ಶ್ರೀ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೀದರ್: ಬಸವಕಲ್ಯಾಣದಲ್ಲಿ ಕನೇರಿ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಜೂನ್ 28ರಂದು ನಡೆಸಲು ನಿರ್ಧರಿಸಿದ್ದ ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶ ವಿವಾದ ಸೃಷ್ಟಿಸಿದ ಬೆನ್ನಲ್ಲೇ ಬಸವಕಲ್ಯಾಣ ತಾಲ್ಲೂಕು ಆಡಳಿತವು ಕಾರ್ಯಕ್ರಮಕ್ಕೆ ಅನುಮತಿ ನೀಡಲು ನಿರಾಕರಿಸಿದೆ. ಆದರೆ, ಆಯೋಜಕರು ಕಾರ್ಯಕ್ರಮ ಮಾಡಿಯೇ ತೀರುವುದಾಗಿ ಪಟ್ಟು ಹಿಡಿದಿದ್ದಾರೆ.

ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ

'ಬಸವಕಲ್ಯಾಣದ ಅಕ್ಕಮಹಾದೇವಿ ಕಾಲೇಜು ಆವರಣದಲ್ಲಿ ಕಾರ್ಯಕ್ರಮ ನಡೆಸಲು ಆಯೋಜಕರು ಅನುಮತಿ ಕೋರಿದ್ದರು. ಕನೇರಿ ಸ್ವಾಮೀಜಿ ಕಾರ್ಯಕ್ರಮಕ್ಕೆ ಆಗಮಿಸಲಿದ್ದು, ಅವರು ಈ ಹಿಂದೆ ಹಲವು ಬಾರಿ ಬಸವಣ್ಣನವರ ಅನುಯಾಯಿಗಳು ಹಾಗೂ ಬಸವತತ್ವ ಪ್ರಚಾರ ಮಾಡುತ್ತಿರುವ ಮಠಾಧೀಶರನ್ನು ಅವಾಚ್ಯ ಪದಗಳಿಂದ ನಿಂದಿಸಿ ಅವಹೇಳನ ಮಾಡಿದ್ದಾರೆ. ಈ ಕಾರಣಕ್ಕಾಗಿ ಕರ್ನಾಟಕ ಲಿಂಗಾಯತ ಮಠಾಧಿಪತಿಗಳ ಒಕ್ಕೂಟ ಹಾಗೂ ವಿವಿಧ ಬಸವಪರ ಸಂಘಟನೆಗಳು ಈ ಕಾರ್ಯಕ್ರಮಕ್ಕೆ ವಿರೋಧ ವ್ಯಕ್ತಪಡಿಸಿವೆ. ಕಾರ್ಯಕ್ರಮಕ್ಕೆ ಅನುಮತಿ ನೀಡಿದರೆ ಕಾನೂನು ಸುವ್ಯವಸ್ಥೆ ಹದಗೆಡುವ ಸಾಧ್ಯತೆ ಇದೆ ಎಂದು ಪೊಲೀಸ್ ಇಲಾಖೆ ವರದಿ ನೀಡಿದೆ. ಈ ವರದಿ ಆಧರಿಸಿ ಕಾರ್ಯಕ್ರಮಕ್ಕೆ ಅನುಮತಿ ನೀಡಲು ನಿರಾಕರಿಸಲಾಗಿದೆ' ಎಂದು ಬಸವಕಲ್ಯಾಣ ತಹಶೀಲ್ದಾರ್ ದತ್ತಾತ್ರೇಯ ಗಾದಾ ಅವರು ಆಯೋಜಕರಿಗೆ ನೀಡಿರುವ ಹಿಂಬರಹದಲ್ಲಿ ತಿಳಿಸಿದ್ದಾರೆ.

ಈ ವಿಷಯ ಗೊತ್ತಾಗುತ್ತಿದ್ದಂತೆ ಸಮಾವೇಶದ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಗುಂಡುರೆಡ್ಡಿ ಕಮಲಾಪುರೆ ಬಸವಕಲ್ಯಾಣದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಅಸಮಾಧಾನ ವ್ಯಕ್ತಪಡಿಸಿದರು. 'ನಿಗದಿತ ದಿನದಂದೇ ಕನೇರಿ ಸ್ವಾಮೀಜಿ ನೇತೃತ್ವದಲ್ಲೇ ಸಮಾವೇಶ ನಡೆಯುತ್ತದೆ. ತಹಶೀಲ್ದಾರರು ಸಮಾವೇಶಕ್ಕೆ ತಡೆ ನೀಡಿದ್ದರೂ ಜಿಲ್ಲಾಧಿಕಾರಿಯಿಂದ ಅನುಮತಿ ಪಡೆಯುತ್ತೇವೆ. ಸಚಿವ ಈಶ್ವರ ಖಂಡ್ರೆಯವರನ್ನೂ ಭೇಟಿಯಾಗುತ್ತೇವೆ' ಎಂದು ಅವರು ಹೇಳಿದರು.

ಗೌರಿಬಿದನೂರು: 10 ಸೆಂ.ಮೀ ಮಳೆ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ತಾಲ್ಲೂಕಿನ ಹಲವೆಡೆ ಶುಕ್ರವಾರ ರಾತ್ರಿ ಸುರಿದ ಮಳೆಗೆ ಹಳ್ಳ-ಕೊಳ್ಳಗಳು ತುಂಬಿ ಹರಿದಿವೆ. ಹಲವೆಡೆ ತಗ್ಗು ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿದೆ. ನಗರದ ಗಂಗಸಂದ್ರದಲ್ಲಿ 10 ಸೆಂ.ಮೀ, ಬೇವಿನಹಳ್ಳಿಯಲ್ಲಿ 9.4 ಸೆಂ.ಮೀ, ಮಂಚೇನಹಳ್ಳಿ ವ್ಯಾಪ್ತಿಯ ಗೌಡಗೆರೆಯಲ್ಲಿ 9.4 ಸೆಂ.ಮೀ ಮಳೆಯಾಗಿದೆ.

ತಾಲ್ಲೂಕಿನ ಬಾದಿಮರಳೂರು ಮತ್ತು ಬೈಚಾಪುರ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ಕೊಚ್ಚಿ ಹೋಗಿದ್ದು, ಶಾಲಾ ವಿದ್ಯಾರ್ಥಿಗಳು, ರೈತರು ಜಮೀನುಗಳಿಗೆ ಹೋಗಲು ಅಡ್ಡಿಯಾಯಿತು.

ನಗರದ ಚರಂಡಿಗಳು ಹಳ್ಳಗಳಂತೆ ತುಂಬಿ ಹರಿದವು. ಗ್ರಾಮಾಂತರ ಪೊಲೀಸ್ ಠಾಣೆ ಮುಂಭಾಗದ ಕೆಳ ಸೇತುವೆ ಸಂಪೂರ್ಣ ಜಲಾವೃತವಾಗಿ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು.

ಗೌರಿಬಿದನೂರು ತಾಲ್ಲೂಕಿನ ರಾಯರೇಖಲಹಳ್ಳಿ ಬಳಿ ಹರಿಯುತ್ತಿರುವ ಉತ್ತರ ಪಿನಾಕಿನಿ ನದಿ

ಭಾರಿ ಮಳೆಯಿಂದಾಗಿ ಒಣಗಿ ನಿಂತಿದ್ದ ಉತ್ತರ ಪಿನಾಕಿನಿ ನದಿ ಮತ್ತೆ ಹರಿಯಲು ಪ್ರಾರಂಭಿಸಿದೆ. ರಾಯರೇಖಲಹಳ್ಳಿ ದಾಟಿ ಕಿಂಡಿ ಅಣೆಕಟ್ಟೆವರೆಗೂ ನೀರು ಹರಿದಿದೆ.

ಮಡಿಕೇರಿಯಲ್ಲಿ ಜೋರು ಮಳೆ

ಮಡಿಕೇರಿ: ನಗರದಲ್ಲಿ ಶನಿವಾರ ಜೋರು ಮಳೆ ಸುರಿಯಿತು. ನಸುಕಿನಲ್ಲಿ ಆರಂಭವಾದ ಮಳೆ ನಂತರ ಕಡಿಮೆಯಾಯಿತು. ಮತ್ತೆ ಮಧ್ಯಾಹ್ನ ಬಿರುಸುಗೊಂಡು, 2 ಗಂಟೆಗೂ ಹೆಚ್ಚು ಸುರಿಯಿತು. ಕಳೆದ 3 ದಿನಗಳಿಂದ ನಿತ್ಯವೂ ಮಡಿಕೇರಿಯಲ್ಲಿ ಮಾತ್ರವೇ ಬಿರುಸಿನ ಮಳೆ ಸುರಿಯುತ್ತಿದೆ.

ಮೈಸೂರು ವರದಿ: ನಗರದ ವಿವಿಧೆಡೆ ಶನಿವಾರ ಸಂಜೆ ಸಾಧಾರಣ ಮಳೆಯಾಯಿತು.

ಗಡಾಯಿಕಲ್ಲು ಚಾರಣ ನಿಷೇಧ

ಉಜಿರೆ (ದಕ್ಷಿಣ ಕನ್ನಡ): ಐತಿಹಾಸಿಕ ಗಡಾಯಿಕಲ್ಲು (ಜಮಲಾಬಾದ್) ಚಾರಣಕ್ಕೆ ಜೂನ್ 14ರಿಂದ ನಿಷೇಧ ಹೇರಲಾಗಿದೆ ಎಂದು ವನ್ಯಜೀವಿ ವಿಭಾಗದ ವಲಯ ಅರಣ್ಯಾಧಿಕಾರಿ ಶರ್ಮಿಷ್ಠಾ ತಿಳಿಸಿದ್ದಾರೆ.

ಕೃಷಿ ಹೊಂಡಕ್ಕೆ ಬಿದ್ದು ಇಬ್ಬರು ಮಕ್ಕಳು ಸಾವು

ದೊಡ್ಡಬಳ್ಳಾಪುರ: ತಾಲ್ಲೂಕಿನ ತೊಗರಿಘಟ್ಟದಲ್ಲಿ ಶನಿವಾರ ಕೃಷಿ ಹೊಂಡಕ್ಕೆ ಬಿದ್ದು ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ತೊಗರಿಘಟ್ಟ ಗ್ರಾಮದ ಸವಿತಾ, ಮುನಿರಾಜು ದಂಪತಿ ಪುತ್ರಿ ದಕ್ಷಾ (11), ಆಶಾ, ಪ್ರದೀಪ್ ಅವರ ಮಗ ಧನುಷ್ (4) ಮೃತರು.

ಶನಿವಾರ ಮಧ್ಯಾಹ್ನ ಗುರುಮೂರ್ತಿ ಅವರ ಜಮೀನಿನಲ್ಲಿ ಆಟವಾಡಲು ತೆರಳಿದ್ದ ವೇಳೆ ಕೃಷಿ ಹೊಂಡದಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಕೃಷಿ ಹೊಂಡದ ಸುತ್ತ ಸುರಕ್ಷತಾ ಬೇಲಿ ನಿರ್ಮಿಸದೇ ಇರುವ ಕುರಿತು ಗುರುಮೂರ್ತಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಎಂ.ಬಿ.ನವೀನ್ ಕುಮಾರ್ ತಿಳಿಸಿದ್ದಾರೆ.

'ರಸಗೊಬ್ಬರ ಪೂರೈಕೆ ಕೇಂದ್ರದ ಜವಾಬ್ದಾರಿ'

ಬೆಂಗಳೂರು: 'ರೈತರ ಬೇಡಿಕೆಗಳಿಗೆ ಅನುಗುಣವಾಗಿ ರಾಜ್ಯಗಳಿಗೆ ರಸಗೊಬ್ಬರ ಪೂರೈಸಬೇಕಾದ್ದು ಕೇಂದ್ರ ಸರ್ಕಾರದ ಜವಾಬ್ದಾರಿ' ಎಂದು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾಜ್ಯದ ಬೇಡಿಕೆಗೆ ಪ್ರತಿಯಾಗಿ ಕೇಂದ್ರ ಸರ್ಕಾರ ಶೇ 50ರಷ್ಟು ರಸಗೊಬ್ಬರ ಪೂರೈಸಿದೆ. ಇದರಿಂದಾಗಿ ರಸಗೊಬ್ಬರದ ತೀವ್ರ ಕೊರತೆ ಉದ್ಭವಿಸಿದೆ' ಎಂದರು.

'ಕೇಂದ್ರ ಸರ್ಕಾರ ಯಾವುದೇ ತಾರತಮ್ಯ ಮಾಡದೆ ಕರ್ನಾಟಕ ರಾಜ್ಯದ ರೈತರ ಹಿತ ಕಾಪಾಡಲು ಪೂರ್ಣ ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆ ಮಾಡಬೇಕು' ಎಂದು ಖಂಡ್ರೆ ಒತ್ತಾಯಿಸಿದರು.

ನಿರ್ದಾಕ್ಷಿಣ್ಯ ಕ್ರಮ: 'ಬೀದರ್ ಜಿಲ್ಲೆಯಲ್ಲಿ ರಸಗೊಬ್ಬರವನ್ನು ಹೆಚ್ಚಿನ ದರಕ್ಕೆ ಮತ್ತು ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲು ಮತ್ತು ಅಂತಹ ಮಳಿಗೆಗಳ ಮೇಲೆ ದಾಳಿ ಮಾಡಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿದೆ' ಎಂದೂ ಅವರು ತಿಳಿಸಿದರು.

ಎಸ್‌ಐಟಿಗೆ ಹೋರಾಟಗಾರ ಗಿರೀಶ್ ಮಟ್ಟೆಣ್ಣವರ ಪತ್ರ ಬರೆದು ಒತ್ತಾಯ

ಇಬ್ಬರನ್ನೂ ಮಂಪರು ಪರೀಕ್ಷೆಗೆ ಒಳಪಡಿಸಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಕೊಲೆ ಪ್ರಕರಣಗಳಿಗೆ ಸಂಬಂಧಿಸಿದ ತನಿಖೆಯ ಸಾಕ್ಷಿ ದೂರುದಾರ ಚಿನ್ನಯ್ಯ ನನ್ನ ಬಗ್ಗೆ ಮತ್ತು ಸೌಜನ್ಯಾ ಪರ ಹೋರಾಟಗಾರರ ಬಗ್ಗೆ ಕಟ್ಟುಕಥೆ ಹೆಣೆಯುತ್ತಿದ್ದಾರೆ. ಆದ್ದರಿಂದ ಅವರನ್ನು ಮತ್ತು ನನ್ನನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು' ಎಂದು ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ಗಿರೀಶ ಮಟ್ಟೆಣ್ಣವರ ಒತ್ತಾಯಿಸಿದ್ದಾರೆ.

ಎಸ್‌ಐಟಿಗೆ ಈ ಕುರಿತು ಶನಿವಾರ ಪತ್ರ ಬರೆದಿರುವ ಅವರು, 'ಚಿನ್ನಯ್ಯ ಜಾಮೀನು ಷರತ್ತುಗಳನ್ನು ಉಲ್ಲಂಘಿಸಿ ಹೇಳಿಕೆ ನೀಡಿದ್ದು, ಆತನ ಜಾಮೀನು ರದ್ದುಗೊಳಿಸಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬೇಕು' ಎಂದೂ ಕೋರಿದ್ದಾರೆ.

'ಧರ್ಮಸ್ಥಳ ಪ್ರಕರಣ ಸಂಬಂಧ ಚಿನ್ನಯ್ಯ ಜೂನ್ 10ರಂದು ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಸೌಜನ್ಯಾ ಮತ್ತು ಇತರರ ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ನ್ಯಾಯಕ್ಕಾಗಿ ಹೋರಾಡುತ್ತಿರುವ ನಾನು, ಮಹೇಶ್ ಶೆಟ್ಟಿ ತಿಮರೋಡಿ, ವಿಠಲ ಗೌಡ, ಜಯಂತ್ ಸೇರಿದಂತೆ ಹಲವರ ಹೆಸರನ್ನು ಹೇಳಿದ್ದಾರೆ. ಇದರ ಹಿಂದೆ ಭಾರಿ ಸಂಚು ಇರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ನ್ಯಾಯಾಲಯದಲ್ಲಿ ಮತ್ತು ಪೊಲೀಸರ ಎದುರು ಅವರೇ ಈ ಹಿಂದೆ ನೀಡಿದ್ದ ಹೇಳಿಕೆಗಳಿಗೆ ಈ ಹೇಳಿಕೆಗಳು ವ್ಯತಿರಿಕ್ತವಾಗಿದ್ದು, ನ್ಯಾಯಾಂಗದ ಮೌಲ್ಯಗಳನ್ನು ಗೇಲಿ ಮಾಡಿದಂತಾಗಿದೆ' ಎಂದು ತಿಳಿಸಿದ್ದಾರೆ.

'ನಾನು ಮತ್ತು ಇತರ ಹೋರಾಟಗಾರರು ಧರ್ಮಸ್ಥಳದ ದೇವಸ್ಥಾನ ಮತ್ತು ವೀರೇಂದ್ರ ಹೆಗ್ಗಡೆ ಅವರಿಗೆ ಕಳಂಕ ತರಲು ₹ 200 ಕೋಟಿ ವ್ಯವಹಾರ ಮಾಡಿರುವುದಾಗಿ ಸುಳ್ಳು ಹೇಳಿರುವ ಚಿನ್ನಯ್ಯ ಹೋರಾಟವನ್ನೇ ಅಪಮಾನಿಸಿದ್ದಾರೆ. ಅವರನ್ನು ವಶಕ್ಕೆ ಪಡೆದು ವಿವರವಾದ ತನಿಖೆ ನಡೆಸಬೇಕು. ಸೌಜನ್ಯಾ ಪ್ರಕರಣ ಸೇರಿದಂತೆ ಧರ್ಮಸ್ಥಳದಲ್ಲಿ ನಡೆದ ಅತ್ಯಾಚಾರ, ಕೊಲೆ ಪ್ರಕರಣಗಳಲ್ಲಿ ಚಿನ್ನಯ್ಯ ಭಾಗಿಯಾಗಿರುವ ಸಾಧ್ಯತೆಯೂ ಇದೆ. ಮಂಪರು ಪರೀಕ್ಷೆಗೆ ಒಳಪಡಿಸಿದರೆ ಸತ್ಯ ಹೊರಬರಬಹುದು' ಎಂದು ಮಟ್ಟೆಣ್ಣವರ ತಿಳಿಸಿದ್ದಾರೆ.

ಚಿನ್ನಯ್ಯ ಸುಳ್ಳು ಹೇಳಿಕೆ ನೀಡಲು ಪ್ರಚೋದನೆ ನೀಡಿದವರನ್ನು ಪತ್ತೆ ಮಾಡಿ ಶಿಕ್ಷೆಗೆ ಗುರಿಪಡಿಸಬೇಕು. ಚಿನ್ನಯ್ಯ ಜೀವಕ್ಕೆ ಅಪಾಯ ಮಾಡುವ ಸಾಧ್ಯತೆ ಇದೆ. ಅವರ ಸುರಕ್ಷತೆಗೂ ಕ್ರಮವಹಿಸಬೇಕು' ಎಂದು ಒತ್ತಾಯಿಸಿದ್ದಾರೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕ್ರೀಡೆ ಮತ್ತು ಅಂಗವಿಕಲರ ಕೋಟಾ ಕ್ಲೇಮ್

2 ದಿನ ಬಿಟ್ಟು ಡೌನ್‌ಲೋಡ್‌ಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕ್ರೀಡೆ ಮತ್ತು ಅಂಗವಿಕಲರ ಕೋಟಾ ಕ್ಲೇಮ್ ಮಾಡಿದವರು ಎರಡು ದಿನಗಳ ನಂತರ ಪರಿಶೀಲನಾ ಪತ್ರ (ವೆರಿಫಿಕೇಷನ್ ಕ್ಲಿಪ್) ಡೌನ್‌ಲೋಡ್ ಮಾಡಿಕೊಳ್ಳಬೇಕು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

'ರಕ್ಷಣೆ (ಡಿಫೆನ್ಸ್) ಮತ್ತು ಎನ್‌ಸಿಸಿ ಕೋಟಾ ಕ್ಲೇಮ್ ಮಾಡಿದ್ದವರ ಅರ್ಹತಾ ಪಟ್ಟಿ ಬಂದಿದ್ದು, ಸಂಬಂಧಿತರ ಕ್ಲೇಮ್ ವೆರಿಫಿಕೇಷನ್ ಸ್ಲಿಪ್‌ನಲ್ಲಿ ನಮೂದಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಕ್ರೀಡಾ ಮತ್ತು ಅಂಗವಿಕಲರ ಕೋಟಾ ಕ್ಲೇಮ್ ಮಾಡಿದವರ ಅರ್ಹತಾ ಪಟ್ಟಿ ಸಂಬಂಧಪಟ್ಟ ಇಲಾಖೆಗಳಿಂದ ಪ್ರಾಧಿಕಾರಕ್ಕೆ ಬಂದಿಲ್ಲ. ಅರ್ಹತಾ ಪಟ್ಟಿ ಬಂದ ತಕ್ಷಣ ಆ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗುವುದು. ಆಗ ಅಭ್ಯರ್ಥಿಗಳು ಪುನಃ ವೆರಿಫಿಕೇಷನ್ ಸ್ಲಿಪ್ ಡೌನ್‌ಲೋಡ್ ಮಾಡಿಕೊಳ್ಳಬೇಕಾಗುತ್ತದೆ. ಹೀಗಾಗಿ ಯಾರೂ ಆತಂಕ ಪಡುವ ಅಗತ್ಯವಿಲ್ಲ' ಎಂದಿದ್ದಾರೆ.

ಕೆಇಎ ಕೌನ್ಸೆಲಿಂಗ್ ವಿಳಂಬವಾದರೆ ಕಾಮೆಡ್‌–ಕೆ ಆರಂಭ: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಕೌನ್ಸೆಲಿಂಗ್ ಆರಂಭಿಸುವುದು ವಿಳಂಬವಾದರೆ, ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟವು (ಕಾಮೆಡ್‌–ಕೆ) ತಮ್ಮ ಕೌನ್ಸೆಲಿಂಗ್ ಆರಂಭಿಸುವ ಸಾಧ್ಯತೆ ಇದೆ.

ರಾಜ್ಯ ಸರ್ಕಾರ, ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘದ ನಡುವಣ ಒಪ್ಪಂದ ಪ್ರಕಾರ ಪ್ರಾಧಿಕಾರವು ಜುಲೈ 10ರ ಒಳಗೆ ಮೊದಲ ಹಂತದ ಕೌನ್ಸೆಲಿಂಗ್ ಪೂರ್ಣಗೊಳಿಸಬೇಕು. ಇಲ್ಲದೇ ಇದ್ದಲ್ಲಿ ಕಾಮೆಡ್‌–ಕೆ ತನ್ನ ಕೌನ್ಸೆಲಿಂಗ್ ಆರಂಭಿಸಬಹುದು.

ಆದರೆ, ಪ್ರಾಧಿಕಾರಕ್ಕೆ ಎಂಜಿನಿಯರಿಂಗ್ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿ (ಸೀಟ್ ಮ್ಯಾಟ್ರಿಕ್ಸ್) ಲಭ್ಯವಾಗಿಲ್ಲ. ನಿಗದಿತ ದಿನಾಂಕದೊಳಗೆ ಮೊದಲ ಹಂತದ ಕೌನ್ಸೆಲಿಂಗ್ ಪೂರ್ಣಗೊಳಿಸುವ ಸಾಧ್ಯತೆ ಇಲ್ಲ. ಹೀಗಾಗಿ ಕಾಮೆಡ್‌–ಕೆ ತನ್ನ ಕೌನ್ಸೆಲಿಂಗ್‌ಗೆ ಸಿದ್ಧತೆ ನಡೆಸಿದೆ ಎಂದು ಗೊತ್ತಾಗಿದೆ.

ಎಂಬಿಎ, ಎಂಸಿಎ ಪ್ರವೇಶ ಪರೀಕ್ಷೆ ಇಂದು

ಎಂಬಿಎ, ಎಂಸಿಎ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯು ಜೂನ್ 14ರ ಭಾನುವಾರ ನಡೆಯಲಿದೆ. ಪರೀಕ್ಷಾ ಅಕ್ರಮಗಳಿಗೆ ಅವಕಾಶ ಇಲ್ಲದಂತೆ ತೀವ್ರ ನಿಗಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ಕಟ್ಟೆಚ್ಚರ ವಹಿಸಲು ಜಿಲ್ಲಾಡಳಿತಗಳಿಗೆ ಸೂಚಿಸಲಾಗಿದೆ ಎಂದು ಎಚ್.ಪ್ರಸನ್ನ ತಿಳಿಸಿದ್ದಾರೆ.

ಬೆಂಗಳೂರು, ದಾವಣಗೆರೆ, ಧಾರವಾಡ, ಕಲಬುರಗಿ ಮತ್ತು ಮೈಸೂರು ನಗರಗಳಲ್ಲಿ ಪರೀಕ್ಷೆ ನಡೆಯಲಿದೆ. ಬೆಳಿಗ್ಗೆ ಎಂಬಿಎ ಪರೀಕ್ಷೆ ನಡೆಯಲಿದ್ದು, 30,542 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. ಎಂಸಿಎ ಪರೀಕ್ಷೆ ಮಧ್ಯಾಹ್ನ ನಡೆಯಲಿದ್ದು, 22,262 ಮಂದಿ ಬರೆಯಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಮಲಬಾರ್ 'ನುವಾ' ಡೈಮಂಡ್ ಆಭರಣ ಅನಾವರಣ

ಬೆಂಗಳೂರು: ದೇಶದ ಖ್ಯಾತ ಜ್ಯುವೆಲ್ಲರಿ ಸಂಸ್ಥೆ ಮಲಬಾರ್ ಗೋಲ್ಡ್ & ಡೈಮಂಡ್ಸ್ ತನ್ನ ಹೊಸ ನ್ಯಾಚುರಲ್ ಡೈಮಂಡ್ ಆಭರಣಗಳ ಕಲೆಕ್ಷನ್ 'ನುವಾ' ಸಂಗ್ರಹವನ್ನು ಅನಾವರಣಗೊಳಿಸಿದೆ. ಪ್ರಕೃತಿಯಲ್ಲಿ ಕಾಣಸಿಗುವ ಸೂಕ್ಷ್ಮ ಮಾದರಿಗಳು, ರಚನೆಗಳು ಮತ್ತು ನಾಜೂಕಾದ ವಿವರಗಳಿಂದ ಪ್ರೇರಿತವಾದ ಈ ಕಲೆಕ್ಷನ್, ಆಧುನಿಕ ವೈಭವವನ್ನು ಪ್ರಕೃತಿಯ ಸೌಂದರ್ಯದೊಂದಿಗೆ ಸಂಯೋಜಿಸುವ ಒಂದು ಪ್ರಯತ್ನವಾಗಿದೆ. ರೇಖೆಗಳ ಲಯ, ಜೇನುಗೂಡು ಮಾದರಿಯ ರಚನೆಗಳು ಹಾಗೂ ಭೂಮಿಯ ಸಹಜವಾಗಿ ರೂಪುಗೊಂಡ ಜೈವಿಕ ವಿನ್ಯಾಸಗಳು ಸೇರಿದಂತೆ ಸಾಮಾನ್ಯವಾಗಿ ಗಮನಕ್ಕೆ ಬಾರದ ಪ್ರಕೃತಿಯ ಅಂಶಗಳನ್ನು ಈ ಕಲೆಕ್ಷನ್‌ನಲ್ಲಿ ಸುಂದರವಾಗಿ ಅನಾವರಣಗೊಳಿಸಲಾಗಿದೆ.

18 ಕ್ಯಾರಟ್ ಮತ್ತು 14 ಕ್ಯಾರಟ್ ಚಿನ್ನದಲ್ಲಿ ವಿನ್ಯಾಸಗೊಳಿಸಲಾದ ಈ ಕಲೆಕ್ಷನ್‌ನಲ್ಲಿ ನ್ಯಾಚುರಲ್ ಡೈಮಂಡ್ಸ್‌ಗಳನ್ನು ಬಣ್ಣದ ರತ್ನಗಳು, ಸೆರಾಮಿಕ್ ಕಲರ್ ಎನಾಮೆಲಿಂಗ್ ಮತ್ತು ಮಲ್ಟಿ-ಟೋನ್ ರೋಡಿಯಮ್ ಫಿನಿಶ್‌ಗಳೊಂದಿಗೆ ಮತ್ತಷ್ಟು ಸುಂದರಗೊಳಿಸಲಾಗಿದೆ. ದೃಢತೆ ಮತ್ತು ಮೃದುವಾದ ಸೌಂದರ್ಯದ ನಡುವೆ ಸಮತೋಲನವನ್ನು ಸಾಧಿಸುವ ಈ ಆಭರಣಗಳು, ಸೊಗಸಾದ, ಬಹುಮುಖ ಹಾಗೂ ವಿವಿಧ ಸಂದರ್ಭಗಳಿಗೆ ಸೂಕ್ತವಾಗಿವೆ. ಪ್ರತಿಯೊಂದು ವಿನ್ಯಾಸವೂ ಪ್ರಕೃತಿಯ ಮಾದರಿಗಳ ಸೌಂದರ್ಯವನ್ನು ಸೂಕ್ಷ್ಮ ಕರಕುಶಲತೆ, ಹರಿವಿನ ಆಕಾರಗಳು ಮತ್ತು ಆಧುನಿಕ ಅಲಂಕಾರಿಕ ಶೈಲಿಯ ಮೂಲಕ ಪ್ರತಿಬಿಂಬಿಸುತ್ತದೆ.

ಈ ಕಲೆಕ್ಷನ್‌ಗೆ ಜನಪ್ರಿಯ ನಟಿ ಕರೀನಾ ಕಪೂರ್ ಖಾನ್ ಬ್ರಾಂಡ್ ಮುಖವಾಗಿ ಮುಂದುವರಿದಿದ್ದಾರೆ. ಅವರ ಸಹಜ ಶೈಲಿ, ಆತ್ಮವಿಶ್ವಾಸ ಮತ್ತು ಶಾಶ್ವತ ಆಕರ್ಷಣೆ, ವ್ಯಕ್ತಿತ್ವ, ಆಧುನಿಕ ಮತ್ತು ಕಾಲಾತೀತ ಸೌಂದರ್ಯವನ್ನು ಪ್ರತಿಬಿಂಬಿಸುವ ಈ ಕಲೆಕ್ಷನ್‌ನ ಸಾರವನ್ನು ಅತ್ಯಂತ ಸುಂದರವಾಗಿ ತೋರಿಸುತ್ತದೆ.

'ನುವಾ' ಕುರಿತು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡ ಮಲಬಾರ್ ಗ್ರೂಪ್ ಚೇರ್ಮನ್ ಎಂ.ಪಿ.ಅಹಮ್ಮದ್, 'ಈ ಕಲೆಕ್ಷನ್‌ನ ಹೃದಯದಲ್ಲಿ ಪ್ರಕೃತಿಯಲ್ಲಿರುವ ವಿವಿಧ ಮಾದರಿಗಳ ಸೌಂದರ್ಯದ ಕುರಿತು ಆಳವಾದ ಗೌರವವಿದೆ. ನಮ್ಮ ಸುತ್ತಮುತ್ತಲಿನ ಜಗತ್ತನ್ನು ರೂಪಿಸುವ ಸೂಕ್ಷ್ಮ ರಚನೆಗಳು, ವಿನ್ಯಾಸಗಳು ಮತ್ತು ವಿವರಗಳನ್ನು ಈ ಸಂಗ್ರಹ ಒಳಗೊಂಡಿದೆ. ನುವಾ ಮೂಲಕ ಆ ಪ್ರಕೃತಿಯ ಸೌಂದರ್ಯವನ್ನು ಸಮಕಾಲೀನ ನ್ಯಾಚುರಲ್ ಡೈಮಂಡ್ ಕಲೆಕ್ಷನ್ ಆಗಿ ರೂಪಾಂತರಿಸುವುದು ನಮ್ಮ ಉದ್ದೇಶ. ಇದು ಸೊಗಸಾದ, ಬಹುಮುಖ ಹಾಗೂ ಇಂದಿನ ಮಹಿಳೆಯ ಜೀವನಶೈಲಿಗೆ ಹೊಂದುವಂತಾಗಿದೆ. ಪ್ರತಿಯೊಂದು ಆಭರಣವೂ ಅತ್ಯುತ್ತಮ ಕರಕುಶಲತೆ ಮತ್ತು ಸಹಜ ಸೌಂದರ್ಯದ ಸಮತೋಲನವನ್ನು ಪ್ರತಿಬಿಂಬಿಸುತ್ತದೆ' ಎಂದರು.

'ನುವಾ' ವಿಶೇಷತೆ: ಸರಳವಾದ ವೈಭವ ಮತ್ತು ಅರ್ಥಪೂರ್ಣ ವಿನ್ಯಾಸವನ್ನು ಮೆಚ್ಚುವ ಮಹಿಳೆಯರಿಗಾಗಿ ಈ ಕಲೆಕ್ಷನ್ ವಿನ್ಯಾಸಗೊಳಿಸಲಾಗಿದೆ. ಪ್ರಕೃತಿಯ ಸಮತೋಲನ ಮತ್ತು ಸೌಹಾರ್ದದಿಂದ ಪ್ರೇರಿತವಾದ ನುವಾ, ನಾಜೂಕಾದ ವಿವರಗಳು ಮತ್ತು ಬಲವಾದ ದೃಶ್ಯ ಆಕರ್ಷಣೆಯನ್ನು ಸಂಯೋಜಿಸಿ ಆಧುನಿಕ ನ್ಯಾಚುರಲ್ ಡೈಮಂಡ್ ಜುವೆಲರಿಗೆ ವಿಶಿಷ್ಟ ಗುರುತನ್ನು ನೀಡುತ್ತದೆ. ನುವಾ ಮೂಲಕ ಮಲಬಾರ್ ಗೋಲ್ಡ್ & ಡೈಮಂಡ್ಸ್ ತನ್ನ ನ್ಯಾಚುರಲ್ ಡೈಮಂಡ್ ಪೋರ್ಟ್‌ಫೋಲಿಯೊವನ್ನು ಮತ್ತಷ್ಟು ಬಲಪಡಿಸುತ್ತಿದೆ. ಕರಕುಶಲತೆ, ವಿನ್ಯಾಸ ಆವಿಷ್ಕಾರ ಮತ್ತು ಆಧುನಿಕ ವೈಭವದ ಸಂಯೋಜನೆಯ ಈ ಕಲೆಕ್ಷನ್, ಶಾಶ್ವತ ಪ್ರೇರಣೆಯನ್ನು ತನ್ನ ಮೂಲವಾಗಿ ಹೊಂದಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಮುಂಬೈ ಧಾರಣೆ (ಶೇಂಗಾ)

13-06-2026

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಪಾಮ್ ವಾರದ ಡೆಲಿವರಿ	1463 (1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1575)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,47,700 (1,46,400)
ಬೆಳ್ಳಿ ಕೆ.ಜಿಗೆ	2,46,300 (2,41,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ದಶಕಗಳಿಂದ ಕದಲದವರಿಗೆ ಗೇಟ್‌ಪಾಸ್

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಜಾರಿ, ಸಹಕಾರ ಬ್ಯಾಂಕ್ ವಲಯದಲ್ಲಿ ತಲ್ಲಣ

• ಎಂ.ಜಿ.ಬಾಲಕೃಷ್ಣ

ಹೊಸಪೇಟೆ (ವಿಜಯನಗರ): ದೇಶದಲ್ಲಿ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ (ಬಿಆರ್ ಆ್ಯಕ್ಟ್) ಕಟ್ಟುನಿಟ್ಟಾಗಿ ಜಾರಿಗೆ ಬರಲಿದೆ. ಇದರಿಂದ ಹಲವು ಬದಲಾವಣೆಗಳು ಆಗಲಿವೆ. ನಗರ ಸಹಕಾರಿ (ಕೋ ಆಪರೇಟಿವ್) ಬ್ಯಾಂಕ್, ಡಿಸಿಸಿ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ನಲ್ಲಿ ದಶಕಗಳಿಂದ ನಿರ್ದೇಶಕರಾಗಿ ಇದ್ದವರು ಅನಿವಾರ್ಯವಾಗಿ ಮೂರು ವರ್ಷ ಸ್ಥಾನಗಳನ್ನು ಕಡ್ಡಾಯವಾಗಿ ತೊರೆಯಬೇಕು.

ರಾಜ್ಯದಲ್ಲಿ 253 ನಗರ ಸಹಕಾರಿ ಬ್ಯಾಂಕ್, 21 ಡಿಸಿಸಿ ಬ್ಯಾಂಕ್ ಹಾಗೂ ಒಂದು ಅಪೆಕ್ಸ್ ಬ್ಯಾಂಕ್ ಇವೆ. ಇಲ್ಲಿ ಸತತ 10 ವರ್ಷ ಮತ್ತು ಅದಕ್ಕೂ ಹೆಚ್ಚು ಸಮಯದಿಂದ ನಿರ್ದೇಶಕ-ರಾಗಿರುವ ಸಾವಿರಕ್ಕೂ ಹೆಚ್ಚು ಮಂದಿ ಇದ್ದಾರೆ. ಅವರು ಸ್ಥಾನ ತೆರವು ಮಾಡದಿದ್ದರೆ, ಬ್ಯಾಂಕ್ ಲಕ್ಷಾಂತರ ದಂಡ ಪಾವತಿಸಬೇಕಾದ ಸ್ಥಿತಿ ಎದುರಾಗಲಿದೆ. ಆದೇಶ ಧಿಕ್ಕರಿಸಿ ಮುಂದುವರಿಯು-ವವರನ್ನು ಜೈಲಿಗೆ ಕಳುಹಿಸುವ ಅಧಿಕಾರವೂ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಇದೆ.

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 2025ರ ಆಗಸ್ಟ್ 1ರಿಂದಲೇ ಜಾರಿಗೆ ಬಂದಿದೆ. ಆದರೆ, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಕೆಲಸ ಇದೀಗ ಆರಂಭವಾಗಿದೆ. ಸದ್ಯಕ್ಕೆ ರಾಜ್ಯದಲ್ಲಿ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿರುವ ನಗರ ಸಹಕಾರಿ ಬ್ಯಾಂಕ್‌ಗಳು ಐದು ಮಾತ್ರ ಎಂದು ಮೂಲಗಳು ತಿಳಿಸಿವೆ.

ವ್ಯವಹಾರಕ್ಕೆ ಆತಂಕ ಇಲ್ಲ: ‘ಕಾಯ್ದೆ ಪ್ರಕಾರ, ದೀರ್ಘಾವಧಿ ನಿರ್ದೇಶಕರನ್ನು ಮಾತ್ರ ತೆರವುಗೊಳಿಸಬೇಕು. ಅಧ್ಯಕ್ಷರಿಗೆ ಈ ನಿಯಮ ಅನ್ವಯ ಆಗುವುದಿಲ್ಲ. ಮೇಲಾಗಿ ಇಬ್ಬರು ವೃತ್ತಿಪರ ನಿರ್ದೇಶಕರು ಇರಬೇಕು ಎಂಬ ನಿಯಮ ಪಾಲಿಸಬೇಕು. ಬ್ಯಾಂಕ್‌ಗೆ ಹೊಸ ನಿರ್ದೇಶಕರು ಬಂದರೂ ಅನುಭವ ಕೊರತೆ ಸಮಸ್ಯೆ ಎದುರಾಗುವುದಿಲ್ಲ’ ಎಂದು ಬ್ಯಾಂಕಿಂಗ್ ಸಲಹೆಗಾರ ಬಿ.ಜಿ. ಕುಲಕರ್ಣಿ ಹೇಳಿದರು.

ಮುಖ್ಯಾಂಶಗಳು

- ದೇಶದಲ್ಲಿವೆ 1,400 ಸಹಕಾರಿ ಬ್ಯಾಂಕ್‌ಗಳು
- ರಾಜ್ಯದಲ್ಲಿವೆ 253 ನಗರ ಸಹಕಾರಿ ಬ್ಯಾಂಕ್‌ಗಳು
- ಬಿಆರ್ ಆ್ಯಕ್ಟ್ 2025 ಆಗಸ್ಟ್‌ನಿಂದಲೇ ಜಾರಿ

ದೇಶದ ಎಲ್ಲ ಭಾಗಗಳಲ್ಲಿನ ಹಣಕಾಸು ವ್ಯವಹಾರ, ಸ್ಥಿತಿಗತಿ ನೋಡಿಕೊಂಡು ಆರ್‌ಬಿಐ ತಜ್ಞರು ಸಮಾಲೋಚಿಸಿಯೇ ಇಂತಹ ಕಾನೂನು ಜಾರಿಗೆ ತಂದಿದ್ದಾರೆ. ಅದನ್ನು ಅನುಸರಿಸಬೇಕು

ವಿಶ್ವನಾಥ ಚ.ಹಿರೇಮಠ, ಅಧ್ಯಕ್ಷ, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್, ಹೊಸಪೇಟೆ

ಕಾಯ್ದೆಯ ಆಶಯ ಏನು?

‘ಸಹಕಾರಿ ಬ್ಯಾಂಕ್‌ಗಳು, ಸೊಸೈಟಿಗಳು ದೇಶದ ಆರ್ಥಿಕತೆಯ ಬೆನ್ನೆಲುಬು ಎಂಬ ನಂಬಿಕೆ ಈಗಲೂ ಇದೆ. ಸಹಕಾರಿ ಕ್ಷೇತ್ರಕ್ಕೆ ಹೊಸಬರು ಬರಬೇಕು, ಯುವಪೀಳಿಗೆ ಆಸಕ್ತಿ ತೋರಿಸಿ ಅದನ್ನು ಮುನ್ನಡೆಸುವ ಮನಸ್ಸು ಮಾಡಬೇಕು. ಬ್ಯಾಂಕಿಂಗ್ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸಬೇಕು ಎಂಬ ಆಶಯ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯದ್ದು. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಕೆಲಸ ಆರಂಭವಾಗಿದೆ’ ಎಂದು ಮೂಲಗಳು ತಿಳಿಸಿವೆ.

ಮುಂಗಾರು ಹಂಗಾಮಿನ ವೇಳೆಗೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ಪೂರೈಸುವುದೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಪಾಕ್: 21 ಉಗ್ರರ ಹತ್ಯೆ

ಪೆಶಾವರ (ಪಿಟಿಐ): ವಾಯವ್ಯ ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಪಾಕಿಸ್ತಾನ ಭದ್ರತಾ ಸಿಬ್ಬಂದಿ ಸರಣಿ ಕಾರ್ಯಾಚರಣೆಗಳನ್ನು ನಡೆಸಿ, 21 ಮಂದಿ ಭಯೋತ್ಪಾದಕರನ್ನು ಹತ್ಯೆ ಮಾಡಿದ್ದಾರೆ.

ಕಳೆದ ಮೂರು ದಿನಗಳಿಂದ ಈ ಕಾರ್ಯಾಚರಣೆಗಳನ್ನು ನಡೆಸಲಾಗಿದೆ ಎಂದು ಪಾಕ್ ಸೇನೆಯ ಮಾಧ್ಯಮ ವಿಭಾಗದ ಅಧಿಕಾರಿಗಳು ಶನಿವಾರ ಮಾಹಿತಿ ನೀಡಿದ್ದಾರೆ.

ಉತ್ತರ ವಜಿರಿಸ್ತಾನ್ ಜಿಲ್ಲೆಯಲ್ಲಿ ಕಳೆದ 72 ಗಂಟೆಯಲ್ಲಿ ಫಿತ್ನಾ- ಅಲ್- ಖ್ವಾರಿಜ್‌ನ (ಟಿಟಿಪಿ ಸಂಘಟನೆಯ ಸ್ಥಳೀಯ ಹೆಸರು) ನಾಲ್ವರು ಉಗ್ರ ನಾಯಕರನ್ನು ಹತ್ಯೆ ಮಾಡಲಾಗಿದೆ. ಭದ್ರತಾ ಪಡೆಗಳು ಮತ್ತು ನಾಗರಿಕರನ್ನು ಗುರಿಯಾಗಿಸಿ ನಡೆಸಿದ ಹಲವು ಭಯೋತ್ಪಾದಕ ದಾಳಿಗಳಲ್ಲಿ ಅವರ ಕೈವಾಡವಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು 100 ಕ್ಕೆ	₹680
12 ಕ್ಕೆ	₹94
ಮೈಸೂರು: 100 ಕ್ಕೆ	₹700

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹265
ಆರ್‌ಎಸ್‌ಎಸ್-5	₹259
ಗುಡ್ ಲಾಟ್	₹225

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹411-698
ದ್ವಿತಳಿ (ಬಿ.ವಿ)	₹350-860

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1475 (1480)
ಸೂರ್ಯಕಾಂತಿ (ರಿಫೈನ್ಡ್)	₹1650 (1655)
ಪಾಮೋಲಿನ್	₹1465 (1470)

ಮುದ್ರಮನೆ ಕಾಫಿ (50 ಕೆಜಿಗೆ)	
ಎಪಿ	₹22600
ಎಸಿ	₹14000
ಆರ್‌ಪಿ	₹18400
ಆರ್‌ಸಿ	₹9880

‘ಕ್ಲಾಡ್ ಫೇಬಲ್ 5’, ‘ಕ್ಲಾಡ್ ಮೈಥೋಸ್ 5’ ಸ್ಥಗಿತ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದ ದೊಡ್ಡ ಕಂಪನಿ ಆಂಥ್ರೊಪಿಕ್, ತನ್ನ ನೂತನ ‘ಕ್ಲಾಡ್ ಫೇಬಲ್ 5’ ಮತ್ತು ‘ಕ್ಲಾಡ್ ಮೈಥೋಸ್ 5’ ಎಐ ಮಾದರಿಗಳ ಬಳಕೆಯನ್ನು ಜಗತ್ತಿನಾದ್ಯಂತ ಇರುವ ತನ್ನ ಗ್ರಾಹಕರಿಗೆ ದಿಢೀರ್ ಆಗಿ ಸ್ಥಗಿತಗೊಳಿಸಿದೆ.

‘ಇವು ಜಗತ್ತಿನಲ್ಲಿಯೇ ಅತ್ಯಂತ ಶಕ್ತಿಯುತ ಎಐ ಮಾದರಿಗಳು’ ಎಂದು ಕಂಪನಿಯು ಘೋಷಿಸಿಕೊಂಡಿತ್ತು. ‘ಕ್ಲಾಡ್ ಮೈಥೋಸ್’ ಮಾದರಿಯಲ್ಲಿ ಸಮಸ್ಯೆ ಇರುವ ಬಗ್ಗೆ ಭಾರತ ಸರ್ಕಾರವು ಕಳವಳ ವ್ಯಕ್ತಪಡಿಸಿತ್ತು. ಆ ಬಳಿಕ ಅಮೆರಿಕ ಸರ್ಕಾರ ಈ ಸೂಚನೆ ನೀಡಿದೆ.

‘ಈ ಎಐ ಮಾದರಿಗಳ ಬಳಕೆಯನ್ನು ರದ್ದು ಮಾಡಲು ನಿರ್ದಿಷ್ಟ ಕಾರಣವನ್ನು ಸರ್ಕಾರ ನೀಡಿಲ್ಲ. ಆದರೆ, ಸೈಬರ್ ದಾಳಿ ತಡೆಯಬಲ್ಲ ಪ್ರಬಲ ವ್ಯವಸ್ಥೆಯನ್ನೂ ಬೇಧಿಸಿ ಎಲ್ಲ ದತ್ತಾಂಶಗಳನ್ನು ಸುಲಭವಾಗಿ ಪಡೆದುಕೊಳ್ಳುವ ಸಾಮರ್ಥ್ಯವು ಈ ಮಾದರಿಗಳಿಗೆ ಇರುವುದು ಸರ್ಕಾರಕ್ಕೆ ಗೊತ್ತಾಗಿರ ಬಹುದು’ ಎಂದು ಕಂಪನಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ದತ್ತಾಂಶವನ್ನು ಪಡೆದುಕೊಳ್ಳಬಹುದು ಎನ್ನುವ ಬಗೆಗಿನ ಆರೋಪವನ್ನು ತಳ್ಳಿ ಹಾಕಿರುವ ಕಂಪನಿಯು, ‘ಇದು ಸಾಫ್ಟ್‌ವೇರ್‌ಗಳಲ್ಲಿನ ತಪ್ಪುಗಳನ್ನು ಸರಿಪಡಿಸುತ್ತದೆ’ ಎಂದು ಪ್ರತಿಪಾದಿಸಿದೆ.

‘ಗ್ರಾಹಕರ ದತ್ತಾಂಶ ಸುರಕ್ಷೆ ವ್ಯವಸ್ಥೆಯನ್ನು ಬೇಧಿಸುವ ಈ ಎಐ ಮಾದರಿಗಳ ಕುರಿತು ಇನ್ನಷ್ಟು ಸಂಶೋಧನೆಗಳನ್ನು ನಡೆಸಲು ನಮ್ಮ ಗ್ರಾಹಕರ ದತ್ತಾಂಶಗಳನ್ನು 30 ದಿನಗಳವರೆಗೆ ನಾವು ಬಳಸಿಕೊಳ್ಳುತ್ತೇವೆ. ಸೇವೆ ಸ್ಥಗಿತಗೊಳಿಸಿದ್ದಕ್ಕಾಗಿ ಕ್ಷಮೆ ಕೋರುತ್ತೇವೆ’ ಎಂದು ಹೇಳಿದೆ.

ಭಾರತಕ್ಕೆ ಗ್ರಾಹಕರಿಗೆ ಹೊಡೆತ

ಭಾರತವು ಜಗತ್ತಿನಲ್ಲಿಯೇ ಆಂಥ್ರೊಪಿಕ್ ಕಂಪನಿಯ ಎರಡನೇ ಅತಿದೊಡ್ಡ ಮಾರುಕಟ್ಟೆಯಾಗಿದೆ. ಆದ್ದರಿಂದ ‘ಕ್ಲಾಡ್ ಫೇಬಲ್ 5’ ಮತ್ತು ‘ಕ್ಲಾಡ್ ಮೈಥೋಸ್ 5’ ಎಐ ಮಾದರಿಗಳ ಬಳಕೆಯನ್ನು ನಿಷೇಧಿಸಿರುವುದು ಭಾರತದ ಗ್ರಾಹಕರಿಗೆ ಸಮಸ್ಯೆಯಾಗಲಿದೆ.

ಟಿಸಿಎಸ್ ಮತ್ತು ಇನ್ಫೊಸಿಸ್ ಕಂಪನಿಗಳು ಇತ್ತೀಚೆಗಷ್ಟೇ ಈ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದವು. ಇದರೊಂದಿಗೆ ಭಾರತ ಸರ್ಕಾರದ ಕೆಲವು ಏಜೆನ್ಸಿಗಳು ಮತ್ತು ಕೆಲವು ಖಾಸಗಿ ಕಂಪನಿಗಳು ಕೂಡ ಈ ಮಾದರಿಗಳನ್ನು ಬಳಕೆ ಮಾಡುತ್ತಿದ್ದವು.

ಸೈಬರ್ ದಾಳಿಯನ್ನು ಪರಿಣಾಮಕಾರಿಯಾಗಿ ತಡೆಯಬಲ್ಲ ಆಂಥ್ರೊಪಿಕ್‌ನ ‘ಕ್ಲಾಡ್ ಮೈಥೋಸ್’ ಎಐ ಮಾದರಿಯನ್ನು ಭಾರತ ಸರ್ಕಾರದ ಏಜೆನ್ಸಿಗಳು ಬಳಸುತ್ತಿದ್ದವು ಎಂದು ಮೂಲಗಳು ತಿಳಿಸಿವೆ.

17ಕ್ಕೆ ಮೋದಿ–ಟ್ರಂಪ್ ಭೇಟಿ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್‌ನಲ್ಲಿ ಬುಧವಾರ ಭೇಟಿಯಾಗಲಿದ್ದಾರೆ ಎಂದು ಶ್ವೇತಭವನ ಅಧಿಕಾರಿಗಳ ಹೇಳಿಕೆ ಉಲ್ಲೇಖಿಸಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಫ್ರಾನ್ಸ್‌ನಲ್ಲಿ ನಡೆಯಲಿರುವ ಜಿ-7 ಶೃಂಗಸಭೆಯಲ್ಲಿ ಉಭಯ ನಾಯಕರು ಭಾಗಿಯಾಗುತ್ತಿದ್ದು, ಇದೇ ಸಂದರ್ಭದಲ್ಲಿ ಜೂನ್ 17ರಂದು ಭೇಟಿಯಾಗುವರು ಎಂದು ವರದಿ ಮಾಡಿವೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ಟ್ರಂಪ್ ಮತ್ತು ಮೋದಿ ಅವರು ವಾಷಿಂಗ್ಟನ್‌ನಲ್ಲಿ ಭೇಟಿ ಆಗಿದ್ದರು. ಆನಂತರ ಇಬ್ಬರೂ ಭೇಟಿ ಮಾಡುತ್ತಿರುವುದು ಇದೇ ಮೊದಲು.

‘ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಭಾರತ ಧ್ವನಿ’

ನವದೆಹಲಿ (ಪಿಟಿಐ): ‘ಭಾರತವು ಜಿ7 ಶೃಂಗಸಭೆಯಲ್ಲಿ ತನ್ನ ಅಗತ್ಯಗಳ ಬಗೆಗೆ ಮಾತಾಡುವುದಷ್ಟೇ ಅಲ್ಲ, ಬದಲಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆಶೋತ್ತರಗಳ ಧ್ವನಿಯಾಗಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಫ್ರಾನ್ಸ್ ಮತ್ತು ಸ್ಲೊವಾಕಿಯಾ ಪ್ರವಾಸಕ್ಕೆ ತೆರಳುವ ಮುನ್ನ ಅವರು ಮಾತನಾಡಿದರು. ಈ ಪ್ರವಾಸದ ವೇಳೆ, ಜೂನ್ 17 ಮತ್ತು 18ರಂದು ಫ್ರಾನ್ಸ್‌ನಲ್ಲಿ ನಡೆಯಲಿರುವ ಶೃಂಗಸಭೆಯಲ್ಲಿ ಅವರು ಭಾಗಿಯಾಗಲಿದ್ದಾರೆ.

‘ಭಾರತವು ಸತತ ಎಂಟನೇ ಬಾರಿ ಶೃಂಗಸಭೆಗೆ ಆಹ್ವಾನ ಪಡೆದಿದೆ. ಜಾಗತಿಕವಾಗಿ ಹೆಚ್ಚುತ್ತಿರುವ ಭಾರತದ ವರ್ಚಸ್ಸು ಮತ್ತು ಪಾಲುದಾರ ದೇಶಗಳು ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಇದು ಪ್ರತಿನಿಧಿಸುತ್ತದೆ’ ಎಂದು ಅವರು ಅಭಿಪ್ರಾಯಪಟ್ಟರು.

‘ಯುರೋಪ್ ಮತ್ತು ಜಿ7 ರಾಷ್ಟ್ರಗಳ ಜೊತೆಗಿನ ಭಾರತದ ಆಳವಾದ ಬಾಂಧವ್ಯವನ್ನು ಈ ಭೇಟಿಯು ಇನ್ನಷ್ಟು ಗಟ್ಟಿಗೊಳಿಸುತ್ತದೆ ಮತ್ತು ಪಾಲುದಾರಿಕೆಯನ್ನು ಖಂಡ ಹಾಗೂ ಅದರಾಚೆಗೂ ವಿಸ್ತರಿಸುವ ನಮ್ಮ ದೃಢವಾದ ಬದ್ಧತೆಯನ್ನು ಎತ್ತಿತೋರಿಸುತ್ತದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

1993ರಲ್ಲಿ ಸ್ಲೊವಾಕಿಯಾ ಸ್ವಾತಂತ್ರ್ಯ ಪಡೆದ ಬಳಿಕ ಭಾರತದ ಪ್ರಧಾನಿಯೊಬ್ಬರು ಆ ದೇಶಕ್ಕೆ ನೀಡುತ್ತಿರುವ ಮೊದಲ ಭೇಟಿ ಇದಾಗಿದ್ದು, ‘ಇದೊಂದು ಐತಿಹಾಸಿಕ ಮೈಲಿಗಲ್ಲು ಮತ್ತು ದ್ವಿಪಕ್ಷೀಯ ಬಾಂಧವ್ಯಕ್ಕೆ ವೇಗ ತುಂಬುತ್ತದೆ’ ಎಂದು ಪ್ರಧಾನಿ ಬಣ್ಣಿಸಿದರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

15ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಗೋವಿಂದಮ್ಮ

W/o ಲೇಟ್ ಜಿ. ಮುನಿನಾರಾಯಣಪ್ಪ

ಕಾವಲ್ ಭೈರಸಂದ್ರ - ಅಸ್ತಂಗತ: 14.06.2011

ನಿಮ್ಮ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತಿರುವ,

ಇಂತಿ: ಎಂ.ಎನ್. ಕುಟುಂಬದವರು

ಸುದ್ದಿ 2 ನಿಮಿಷ

13 ಲಕ್ಷ ಟನ್ ಅಡುಗೆ ಎಣ್ಣೆ ಆಮದು

ನವದೆಹಲಿ (ಪಿಟಿಐ): ಕಚ್ಚಾ ಸೋಯಾಬೀನ್ ತೈಲದ ಆಮದು ಹೆಚ್ಚಳದಿಂದಾಗಿ ಮೇ ತಿಂಗಳಿನಲ್ಲಿ ದೇಶಕ್ಕೆ 13.39 ಲಕ್ಷ ಟನ್ ಅಡುಗೆ ಎಣ್ಣೆ ಆಮದಾಗಿದೆ ಎಂದು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ಹೇಳಿದೆ.

ಕಳೆದ ವರ್ಷದ ಮೇ ತಿಂಗಳಿನಲ್ಲಿ 12.54 ಲಕ್ಷ ಟನ್ ಅಡುಗೆ ಎಣ್ಣೆ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಎಣ್ಣೆ ಆಮದಿನಲ್ಲಿ ಶೇ 6.7ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಕಚ್ಚಾ ಸೋಯಾಬೀನ್ ಎಣ್ಣೆ ಕಳೆದ ವರ್ಷದ ಮೇ ತಿಂಗಳಿನಲ್ಲಿ 3.98 ಲಕ್ಷ ಟನ್‌ನಷ್ಟು ಆಮದಾಗಿತ್ತು. ಅದು ಈ ಬಾರಿ 4.93 ಲಕ್ಷ ಟನ್‌ಗೆ ಏರಿಕೆಯಾಗಿದೆ. ಅಡುಗೆಯೇತರ ಎಣ್ಣೆಯ ಆಮದಿನಲ್ಲಿ ಎರಡು ಪಟ್ಟು ಹೆಚ್ಚಳವಾಗಿದ್ದು, 26,202 ಟನ್‌ನಷ್ಟಾಗಿದೆ.

ಅಡುಗೆ ಮತ್ತು ಅಡುಗೆಯೇತರ ಎಣ್ಣೆಯ ಒಟ್ಟು ಆಮದು ಶೇ 8ರಷ್ಟು ಹೆಚ್ಚಳವಾಗಿದ್ದು, 13.65 ಲಕ್ಷ ಟನ್‌ನಷ್ಟಾಗಿದೆ. ಕಳೆದ ವರ್ಷದ ಮೇ ತಿಂಗಳಿನಲ್ಲಿ ಇದು 12.67 ಲಕ್ಷ ಟನ್‌ನಷ್ಟಿತ್ತು.

ಪ್ರಸಕ್ತ ತೈಲ ಮಾರುಕಟ್ಟೆ ವರ್ಷದ (ನವೆಂಬರ್‌ನಿಂದ ಅಕ್ಟೋಬರ್) ಮೊದಲ ಏಳು ತಿಂಗಳಿನಲ್ಲಿ 93.65 ಲಕ್ಷ ಟನ್ ಒಟ್ಟು ಎಣ್ಣೆ ಆಮದಾಗಿದ್ದು, ಶೇ 12ರಷ್ಟು ಏರಿಕೆಯಾಗಿದೆ. ಈ ಪೈಕಿ 92.17 ಲಕ್ಷ ಟನ್ ಅಡುಗೆ ಎಣ್ಣೆ ಮತ್ತು 1.47 ಲಕ್ಷ ಟನ್ ಅಡುಗೆಯೇತರ ಎಣ್ಣೆ ಆಗಿದೆ.

ಕಚ್ಚಾ ಸೋಯಾಬೀನ್ ಎಣ್ಣೆ ಆಮದು ಪ್ರಮಾಣವು ಮೇ ತಿಂಗಳಿನಲ್ಲಿ ಹೆಚ್ಚಳವಾಗಿದೆ. ಇದು ಒಟ್ಟಾರೆ ಆಮದು ಹೆಚ್ಚಳಕ್ಕೆ ಕಾರಣ ಎಂದು ತಿಳಿಸಿದೆ.

ಮ್ಯಾಗಿ ನೂಡಲ್ಸ್ ಸುರಕ್ಷಿತ: ನೆಸ್ಲೆ

ನವದೆಹಲಿ (ಪಿಟಿಐ): ಮ್ಯಾಗಿ ನೂಡಲ್ಸ್‌ನಲ್ಲಿ ಕೀಟಗಳಿವೆ ಎಂಬ ಆರೋಪವನ್ನು ನೆಸ್ಲೆ ಇಂಡಿಯಾ ತಿರಸ್ಕರಿಸಿದ್ದು, ಉತ್ಪನ್ನಗಳು ಗುಣಮಟ್ಟವನ್ನು ಹೊಂದಿವೆ ಎಂದು ಹೇಳಿದೆ.

ಮ್ಯಾಗಿ ನೂಡಲ್ಸ್‌ನಲ್ಲಿ ಕೀಟಗಳಿವೆ ಎಂಬ ವಿಷಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಈ ವಿಚಾರವಾಗಿ ಕಂಪನಿಯು ಉತ್ಪನ್ನದ ಗುಣಮಟ್ಟ ಮತ್ತು ಬ್ಯಾಚ್ ಅನ್ನು ಎಫ್‌ಎಸ್‌ಎಸ್‌ಎಐ ಮತ್ತು ಎನ್‌ಎಬಿಎಲ್ ಮಾನ್ಯತೆ ಪಡೆದ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಿತು. ಉತ್ಪನ್ನದ ತಯಾರಿಕೆಯಲ್ಲಿ ಮಾನದಂಡಗಳನ್ನು ಪಾಲಿಸಲಾಗಿದ್ದು, ಯಾವುದೇ ಸ್ವರೂಪದ ಕೀಟಗಳು ಕಂಡು ಬಂದಿಲ್ಲ ಎಂದು ಪ್ರಯೋಗಾಲಯದ ವರದಿ ತಿಳಿಸಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಅಪರಿಚಿತ ಖಾತೆಯಿಂದ ಈ ಆರೋಪ ಬಂದಿದೆ. ಇದಕ್ಕೆ ಪ್ರತಿಕ್ರಿಯಿಸಲು ಖಾತೆಗೆ (ದೂರುದಾರರಿಗೆ) ಸಂಪರ್ಕಿಸಿದಾಗ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಕಂಪನಿಯು ಆಹಾರ ಸುರಕ್ಷತಾ ಮಾನದಂಡಗಳನ್ನು ಉತ್ಪನ್ನಗಳ ತಯಾರಿಕೆಯಲ್ಲಿ ಪಾಲಿಸಿದ್ದು, ಪಾರದರ್ಶಕತೆ ಅನುಸರಿಸಲಾಗಿದೆ. ಈ ಕುರಿತ ದಾಖಲೆಗಳನ್ನು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರಕ್ಕೆ (ಎಫ್‌ಎಸ್‌ಎಸ್‌ಎಐ) ಸಲ್ಲಿಸಲಾಗಿದೆ ಎಂದು ತಿಳಿಸಿದೆ.

ಧೀರಜ್ ಸೇಠ್ ಮುಂದಿನ ಸೇನಾ ಮುಖ್ಯಸ್ಥ

ಒಂದನೇ ಪುಟದಿಂದ...

ಸೇನೆಯಲ್ಲಿ ಆಧುನೀಕರಣ ಮತ್ತು ಕಾರ್ಯತಂತ್ರ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಜಮ್ಮು–ಕಾಶ್ಮೀರದಲ್ಲಿ ಒಳನುಸುಳುಕೋರರ ನಿಗ್ರಹ ಪಡೆ, ಸುದರ್ಶನ ಚಕ್ರ ತಂಡ ಸೇರಿ ಹಲವು ತಂಡಗಳನ್ನು ಮುನ್ನಡೆಸಿದ್ದಾರೆ. ದೆಹಲಿಯಲ್ಲಿ ಪ್ರಧಾನ ಕಮಾಂಡಿಂಗ್ ಅಧಿಕಾರಿಯಾಗಿ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸೇನಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಸೇನಾ ಕಮಾಂಡರ್ ಆಗಿ ಪದೋನ್ನತಿ ಪಡೆದಿದ್ದ ಅವರು, ಪ್ರಮುಖ ಕಾರ್ಯಾಚರಣೆಗಳ ಭಾಗವಾಗಿದ್ದರು. ಸಿಬ್ಬಂದಿ ಮತ್ತು ಕಾರ್ಯತಂತ್ರದ ಹಲವು ಉನ್ನತ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಎರಡೂವರೆ ವರ್ಷಗಳವರೆಗೆ ಅತ್ಯಂತ ಕಠಿಣ ಸಂದರ್ಭಗಳಲ್ಲಿ ಸೇನಾ ಕಾರ್ಯತಂತ್ರ ನಿರ್ವಹಣೆಯ ಜವಾಬ್ದಾರಿ ನಿಭಾಯಿಸಿದ್ದರು.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ರಾಷ್ಟ್ರಪತಿ ವೀಕ್ಷಣೆ: 9 ಮಹಿಳಾ ಕೆಡೆಟ್ ಅಧಿಕಾರಿಗಳು ಸೇನೆಗೆ

ಮಹಿಳಾ ಸೇನಾಧಿಕಾರಿಗಳ ಪಥಸಂಚಲನ

ಡೆಹ್ರಾಡೂನ್ (ಪಿಟಿಐ): ಪ್ರಥಮ ಬಾರಿ ಸೇನೆಗೆ ಸೇರ್ಪಡೆ ಆಗುತ್ತಿರುವ ಒಂಬತ್ತು ಮಹಿಳಾ ಅಧಿಕಾರಿಗಳು ಇರುವ ಭಾರತೀಯ ಸೇನಾ ಅಕಾಡೆಮಿಯ (ಐಎಂಎ) ತಂಡದ ನಿರ್ಗಮನ ಪಥಸಂಚಲನವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ವೀಕ್ಷಿಸಿದರು.

ಐಎಂಎನ ನಿಯಮಿತ ಹಾಗೂ ತಾಂತ್ರಿಕ ಪಠ್ಯಕ್ರಮದಲ್ಲಿ ಪದವಿ ಪೂರೈಸಿ ಹೊರಬಂದವರು ಪಥಸಂಚಲನದಲ್ಲಿ ಭಾಗಿಯಾಗಿದ್ದರು. ಒಂಬತ್ತು ಮಹಿಳಾ ಕೆಡೆಟ್‌ಗಳು ಸೇರಿ ಈ ಬ್ಯಾಚ್‌ನ 515 ಅಧಿಕಾರಿಗಳು ಭಾರತೀಯ ಸೇನೆಗೆ ಸೇರ್ಪಡೆ ಆಗುತ್ತಿದ್ದಾರೆ.

1932ರಲ್ಲಿ ಐಎಂಎ ಅಸ್ತಿತ್ವಕ್ಕೆ ಬಂದಿತ್ತು. ಅಂದಿನಿಂದಲೂ ಪುರುಷ ಅಧಿಕಾರಿಗಳು ತರಬೇತಿ ಪಡೆಯುತ್ತಿದ್ದರು. ಇದೇ ಮೊದಲ ಬಾರಿ ಮಹಿಳಾ ಸೇನಾಧಿಕಾರಿಗಳು ತರಬೇತಿ ಪಡೆದಿದ್ದಾರೆ.

ಕಾರ್ಯಕ್ರಮದಲ್ಲಿ ಉತ್ತರಾಖಂಡದ ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ ಗುರ್ಮಿತ್ ಸಿಂಗ್, ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಸೇನಾ ತರಬೇತಿ ಕಮಾಂಡ್ ಮತ್ತು ಭಾರತೀಯ ಸೇನಾ ಅಕಾಡೆಮಿಯ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಉತ್ತರಾಖಂಡದ ಭಾರತೀಯ ಸೇನಾ ಅಕಾಡೆಮಿಯಲ್ಲಿ ತರಬೇತಿ ಮುಗಿಸಿದ ಸೇನಾ ಅಧಿಕಾರಿಗಳ ಪಥಸಂಚಲನದಲ್ಲಿ ಶನಿವಾರ ಭಾಗಿಯಾಗಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಹಿಳಾ ಸೇನಾಧಿಕಾರಿಗಳ ಮೊದಲ ತಂಡದ ಜೊತೆ ಫೋಟೊ ತೆಗೆಸಿಕೊಂಡರು – ಪಿಟಿಐ ಚಿತ್ರ

ಇದೊಂದು ಮೈಲಿಗಲ್ಲು: ಕಾರ್ಯಕ್ರಮದಲ್ಲಿ ಮಾತನಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ‘ಒಂಬತ್ತು ಮಹಿಳಾ ಅಧಿಕಾರಿಗಳು ಸೇನೆಗೆ ಸೇರುತ್ತಿರುವುದು ಐಎಂಎ ಇತಿಹಾಸದಲ್ಲಿ ಸಂಭ್ರಮದ ಕ್ಷಣವಾಗಿದೆ. ರಕ್ಷಣಾ ಪಡೆಗಳಿಗೆ ಇದು ಮೈಲಿಗಲ್ಲು ಮಾತ್ರವಲ್ಲ. ಮಹಿಳಾ ಪ್ರಗತಿಯೆಡೆಗೆ ಭಾರತದ ಚೇತೋಹಾರಿ ಹೆಜ್ಜೆ’ ಎಂದು ಬಣ್ಣಿಸಿದರು.

ಸೇನಾ ವಿಮಾನ ಪತನ: 5 ಸಿಬ್ಬಂದಿ ಸಾವು

ಒಂದನೇ ಪುಟದಿಂದ...

‘ಅಪಘಾತಕ್ಕೆ ಕಾರಣ ತಿಳಿಯಲು ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆಗೆ ಆದೇಶಿಸಲಾಗಿದೆ’ ಎಂದು ಹೇಳಿದೆ.

ಮೃತರನ್ನು ಸ್ಕ್ವಾಡ್ರನ್ ಲೀಡರ್ ಪ್ರಶಾಂತ್ ಸಿಂಗ್, ಫ್ಲೈಟ್ ಲೆಫ್ಟಿನೆಂಟ್ ಶುಭಂಕುಮಾರ್, ಸಾರ್ಜೆಂಟ್ ಜಿತೇಂದ್ರ ಶರ್ಮಾ, ಅಗ್ನಿವೀರ್ ಖೇಮಾರಾಮ್ ಕುಮಾವತ್, ಅಗ್ನಿವೀರ್ ಡ್ಯಾನೀಶ್ ಆಲಂ ಎಂದು ಗುರುತಿಸಲಾಗಿದೆ. ಸಹ ಪೈಲಟ್ ಬದುಕುಳಿದಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ.

ವಿಮಾನದ ವೈಶಿಷ್ಟ್ಯ: ಅತ್ಯಂತ ಎತ್ತರ ಪ್ರದೇಶ ಹಾಗೂ ಪ್ರತಿಕೂಲ ಪರಿಸ್ಥಿತಿಯಲ್ಲಿ ಕಾರ್ಯಾಚರಣೆ ನಡೆಸಲು ವಿಶೇಷವಾಗಿ ವಿನ್ಯಾಸ ಮಾಡಲಾದ ರಷ್ಯಾ ನಿರ್ಮಿತ ಈ ವಿಮಾನವು ಎರಡು ‘ಟರ್ಬೊಪ್ರಾಪ್ ಎಂಜಿನ್’ಗಳನ್ನು ಒಳಗೊಂಡಿದೆ. ವಾಯುಪಡೆಯಲ್ಲಿ ಇಂತಹ 100 ಸೇನಾ ವಿಮಾನಗಳು ಬಳಕೆಯಲ್ಲಿದ್ದು, ನಾಗರಿಕ ನೆರವು ಹಾಗೂ ಅತ್ಯಂತ ದುರ್ಗಮ ಗುಡ್ಡಗಾಡು ಪ್ರದೇಶಗಳನ್ನು ತಲುಪಲು ಬಳಸಲಾಗುತ್ತದೆ.

7.5 ಟನ್ ಸರಕು ಸಾಗಣೆ, 50 ಪ್ರಯಾಣಿಕರು ಅಥವಾ 42 ಪ್ಯಾರಾಟ್ರೂಪರ್‌ಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಸೈನಿಕರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕರೆದೊಯ್ಯಲು, ಸೇನೆಯ ಸರಕುಗಳನ್ನು ಸಾಗಿಸಲು ಈ ವಿಮಾನಗಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗುತ್ತಿತ್ತು.

ಪ್ರಶಾಂತ್ ಸಿಂಗ್ | ಜಿತೇಂದ್ರ ಶರ್ಮಾ | ಖೇಮಾರಾಮ್ ಕುಮಾವತ್ | ಡ್ಯಾನಿಶ್ ಆಲಂ | ಶುಭಂ ಕುಮಾರ್

ಸೇನಾ ವಿಮಾನ ದುರಂತಗಳು

2016	2019	2026
29 ಮಂದಿ ಸಾವು	13 ಜನರ ಸಾವು	2 ಪೈಲಟ್‌ಗಳ ಸಾವು
ಚೆನ್ನೈನಿಂದ ಪೋರ್ಟ್‌ಬ್ಲೇರ್‌ಗೆ ಹೊರಟಿದ್ದ ಸೇನಾ ವಿಮಾನವು ಬಂಗಾಳ ಕೊಲ್ಲಿಯಲ್ಲಿ ಪತನ	ಜೋರ್ಹಾಟ್‌ನಿಂದ ಹೊರಟಿದ್ದ ಸೇನಾ ವಿಮಾನವೊಂದು ಅರುಣಾಚಲ ಪ್ರದೇಶದಲ್ಲಿ ಪತನ	ಜೋರ್ಹಾಟ್‌ನಿಂದ ಹೊರಟಿದ್ದ ಸುಖೋಯ್ ಎಂ–30 ಕರ್ಬಿ ಅಂಗ್ಲಾಂಗ್‌ನಲ್ಲಿ ಪತನ

ವಿಮಾನ ಪತನಗೊಂಡ ದೃಶ್ಯ–ಪಿಟಿಐ ಚಿತ್ರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

ಸಪ್ನ 1967ರಿಂದ ಭಾರತದ ಅತಿದೊಡ್ಡ ಪುಸ್ತಕ ಭಂಡಾರ

Sapna Since 1967 India's Largest Book Mall

NEW STORE OPENING IN NAGARBHAVI, B'LORE

WE ARE HIRING

AVAILABLE POSITIONS:

Floor Manager | Retail Sales Staff

Cashier & Billers | Data Entry Operators | Helpers

WALK-IN INTERVIEW

18th, 19th, 20th June 2026, between 5 pm & 7 pm

at Sapna Book House

3rd Floor, 3rd Main Rd, Gandhinagar, Bengaluru - 560 009.

Contact : 94487 53991 email : jobs@sapnaretail.com

Marketing & Sales

MARKETING ENGR no2 for Bangalore/ Chennai B E Mech 2years exp with local & Hindi language Ct 9840042085 bangalore@rotocastgroup.com

Drivers

ಕೋರಮಂಗಲದ ಬಳಿ ಇರುವ ಗ್ಯಾಸ್ ಏಜೆನ್ಸಿಗೆ ಡೆಲಿವರಿ ಮಾಡಲು ಆಟೋ ಹೊಂದಿರುವ ಅಥವಾ ಇಲ್ಲದಿರುವ ಚಾಲಕರು ಬೇಕಾಗಿದ್ದಾರೆ.

Mob:9901845505
8971731858
7892518932

Teachers/ Professors

ಆಚಾರ್ಯ ಶ್ರೀ ರಾಕುಂ ಪ್ರೌಢಶಾಲೆ

ಮಾರಗೊಂಡನಹಳ್ಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ಉದ್ಯೋಗಾವಕಾಶಗಳು

ಬೇಕಾಗಿದ್ದಾರೆ: ವೇತನ: 1) ಎನ್‌ಟಿಟಿ/ಮಾಂಟಿಸ್ಸರಿ ಶಿಕ್ಷಕರು 25,000/– 2) ಡಿ.ಎಡ್. ಅರ್ಹತೆಯುಳ್ಳ ಪ್ರಾಥಮಿಕ ಶಾಲಾ ಶಿಕ್ಷಕರು । ವೇತನ: 30,000/– 3) ಬಿ.ಎಡ್. ಅರ್ಹತೆಯುಳ್ಳ ಪ್ರೌಢಶಾಲಾ ಶಿಕ್ಷಕರು ವೇತನ: 35,000/– 4) ಹೆವಿ ವಾಹನ (H.V.) ಪರವಾನಗಿ ಹೊಂದಿರುವ ಶಾಲಾ ಬಸ್ ಚಾಲಕರು ವೇತನ: 20,000/– ಸೌಲಭ್ಯಗಳು ಉಚಿತ ಊಟ ಹಾಗೂ ವಸತಿ ಸೌಲಭ್ಯ ಲಭ್ಯ. ಬಸ್ ಚಾಲಕರ ಪತಿ/ ಪತ್ನಿಯರಿಗೂ ಉದ್ಯೋಗಾವಕಾಶವನ್ನು ಪರಿಗಣಿಸಲಾಗುವುದು. ಮಕ್ಕಳಿಗೆ 10ನೇ ತರಗತಿಯವರೆಗೆ ಉಚಿತ ಇಂಗ್ಲಿಷ್ ಮಾಧ್ಯಮ ಶಿಕ್ಷಣ ನೀಡಲಾಗುವುದು.

ಸಂಪರ್ಕಿಸಿ: ದೂರವಾಣಿ / ವಾಟ್ಸ್ಯಾಪ್: 98453 01354

ಇ–ಮೇಲ್: rakumacharya@gmail.com

ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ಕೂಡಲೇ ಸಂಪರ್ಕಿಸಬಹುದು.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್_ಟ್ಯಾಂಕ್, ಬಾತ್_ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್

Sites

Devanahalli

SALE CORNER site Devanahalli 30 * 44 Akash Medical College Rs.8000 sq ft negotiable - 9560383839

CONNECT

ವ್ಯಾಪಾರ

Business to Business

Business

ಶೂನ್ಯದಿಂದ ಶೂನ್ಯದವರಿಗೆ. ನೊಂದವರ ಜನ ಸೇವಾ ಟ್ರಸ್ಟ್ (ರಿ) ಶೇಷಾದ್ರಿಪುರಂ ಬೆಂಗಳೂರು. ಗೋಲ್ಡ್ ಚಿಟ್ ಫಂಡ್ 1ಲಕ್ಷದಿಂದ - 5 ಲಕ್ಷ , 10ಲಕ್ಷದವರಿಗೆ ಮತ್ತು 1 ಲಕ್ಷದಿಂದ - 5 ಲಕ್ಷದವರಿಗೆ , ಸ್ವಂತ ಮನೆ, ಮತ್ತು ಬಿಸಿನೆಸ್, ಲೋನ್ ಕೂಡಲಾಗುವುದು. ಸಂಪರ್ಕಿಸಿ : 9036316959

HECA ವಿಭಾಗದ ಹಳೆಯ ವಿದ್ಯಾರ್ಥಿಗಳ ‘ಸ್ನೇಹ ಮಿಲನ’ ಕಾರ್ಯಕ್ರಮಕ್ಕೆ ಆಹ್ವಾನ

ಯಲಹಂಕ ಸರ್ಕಾರಿ ಪದವಿ ಪೂರ್ವ ಕಾಲೇಜಿನ 1996–97ನೇ ಸಾಲಿನ HECA ವಿಭಾಗದ ಹಳೆಯ ವಿದ್ಯಾರ್ಥಿಗಳ ‘ಸ್ನೇಹ ಮಿಲನ’ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ದಿನಾಂಕ: 28-06-2026 (ಭಾನುವಾರ) ಬೆಳಿಗ್ಗೆ 9 ಗಂಟೆಯಿಂದ

ನಮ್ಮ 1996–97ರ ಬ್ಯಾಚ್‌ನ ಎಲ್ಲಾ ಹಳೆಯ ಸ್ನೇಹಿತರು, ಹಾಗೆಯೇ ಆ ದಿನಗಳಲ್ಲಿ ನಮಗೆ ವಿದ್ಯಾಭ್ಯಾಸ ನೀಡಿದ, ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಹಾಗೂ ನಿವೃತ್ತರಾಗಿರುವ ಗೌರವಾನ್ವಿತ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ತಮ್ಮ ಕುಟುಂಬ ಸಮೇತರಾಗಿ ಈ ‘ಸ್ನೇಹ ಮಿಲನ’ ಕೂಟಕ್ಕೆ ಪ್ರೀತಿಯಿಂದ ಆಗಮಿಸಬೇಕಾಗಿ ವಿನಂತಿ. ಮುಖ್ಯ ಅತಿಥಿಗಳಾಗಿ ಮಾನ್ಯ ಶಾಸಕರಾದ ಶ್ರೀ ಎಸ್. ಆರ್. ವಿಶ್ವನಾಥ್ ಅವರು ಮತ್ತು ಗೌರವಾನ್ವಿತ ಪ್ರಾಂಶುಪಾಲರಾದ ಶ್ರೀ ಎಂ. ರವಿ ಕುಮಾರ್ ಅವರು ಆಗಮಿಸಲಿದ್ದಾರೆ.

ಸಂಪರ್ಕಿಸಿ: ರಾಜೇಶ್: 9845453961, ಕಿರಣ್: 9845337212

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಧಾನಿ ‘ಅಘೋರಿ’: ರಾವುತ್ ಕಿಡಿ

ಔರಂಗಜೇಬ್ ಬಂದ ಮಣ್ಣಿನಿಂದಲೇ ಮೋದಿ ಬಂದಿದ್ದಾರೆ: ಶಿವಸೇನಾ ಟೀಕೆ

ಪುಣೆ (ಪಿಟಿಐ): ‘ರಾಜಕೀಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಂತಹ ‘ಅಘೋರಿ’ ಮತ್ತು ಕ್ರೂರ ವ್ಯಕ್ತಿಯನ್ನು ನಾನು ಎಂದಿಗೂ ನೋಡಿಲ್ಲ’ ಎಂದು ಶಿವಸೇನಾ (ಯುಬಿಟಿ) ವಕ್ತಾರ, ಸಂಸದ ಸಂಜಯ್ ರಾವುತ್ ಕಿಡಿಕಾರಿದರು.



ಸಂಜಯ್ ರಾವುತ್

‘ಮೋದಿಯ ಸ್ವಭಾವವೇ ಭೀತಿ ಹುಟ್ಟಿಸುತ್ತದೆ. ಅವರು ಎಲ್ಲಿಂದ ಬಂದವರು ಎಂಬುದು ಗೊತ್ತಿಲ್ಲ. ಮೊಘಲ್ ಚಕ್ರವರ್ತಿ ಔರಂಗಜೇಬ್ ಬಂದ ಮಣ್ಣಿನಿಂದಲೇ ಮೋದಿಯೂ ಬಂದಿದ್ದಾರೆ. ಔರಂಗಜೇಬ್ ಗುಜರಾತ್‌ನಲ್ಲಿ ಜನಿಸಿದವರಲ್ಲವೇ?’ ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಈ ದೇಶವು ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ, ಪಿ.ವಿ. ನರಸಿಂಹರಾವ್, ರಾಜೀವ್ ಗಾಂಧಿ, ಬಾಬಾಸಾಹೇಬ್ ಅಂಬೇಡ್ಕರ್, ಬಾಳಾ ಸಾಹೇಬ್ ಠಾಕ್ರೆ ಅವರಂತಹ ಮಹಾನ್ ನಾಯಕರನ್ನು ಸೃಷ್ಟಿಸಿದೆ. ದೇಶದ ರಾಜಕೀಯದಲ್ಲಿ ಮೋದಿಯಂತಹ ಅಘೋರಿ ಮತ್ತು ಕ್ರೂರ ವ್ಯಕ್ತಿ ಹಿಂದೆಂದೂ ಹುಟ್ಟಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕಾಂಗ್ರೆಸ್ ಮುಳುಗುತ್ತಿರುವ ಹಡಗಲ್ಲ’: ‘ಕಾಂಗ್ರೆಸ್ ಮುಳುಗುತ್ತಿರುವ ಹಡಗಲ್ಲ. ಹಿಂದೆ ಪಕ್ಷ ತೊರೆದು ಪ್ರತ್ಯೇಕ ಪಕ್ಷಗಳನ್ನು ರಚಿಸಿದ ನಾಯಕರು ಪುನಃ ಒಂದಾಗಿ ಕಾಂಗ್ರೆಸ್ ಅನ್ನು ಬಲಪಡಿಸಬೇಕು’ ಎಂದು ಅವರು ಪುನರುಚ್ಚರಿಸಿದರು.

‘ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಮುಂದಾಗಬೇಕು. ಪ್ರಾದೇಶಿಕ ಪಕ್ಷಗಳು ನಿಮ್ಮೊಂದಿಗೆ ನಿಲ್ಲುತ್ತವೆ’ ಎಂದ ಅವರು, ‘ಬಿಜೆಪಿಯ ಕೆಟ್ಟ ರಾಜಕೀಯದ ವಿರುದ್ಧ ಹೋರಾಡಲು ಎಲ್ಲರೂ ಒಗ್ಗೂಡಬೇಕಿದೆ’ ಎಂದು ಪ್ರತಿಪಾದಿಸಿದರು.

ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಕಾಂಗ್ರೆಸ್ ಮುಳುಗುತ್ತಿರುವ ಹಡಗು ಎಂದು ಶುಕ್ರವಾರ ಟೀಕಿಸಿದ್ದರು. ಅದಕ್ಕೆ ರಾವುತ್ ಪ್ರತಿಕ್ರಿಯಿಸಿದರು.

‘ಕಾಂಗ್ರೆಸ್‌ಗೆ ಹೆದರುವ ಮೋದಿ’: ‘ಪ್ರಧಾನಿ ಮೋದಿ ಅವರು ಇಂದಿಗೂ ಕಾಂಗ್ರೆಸ್‌ಗೆ ಹೆದರುತ್ತಿದ್ದಾರೆ’ ಎಂದು ಶಿವಸೇನಾ (ಯುಬಿಟಿ) ವಕ್ತಾರ ಹೇಳಿದರು.

ಬಿಜೆಪಿ ನಾಯಕತ್ವದ ಈ ಕೆಟ್ಟ ರಾಜಕೀಯ ಒಂದು ದಿನ ಕೊನೆಗೊಳ್ಳುತ್ತದೆ. ಅವರ ಈ ವಿಕೃತ ರಾಜಕೀಯದ ವಿರುದ್ಧ ಜನ ದಂಗೆ ಏಳುತ್ತಾರೆ ಎಂದರು.

ವಿರೋಧ ಪಕ್ಷಗಳು ಹತಾಶೆಗೊಂಡಿವೆ: ಬಿಜೆಪಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ‘ಅಘೋರಿ’ ಎಂದು ಕರೆದಿರುವ ಶಿವಸೇನಾ (ಯುಬಿಟಿ) ವಕ್ತಾರ ಸಂಜಯ್ ರಾವುತ್ ಅವರನ್ನು ಶನಿವಾರ ತೀವ್ರ ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ, ‘ಇದು ವಿರೋಧ ಪಕ್ಷಗಳು ಹತಾಶೆಯ ಹೊಸ ಮಟ್ಟ ತಲುಪಿರುವುದನ್ನು ತೋರುತ್ತದೆ’ ಎಂದಿದೆ.

ಪ್ರಧಾನಿಯು ಔರಂಗಜೇಬ್ ನಾಡಿನಿಂದ ಬಂದವರು ಎಂದು ಹೇಳುವ ಮೂಲಕ ಅವರು ಇಡೀ ಗುಜರಾತ್ ರಾಜ್ಯವನ್ನು ಅವಮಾನಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

‘ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ನಾಯಕರು ಈ ಹಿಂದೆಯೂ ಮೋದಿ ಅವರ ವಿರುದ್ಧ ಪದೇ ಪದೇ ಅವಹೇಳನಕಾರಿ ಭಾಷೆಗಳನ್ನು ಬಳಸಿದ್ದಾರೆ. 150ಕ್ಕೂ ಹೆಚ್ಚು ಬಾರಿ ನಿಂದನೀಯ ಪದಗಳನ್ನು ಬಳಸಿದ್ದಾರೆ. ಅವರು ರಾಜಕೀಯ ಹತಾಶೆಯಿಂದ ಅದನ್ನು ಮುಂದುವರಿಸಿದ್ದಾರೆ’ ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ವಿಡಿಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೋದಿ ಅವರು ಒಬಿಸಿ ಕುಟುಂಬದಿಂದ ಬಂದವರು, ಚಹಾ ಮಾರಾಟಗಾರರ ಕುಟುಂಬದಿಂದ ಬಂದವರು ಎಂಬ ಕಾರಣಕ್ಕೆ ಅವರನ್ನು ವಿಪಕ್ಷಗಳು ನಿಂದಿಸುತ್ತಿವೆ. ಇದೇ ರೀತಿ ವಿಪಕ್ಷಗಳು ರಾಷ್ಟ್ರಪತಿಯನ್ನೂ ನಿಂದಿಸಿವೆ ಎಂದು ಅವರು ಹೇಳಿದ್ದಾರೆ.

‘ಹೀಗೆ ಕೆಟ್ಟ ಭಾಷೆ ಬಳಸುತ್ತಲೇ ಇರುವ ವಿಪಕ್ಷಗಳು ತಮ್ಮನ್ನು ತಾವು ಪ್ರೀತಿಯನ್ನು ಪ್ರತಿನಿಧಿಸುವುದಾಗಿ ಹೇಳಿಕೊಳ್ಳುತ್ತವೆ. ವಾಸ್ತವದಲ್ಲಿ ಆ ಪಕ್ಷದ ಜನ ಪ್ರೀತಿಯನ್ನು ಪ್ರತಿನಿಧಿಸುತ್ತಿಲ್ಲ, ಬದಲಿಗೆ ನಿಂದಿಸುವುದನ್ನು ಮತ್ತು ಅವಮಾನಿಸುವುದನ್ನು ಪ್ರತಿನಿಧಿಸುತ್ತಿದ್ದಾರೆ. ಹೀಗಾಗಿಯೇ ಆ ಪಕ್ಷಗಳಿಗೆ ಚುನಾವಣೆಗಳಲ್ಲಿ ಸೋಲುಗಳು ಉಂಟಾಗಿವೆ. ಆದರೂ ಅವರು ತಿದ್ದಿಕೊಳ್ಳುತ್ತಿಲ್ಲ’ ಎಂದು ಆರೋಪಿಸಿದರು.

ಚಿಟಿಕೆ ಸುದ್ದಿ

ಜಾಮೀನಿಗೆ ಖಾಲಿದ್, ಇಮಾಮ್ ಮತ್ತೆ ಅರ್ಜಿ

ನವದೆಹಲಿ (ಪಿಟಿಐ): 2020ರ ದೆಹಲಿ ಗಲಭೆ ಪ್ರಕರಣದಲ್ಲಿ ಜಾಮೀನು ಕೋರಿ ಶಾರ್ಜೀಲ್ ಇಮಾಮ್ ಮತ್ತು ಉಮರ್ ಖಾಲಿದ್ ದೆಹಲಿ ಹೈಕೋರ್ಟ್‌ಗೆ ಮತ್ತೆ ಅರ್ಜಿ ಸಲ್ಲಿಸಿದ್ದಾರೆ.

ಆರು ತಿಂಗಳ ಹಿಂದೆ ಸುಪ್ರೀಂ ಕೋರ್ಟ್ ಜಾಮೀನು ಅರ್ಜಿಯನ್ನು ವಜಾಗೊಳಿಸಿದ ನಂತರವೂ ವಿಚಾರಣೆಯಲ್ಲಿ ಯಾವುದೇ ಪ್ರಗತಿಯಾಗಿಲ್ಲ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಸುಮೇಧ್ ಸೈನಿ ಅವರು ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವಂತೆ ದೆಹಲಿ ಪೊಲೀಸ್‌ಗೆ ಸೂಚನೆ ನೀಡಿ, ಅರ್ಜಿ ವಿಚಾರಣೆಯನ್ನು ಜುಲೈ 4ಕ್ಕೆ ನಿಗದಿಪಡಿಸಿದ್ದಾರೆ.

2020ರ ದೆಹಲಿ ಗಲಭೆಗೆ ಸಂಚು ರೂಪಿಸಿದವರು ಎಂಬ ಆರೋಪದ ಮೇಲೆ ಖಾಲಿದ್ ಮತ್ತು ಇಮಾಮ್ ಅವರ ವಿರುದ್ಧ ಯುಎಪಿಎ ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಅಯೋಧ್ಯೆ: ಕಾಣಿಕೆಗಳ ದುರುಪಯೋಗ ತನಿಖೆಗೆ ಎಸ್‌ಐಟಿ

ಲಖನೌ: ಅಯೋಧ್ಯೆಯ ಶ್ರೀರಾಮ ಮಂದಿರಕ್ಕೆ ಸಲ್ಲಿಸಿದ ಕಾಣಿಕೆಗಳ ದುರುಪಯೋಗಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ಸಮಿತಿಯಿಂದ (ಸಿಬಿಐ) ತನಿಖೆ ನಡೆಸುವಂತೆ ಕೋರಿ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಾಗಿದ್ದು, ಆರೋಪ ಕುರಿತಂತೆ ತನಿಖೆ ನಡೆಸಲು ಮೂವರು ಸದಸ್ಯರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಬಳಿ ಎಸ್‌ಐಟಿ ರಚಿಸುವಂತೆ ಟ್ರಸ್ಟ್ ಮನವಿ ಸಲ್ಲಿಸಿತ್ತು.

ಭದ್ರತಾ ಸಿಬ್ಬಂದಿಯ ನಿಗಾದ ನಡುವೆಯೇ ಕೋಟ್ಯಂತರ ರೂಪಾಯಿ ದುರುಪಯೋಗವಾಗಿರುವ ಕುರಿತಂತೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಟ್ರಸ್ಟ್ ಮನವಿ ಮಾಡಿತ್ತು.

‘ಭದ್ರತಾ ವ್ಯವಸ್ಥೆ, ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ ಭದ್ರತಾ ಸಿಬ್ಬಂದಿಯ ಕಾರ್ಯನಿರ್ವಹಣೆಯ ಕುರಿತಂತೆ ಎಸ್‌ಐಟಿಯಿಂದಲೇ ತನಿಖೆ ನಡೆಸುವ ಅಗತ್ಯವಿದೆ’ ಎಂದು ಟ್ರಸ್ಟ್ ತಿಳಿಸಿತ್ತು.

ಮತ್ತೊಂದೆಡೆ, ‘ಅಯೋಧ್ಯೆ ಜಿಲ್ಲೆಯ ಪಗೌಲಿ ಗ್ರಾಮದಲ್ಲಿರುವ ಲವ್‌ಕುಶ್ ಮಿಶ್ರಾ ಅವರ ಮನೆಯ ಮೇಲೆ ದಾಳಿ ನಡೆಸಿರುವ ಪೊಲೀಸರ ತಂಡವು ₹12 ಲಕ್ಷ ನಗದು ವಶಪಡಿಸಿಕೊಂಡಿದೆ.

ಬಾಂಗ್ಲಾ ವ್ಯಕ್ತಿ ಸೆರೆ

ಸಹರಾನ್‌ಪುರ (ಪಿಟಿಐ): 17 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಬಾಂಗ್ಲಾದೇಶದ ನಾಗರಿಕನೊಬ್ಬನನ್ನು ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಮತ್ತು ಸಹರಾನ್‌ಪುರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, ಬಂಧಿಸಿದ್ದಾರೆ.

ಪಂಜಾಬ್‌ನ ದೇರಾ ಬಸ್ಸಿ ನಿವಾಸಿ ಅಹ್ಮದ್ ಫಕೀರ್ ಎಂಬುವರ ಪುತ್ರ ಝೂಹಿದ್ ಬಂಧಿತ ವ್ಯಕ್ತಿ. ಫಕೀರ್ ಬಾಂಗ್ಲಾದವರು.

ಝೂಹಿದ್ ಸುಳಿವು ಕೊಟ್ಟವರಿಗೆ ₹25 ಸಾವಿರ ಬಹುಮಾನ ಘೋಷಿಸಲಾಗಿತ್ತು. ‘ಸೈಫಾನ್ ಪುಲಿಯಾ ಬಳಿ ಆತನನ್ನು ಬಂಧಿಸಲಾಗಿದೆ. ನಕಲಿ ಆಧಾರ್ ಕಾರ್ಡ್, ಬಾಂಗ್ಲಾದೇಶಿ ಗುರುತಿನ ದಾಖಲೆಗಳು ಹಾಗೂ ಕೆಲವು ಅನುಮಾನಾಸ್ಪದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಾಂಗ್ಲಾದಿಂದ ಕೆಲವರು ಕೆಲಸಕ್ಕಾಗಿ ಬಂದು ಅಕ್ರಮವಾಗಿ ನೆಲಸಿದ್ದಾರೆ ಎಂಬ ಗುಪ್ತಚರ ವಿಭಾಗದ ಮಾಹಿತಿ ಆಧರಿಸಿ 2009ರಲ್ಲಿ ಕುತುಬ್‌ಶೇರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಈ ಪ್ರಕರಣದಲ್ಲಿ ಮೂವರಿಗೆ ಶಿಕ್ಷೆ ವಿಧಿಸಲಾಗಿತ್ತು. ಜಾಮೀನು ಪಡೆದು ಹೊರಗಿದ್ದ ಝೂಹಿದ್, ನ್ಯಾಯಾಲಯದ ಪ್ರಕ್ರಿಯೆಯಿಂದ ತಪ್ಪಿಸಿಕೊಂಡಿದ್ದ. ಈತನ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿಯಾಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

‘18 ವರ್ಷ ಮೇಲ್ಪಟ್ಟವರಿಗೆ ಆಧಾರ್ ವಿತರಣೆಗೆ ನಿರ್ಬಂಧ’

ಗುವಾಹಟಿ (ಪಿಟಿಐ): 18 ವರ್ಷ ಮೇಲ್ಪಟ್ಟವರಿಗೆ ಹೊಸದಾಗಿ ಆಧಾರ್ ಕಾರ್ಡ್‌ಗಳನ್ನು ವಿತರಿಸದಂತೆ ನಿರ್ಬಂಧ ವಿಧಿಸಲು ಸಂಪುಟ ಸಮಿತಿ ನಿರ್ಧರಿಸಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಶನಿವಾರ ಹೇಳಿದ್ದಾರೆ.

ಬಾಂಗ್ಲಾ ಅಕ್ರಮ ವಲಸಿಗರು ಆಧಾರ್ ಕಾರ್ಡ್‌ಗಳನ್ನು ಪಡೆಯದಂತೆ ತಡೆಯುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದ್ದಾರೆ.

18 ವರ್ಷ ಮೇಲ್ಪಟ್ಟವರಿಗೆ ಆಧಾರ್ ನೀಡಲೇಬೇಕಾದ ವಿಶಿಷ್ಟ ಪ್ರಕರಣ ಇದ್ದರೆ, ಅಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿ ಆಧಾರ್ ಕಾರ್ಡ್ ಒದಗಿಸಲು ಅನುಮತಿ ಪಡೆಯಬೇಕು. ಅರ್ಜಿದಾರರು ಆಧಾರ್ ಪಡೆಯಲು ಅರ್ಹರೋ, ಅಲ್ಲವೋ ಎಂಬುದನ್ನು ಸರ್ಕಾರ ನಿರ್ಧರಿಸಲಿದೆ ಎಂದೂ ಶರ್ಮಾ ಹೇಳಿದ್ದಾರೆ.

ಸುದೀಪ್ ಬಂಡೋಪಾಧ್ಯಾಯ–ಭೂಪೇಂದ್ರ ಯಾದವ್ ಸಭೆ

ಕೋಲ್ಕತ್ತ (ಪಿಟಿಐ): ಟಿಎಂಸಿಯಲ್ಲಿ ಆಂತರಿಕ ಬಂಡಾಯ ಭುಗಿಲೆದ್ದಿರುವ ನಡುವೆಯೇ, ಪಕ್ಷದ ಹಿರಿಯ ಸಂಸದ ಸುದೀಪ್ ಬಂಡೋಪಾಧ್ಯಾಯ ಮತ್ತು ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರು ದೆಹಲಿಯಲ್ಲಿ ಸಭೆ ನಡೆಸಿರುವುದು ಹೊಸ ರಾಜಕೀಯ ಲೆಕ್ಕಾಚಾರಗಳಿಗೆ ಕಾರಣವಾಗಿದೆ.

ಸುದೀಪ್

ಬಂಡೋಪಾಧ್ಯಾಯ ಅವರು ಭಿನ್ನಮತೀಯ ಸಂಸದ ಶತಾಬ್ದಿ ರಾಯ್ ಅವರೊಂದಿಗೆ ಯಾದವ್ ಅವರನ್ನು ಭೇಟಿ ಮಾಡಿದ್ದು, ಅವರು ಟಿಎಂಸಿ ಭಿನ್ನಮತೀಯ ಸಂಸದರ ಗುಂಪು ಸೇರುವರೇ ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ.

ಕೋಲ್ಕತ್ತ ಉತ್ತರ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಬಂಡೋಪಾಧ್ಯಾಯ ಅವರು ಟಿಎಂಸಿಯ ಅತ್ಯಂತ ಹಿರಿಯ ಸಂಸದರು. ಮಮತಾ ಬ್ಯಾನರ್ಜಿ ಅವರು ನೇತೃತ್ವದ ಟಿಎಂಸಿಯ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಈ ಬೆಳವಣಿಗೆಯು ಮಹತ್ವದ್ದಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಟಿಎಂಸಿ ವಕ್ತಾರ ಕುನಾಲ್ ಘೋಷ್, ‘ಬಂಡೋಪಾಧ್ಯಾಯ ಅವರ ಅಧಿಕಾರ ಮತ್ತು ಸ್ಥಾನದ ಆಸೆಯಿಂದ ಟಿಎಂಸಿ ಹಲವು ಪ್ರಮುಖ ನಾಯಕರನ್ನು ಕಳೆದುಕೊಂಡಿದೆ. ತಪಸ್ ರಾಯ್ ಮತ್ತು ಸಂಜಯ್ ಘೋಷ್ ಅವರಂತಹ ನಾಯಕರು ಬಂಡೋಪಾಧ್ಯಾಯ ಅವರ ಕಾರಣದಿಂದ ಪಕ್ಷವನ್ನು ತೊರೆದರು. ಅವರ ವಿರುದ್ಧ ಮಾತನಾಡಿದ್ದಕ್ಕಾಗಿ ನನ್ನನ್ನೂ ಅವಮಾನತು ಮಾಡಲಾಗಿತ್ತು. ಬಂಡೋಪಾಧ್ಯಾಯ ಎಂಥ ವ್ಯಕ್ತಿ ಎಂಬುದು ಈಗ ಪಕ್ಷದ ನಾಯಕತ್ವಕ್ಕೆ ಅರ್ಥವಾಗಲಿದೆ’ ಎಂದು ಹೇಳಿದರು.

ಮಂಜಿನ ಮಾತು...

ಪಿಟಿಐ ಚಿತ್ರ

ಹಿಮಾಚಲ ಪ್ರದೇಶದ ಮನಾಲಿಯ ರೋಹತಾಂಗ್ ಪಾಸ್ ಬಳಿ ಹಿಮಾಚ್ಛಾದಿತ ಪರ್ವತ ಪ್ರದೇಶಕ್ಕೆ ಪ್ರವಾಸಿಗರು ಶನಿವಾರ ಭೇಟಿ ನೀಡಿದ್ದರು

6ರಿಂದ 9ರವರೆಗೆ ಸಂಸ್ಕೃತ ಸೆಕ್ಷನ್ ಕಡ್ಡಾಯ

ನವದೆಹಲಿ (ಪಿಟಿಐ): 2026-27ನೇ ಸಾಲಿನ ಶೈಕ್ಷಣಿಕ ವರ್ಷದ ತೃತೀಯ ಭಾಷಾ ಅನುಷ್ಠಾನದ ಚೌಕಟ್ಟಿನ ಅಡಿಯಲ್ಲಿ 6ರಿಂದ 9ನೇ ತರಗತಿಯವರೆಗೆ ಮೂರನೇ ಭಾಷೆಯ ಭಾಗವಾಗಿ ಸಂಸ್ಕೃತದ ಒಂದು ಸೆಕ್ಷನ್ ಇರುವುದನ್ನು ಕೇಂದ್ರೀಯ ವಿದ್ಯಾಲಯ ಸಂಘಟನೆ ಕಡ್ಡಾಯಗೊಳಿಸಿದೆ.

ಮೇ 29ರಂದು ಅಧಿಸೂಚನೆ ಹೊರಡಿಸಲಾಗಿದೆ. ಪೋಷಕರು, ಮಕ್ಕಳಿಂದ ತೃತೀಯ ಭಾಷೆಯ ಆಯ್ಕೆಯ ಚೌಕಟ್ಟನ್ನು ಪೂರ್ಣಗೊಳಿಸಿರಬೇಕು ಎಂದು ಶಿಕ್ಷಣ ಇಲಾಖೆಯ ಅಧೀನದ ಸ್ವಾಯತ್ತ ಸಂಸ್ಥೆಯು ತಿಳಿಸಿದೆ.

3ನೇ ಭಾಷೆಯಾಗಿ ಹಿಂದಿ ಅಥವಾ ಇಂಗ್ಲಿಷ್ ಹೊರತುಪಡಿಸಿ ಸಂಸ್ಕೃತ ಅಥವಾ ರಾಜ್ಯಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಸ್ಪಷ್ಟಪಡಿಸಿದೆ.

‘ವಿದ್ಯಾರ್ಥಿಗಳು ತಮ್ಮ ಆಯ್ಕೆಗೆ ತಕ್ಕಂತೆ ಸಂಸ್ಕೃತ ಅಥವಾ ಪ್ರಾದೇಶಿಕ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ವರ್ಗಾವಣೆ ಹೊಂದುವ ಉದ್ಯೋಗಿಗಳ ಮಕ್ಕಳ ಅನುಕೂಲಕ್ಕಾಗಿ ಪ್ರತಿ ಶಾಲೆಯಲ್ಲಿ ಒಂದು ಸಂಸ್ಕೃತ ಸೆಕ್ಷನ್ ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶಾಲಾ ಮಟ್ಟದಲ್ಲಿ ಸಿಬ್ಬಂದಿಯನ್ನು ಅಗತ್ಯಕ್ಕೆ ತಕ್ಕಂತೆ ವ್ಯವಸ್ಥೆ ಮಾಡಲು ಅನುಕೂಲವಾಗುವಂತೆ, 3ನೇ ಭಾಷೆಯಾಗಿ ಆಯ್ಕೆ ಮಾಡುವ ವಿದ್ಯಾರ್ಥಿಗಳು ಈ ಮಾಹಿತಿಯನ್ನು ‘ಸಮಾಗಮ್ ಪೋರ್ಟಲ್’ನಲ್ಲಿ ದಾಖಲಿಸುವಂತೆ ತಿಳಿಸಲಾಗಿದೆ.

ಎನ್‌ಟಿಎ: ಪರೀಕ್ಷಾ ಅಧಿಕಾರಿಗಳಿಗೆ ಡಿಜಿಟಲ್ ತರಬೇತಿ

‘ನೀಟ್–ಯುಜಿ’ ಸೇರಿದಂತೆ ತಾನು ನಡೆಸುವ ವಿವಿಧ ಪರೀಕ್ಷೆಗಳ ಮೇಲ್ವಿಚಾರಣೆಯನ್ನು ಬಲಪಡಿಸಲು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಪರೀಕ್ಷಾ ಅಧಿಕಾರಿಗಳಿಗೆ ‘ಐಜಿಒಟಿ ಕರ್ಮಯೋಗಿ ಭಾರತ್ ವೇದಿಕೆ’ ಮೂಲಕ ಡಿಜಿಟಲ್ ತರಬೇತಿ ಆರಂಭಿಸಿದೆ.

‘ಪರೀಕ್ಷಾ ಕರ್ಮಯೋಗಿ: ಪರೀಕ್ಷಾ ಅಧಿಕಾರಿಗಳಿಗೆ ಸಾಮರ್ಥ್ಯ– ನಿರ್ಮಾಣ ಕಾರ್ಯಕ್ರಮ’ ಎಂಬ ಶೀರ್ಷಿಕೆಯಡಿ ಪರೀಕ್ಷಾ ಅಧಿಕಾರಿಗಳ ಸಾಮರ್ಥ್ಯ ಬಲಪಡಿಸುವ ಉದ್ದೇಶವನ್ನು ಈ ತರಬೇತಿ ಹೊಂದಿದೆ.

ಆಫ್‌ಲೈನ್, ಪೆನ್ನು, ಕಾಗದ ಆಧಾರಿತ ಪರೀಕ್ಷೆಗಳನ್ನು ಸುಗಮ, ಸುರಕ್ಷಿತ ಮತ್ತು ಪ್ರಮಾಣೀಕೃತ ರೀತಿಯಲ್ಲಿ ನಡೆಸಲು ಉಪಯುಕ್ತವಾಗುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಎನ್‌ಟಿಎ ಪ್ರಕಟಣೆಯಲ್ಲಿ ತಿಳಿಸಿದೆ.

ನ್ಯಾಯಸಮ್ಮತ, ಪಾರದರ್ಶಕ ರೀತಿಯಲ್ಲಿ ಪರೀಕ್ಷೆ ನಡೆಸುವುದು ಮತ್ತು ಪರೀಕ್ಷಾ ಸಮಗ್ರತೆಯನ್ನು ಕಾಪಾಡಿಕೊಳ್ಳುವಲ್ಲಿ ಪರೀಕ್ಷಾ ಮೇಲ್ವಿಚಾರಕರ ಪಾತ್ರದ ಕುರಿತು ಪರಿಚಯಿಸಲಾಗುತ್ತದೆ. ಪರೀಕ್ಷಾ ಕೇಂದ್ರದ ಸಿದ್ಧತೆ, ಭದ್ರತಾ ವ್ಯವಸ್ಥೆ, ಪ್ರಾಮಾಣಿಕ ಕಾರ್ಯಾಚರಣಾ ವಿಧಾನಗಳ ಅನುಸರಣೆ, ಪರೀಕ್ಷೆಗೂ ಮುನ್ನ, ಪರೀಕ್ಷೆ ಆರಂಭದಲ್ಲಿ, ಪರೀಕ್ಷೆ ವೇಳೆಯಲ್ಲಿ ಮತ್ತು ಪರೀಕ್ಷೆ ಮುಗಿದ ನಂತರ ಕೈಗೊಳ್ಳಬೇಕಾದ ಕಾರ್ಯಗಳ ಕುರಿತು ಇಲ್ಲಿ ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ ಎಂದು ಎನ್‌ಟಿಎ ಹೇಳಿದೆ.

‘ಶೂನ್ಯ’ ಶಾಲೆಗಳ ಭವಿಷ್ಯ: ಸದ್ಯವೇ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳ ಸಂಖ್ಯೆ ಕಡಿಮೆ ಇರುವ ಶಾಲೆಗಳ ಭವಿಷ್ಯ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಿ, ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.

‘964 ಶಾಲೆಗಳಲ್ಲಿ ಶೂನ್ಯ ದಾಖಲಾತಿ ಇದೆ. 1ರಿಂದ 5 ಮಕ್ಕಳಿರುವ ಶಾಲೆಗಳು 3,542, 6ರಿಂದ 20 ವಿದ್ಯಾರ್ಥಿಗಳಿರುವ ಶಾಲೆಗಳು 12,696 ಇವೆ. ಕೆಲವು ಶಿಕ್ಷಕರು ಮಕ್ಕಳೇ ಇಲ್ಲದ ಶಾಲೆಗಳಿಗೆ ಒಬ್ಬಿಬ್ಬರನ್ನು ಸೇರಿಸಿ, ವೇತನ ಪಡೆಯುತ್ತಿರುವ ಪ್ರಕರಣಗಳು ವರದಿಯಾಗಿವೆ. ಇಂತಹ ನಡವಳಿಕೆಗೆ ಕಡಿವಾಣ ಹಾಕಲಾಗುವುದು’ ಎಂದರು.

‘ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಲ್ಲಿ ಶೇ 2ರಷ್ಟು ಮೊತ್ತವನ್ನು ಗ್ರಾಮೀಣ ಶಾಲೆಗಳಿಗೆ ಬಳಸಲು ನಿರ್ಧರಿಸಲಾಗಿದೆ. ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ, ಪಠ್ಯ ಪುಸ್ತಕಗಳ ವಿತರಣಾ ಕೆಲಸವನ್ನು ಇದೇ ತಿಂಗಳಲ್ಲೇ ಪೂರ್ಣಗೊಳಿಸಲಾಗುವುದು’ ಎಂದರು.

ಮಳೆ ಮುಂಜಾಗ್ರತಾ ಕ್ರಮ: ‘ಮಳೆಗಾಲ ಆರಂಭವಾಗುತ್ತಿದ್ದು, ಬಿತ್ತನೆ ಕಾರ್ಯ ಶುರುವಾಗುತ್ತಿದೆ. ಬಿತ್ತನೆ ಬೀಜ, ರಸಗೊಬ್ಬರ ಲಭ್ಯತೆಗೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಶಿವಕುಮಾರ್ ಹೇಳಿದರು.

ವರ್ತುಲ ರಸ್ತೆ: ಎಲ್ಲ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲೂ ವರ್ತುಲ ರಸ್ತೆ ನಿರ್ಮಿಸಲಾಗುವುದು. ತಕ್ಷಣವೇ ಕಾರ್ಯಗತ ಮಾಡದಿದ್ದರೂ ಅದಕ್ಕಾಗಿ ಯೋಜನೆಯ ನೀಲನಕ್ಷೆ ಸಿದ್ಧಪಡಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಮತ್ತೆ ಜನಸ್ಪಂದನಕ್ಕೆ ಜೀವ: ‘ಜಿಲ್ಲಾ ಮಟ್ಟದಲ್ಲೇ ಜನರ ಸಮಸ್ಯೆ ಬಗೆಹರಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಬೇಕು. ಶಾಸಕರು ಪಂಚಾಯ್ತಿ ಹಾಗೂ ಹೋಬಳಿಮಟ್ಟದಲ್ಲಿ ಜನಸಂಪರ್ಕ ಸಭೆ ಮಾಡಬೇಕು. ಅದಕ್ಕೆ ಅಗತ್ಯವಿರುವ ಆರ್ಥಿಕ ವ್ಯವಸ್ಥೆ ಮಾಡಲಾಗುವುದು. ಆಗ ಜನರು ಜಿಲ್ಲಾ ಕೇಂದ್ರ ಹಾಗೂ ಬೆಂಗಳೂರಿಗೆ ಬರುವುದು ಕಡಿಮೆಯಾಗುತ್ತದೆ’ ಎಂದು ಶಿವಕುಮಾರ್ ಹೇಳಿದರು.

ಅಧಿಕಾರಿಗಳಿಗೆ ಕೈಮುಗಿದ ಸಿ.ಎಂ

ಸಭೆ ಆರಂಭಕ್ಕೂ ಅರ್ಧ ಗಂಟೆ ಮೊದಲೇ ಎಲ್ಲ ಇಲಾಖೆಗಳ ಮುಖ್ಯಸ್ಥರು, ಜಿಲ್ಲಾ ಮಟ್ಟದ ಅಧಿಕಾರಿಗಳು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಿಗದಿಪಡಿಸಿದ್ದ ಕುರ್ಚಿಯಲ್ಲಿ ಆಸೀನರಾಗಿದ್ದರು. ಮುಖ್ಯಮಂತ್ರಿ ಶಿವಕುಮಾರ್ ಸಭಾಂಗಣದ ಒಳಗೆ ಬರುತ್ತಿದ್ದಂತೆ ಅಧಿಕಾರಿಗಳು ಎದ್ದು ನಿಂತು ಗೌರವ ಸೂಚಿಸಿದರು. ಶಿವಕುಮಾರ್ ಅವರು ನೇರವಾಗಿ ಅಧಿಕಾರಿಗಳು ಕುಳಿತಲ್ಲಿಗೇ ತೆರಳಿ, ಪ್ರತಿಯೊಬ್ಬರಿಗೂ ಕೈ ಮುಗಿದು ನಮಸ್ಕರಿಸಿದರು. ಜೊತೆಗೆ, ಪೊಲೀಸ್ ಅಧಿಕಾರಿಗಳಿಗೆ ಸಲ್ಯೂಟ್ ಹೊಡೆದು ಸಭೆ ಆರಂಭಿಸಿದರು. ಸುಮಾರು 7 ಗಂಟೆ ಶಿವಕುಮಾರ್ ಸಭೆ ನಡೆಸಿದರು.

ನಕಲಿ ಹಣಕಾಸು ಸಂಸ್ಥೆಗಳ ನಿಗ್ರಹಕ್ಕೆ ಕ್ರಮ

ನಕಲಿ ಹಣಕಾಸು ಸಂಸ್ಥೆಗಳ ನಿಗ್ರಹಕ್ಕೆ ಸರ್ಕಾರ ಮಸೂದೆ ಜಾರಿಗೆ ತಂದಿದ್ದರೂ ಪ್ರಕರಣ ವರದಿಯಾಗುತ್ತಿವೆ. ಪ್ರತಿ ಜಿಲ್ಲೆಯಲ್ಲೂ ಜಿಲ್ಲಾಧಿಕಾರಿಗಳು, ಎಸ್‌ಪಿಗಳಿಗೆ ಕಡಿವಾಣ ಹಾಕಬೇಕು ಎಂದು ಸೂಚಿಸಲಾಗಿದೆ ಎಂದು ಶಿವಕುಮಾರ್ ಹೇಳಿದರು.

ಜನರನ್ನು ವಂಚಿಸುತ್ತಿರುವ ಸ್ಕೀಂಗಳ ಬಗ್ಗೆ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದು, ವರದಿ ಬಂದ ಬಳಿಕ ಕಾನೂನು ಬಾಹಿರ ಹಣಕಾಸು ವ್ಯವಹಾರಗಳನ್ನು ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳಬಹುದು. ಕಾನೂನು ಚೌಕಟ್ಟಿನಲ್ಲಿ ನಡೆಸುವವರಿಗೆ ನಾವು ಏನೂ ಮಾಡಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಕೆಲವು ತೀರ್ಮಾನ ಮಾಡಿ ಅವಕಾಶ ಕೊಟ್ಟಿದೆ. ಅದರ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದಾರಾ ಇಲ್ಲವೇ ಎಂದು ಪರಿಶೀಲನೆ ಮಾಡಲಾಗುವುದು. ಈ ಬಗ್ಗೆ ಜನರಲ್ಲೂ ಜಾಗೃತಿ ಮೂಡಿಸುತ್ತೇವೆ ಎಂದರು.

ಗಾಂಜಾ, ಅಫೀಮು ಪ್ರಕರಣಗಳಿಗೆ ಸಂಪೂರ್ಣ ಕಡಿವಾಣ ಹಾಕಬೇಕು. ಪ್ರತಿ ಠಾಣೆಯಲ್ಲೂ ಐದು ಪೊಲೀಸರ ತಂಡವನ್ನು ರಚಿಸಿ, ರೌಡಿಗಳನ್ನು ನಿಗ್ರಹಿಸಲು, ಸೈಬರ್ ಅಪರಾಧ ತಡೆಯಲು ಸೂಚಿಸಿದ್ದೇನೆ ಎಂದು ಶಿವಕುಮಾರ್ ಹೇಳಿದರು.

17ರಿಂದ ಪ್ರಶ್ನೆಪತ್ರಿಕೆ ಸೋರಿಕೆ ವಿರುದ್ಧ ಕಾಂಗ್ರೆಸ್ ಅಭಿಯಾನ

ನವದೆಹಲಿ (ಪಿಟಿಐ): ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ಅವ್ಯವಹಾರಗಳನ್ನು ವಿರೋಧಿಸಿ ಜೂನ್ 17ರಿಂದ ಕಾಂಗ್ರೆಸ್ ರಾಷ್ಟ್ರವ್ಯಾಪಿ ಅಭಿಯಾನ ನಡೆಸಲಿದೆ. ರಾಹುಲ್ ಗಾಂಧಿ ಅವರು ವಿದ್ಯಾರ್ಥಿಗಳ ಸಮಾವೇಶಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಪಕ್ಷವು ಶನಿವಾರ ಘೋಷಿಸಿದೆ.

‘ರಾಜಸ್ಥಾನದ ಕೋಟಾದಿಂದಲೇ ಅಭಿಯಾನವನ್ನು ಆರಂಭಿಸಲಾಗುವುದು. ಅಭಿಯಾನವು ರಾಜಕೀಯದ ಆಚೆಗೆ ವಿದ್ಯಾರ್ಥಿಗಳನ್ನು ಒಗ್ಗೂಡಿಸಲು ಪ್ರಯತ್ನಿಸಲಿದೆ ಮತ್ತು ಸಂತ್ರಸ್ತ ವಿದ್ಯಾರ್ಥಿಗಳು ತಮ್ಮ ಅನುಭವವನ್ನು ಹಂಚಿಕೊಳ್ಳಲು ವೇದಿಕೆ ನೀಡಲಿದೆ. ನಿರಂತರ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ವೈಫಲ್ಯಗಳಿಗೆ ಉತ್ತರದಾಯಿತ್ವಕ್ಕಾಗಿ ಆಗ್ರಹಿಸಲಿದೆ’ ಎಂದು ತಿಳಿಸಿದೆ.

‘ರಾಹುಲ್ ಗಾಂಧಿ ಅವರು ಕೋಟಾ (ಜೂ. 17), ಅಲಹಾಬಾದ್ (ಜುಲೈ 10), ಪಟ್ನಾ (ಜುಲೈ 11), ದೆಹಲಿ (ಜುಲೈ 14)ಯಲ್ಲಿ ವಿದ್ಯಾರ್ಥಿಗಳ ಸಮಾವೇಶವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ’ ಎಂದು ತಿಳಿಸಿದ್ದಾರೆ.

‘ಈಗಲೇ ಗೆದ್ದಂತಾಗಿದೆ’: ‘ಜೂನ್ 8ರಂದು ನಡೆದಿದ್ದ ಸಭೆಯಲ್ಲಿ ಇಂಡಿಯಾ ಬಣದ ಒಗ್ಗಟ್ಟನ್ನು ನೋಡಿದರೆ 2024ರ ಲೋಕಸಭಾ ಚುನಾವಣೆಯಲ್ಲಿ ಸೋತಿಲ್ಲ. 2029ರ ಚುನಾವಣೆಯನ್ನು ಈಗಾಗಲೇ ಗೆದ್ದಂತಾಗಿದೆ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ತಿಳಿಸಿದ್ದಾರೆ.

ಖಂಡಾಂತರ ಕ್ಷಿಪಣಿ ವ್ಯವಸ್ಥೆ ಯಶಸ್ವಿ ಪ್ರಯೋಗ

ನವದೆಹಲಿ (ಪಿಟಿಐ): ಬಹುಸ್ತರದ ಖಂಡಾಂತರ ಕ್ಷಿಪಣಿ ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದ ಪರೀಕ್ಷೆಗಳನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಈ ವಾರ ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಶತ್ರು ದೇಶಗಳ ದೀರ್ಘ ಮತ್ತು ಮಧ್ಯಮ ವ್ಯಾಪ್ತಿಯ ಪರಮಾಣು ಕ್ಷಿಪಣಿಗಳು ಮತ್ತು ಯುದ್ಧವಿಮಾನಗಳು ಗುರಿಯನ್ನು ತಲುಪುವ ಮುನ್ನವೇ ಹೊಡೆದುರುಳಿಸುವ ಸಾಮರ್ಥ್ಯವನ್ನು ಈ ವ್ಯವಸ್ಥೆಯು ಹೊಂದಿದೆ.

‘ಶತ್ರು ದೇಶಗಳ ವಿವಿಧ ರೀತಿಯ ಬೆದರಿಕೆಗಳ ವಿರುದ್ಧ ಬಹುಸ್ತರದ ಖಂಡಾಂತರ ಕ್ಷಿಪಣಿ ವ್ಯವಸ್ಥೆಯ ಸಾಮರ್ಥ್ಯ ಪರೀಕ್ಷೆಗಾಗಿ ಜೂನ್ 10 ಮತ್ತು 11ರಂದು ಮೂರು ಬಾರಿ ಪ್ರಯೋಗ ನಡೆಸಲಾಗಿತ್ತು’ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ವ್ಯವಸ್ಥೆಯನ್ನು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ವಿನ್ಯಾಸ ಮತ್ತು ಅಭಿವೃದ್ಧಿಗೊಳಿಸಲಾಗಿದೆ ಎಂದು ತಿಳಿಸಿದೆ.

ಅಲಿ ಖಮೇನಿ ಅಂತ್ಯಕ್ರಿಯೆ ಜುಲೈ 9ಕ್ಕೆ

ಟೆಹರಾನ್ (ಎಎಫ್‌ಪಿ): ಇರಾನ್‌ನ ಮಾಜಿ ಪರಮೋಚ್ಚ ನಾಯಕ, ದಿವಂಗತ ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಕ್ರಿಯೆ ಜುಲೈ 9ರಂದು ನಡೆಯಲಿದೆ.

ಅಂತ್ಯಸಂಸ್ಕಾರದ ವಿಧಿವಿಧಾನಗಳು ಜುಲೈ 4ರಿಂದ ಮೂರು ದಿನಗಳವರೆಗೆ ಟೆಹರಾನ್‌ನಲ್ಲಿ ನಡೆಯಲಿವೆ. ನಂತರ, ಜುಲೈ 7ರಂದು ಕೋಮ್ ನಗರದಲ್ಲೂ ವಿಧಿವಿಧಾನಗಳು ಜರುಗಲಿವೆ. ಖಮೇನಿ ಅವರ ಹುಟ್ಟೂರು ಮಶಾದ್‌ನಲ್ಲಿ ಜುಲೈ 9ರಂದು ಅಂತ್ಯಕ್ರಿಯೆ ನಡೆಯಲಿದೆ ಎಂದು ಸರ್ಕಾರಿ ಸುದ್ದಿ ಸಂಸ್ಥೆ ಶನಿವಾರ ತಿಳಿಸಿದೆ.

ಇಸ್ರೇಲ್, ಅಮೆರಿಕ ಫೆ.28ರಂದು ನಡೆಸಿದ್ದ ವೈಮಾನಿಕ ದಾಳಿಯಲ್ಲಿ ಅಲಿ ಖಮೇನಿ ಮೃತಪಟ್ಟಿದ್ದರು.

‘ಗ್ಯಾರಂಟಿ’ ಅರ್ಹತೆಗೆ ಹೊಸ ಅರ್ಜಿ

ಒಂದನೇ ಪುಟದಿಂದ....

‘ಹೀಗಾಗಿ, ಯೋಜನೆಯ ಲಾಭ ಪಡೆಯುವ ಮನೆಯಲ್ಲಿ ಫಲಾನುಭವಿಗಳೇ ವಾಸ ಇದ್ದಾರೆಯೇ? ಬೇರೆಯವರು ಇದ್ದಾರೆಯೇ? ಯೋಜನೆ ನಮ್ಮ ರಾಜ್ಯದವರಿಗೆ ಸಿಗುತ್ತಿದೆಯೇ ಅಥವಾ ಬೇರೆ ರಾಜ್ಯದವರಿಗೆ ಸಿಗುತ್ತಿದೆಯೇ ಎಂದು ಪರಿಶೀಲಿಸಬೇಕಿದೆ. ಆ ಕಾರಣಕ್ಕೆ ಫಲಾನುಭವಿಗಳು ಹೊಸತಾಗಿ ಅರ್ಜಿ ಹಾಕಬೇಕು’ ಎಂದೂ ಮುಖ್ಯಮಂತ್ರಿ ತಿಳಿಸಿದರು.

ಗ್ಯಾರಂಟಿಗಾಗಿ ಮತ್ತೆ ಅರ್ಜಿ ಸಲ್ಲಿಸಬೇಕೆಂಬ ಹೇಳಿಕೆಯ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಗೃಹಲಕ್ಷ್ಮಿ ಯೋಜನೆಗಳ ಲಾಭ ಪಡೆಯುತ್ತಿರುವವರು ಮನೆಯ ನಿಜವಾದ ಯಜಮಾನಿಯೇ ಎಂದು ತಿಳಿದುಕೊಳ್ಳಬೇಕಲ್ಲವೇ? ಒಂದು ಮನೆಗೆ ಒಬ್ಬರು ಮನೆ ಯಜಮಾನಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಒಂದೇ ಮನೆಯಲ್ಲಿ ಇಬ್ಬರು, ಮೂವರು ಯಜಮಾನಿಯರಿದ್ದಾರೆ. ಅದನ್ನು ಪರಿಶೀಲಿಸುತ್ತೇವೆ’ ಎಂದು ಹೇಳಿದರು.

ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವ ‘ಶಕ್ತಿ’ ಗ್ಯಾರಂಟಿ ಯೋಜನೆಯ ಸೌಲಭ್ಯ ಅರ್ಹರಿಗಷ್ಟೇ ತಲುಪಬೇಕೆಂಬ ಕಾರಣಕ್ಕೆ ‘ಸ್ಮಾರ್ಟ್ ಕಾರ್ಡ್’ ನೀಡಲಾಗುವುದು ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ಇತ್ತೀಚೆಗಷ್ಟೇ ಹೇಳಿದ್ದರು.

ಲಂಚ ಮುಕ್ತ ನಾಡು: ಸಿ.ಎಂ ಪಣ

ಒಂದನೇ ಪುಟದಿಂದ...

‘ನಿಯಮ ಬಿಟ್ಟು ಕೆಲಸ ಮಾಡುವಂತೆ ಯಾರು ಹೇಳಿದರೂ ಅವರ ಮಾತು ಕೇಳಬಾರದೆಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಭ್ರಷ್ಟಾಚಾರವನ್ನು ತಳಮಟ್ಟದಿಂದ ಸರಿಪಡಿಸಬೇಕಾಗಿದೆ. ಹಳ್ಳಿಯಿಂದ ವಿಧಾನಸೌಧದವರೆಗೆ ಅದೇ ಪದ್ಧತಿಯಲ್ಲಿ ಕೆಲಸ ಮಾಡುತ್ತೇವೆ. ನಮ್ಮದು ಶೂನ್ಯ ಪರ್ಸೆಂಟೇಜ್ ಸರ್ಕಾರ ಎನ್ನುವುದನ್ನು ಸಾಬೀತು ಮಾಡುತ್ತೇವೆ ’ ಎಂದರು.

‘ಅಧಿಕಾರಿಗಳ ವಿರುದ್ಧ ಕೆಲವರು ಸುಳ್ಳು ಪ್ರಕರಣ ದಾಖಲಿಸಿ, ಸುಲಿಗೆ ಮಾಡುವವರು ಇದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಸುಳ್ಳು ಆರೋಪ ಸಾಬೀತಾದರೆ ಅಂಥವರ ವಿರುದ್ಧವೂ ಕ್ರಮ ಜರುಗಿಸಲಾಗುವುದು’ ಎಂದು ಹೇಳಿದರು.

‘ಅತಿ ಹೆಚ್ಚು ತಪ್ಪಾಗಿ ಅರ್ಥೈಸಲಾದ ಸಂಸ್ಥೆ ಆರ್‌ಎಸ್‌ಎಸ್’

ತಿರುವನಂತಪುರ (ಪಿಟಿಐ): ‘ವಿಶ್ವದ ಅತಿದೊಡ್ಡ ಸ್ವಯಂಸೇವಾ ಸಂಸ್ಥೆ ಆಗಿರುವ ಹೊರತಾಗಿಯೂ, ಅತಿಹೆಚ್ಚು ತಪ್ಪಾಗಿ ಅರ್ಥೈಸಲಾದ ಸಂಸ್ಥೆ ಆರ್‌ಎಸ್‌ಎಸ್’ ಎಂದು ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದರು.

ಆರ್‌ಎಸ್‌ಎಸ್ ಶತಾಬ್ದಿ ವರ್ಷದ ಅಂಗವಾಗಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಹೊರಗಿನಿಂದ ನೋಡುವವರಿಗೆ ಸ್ವಯಂಸೇವಕರು ಸಮವಸ್ತ್ರದಲ್ಲಿ ನಡೆಸುವ ಪಥಸಂಚಲನವು ಅರೆಸೇನಾ ಪಡೆಯಂತೆ ಅಥವಾ ಅಖಿಲ ಭಾರತ ವ್ಯಾಯಾಮಶಾಲೆಯಂತೆ ಕಾಣಬಹುದು. ಆದರೆ ಅದು ಸರಿಯಾದ ತಿಳಿವಳಿಕೆ ಅಲ್ಲ’ ಎಂದು ಅವರು ಹೇಳಿದರು.

ಶಾಂತಿ ಒಪ್ಪಂದಕ್ಕೆ ಇಂದು ಸಹಿ: ಟ್ರಂಪ್

ಒಂದನೇ ಪುಟದಿಂದ...

‘ಒಪ್ಪಂದದ ಚೌಕಟ್ಟಿಗೆ ಅಮೆರಿಕ ಮತ್ತು ಇರಾನ್ ಒಪ್ಪಿಕೊಂಡಿವೆ. ಕರಡು ಅಂತಿಮ ಹಂತದಲ್ಲಿದೆ. ಒಪ್ಪಂದಕ್ಕೆ ಆನ್‌ಲೈನ್ ಮೂಲಕ ಸಹಿ ಹಾಕುವುದಕ್ಕೆ ಅಗತ್ಯವಿರುವ ಕ್ರಮಗಳನ್ನು ಪಾಕಿಸ್ತಾನ ಕೈಗೊಳ್ಳುತ್ತಿದೆ. ಮುಂದಿನ ವಾರ ತಾಂತ್ರಿಕ ಮಟ್ಟದ ಮಾತುಕತೆ ನಡೆಯಲಿದೆ’ ಎಂದು ಷರೀಫ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆದರೆ ಒಪ್ಪಂದಕ್ಕೆ ಸಹಿ ಹಾಕುವುದನ್ನು ಇರಾನ್ ದೃಢಪಡಿಸಿಲ್ಲ. ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಾಘೈ, ‘ಪಾಕ್ ಸಿದ್ಧಪಡಿಸುತ್ತಿರುವ ಒಪ್ಪಂದಕ್ಕೆ ಭಾನುವಾರ ಸಹಿ ಹಾಕುವ ಸಾಧ್ಯತೆ ಇಲ್ಲ. ಮುಂದಿನ ದಿನಗಳಲ್ಲಿ ಸಹಿ ಹಾಕುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ’ ಎಂದಿದ್ದಾರೆ.

ಟ್ರಂಪ್ ಹೇಳಿಕೆ ಆಧಾರರಹಿತ: ಇರಾನ್

ನವದೆಹಲಿ (ಪಿಟಿಐ): ‘ಹೊರ್ಮುಜ್ ಜಲಸಂಧಿಯಲ್ಲಿ ಭಾರತೀಯ ಹಡಗುಗಳ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆರೋಪವು ಆಧಾರರಹಿತ’ ಎಂದು ಇರಾನ್ ರಾಯಭಾರ ಕಚೇರಿ ಹೇಳಿದೆ.

‘ಒಂದು ವಾರದಲ್ಲಿ ಒಮಾನ್ ಕರಾವಳಿಯಲ್ಲಿ ವಾಣಿಜ್ಯ ಹಡಗುಗಳ ಮೇಲೆ ಅಮೆರಿಕದ ಸೇನೆ ದಾಳಿ ನಡೆಸಿ ಮೂವರು ಭಾರತೀಯರ ನಾವಿಕರನ್ನು ಕೊಂದಿದೆ. ಜನರ ಗಮನವನ್ನು ಬೇರೆಡೆ ಸೆಳೆಯುವ ಉದ್ದೇಶದಿಂದ ಟ್ರಂಪ್ ಅವರು ಈ ಹೇಳಿಕೆ ನೀಡಿದ್ದಾರೆ’ ಎಂದು ಆರೋಪಿಸಿದೆ.

ಈ ದಾಳಿಯನ್ನು ಖಂಡಿಸಿದ್ದ ಭಾರತ ಸರ್ಕಾರವು ನವದೆಹಲಿಯಲ್ಲಿರುವ ಅಮೆರಿಕ ವಿದೇಶಾಂಗ ಕಚೇರಿಯ ಉಪ ಮುಖ್ಯಸ್ಥ ಜಾಸೊನ್ ಮೀಕ್ಸ್ ಅವರನ್ನು ಶುಕ್ರವಾರ ವಿದೇಶಾಂಗ ಇಲಾಖೆ ಕಚೇರಿಗೆ ಕರೆಸಿಕೊಂಡು ತನ್ನ ಪ್ರತಿಭಟನೆಯನ್ನು ದಾಖಲಿಸಿತ್ತು. ಬುಧವಾರ ರಾತ್ರಿಯೂ ಕೂಡ ಅವರನ್ನು ಕರೆಸಿಕೊಂಡು ತನ್ನ ಅಸಮಾಧಾನ ವ್ಯಕ್ತಪಡಿಸಿತ್ತು.

ಅಮಿತ್ ಶಾ ಅಧ್ಯಕ್ಷತೆಯಲ್ಲಿ ಸಭೆ

ನವದೆಹಲಿ (ಪಿಟಿಐ): ಜನಸಂಖ್ಯಾ ಸ್ವರೂಪ ಬದಲಾವಣೆ ಕುರಿತು ಅಧ್ಯಯನ ನಡೆಸಲಿರುವ ಉನ್ನತ ಮಟ್ಟದ ಸಮಿತಿಗೆ ಅಗತ್ಯ ಸೌಲಭ್ಯ ಒದಗಿಸುವುದನ್ನು ಖಾತರಿಪಡಿಸಿಕೊಳ್ಳಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ ಶನಿವಾರ ಸಭೆ ನಡೆಯಿತು.

ನ್ಯಾಯಮೂರ್ತಿ ಪ್ರಜಾಶ್ ಪ್ರಭಾಕರ್ ನೇತೃತ್ವದ ಸಮಿತಿಯು, ಜನಸಂಖ್ಯೆ ಬದಲಾವಣೆ ಹಾಗೂ ವಿಶೇಷವಾಗಿ ಗಡಿ ಪ್ರದೇಶಗಳಲ್ಲಿ ಅಧ್ಯಯನ ಮಾಡಲಿದೆ.

‘ಮೊದಲ ಸಭೆ ನಡೆದಿದ್ದು, ಕಾರ್ಯಸೂಚಿ ರೂಪಿಸಲಾಗಿದೆ. ಅಗತ್ಯ ಬೆಂಬಲ ನೀಡಲಾಗುವುದು’ ಎಂದು ಗೃಹ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

ಭಾರತೀಯ ನಾವಿಕರ ಹತ್ಯೆ; ರುಬಿಯೊ ಮುಂದೆ ಪ್ರಸ್ತಾಪಿಸಿದ ಜೈಶಂಕರ್

‘ಹಡಗುಗಳ ಮೇಲೆ ದಾಳಿ ನ್ಯಾಯಸಮ್ಮತವಲ್ಲ’

ನವದೆಹಲಿ (ಪಿಟಿಐ): ಒಮಾನ್ ಕೊಲ್ಲಿಯಲ್ಲಿ ಸರಕು ಸಾಗಿಸುತ್ತಿದ್ದ ಹಡಗಿನ ಮೇಲೆ ಅಮೆರಿಕ ಸೇನೆಯು ನಡೆಸಿದ ದಾಳಿಯಲ್ಲಿ ಭಾರತದ ಮೂವರು ನಾವಿಕರು ಮೃತಪಟ್ಟಿರುವ ಕುರಿತಂತೆ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಮುಂದೆ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ವಿಷಯ ಪ್ರಸ್ತಾಪಿಸಿ ಪ್ರತಿಭಟನೆ ದಾಖಲಿಸಿದ್ದಾರೆ.

ಜೈಶಂಕರ್ ಅವರು ಸದ್ಯ ಯುರೋಪ್ ಪ್ರವಾಸದಲ್ಲಿದ್ದಾರೆ.

ಮಾರ್ಕ್ ರುಬಿಯೊ ಜೊತೆ ಜೈಶಂಕರ್

ಅಲ್ಲಿಂದಲೇ ದೂರವಾಣಿ ಕರೆಯ ಮೂಲಕ ಮಾತನಾಡಿ ಈ ವಿಷಯ ತಿಳಿಸಿದ್ದಾರೆ.

‘ವಾಣಿಜ್ಯ ಹಡಗುಗಳ ಮೇಲೆ ಅಮೆರಿಕ ಸೇನಾ ದಾಳಿಯು ನ್ಯಾಯಸಮ್ಮತವಲ್ಲ’ ಎಂದು ಮಾತುಕತೆಯ ವೇಳೆ ಜೈಶಂಕರ್ ತಿಳಿಸಿದ್ದಾರೆ.

‘ರುಬಿಯೊ ಜೊತೆಗೆ ರಾತ್ರಿ ವೇಳೆ ದೂರವಾಣಿ ಕರೆ ಮಾಡಿ ಮಾತನಾಡಿದ್ದೇನೆ. ಭಾರತದ ಹಡಗಿನ ಮೇಲೆ ದಾಳಿ ನಡೆಸಿ ಮೂವರು ನಾವಿಕರ ಹತ್ಯೆ ಮಾಡಿದ ಕುರಿತು ಭಾರತದ ಕಡೆಯಿಂದ ಬಲವಾದ ಪ್ರತಿಭಟನೆ ದಾಖಲಿಸಿದ್ದನ್ನು ಪುನರುಚ್ಚರಿಸಿದ್ದೇವೆ’ ಎಂದು ಜೈಶಂಕರ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ತಿರುಗೇಟು: ‘ಅಮೆರಿಕ ನಿರ್ಬಂಧದ ಹೊರತಾಗಿಯೂ ಇರಾನ್‌ನ ಕಚ್ಚಾತೈಲವನ್ನು ಅಕ್ರಮವಾಗಿ ಹೊರ್ಮುಜ್ ಜಲಸಂಧಿಯ ಮೂಲಕ ಸಾಗಿಸುವುದನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ’ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ತಿಳಿಸಿದ್ದಾರೆ.

ಪ್ರಸಾರ ಭಾರತಿ
(ಭಾರತದ ಸಾರ್ವಜನಿಕ ಸೇವಾ ಪ್ರಸಾರಕ)
ದೂರದರ್ಶನ ಕೇಂದ್ರ, ಬೆಂಗಳೂರು–560006

ವೀಕ್ಷಕರ ಗಮನಕ್ಕೆ

ಪ್ರಸಾರ ಭಾರತಿ ನಿರ್ಧಾರದ ಮೇರೆಗೆ ದೂರದರ್ಶನದ ಡಿಡಿ–ಚಂದನ ವಾಹಿನಿ ಇದೇ ಜೂನ್ 15 ರಂದು ಗುಣಮಟ್ಟ ವೃದ್ಧಿಗಾಗಿ ಹೈಡೆಫನಿಷನ್ (HD) ಪ್ರಸಾರವನ್ನು ಡಿಟಿಎಚ್/ಡಿಡಿ–ಫ್ರೀಡಿಷ್ ಮೂಲಕ ಆರಂಭಿಸಲಿದ್ದು ಅದರ ಸೆಟ್ಟಿಂಗ್ಸ್‌ನ ನಿಯತಾಂಕಗಳು ಹೀಗಿವೆ:

Satellite	:	GSAT 17
Polarization	:	Horizontal
Frequency	:	4073 MHz
Symbol Rate	:	2.90 Msps
Modulation	:	8PSK
FEC	:	¾

ಈಗಾಗಲೇ ಪರೀಕ್ಷಾರ್ಥ ಪ್ರಸಾರ ಆರಂಭವಾಗಿದ್ದು ವೀಕ್ಷಕರು ತಮ್ಮ (DTH / DD-FREEDISH) ಡಿಟಿಎಚ್ / ಡಿಡಿ–ಫ್ರೀಡಿಷ್ HD ಸೆಟ್ ಟಾಪ್ ಬಾಕ್ಸಿನ ಸೆಟ್ಟಿಂಗನ್ನು ಮೇಲ್ಕಂಡ ನಿಯತಾಂಕಗಳಿಗೆ ಸಂರಚಿಸಿ DD–ಚಂದನ (HD) ಸಿಗ್ನಲ್‌ಗಳನ್ನು ಸ್ವೀಕರಿಸುವಂತೆ ವಿನಂತಿಸಲಾಗುತ್ತಿದೆ.

DD–ಚಂದನ SD ಸೇವೆಗಳು ಈಗಾಗಲೇ ಇರುವ ನಿಯತಾಂಕಗಳಂತೆ 3961 MHz ಆವೃತ್ತಿಯಲ್ಲಿ ಸಮಕಾಲಿಕವಾಗಿ ಪ್ರಸಾರವಾಗುತ್ತಲೇ ಇರುತ್ತದೆ.

ದೂರದರ್ಶನ, ಬೆಂಗಳೂರು–560 006

ಇದೇ ನೋಡಿ ನಾಯಿಯ ಕೊರಳ ಕರಗಸ

ಚಿತ್ರಗಳು: ಭರತ್ ಕಂದಕೂರ

ನಾಯಿಯ ಕೊರಳ 'ಕರಗಸ'ದ ಸುತ್ತ...

ಚಿರತೆ, ತೋಳ, ಕರಡಿ ಮೊದಲಾದ ಕಾಡುಪ್ರಾಣಿಗಳ ದಾಳಿಯಿಂದ ಕುರಿಗಳು ಮತ್ತು ಬೆಳೆಗಳನ್ನು ರಕ್ಷಿಸಿಕೊಳ್ಳಲು ಉತ್ತರ ಕರ್ನಾಟಕದ ರೈತರು, ಕುರಿಗಾಹಿಗಳು ಕರಗಸ ಧರಿಸಿದ ನಾಯಿಗಳನ್ನು ಸಾಕುತ್ತಾರೆ. ನಾಯಿಗಳ ಕೊರಳಿಗೆ ಕಟ್ಟುವ ಈ ಮೊಳೆಯುಕ್ತ ರಕ್ಷಣಾ ಕವಚದ ಹಿಂದೆ ಬದುಕು ಉಳಿಸಿಕೊಳ್ಳುವ ಗ್ರಾಮೀಣ ಜಾಣ್ಮೆಯ ಕಥೆಯಿದೆ.

• ಪ್ರಮೋದ ಕುಲಕರ್ಣಿ

ಮುಂಗಾರಿನಲ್ಲಿ ಭೂಮಿ ಹದಗೊಳಿಸಿ ಮೆಕ್ಕೆಜೋಳ ಬಿತ್ತನೆ ಕಾಯಕದಲ್ಲಿ ತೊಡಗಿದ್ದ ಕಾರ್ಮಿಕರನ್ನು ತದೇಕಚಿತ್ತದಿಂದ ಗಮನಿಸುತ್ತಿದ್ದ ರೈತ ಹುಚ್ಚಪ್ಪ ಗಿಜಗಿ 'ಇಲ್ಲಿಗೆ ನಮ್ಮ ಕೆಲಸ ಮುಗಿತು ನೋಡ್ರಿ ಸಾಹೇಬ್ರ. ಇನ್ಮುಂದೆ ನಮ್ಮನ್ನು ಕಾಯೋದು, ಅಳಿಸೋದು ಎಲ್ಲವೂ ಬೀರನ ಕೈಯಲ್ಲೇ ಐತ್ರಿ' ಎಂದು ಕೃಷಿ ಚಟುವಟಿಕೆಯ ಪ್ರಾರಂಭದ ಪ್ರಮುಖ ಕೆಲಸವೊಂದು ಮುಗಿದ ನಿರಾಳ ಭಾವದಿಂದ ತಂಪನೆಯ ಬೇವಿನಮರದಡಿ ಕುಳಿತರು.

ಕೊಪ್ಪಳ ತಾಲ್ಲೂಕಿನ ಲೇಬಗೇರಿ ಗ್ರಾಮದ ಹೊರವಲಯದಲ್ಲಿ ಹೊಲ ಹೊಂದಿರುವ ಹುಚ್ಚಪ್ಪ ತಮ್ಮ ಬದುಕಿಗೆ ಸಮೃದ್ಧ ಖುಷಿಕೊಟ್ಟಿರುವ ಬೀರನನ್ನು ಪಕ್ಕದಲ್ಲಿ ಕರೆದುಕೊಂಡರು. ಅವರ ಹೊಲದ ಸುತ್ತಲೂ ಬೆಟ್ಟಗುಡ್ಡಗಳ ಸಾಲು. ಬೀರನ ತಲೆ ಹಾಗೂ ಬೆನ್ನಿನ ಮೇಲೆ ಕೈಯಾಡಿಸುತ್ತಾ ನಮ್ಮ ಬೀರ ಇರದಿದ್ದರೆ ಕೃಷಿ ಚಟುವಟಿಕೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಪ್ರಾಣವೂ ಉಳಿಯುತ್ತಿರಲಿಲ್ಲ ಎಂದರು. ಬೆಟ್ಟಗುಡ್ಡಗಳು ಹಾಗೂ ಕಾಡುಪ್ರಾಣಿಗಳ ಹಾವಳಿಯಿರುವ ಸುತ್ತಲೂ ಭೂಮಿ ಹೊಂದಿರುವ ರೈತರು ನಿರಾಳವಾಗಿ ಕೃಷಿ ಚಟುವಟಿಕೆ ಮಾಡಲು ಬೀರನಂಥ ಸಾಹಸಿಗರು ಜೀವಸೆಲೆಯಾಗಿದ್ದಾರೆ.

ಅಂದ ಹಾಗೆ ಈ ಬೀರ ಯಾರು ಗೊತ್ತೇ?; ತಮ್ಮ ಸಾಕು ನಾಯಿಗೆ ಬೀರ ಎಂದು ಹೆಸರಿಟ್ಟಿರುವ ಅವರು ನಾಯಿಯ ಕೊರಳಲ್ಲಿ ಕರಗಸದ (ಕಾಡುಪ್ರಾಣಿಗಳ ದಾಳಿಯಿಂದ ರಕ್ಷಿಸಿಕೊಳ್ಳಲು ನಾಯಿಗೆ ಕೊರಳಲ್ಲಿ ಕಟ್ಟುವ ಮೊಳೆಯ ರಕ್ಷಣಾ ಕವಚ) ಪಟ್ಟಿ ಹಾಕಿದ್ದಾರೆ. ಆದ್ದರಿಂದ ಬೀರನ ಬಗ್ಗೆ ಅವರಿಗೆ ಹೆಮ್ಮೆಯ ಭಾವ.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಊರಹೊರಗೆ ಕುರಿಗಾಯಿಗಳು ಹೊಲದಲ್ಲಿ ಹಟ್ಟಿ ನಿರ್ಮಿಸಿಕೊಂಡು ನೂರಾರು ಕುರಿಗಳನ್ನು ಸಾಕುವುದು ಸಾಮಾನ್ಯ. ಬೆಟ್ಟಗುಡ್ಡಗಳ ಸುತ್ತ ಕೃಷಿ ಭೂಮಿ ಹೊಂದಿರುವವರಿಗೆ ಆಗಾಗ ಕಾಡುವ ಕಾಡುಪ್ರಾಣಿಗಳು ಜೀವಹಿಂಡುತ್ತವೆ. ಕರಡಿ, ಚಿರತೆ, ತೋಳ ಬೆಳೆ ಹಾಳುಮಾಡುತ್ತವೆ. ಚಿರತೆಗಳು ಕುರಿಗಳನ್ನು ಹಿಂಸಿಸಿ ಮನುಷ್ಯರ ಜೀವಕ್ಕೂ ಕಂಟಕ ತಂದೊಡ್ಡುತ್ತವೆ. ಬೆಳೆ ಹಾಗೂ ಜೀವನಕ್ಕೆ ಆಸರೆಯಾಗುವ ಕುರಿಗಳ ರಕ್ಷಣೆಗೆ ಹಟ್ಟಿಗಳಲ್ಲಿ ಕುರಿಗಳನ್ನು ಕಟ್ಟಿಕೊಂಡ ರೈತರು ಬೀರನಂಥ ಸಾಹಸಿಗರನ್ನು ಸಾಕುತ್ತಾರೆ, ಕೊರಳಲ್ಲಿ ಕರಗಸದ ಪಟ್ಟಿ ಕಟ್ಟಿ ತಮಗೆ ಬೇಕಾದಂತೆ ಪಳಗಿಸಿಕೊಳ್ಳುತ್ತಾರೆ. ಇಂಥ ನಾಯಿಗಳೇ ರೈತರ ಬೆಳೆಗಳನ್ನು ಉಳಿಸಿ ಅವರ ಬದುಕಿಗೆ ಆಸರೆಯಾಗುತ್ತವೆ.

ಹುಚ್ಚಪ್ಪ ಅವರ ಬಳಿ 200 ಕುರಿಗಳಿವೆ. ಅವರು ಬೀರ, ಇನ್ನಷ್ಟು ನಾಯಿಗಳಿಗೆ ಜೂನಿ ಹಾಗೂ ಕೆಂದ ಎನ್ನುವ ಹೆಸರುಗಳನ್ನು ಇಟ್ಟಿದ್ದಾರೆ.

ಮೇಯಿಸಲು ಕುರಿಗಳ ಹಿಂಡು ಕರೆದುಕೊಂಡು ಅಕ್ಕಪಕ್ಕದ ಊರುಗಳಿಗೆ ಹೋದಾಗ ಕುರಿಗಾರರ ಜೊತೆಗೆ ಕರಗಸದ ಪಟ್ಟಿ ಇರುವ ನಾಯಿಯನ್ನೂ ಕರೆದುಕೊಂಡು ಹೋಗುತ್ತಾರೆ. ಎಲ್ಲ ಕುರಿಗಳಿಗೆ ಚಾಣಾಕ್ಷ ಅದೊಂದೇ ನಾಯಿಯೇ ಜೀವರಕ್ಷಕ.

ಹೊಲದಲ್ಲಿ ಸಣ್ಣದೊಂದು ಗುಡಿಸಲು ಕಟ್ಟಿಕೊಂಡು ಜೀವನ ಕಳೆಯುವ ಕುರಿಗಾಯಿಗಳು ತಮ್ಮ ಜೀವನದ ಭದ್ರತೆಗೆ ಕರಗಸದ ಪಟ್ಟಿ ಇರುವ ನಾಯಿಗಳನ್ನು ರಾತ್ರಿ ಕಟ್ಟಿಹಾಕುವುದಿಲ್ಲ.

11ನೇ ಪುಟಕ್ಕೆ...

ಭೂಮಿತಾಯಿಯ ಮಕ್ಕಳು ಇವರು

ಸಿಗ್ನಲ್‌ಗಳಲ್ಲಿ ಭಿಕ್ಷೆ ಬೇಡುವುದು, ಗಿರಾಕಿಗಳನ್ನು ಹುಡುಕುತ್ತ ಬದುಕುವುದು ಸ್ವಾಭಿಮಾನಕ್ಕೆ ಧಕ್ಕೆ ಎನ್ನುವುದು ಇವರನ್ನು ಕಾಡಿತು. ನಗರ ಬಿಟ್ಟು ಊರಿಗೆ ಮರಳಿದ ಅವರು, ಕೃಷಿ ಮತ್ತು ಹೈನುಗಾರಿಕೆಯ ಮೂಲಕ ಆತ್ಮಗೌರವದ ಬದುಕು ಕಟ್ಟಿಕೊಂಡರು. ಮಣ್ಣಿನೊಂದಿಗೆ ಹೊಸ ಬದುಕು ಬಿತ್ತಿದ ಲಿಂಗತ್ವ ಅಲ್ಪಸಂಖ್ಯಾತೆಯರ ಕಥನಗಳನ್ನು ಮಂಜುಶ್ರೀ ಎಂ. ಕಡಕೋಳ ಇಲ್ಲಿ ಕಟ್ಟಿಕೊಟ್ಟಿದ್ದಾರೆ

ಸಿಗ್ನಲ್‌ನಿಂದ ಹೊಲದವರೆಗೆ ಸಲ್ಮಾ ಪಯಣ

'ಕೃಷಿ ಮಾಡಬೇಕು ಅಂತ ತೀರ್ಮಾನಿಸಿದರೆ ಕಷ್ಟ ಪಡೋದಷ್ಟೇ ಅಲ್ಲ, ಸಾಲ ಮಾಡೋಕೂ ರೆಡಿ ಇರ್ಬೇಕು ನೋಡ್ರಿ... ಇಲ್ಲದಿದ್ರ ಬೆಳಿ ಬೆಳಿಯೋಕೆ ಆಗಲ್ಲ' ಅಂತ ಮಾತು ಆರಂಭಿಸಿದ ಸಲ್ಮಾ, ಏಳು ವರ್ಷಗಳಲ್ಲಿ ಭೂಮ್ತಾಯಿಯಿಂದ ಕಲಿತದ್ದು ಅಪಾರ. ಮಣ್ಣಿನ ಒಡನಾಟ, ದನಕರುಗಳ ಆರೈಕೆಯ ಜತೆಗೆ ಸ್ವಾಭಿಮಾನದ ಬದುಕನ್ನು ಸಾಗಿಸುತ್ತಿರುವ ಅವರಿಗೀಗ ಕೃಷಿಯೇ ಎಲ್ಲ.

ಹುಟ್ಟುವಾಗ ಗಂಡಾಗಿದ್ದ ಅವರಿಗೆ ಆರನೇ ತರಗತಿ ಹೊತ್ತಿಗೆ ತಮ್ಮ ಮನದಲ್ಲಿ ಹೆಣ್ತನದ ಭಾವಗಳಿವೆ ಎಂಬ ಅರಿವಾಯಿತು. ಬರಗಾಲದ ನೆಪದಲ್ಲಿ ಹುಟ್ಟೂರು ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನ ಯಳವತ್ತಿ ಬಿಟ್ಟು ಬೆಂಗಳೂರು ಬಂದ ಅವರು ತಮ್ಮಿಚ್ಛೆಯಂತೆ ಹೆಣ್ಣಾದವರು. ರಾಜಧಾನಿಯಲ್ಲಿ ಚಪ್ಪಾಳೆ ತಟ್ಟಿ 'ಬಸ್ತಿ' (ಭಿಕ್ಷೆ) ಕೇಳುವಾಗ ಜನರು ಆಡುವ ಮಾತುಗಳು ಮನಸ್ಸನ್ನು ಚುಚ್ಚತೊಡಗಿದಾಗ ವಾಪಸ್ ಯಳವತ್ತಿಗೆ ಮರಳಿದರು. ಅಲ್ಲಿ ಸ್ವಾಗತ ದೊರೆಯದಿದ್ದರೂ, ತೆಗಳಿಕೆ ಇರಲಿಲ್ಲ ಎಂಬ ಸಮಾಧಾನವಿತ್ತು. ಮುಂದೆ ಅಪ್ಪನಷ್ಟೇ ಅಲ್ಲ, ಕುಟುಂಬದವರೆಲ್ಲ ಒಪ್ಪಿಕೊಂಡ ಮೇಲೆ ಸಲ್ಮಾ ಅವರ ದುಡಿಮೆಗೆ ಆಸರೆಯಾಗಿದ್ದು ಕುಟುಂಬದ ಎರಡು ಎಕರೆ ಭೂಮಿ.

ಅಂದಿನಿಂದ ಕೃಷಿ ಮಾಡುತ್ತಿರುವ ಸಲ್ಮಾ ಈಗ ಯಾವಾಗ, ಯಾವ ಮಳೆಗೆ ಯಾವ ಬೆಳೆ ಬೆಳೆಯಬೇಕು, ಜಮೀನು ಹಸನುಗೊಳಿಸುವುದು ಹೇಗೆ, ಕಳೆ ತೆಗೆಯುವುದು ಯಾವಾಗ, ವರ್ಷಕ್ಕೆ ಎಷ್ಟು ಬೆಳೆ ತೆಗೆದರೆ ಲಾಭ ಎಂಬುದನ್ನು ನಿಖರವಾಗಿ ಹೇಳಬಲ್ಲಷ್ಟು ನಿಪುಣೆ. ಎರಡು ಎಕರೆ ಕೃಷಿಯಲ್ಲಿ ಲಾಭ ಇಲ್ಲವೆಂದು ಮನಗಂಡು ಊರವರ ಹತ್ತು ಎಕರೆ ಹೊಲವನ್ನೂ 'ಲವಣಿಗೆ' (ಗುತ್ತಿಗೆ/ಕೋರಿಗೆ) ಪಡೆದು ಹೆಸರು, ಕಡ್ಲೆ, ಶೇಂಗಾ ಬೆಳೆಯುತ್ತಾರೆ. ಕೃಷಿಗಾಗಿ ಮಾಡಿದ ಸಾಲ ತೀರಿಸಲು ತಮ್ಮ ಚಿನ್ನದ ಒಡವೆಗಳನ್ನು ಒತ್ತೆಯಿಟ್ಟು ಒಂದು ಆಕಳನ್ನೂ, ಸರ್ಕಾರದ 'ಉದ್ಯೋಗಿನಿ' ಯೋಜನೆಯಲ್ಲಿ ಸಿಕ್ಕ ₹50 ಸಾವಿರ ಹಣದಲ್ಲಿ ಮತ್ತೊಂದು ಆಕಳನ್ನೂ ಖರೀದಿಸಿರುವ ಅವರು, ಅವುಗಳ ಜತೆಗೆ ಎರಡು ಎಮ್ಮೆಗಳ ಆರೈಕೆ ಮಾಡುತ್ತಾ ಹೈನುಗಾರಿಕೆಯಲ್ಲೂ ತೊಡಗಿದ್ದಾರೆ.

ಬೇಸಿಗೆಯಲ್ಲಿ ದನಕರುಗಳನ್ನು ಸಾಕುವುದು ಕಷ್ಟ. ಅದಕ್ಕೆ ಬೇಕಾದ ಸಿದ್ಧತೆ ಅತ್ಯಗತ್ಯ. ಬೇಸಿಗೆಗೂ ಮುನ್ನವೇ ಹುಲ್ಲು ಸಂಗ್ರಹಣೆಯ ಜತೆಗೆ ಬಿಸಿಲಿಗೆ ದನಕರುಗಳು ಬಸವಳಿಯದಂತೆ ಜತನ ಮಾಡುವುದು ಸವಾಲಿನ ಕೆಲಸ ಅನ್ನುವುದು ಅವರ ಅನುಭವದ ಮಾತು. ಇನ್ನೇನು ಮುಂಗಾರು ಬಿತ್ತನೆಗೆ ಹೆಸರು, ಕಡ್ಲೆಗೆ ಸಿದ್ಧತೆ ನಡೆಸಿರುವ ಅವರು, ನಂತರ ಶೇಂಗಾ ಬಿತ್ತನೆಯ ಯೋಚನೆಯಲ್ಲಿದ್ದಾರೆ. ಬಿತ್ತನೆ ಬೀಜ, ರಸಗೊಬ್ಬರ ದುಬಾರಿಯಾಗಿದ್ದು, ಅವುಗಳ ಖರೀದಿಗೆ ಸಾಲ ಮಾಡದೇ ವಿಧಿಯಿಲ್ಲ ಎನ್ನುವ ಸಲ್ಮಾ, ತಮ್ಮ ಅತ್ತಿಗೆ ಮೂಲಕ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಂದ ಸಾಲ ಪಡೆದದ್ದೂ ಉಂಟು. ಏನೇ ಆಗಲಿ ಕೃಷಿ, ಹೈನುಗಾರಿಕೆ ಬಿಡುವ ಮಾತಿಲ್ಲ ಎಂಬುದು ಅವರ ಖಚಿತ ನುಡಿ.

'ಮೇಕಪ್ ಮಾಡ್ಕೊಂಡು ಅಲ್ಲಿ, ಇಲ್ಲಿ ಹೋಗ್ತೀನಿ ಅಂದ್ರ ಜಮೀನ್ ಮಾಡಕ್ಕಾಗಲ್ಲ. ಆಕಳ ಸಾಕಕ್ಕಾಗಲ್ಲ. ನಿಮ್ಮ ಮಕ್ಕಳನ್ನು ಹೆಂಗೆ ಜತನ ಮಾಡ್ತೀರೋ, ಹೊಲಮನಿ–ಆಕಳ ಕೆಲಸನೂ ಹಂಗೆ. ದಿನಾ ಹೊಲಕ್ಕೋಗಿ ದುಡಿದ್ರ ಮಾತ್ರ ನಮ್ಗ ರೊಟ್ಟಿ ಸಿಕ್ತೈತಿ. ಇಲ್ಲದಿದ್ರ ಲಾಸ್. ಅರ್ಧಕ್ಕೆ ಕೆಲಸ ಬಿಟ್ರಾ ಜೀವನ ಮಾಡಿದಂಗ ಆಗಲ್ಲ' ಅನ್ನುವ ಸಲ್ಮಾ ಈಗ ಹೆತ್ತವರ ಪಾಲಿಗಷ್ಟೇ ಅಲ್ಲ, ಯಳವತ್ತಿ ಗ್ರಾಮಸ್ಥರಿಗೂ ಹೆಮ್ಮೆಯ ಮಗಳು.

ಸವಾಲುಗಳಿಗೆ ಅಂಜದ ಅಂಜು

ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿಯಲ್ಲಿ ಅಂಜು ಅವರ ಬೆಳಗು ಸಾಮಾನ್ಯ ರೈತರ ಬೆಳಗಿನಂತಿಲ್ಲ. ಅಡಿಕೆ ತೋಟದ ಎಲೆಗಳು ಗಾಳಿಗೆ ತಟ್ಟುವ ಶಬ್ದ, ದೂರದಲ್ಲಿ ಕೇಳಿಬರುವ ನವಿಲಿನ ಕೂಗು ಮತ್ತು ತೋಟದ ಮಧ್ಯೆ ಹರಡುವ ತಣ್ಣನೆಯ ಗಾಳಿ ಇದ್ದರೂ ಅಂಜುಗೆ ಅದು ಸೌಂದರ್ಯವಲ್ಲ. ಅದು ಆತಂಕ. ಬೆಳೆ ಉಳಿಯುತ್ತದೆಯೇ ಇಲ್ಲವೇ ಎಂಬ ಚಿಂತೆ.

'ರಾತ್ರಿ ಚಿರತೆ, ಹಂದಿ ಕಾಟ. ಬೆಳಗ್ಗೆ ನವಿಲಿನ ಕಾಟ...' ಎಂದು ಅವರು ನಿಟ್ಟುಸಿರು ಬಿಡುತ್ತಾರೆ. ಪ್ರಕೃತಿ ಇಲ್ಲಿ ಸೌಂದರ್ಯವಲ್ಲ; ಅದು ಬದುಕಿನ ಸವಾಲು.

ರೈತ ಕುಟುಂಬದ ಹಿನ್ನೆಲೆ ಹೊಂದಿರುವ ಅಂಜು ದಶಕದಿಂದ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಎಸ್ಸೆಸ್ಸೆಲ್ಸಿ ಫೇಲಾದ ಬಳಿಕ ಓದಿಗೆ ಗುಡ್‌ಬೈ ಹೇಳಿದ ಅವರಿಗೆ, ಈ ಪ್ರಪಂಚದಲ್ಲಿ ಲಿಂಗತ್ವ ಅಲ್ಪಸಂಖ್ಯಾತರೂ ಇರುತ್ತಾರೆ ಎಂಬ ಕಲ್ಪನೆಯೇ ಇರಲಿಲ್ಲ. ಅಕ್ಷರಶಃ 'ಅಂಜುಮಲ್ಲಿಗೆ'ಯಂತಿದ್ದರು. ಮನಸ್ಸಿಗೆ ಬೇಸರವೆನಿಸಿ ಮೈಸೂರಿಗೆ ಓಡಿಹೋದಾಗ ಅಲ್ಲಿ ತಮ್ಮಂತೆಯೇ ಇರುವವರನ್ನು ಕಂಡು ಉಲ್ಲಸಿತರಾದರೂ, ಅಂಜಿಕೆಯ ಪರದೆ ಕಳಚಿರಲಿಲ್ಲ. ನಿಧಾನವಾಗಿ ಅವರ ಒಡನಾಟಕ್ಕೆ ತೆರೆದುಕೊಳ್ಳುವಷ್ಟರಲ್ಲೇ ನಡೆದ ಜಗಳ ಬೆಂಗಳೂರಿನತ್ತ ಹಾದಿ ಬದಲಿಸಿತು.

ಏಳು ವರ್ಷಗಳ ತೊಳಲಾಟದ ಬಳಿಕ ಅಪ್ಪ–ಅಮ್ಮನ ಮುಂದೆ ನಿಂತಾಗ, ಹಳ್ಳಿಯವರೂ ಸೇರಿದಂತೆ ಕುಟುಂಬಸ್ಥರೂ ಪ್ರಶ್ನಿಸಿದರು. ಗಂಡುಡುಗೆ ತೊಡಲು ಒತ್ತಾಯಿಸಿದರು. ತನ್ನದಲ್ಲದ ರೂಪ ಧರಿಸುವುದು ಪ್ರಾಣವೇ ಹೋದಂತೆ ಅನಿಸಿ ವಾಪಸ್ ರಾಜಧಾನಿಗೆ ಬಂದ ಅಂಜುಗೆ, 'ನೀ ಕಳ್ಳತನ ಮಾಡಿಲ್ಲ, ಸುಳ್ಳು ಹೇಳಿಲ್ಲ. ಕೊಲೆಯೂ ಮಾಡಿಲ್ಲ. ಅಂಥವರೇ ಬದುಕುತ್ತಿರುವಾಗ ನಿನ್ನನ್ನು ಬೇಡ ಅನ್ನಲ್ಲ. ಮನೆಗೆ ಬಾ' ಎನ್ನುವ ಕರೆ ಅಪ್ಪನಿಂದ ಬಂತು. ತಮ್ಮ–ತಾಯಿಯ ಒತ್ತಾಸೆಯೂ ಇತ್ತು. ತಂದೆಯಿಂದಲೇ 'ಹೆಣ್ಣುಮಗಳ' ಸ್ಥಾನ ದೊರೆತಿದ್ದಷ್ಟೇ ಅಲ್ಲ, ತಾವು ಸತ್ತಾಗಲೂ ಮಗಳೇ ಮಣ್ಣು ಹಾಕಬೇಕು ಎಂಬ ಷರತ್ತನ್ನೂ ವಿಧಿಸಿದರು.

ಹುಟ್ಟಿದೂರಲ್ಲೇ ಗಟ್ಟಿಯಾಗಿ ಬದುಕು ಸಾಗಿಸಬೇಕೆಂಬ ಛಲ ತೊಟ್ಟ ಅಂಜು, ಅಮ್ಮನಿಂದ ಬಳುವಳಿಯಾಗಿ ಬಂದ ಎರಡು ಎಕರೆ ಜಮೀನಿನಲ್ಲಿ ಕೃಷಿಗೆ ತೊಡಗಿಕೊಂಡಿದ್ದಾರೆ.

ನಾಲ್ಕು ವರ್ಷಗಳ ಹಿಂದಷ್ಟೇ ಅಡಿಕೆ ತೋಟ ಮಾಡಿರುವ ಅವರು, ಊರಿನಲ್ಲಿ ಬೇರೆಯವರ ಜಮೀನನ್ನೂ ಗುತ್ತಿಗೆಗೆ ಪಡೆದಿದ್ದಾರೆ. 'ಕೃಷಿ ಕೆಲಸ ಮಾಡುವುದು ಸುಲಭವಲ್ಲ. ಹೆಣ್ಣಾಳಿಗೆ ₹400, ಗಂಡಾಳಿಗೆ ₹800 ಜತೆಗೆ ಊಟವೂ ಕೊಡಬೇಕು. ಎಲ್ಲ ಕಡೆ ರೇಟು ಜಾಸ್ತಿ ಮಾಡಿದ್ದಾರೆ. ಬೆಳೆ ಕೈಗೆ ಬರುವಾಗ ಚಿರತೆ, ಹಂದಿ ಕಾಟ ಇರುತ್ತೆ. ಬೆಳಗಿನ ಜಾವ ನವಿಲಿನ ಕಾಟ. ಮೊಳಕೆ ಬಂದ ಬೆಳೆ ಚಿಗುರಲು ಬಿಡೋದಿಲ್ಲ. ಹಾಗಾಗಿ ತೋಟದ ಕಡೆಗೆ ಎಷ್ಟು ಎಚ್ಚರ ವಹಿಸಿದರೂ ಸಾಲದು' ಎಂದು ಒಂದೇ ಉಸಿರಿನಲ್ಲಿ ವ್ಯವಸಾಯದ ಕಷ್ಟಸುಖ ಬಿಚ್ಚಿಡುತ್ತಾರೆ ಅಂಜು.

'ಬೇರೆ ಯಾವ ಉದ್ಯೋಗ ಮಾಡಿದರೂ ನಮ್ಮನ್ನು ಸರಿಯಾಗಿ ನಡೆಸಿಕೊಳ್ಳಲ್ಲ. ಅದೇ ನಾವು ಬೆಳೆದ ಬೆಳೆ ಖರೀದಿಯಲ್ಲಿ ಅಂಥ ತಾರತಮ್ಯ ಇರೋದಿಲ್ಲ. ಹಾಗಾಗಿ ಕೃಷಿಯನ್ನೇ ಆರಿಸಿಕೊಂಡೆ. ಸರ್ಕಾರದ ಗಂಗಾ ಕಲ್ಯಾಣ ಯೋಜನೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೂ ಜಿಲ್ಲೆಗೊಂದು ಬೋರ್‌ವೆಲ್ ಸೌಕರ್ಯ ಕೊಟ್ಟರೆ ಒಳಿತು' ಎನ್ನುವುದು ಅವರ ಅಭಿಪ್ರಾಯ.

'ನಮ್ಮೂರಿನಲ್ಲಿ ಬಟಾಣಿ ಬೆಳೆಯಲ್ಲಿ ನಾನೇ ಎತ್ತಿದ ಕೈ. ಆ ಬೆಳೆಯೊಂದೇ ನನ್ನನ್ನು ಅಲ್ಪಸ್ವಲ್ಪ ಉಳಿಸಿದೆ ಅನ್ನಬಹುದು' ಎನ್ನುವ ಅವರು, ಇವತ್ತಲ್ಲ ನಾಳೆ ಕೃಷಿ ಕೈ ಹಿಡಿಯುತ್ತದೆ ಎಂಬ ಭರವಸೆಯಲ್ಲಿದ್ದಾರೆ.

ಸಾಲ ಸುಮಾರು ಐದು ಲಕ್ಷ ರೂಪಾಯಿ. ಬಡ್ಡಿ ಕಟ್ಟುತ್ತಲೇ ಇದ್ದರೂ ಕೃಷಿ ಬಿಡುವ ಯೋಚನೆ ಇಲ್ಲ. 'ಹತ್ತು ಜನಕ್ಕೆ ಕೆಲಸ ಕೊಡಬಹುದು. ಗೌರವದಿಂದ ದುಡಿಯಬಹುದು...' ಎನ್ನುವ ನಂಬಿಕೆಯೇ ಅವರನ್ನು ನಿಲ್ಲಿಸಿದೆ. ಯಾರು ಮೋಸ ಮಾಡಿದರೂ ಭೂಮಿ ತಾಯಿ ಮಾತ್ರ ಮೋಸ ಮಾಡಲ್ಲ ಎನ್ನುವ ಭರವಸೆ ಅವರದ್ದು.

ಹೂಗಳ ನಡುವೆ ಅರಳಿದ ವಸಂತಿ

ಚಿತ್ರದುರ್ಗ ಜಿಲ್ಲೆಯ ಹಾಯ್ಕಲ್ಲಿನ ವಸಂತಿ ಅವರ ಹೊಲದಲ್ಲಿ ಸೇವಂತಿಗೆ ಹೂಗಳು ಅರಳಿದಾಗ ಅದು ಕೇವಲ ಕೃಷಿಯ ಕ್ಷಣವಲ್ಲ; ಅದು ಅವರ ಬದುಕಿನ ಹೊಸ ಋತು. ಒಂದು ಕಾಲದಲ್ಲಿ ಮನೆಯವರಿಗೂ ಬೇಡವಾಗಿದ್ದ ವಸಂತಿ ಇಂದು ಹೂ ಕೃಷಿಯಿಂದಲೇ ಗುರುತಿಸಿಕೊಂಡಿದ್ದಾರೆ.

ಐವರು ಅಣ್ಣಂದಿರು, ಇಬ್ಬರು ತಂಗಿಯರ ಜತೆಗೆ ಬೆಳೆದ ವಸಂತಿಗೆ 'ತಾನು ಅವನಲ್ಲ, ಅವಳು' ಎಂದು ತಿಳಿದಾಗ ಅವರನ್ನು ಊರವರು ಇರಲಿ, ಮನೆಯವರೇ ಒಪ್ಪಿಕೊಂಡಿರಲಿಲ್ಲ. ತಮ್ಮ ಕುಟುಂಬದ ಮರ್ಯಾದೆಗೆ ಮಗ ಧಕ್ಕೆ ಎಂದೇ ಪೋಷಕರು ಭಾವಿಸಿದ್ದರು.

ತಮ್ಮದಲ್ಲದ ತಪ್ಪಿಗೆ ನೋವುಣ್ಣುತ್ತ ಏಳೆಂಟು ವರ್ಷಗಳ ಕಾಲ ಮನೆಯಿಂದ ದೂರವಿದ್ದ ವಸಂತಿಗೆ, ಚಿತ್ರದುರ್ಗ–ಹಿರಿಯೂರಿನಲ್ಲೇ ಇದ್ದರೂ ಹೆತ್ತವರನ್ನು, ಒಡಹುಟ್ಟಿದವರನ್ನು ನೋಡಲಾಗದ ಹಾಗೂ ಅವರ ಜತೆಗೆ ಇರಲಾಗದ ಸಂಕಟ ಕಾಡುತ್ತಿತ್ತು.

ಹೊಟ್ಟೆಪಾಡಿಗಾಗಿ ಕೆಲಕಾಲ 'ಮೈರಾಡ' ಸಂಸ್ಥೆಯಲ್ಲೂ ಕೆಲಸ ಮಾಡಿದ್ದುಂಟು. ಬೇರೆ ಕೆಲಸ ಗೊತ್ತಿಲ್ಲದೇ ಅಲೆದಾಡಿ, ಚಪ್ಪಾಳೆ ತಟ್ಟಿ ಬದುಕಿದ್ದು ಸಾಕೆನಿಸುವಷ್ಟರಲ್ಲಿ ಆರೋಗ್ಯ ಕೈಕೊಟ್ಟು ಅಪೆಂಡಿಕ್ಸ್‌ಗೆ ತುತ್ತಾದರು.

ಅದೇ ವೇಳೆ ಕೊರೋನಾ ಆರಂಭವಾಗಿತ್ತು. ಅಪ್ಪ–ಅಮ್ಮನನ್ನು ನೋಡದೇ ಸಾಯುತ್ತೇನೆನ್ನುವ ಅನಾಥ ಭಾವ. ಮಗಳು ಇರುವ ಜಾಗ ತಿಳಿದು ಹೆತ್ತವ್ವನೇ ಬಳಿಗೆ ಬಂದರು. 'ಊರಲ್ಲಿ ಯಾರು ಏನೇ ಅನ್ನಲಿ, ನೀನು ನನ್ನ ಮಗಳು' ಎಂಬ ಭರವಸೆ ಬಿತ್ತಿ ಹುಟ್ಟೂರಿಗೆ ಕರೆತಂದರು. ಆದರೆ, ಅದೇ ಕೊರೋನಾಕ್ಕೆ ಅಮ್ಮ ಬಲಿಯಾದಾಗ ವಸಂತಿಗೆ ದಿಕ್ಕೇ ತೋಚದಂತಾಯಿತು.

ಮುಂದೇನು ಮಾಡಬೇಕು ಎಂಬ ಯೋಚನೆಯಲ್ಲಿದ್ದಾಗ ಒಡಹುಟ್ಟಿದವರು ಕೈಬಿಡಲಿಲ್ಲ. ಚಿಕ್ಕಮ್ಮನ ಮಗಳೂ ನೆರವಿಗೆ ಬಂದಳು. ಕುಟುಂಬದ ಕಡೆಯಿಂದ ಬಂದ ಒಂದು ಎಕರೆಯೇ ವಸಂತಿ ಪಾಲಿಗೆ ಅಕ್ಷಯಪಾತ್ರೆಯಾಯಿತು.

ಪುಷ್ಪ ಕೃಷಿಯತ್ತ ಒಲವು ತೋರಿದ ಅವರು, ಹೂಗಳು ಅರಳಿದಂತೆ ತಮ್ಮ ಬದುಕನ್ನೂ ಅರಳಿಸಿಕೊಳ್ಳತೊಡಗಿದರು. ಸೇವಂತಿಗೆಯಲ್ಲಿ ಚಾಂದನಿ, ಸೆಂಟೆಲ್, ಪೂರ್ಣಿಮಾ, ಪೇಪರ್ ಸೇರಿದಂತೆ ಹಲವು ತಳಿಗಳನ್ನು ಬೆಳೆಯುತ್ತಿದ್ದಾರೆ.

ಹೂವಿನ ಸೀಸನ್ ಅಂದರೆ ದಸರಾ ಹಬ್ಬದ ಕಾಲ ಮಾತ್ರ. ಅಕ್ಟೋಬರ್–ನವೆಂಬರ್‌ನಲ್ಲಿ ದಸರಾ–ದೀಪಾವಳಿಯ ಸಂದರ್ಭದಲ್ಲಿ ಲಾಭ ಮಾಡಿಕೊಳ್ಳಬೇಕು, ಇಲ್ಲದಿದ್ದರೆ ವರ್ಷವಿಡೀ ಕಷ್ಟ ಎನ್ನುವ ವಸಂತಿಗೆ ಮಾರುಕಟ್ಟೆಗೆ ಹೋಗಿ ಹೂವು ಮಾರಲು ಇನ್ನೂ ಆತ್ಮವಿಶ್ವಾಸ ಬಂದಿಲ್ಲ. ಕೊಂಡುಕೊಳ್ಳುವವರು ಏನು ಅನ್ನುತ್ತಾರೋ ಅನ್ನುವ ಭಯ. ಹಾಗಾಗಿ ತಮ್ಮನ ಕೈಲಿ ಮಾರಲು ಕಳುಹಿಸುತ್ತಾರೆ.

ಆದರೂ ಅವರು ಕೃಷಿಯನ್ನು ಬಿಡುವುದಿಲ್ಲ. 'ಭಿಕ್ಷಾಟನೆ ಶಾಶ್ವತ ಅಲ್ಲ. ದುಡಿದ್ರೆ ಮಾತ್ರ ಗೌರವ ಸಿಗುತ್ತೆ...' ಎಂಬ ಮಾತು ಅವರ ಬದುಕಿನ ದೀಪ. ಈಗ ಊರವರು ಅವರನ್ನು ಗೌರವದಿಂದ ನೋಡುತ್ತಾರೆ. ಹೂಗಳ ನಡುವೆ ನಿಂತ ವಸಂತಿಯ ಬದುಕು ನಿಧಾನವಾಗಿ ಅರಳುತ್ತಿದೆ.

ಹೈನುಗಾರಿಕೆ ಬದಲಿಸಿತು ರಾಮಕ್ಕನ ಬದುಕು

ಬಳ್ಳಾರಿ ಜಿಲ್ಲೆಯ ಕಂಪ್ಲಿಯ ರಾಮಕ್ಕನ ಬದುಕು ದನಗಳ ಜೊತೆ ಗಟ್ಟಿಯಾಗಿ ಬೆಸೆದುಕೊಂಡಿದೆ. ಮಧ್ಯಾಹ್ನದ ಉರಿ ಬಿಸಿಲು ತಲೆ ಮೇಲೆ ಹೊಡೆಯುತ್ತಿದ್ದರೂ ಅವರು ದನಗಳನ್ನು ಕರೆದುಕೊಂಡು ನೀರಿನ ಹುಡುಕಾಟದಲ್ಲಿ ಅಲೆದಾಡುತ್ತಾರೆ. ತುಂಗಭದ್ರಾ ಡ್ಯಾಂ ಹತ್ತಿರದ ಮೇವು ಪ್ರದೇಶವೇ ಈಗ ಅವರ ದನಗಳಿಗೆ ಜೀವದ ಆಸರೆ. ಆದರೆ ಆ ಆಸರೆಯಲ್ಲಿಯೂ ಮೊಸಳೆಗಳ ಭಯವಿದೆ.

'ಮೊನ್ನೆ ಹಾಲು ಕುಡಿಯೋ ಕರುನೇ ಮೊಸಳೆ ಎಳೆದುಕೊಂಡು ಹೋಯ್ತು...' ಎಂದು ಅವರು ಹೇಳುವಾಗ ಅವರ ಧ್ವನಿ ಕ್ಷಣಕಾಲ ತಗ್ಗುತ್ತದೆ. ಆದರೆ ಬದುಕು ನಿಲ್ಲುವುದಿಲ್ಲ. ಹಾಗಾಗಿ, ಹೈನುಗಾರಿಕೆಯ ಜತೆಗೆ ತರಕಾರಿ ಮಾರಾಟವನ್ನೂ ಅವರು ಮಾಡುತ್ತಾರೆ.

ತಮ್ಮ ಹಳ್ಳಿ ಮತ್ತು ಸುತ್ತಮುತ್ತಲಿನವರ ಹೊಲಗಳಲ್ಲಿ ತರಕಾರಿ ಖರೀದಿಸುವ ರಾಮಕ್ಕ, ಅದನ್ನು ಪುಟ್ಟಿಯಲ್ಲಿಟ್ಟುಕೊಂಡು ಇಡೀ ಊರು ತಿರುಗಿ ಮಾರುತ್ತಾರೆ. ಎಷ್ಟೋ ಬಾರಿ ಖರೀದಿಸಿದ ಹಣಕ್ಕೆ ತಕ್ಕಂತೆ ಲಾಭವಾಗುವುದಿಲ್ಲ. ಮನೆಮನೆಗೆ ತಿರುಗಿ ತರಕಾರಿ ಮಾರೋದು ಸುಲಭವಲ್ಲ.

'ಜನ ಚೌಕಾಸಿ ಮಾಡ್ತಾರೆ. ನಮ್ಮ ಕಷ್ಟ ಅವರಿಗೆ ಅರ್ಥ ಆಗಲ್ಲ. ಆದರೆ, ಈ ವೃತ್ತಿಯನ್ನು ಇಷ್ಟಪಟ್ಟು ಮಾಡ್ತಾ ಇರೋದ್ರಿಂದ ನಷ್ಟವಾದರೂ ಇದರಲ್ಲೇ ಜೀವನ ಮಾಡ್ತಾ ಇದ್ದೀನಿ. ನಾನು ಲಿಂಗತ್ವ ಅಲ್ಪಸಂಖ್ಯಾತೆ. ಹಾಗಂತ ಮನೆಯಲ್ಲೇ ಕೂಡಲಿಲ್ಲ. ಭಿಕ್ಷೆಗಾಗಿ, ಮೈ ಮಾರಿಕೊಳ್ಳಲು ಬೀದಿಗೆ ಇಳಿಯಲಿಲ್ಲ' ಎನ್ನುವ ರಾಮಕ್ಕ, ದುಡಿಮೆಯಲ್ಲೇ ದೈವ ಕಂಡುಕೊಂಡಿದ್ದಾರೆ.

ಇಪ್ಪತ್ತು ವರ್ಷಗಳಿಂದ ಅವರು ತಮ್ಮನ್ನು ಲಿಂಗತ್ವ ಅಲ್ಪಸಂಖ್ಯಾತೆಯಾಗಿಯೇ ಗುರುತಿಸಿಕೊಂಡಿದ್ದಾರೆ.

ತಮ್ಮ ಸಮುದಾಯದ ಅನೇಕರು 'ನಿರ್ವಾಣ' ಮಾಡಿಸಿಕೊಂಡು ವಯಸ್ಸಿದ್ದಾಗಲೇ ಚೆನ್ನಾಗಿ ದುಡಿಯಬೇಕು ಅಂತ ಹಲವು ಬಾರಿ ಹೇಳಿದರೂ ಅವರು ಅತ್ತ ಲಕ್ಷ್ಯ ಕೊಡಲಿಲ್ಲ.

ಹರೆಯಕ್ಕೆ ಬರುವ ಹೊತ್ತಿನಲ್ಲೇ ಮನೆಯಲ್ಲಿದ್ದ ದನಕರುಗಳ ಆರೈಕೆಯಲ್ಲಿ ತೊಡಗಿಕೊಂಡಿದ್ದ ಅವರಿಗೆ ಅದರಲ್ಲೇ ಮುಂದುವರಿಯಬೇಕೆಂಬ ದೃಢ ಸಂಕಲ್ಪ ಮೂಡಿತು.

ಆರಂಭದಲ್ಲಿ ಬೇರೆಯವರ ಎರಡು ಎಮ್ಮೆಗಳನ್ನು ಗುತ್ತಿಗೆ ಪಡೆದು ಅವುಗಳ ಲಾಲನೆ–ಪಾಲನೆ ಜತೆಗೆ ಹೈನುಗಾರಿಕೆ ಮಾಡಿದ ರಾಮಕ್ಕ, ಅದರಲ್ಲೇ ಹಣ ಸಂಪಾದಿಸಲು ತೊಡಗಿದರು. ಎಮ್ಮೆಗಳ ಸಂಖ್ಯೆ ಹೆಚ್ಚಾದಂತೆ ಜಮೀನು ಖರೀದಿಸಬೇಕೆಂಬ ಹಂಬಲವೂ ಅವರಲ್ಲಿ ಮೂಡಿತು. ಹಣ ಉಳಿತಾಯ ಮಾಡಿ ಈಚೆಗಷ್ಟೇ ಮುಕ್ಕಾಲು ಎಕರೆ ಜಮೀನು ಖರೀದಿಸಿರುವ ರಾಮಕ್ಕ ಅವರ ಬಳಿ ಈಗ ಇಪ್ಪತ್ತೈದು ದನಕರುಗಳಿವೆ.

ರಾಮಕ್ಕನ ದಿನಚರಿ ಆರಂಭವಾಗುವುದು ಹಾಲು ಹಿಂಡುವ ಮೂಲಕ. ಬಳಿಕ ದನಕರುಗಳನ್ನು ಸ್ವಲ್ಪ ಹೊತ್ತು ಮೇಯಿಸಿಕೊಂಡು ಬಂದು, ನಂತರ ಬೇರೆಯವರ ಹೊಲದಲ್ಲಿ ಬೆಳೆದ ತರಕಾರಿಗಳನ್ನು ಖರೀದಿಸಿ, ಅವುಗಳನ್ನು ಪುಟ್ಟಿಯಲ್ಲಿ ತುಂಬಿಕೊಂಡು ಮಾರಾಟಕ್ಕೆ ಹೊರಡುತ್ತಾರೆ.

ಹಾಲು, ಮೊಸರನ್ನು ತಮ್ಮೂರಿನಲ್ಲೇ ಮಾರಾಟ ಮಾಡುವ ರಾಮಕ್ಕ, ಡೇರಿಗೆ ಹಾಲು ಹಾಕಿದರೆ ಗಿಟ್ಟಲ್ಲ ಎಂದು ಹೈನುಗಾರಿಕೆಯ ಲಾಭ–ನಷ್ಟದ ಲೆಕ್ಕ ಹೇಳುವಷ್ಟು ಪಕ್ಕಾ ಆಗಿದ್ದಾರೆ.

ಹೈನುಗಾರಿಕೆ ಮತ್ತು ತರಕಾರಿ ಮಾರಾಟದಲ್ಲಿ ಬದುಕು ಕಂಡುಕೊಂಡಿರುವ ರಾಮಕ್ಕ ಅವರ ಕಾಯಕದ ಬಗ್ಗೆ ಕುಟುಂಬ ಮತ್ತು ಗ್ರಾಮಸ್ಥರಲ್ಲಿ ಹೆಮ್ಮೆಯ ಭಾವವಿದೆ.

ಹೆಸರಾಯಿತು ಹರ್ಲಾಪುರ ಉಸಿರಾಯಿತು ಮಲ್ಲಕಂಬ

• ಗೌರಮ್ಮ ಕಟ್ಟಿಮನಿ

ಬೆಳಗಿನ ಜಾವ ಇನ್ನೂ ಸೂರ್ಯ ಕಣ್ಣು ತೆರೆದಿಲ್ಲ. ಹರ್ಲಾಪುರದಲ್ಲಿ ಅಲಾರಾಂ ಬಾರಿಸುವ ಮುನ್ನವೇ ಎದ್ದ ಮಕ್ಕಳು ಮುಖ ತೊಳೆದು, ಸ್ನೇಹಿತರೊಂದಿಗೆ ಮನೆಯ ಹೊರಗೆ ಬರುತ್ತಾರೆ. ಅವರ ಹೆಜ್ಜೆಗಳು ಒಂದೇ ದಿಕ್ಕಿನತ್ತ ಸಾಗುತ್ತವೆ. ಊರಿನ ಜಾನಪದ ಕ್ರೀಡಾ ರಂಗ ಕುಟೀರದತ್ತ.

ಮೈದಾನಕ್ಕೆ ಬಂದ ಕೂಡಲೇ ಕೆಲವರು ಪೊರಕೆ ಹಿಡಿದು ಆವರಣ ಸ್ವಚ್ಛಗೊಳಿಸುತ್ತಾರೆ. ಇನ್ನೂ ಕೆಲವರು ಮಲ್ಲಕಂಬದ ಕಂಬಕ್ಕೆ ಔಡಲ ಎಣ್ಣೆ ಸವರುತ್ತಾರೆ. ಮತ್ತಷ್ಟು ಮಕ್ಕಳು ಒಳಗಿದ್ದ ಬೆಡ್‌ಗಳನ್ನು ಹೊರತಂದು ಕಂಬದ ಕೆಳಗೆ ಜೋಡಿಸುತ್ತಾರೆ. ಸೂರ್ಯ ಬಾನೇರುವ ಮುನ್ನವೇ ಓಟ, ವ್ಯಾಯಾಮ, ಕಸರತ್ತು ಮುಗಿಯುತ್ತದೆ. ಕ್ಷಣಾರ್ಧದಲ್ಲಿ ಬಟ್ಟೆ ಬದಲಾಯಿಸಿಕೊಂಡು ಮಕ್ಕಳು ಸಾಲಾಗಿ ನಿಲ್ಲುತ್ತಾರೆ. ಮಲ್ಲಕಂಬ ಆರಂಭಕ್ಕೂ ಮುನ್ನ ಮೊಳಗುವ ತೋಳಿನ ಸದ್ದು ಬೆಳಗಿನ ನಿಶ್ಶಬ್ದತೆಯನ್ನು ಭೇದಿಸುತ್ತದೆ.

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಹರ್ಲಾಪುರದಲ್ಲಿ ದಿನ ಆರಂಭವಾಗುವುದೇ ಹೀಗೆ.

ಇಲ್ಲಿ ಮಲ್ಲಕಂಬ ಒಂದು ಕ್ರೀಡೆ ಮಾತ್ರವಲ್ಲ; ಅದು ಬದುಕಿನ ಭಾಗ. ಮಕ್ಕಳ ದಿನಚರಿ, ಪಾಲಕರ ಕನಸು, ಗ್ರಾಮದ ಹೆಮ್ಮೆ ಮತ್ತು ಸಮುದಾಯದ ಒಗ್ಗಟ್ಟಿನ ಕೇಂದ್ರಬಿಂದು. ಹರ್ಲಾಪುರವನ್ನು ಅರ್ಥಮಾಡಿಕೊಳ್ಳಬೇಕೆಂದರೆ ಇಲ್ಲಿನ ಮಲ್ಲಕಂಬ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲೇಬೇಕು.

ಮಲ್ಲಕಂಬವೇ ಗ್ರಾಮದ ಗುರುತು

ಮೂರು ದಶಕಗಳ ಹಿಂದೆ ಸಾಂಬಯ್ಯ ಹಿರೇಮಠ ಅವರಿಗೆ ಮಲ್ಲಕಂಬದ ಭವಿಷ್ಯದ ಬಗ್ಗೆ ಚಿಂತೆ ಕಾಡಿತ್ತು. ಗ್ರಾಮೀಣ ಮಕ್ಕಳ ಬದುಕಿನಲ್ಲಿ ದೈಹಿಕ ಚಟುವಟಿಕೆ ಕಡಿಮೆಯಾಗುತ್ತಿದ್ದರೆ, ದೇಶಿ ಕ್ರೀಡೆಗಳೂ ನಿಧಾನವಾಗಿ ಮರೆಯಾಗುತ್ತಿದ್ದವು. ಈ ಎರಡೂ ಕಳವಳಗಳಿಗೆ ಉತ್ತರವಾಗಿ 1990ರಲ್ಲಿ ಅವರು ಮಕ್ಕಳಿಗೆ ಮಲ್ಲಕಂಬ ಹೇಳಿಕೊಡಲು ಆರಂಭಿಸಿದರು.

ಆರಂಭದಲ್ಲಿ ಕೇವಲ 10–15 ಮಕ್ಕಳು ಬರುತ್ತಿದ್ದರು. ಗ್ರಾಮದ ಬಹುತೇಕ ಕುಟುಂಬಗಳು ಬಡ ಹಾಗೂ ಮಧ್ಯಮ ವರ್ಗಕ್ಕೆ ಸೇರಿದವು. ಶುಲ್ಕ ವಿಧಿಸಿದರೆ ಅನೇಕ ಮಕ್ಕಳಿಗೆ ಅವಕಾಶ ತಪ್ಪಬಹುದು ಎಂಬ ಕಾರಣಕ್ಕೆ ತರಬೇತಿಯನ್ನು ಉಚಿತವಾಗಿಯೇ ಆರಂಭಿಸಿದರು.

ಕ್ರಮೇಣ ಮಲ್ಲಕಂಬ ಕಲಿತ ಮಕ್ಕಳಲ್ಲಿ ಕಂಡ ಬದಲಾವಣೆ ಪಾಲಕರ ಗಮನ ಸೆಳೆಯಿತು. ಮಕ್ಕಳಲ್ಲಿ ಶಿಸ್ತು, ಸದೃಢತೆ ಮತ್ತು ಆತ್ಮವಿಶ್ವಾಸ ಹೆಚ್ಚಿತು. ಇದನ್ನು ಕಂಡ ಸುತ್ತಮುತ್ತಲಿನ ಗ್ರಾಮಗಳ ಜನರೂ ತಮ್ಮ ಮಕ್ಕಳನ್ನು ಹರ್ಲಾಪುರಕ್ಕೆ ಕಳುಹಿಸಲು ಆರಂಭಿಸಿದರು.

ವರ್ಷಗಳು ಉರುಳಿದಂತೆ ಮಲ್ಲಕಂಬ ಗ್ರಾಮದ ಗುರುತಾಗಿ ರೂಪುಗೊಂಡಿತು. ಇಂದು ಗ್ರಾಮದ ಬಹುತೇಕ ಪ್ರತಿ ಮನೆಯಲ್ಲೂ ಒಬ್ಬ ಮಲ್ಲಕಂಬ ಪಟು ಇದ್ದಾನೆ ಅಥವಾ ಇದ್ದಾಳೆ.

ಸಾಧನೆಯಿಂದ ಬೆಳೆದ ಸಂಸ್ಕೃತಿ

ಗ್ರಾಮದ ಅನೇಕ ಯುವಕರು ಮಲ್ಲಕಂಬದ ಮೂಲಕ ಸರ್ಕಾರಿ ಉದ್ಯೋಗಗಳನ್ನು ಪಡೆದಿದ್ದಾರೆ. ಹಲವರು ವಿಶ್ವವಿದ್ಯಾಲಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಅಮೋಘ್, ಅನನ್ಯ ಸೇರಿದಂತೆ 60ಕ್ಕೂ ಹೆಚ್ಚು ಮಂದಿ ಯುನಿವರ್ಸಿಟಿ ಬ್ಲ್ಯೂ ಕ್ರೀಡಾಪಟುಗಳಾಗಿರುವುದು ಗ್ರಾಮದ ಹೆಮ್ಮೆಯ ಸಂಗತಿ.

ಒಬ್ಬರ ಸಾಧನೆ ಮತ್ತೊಬ್ಬರಿಗೆ ಪ್ರೇರಣೆಯಾಗಿ, ನಿಧಾನವಾಗಿ ಮಲ್ಲಕಂಬ ಇಡೀ ಗ್ರಾಮದ ಸಂಸ್ಕೃತಿಯಾಯಿತು. ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಷ್ಟೇ ಸಹಜವಾಗಿ ಮಲ್ಲಕಂಬಕ್ಕೂ ಕಳುಹಿಸುವ ಪರಿಸ್ಥಿತಿ ನಿರ್ಮಾಣವಾಯಿತು.

ಸಾಂಬಯ್ಯ ಅವರೊಂದಿಗೆ ಬಾಲ್ಯದಿಂದಲೇ ಮಲ್ಲಕಂಬ ಅಭ್ಯಾಸ ಮಾಡಿದ್ದ ಅಮೋಘ್ ಮತ್ತು ಅನನ್ಯ ಇಂದು ರಾಷ್ಟ್ರ ಮಟ್ಟದ ಪಟುಗಳಾಗಿದ್ದಾರೆ. 2012ರಲ್ಲಿ ಪ್ರದರ್ಶನವೊಂದರಲ್ಲಿ ಇವರ ಪ್ರತಿಭೆಯನ್ನು ಗಮನಿಸಿದ ಆಳ್ವಾಸ್ ಶಿಕ್ಷಣ ಸಂಸ್ಥೆ ನಾಲ್ಕು ವರ್ಷಗಳ ಉಚಿತ ಶಿಕ್ಷಣದ ಅವಕಾಶ ನೀಡಿತು. ಶಿಕ್ಷಣ ಮುಗಿಸಿ ಸ್ವಗ್ರಾಮಕ್ಕೆ ಮರಳಿದ ಬಳಿಕ ಈ ಅಣ್ಣ–ತಂಗಿ ತಂದೆಯ ಹಾದಿಯಲ್ಲೇ ನಡೆಯಲು ತೀರ್ಮಾನಿಸಿದರು. ಕೋವಿಡ್ ನಂತರ 2021ರಿಂದ ಅವರು ತರಬೇತಿಯ ಜವಾಬ್ದಾರಿಯನ್ನು ಹೊತ್ತುಕೊಂಡರು.

ಮೊದಲಿಗೆ ಸರ್ಕಾರಿ ಶಾಲೆಗಳ ಆವರಣದಲ್ಲಿ ಮಕ್ಕಳಿಗೆ ತರಬೇತಿ ನೀಡುತ್ತಿದ್ದರು. ಆದರೆ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಸ್ಥಳದ ಕೊರತೆ ಎದುರಾಯಿತು. ಆಗ ಸಾಂಬಯ್ಯ ಅವರು ಮಕ್ಕಳಿಗಾಗಿ ‘ಜಾನಪದ ಕ್ರೀಡಾ ರಂಗ ಕುಟೀರ’ ನಿರ್ಮಿಸಿದರು. ಈಗ ಪ್ರತಿದಿನ 40ರಿಂದ 50 ಮಕ್ಕಳು ಇಲ್ಲಿ ಅಭ್ಯಾಸ ಮಾಡುತ್ತಿದ್ದಾರೆ.

ಸ್ಥಿರ ಮಲ್ಲಕಂಬ, ರೋಪ್ ಮಲ್ಲಕಂಬ ಹಾಗೂ ಹ್ಯಾಂಗಿಂಗ್ ಮಲ್ಲಕಂಬದಲ್ಲಿ ತರಬೇತಿ ಪಡೆದ ಮಕ್ಕಳು ಕಂಬ ಮತ್ತು ಹಗ್ಗದ ಮೇಲೆ ದೇಹವನ್ನು ಬೆರಗುಗೊಳ್ಳುವಂತೆ ನಿಯಂತ್ರಿಸುತ್ತಾರೆ.

ವೀರಭದ್ರಾಸನ, ಪಾದಹಸ್ತಾಸನ, ನಟರಾಜಾಸನ, ವೃಶ್ಚಿಕಾಸನ ಹಾಗೂ ವಿವಿಧ ಪಿರಾಮಿಡ್‌ಗಳನ್ನು ಅವರು ಸಲೀಸಾಗಿ ಪ್ರದರ್ಶಿಸುತ್ತಾರೆ. ಮೈಯಲ್ಲಿ ಮೂಳೆಯೇ ಇಲ್ಲವೇನೋ ಎಂಬಂತೆ ಕಂಬದ ಮೇಲೆ ತಿರುಗುವ ಅವರ ಚಲನೆಗಳು ನೋಡುಗರಲ್ಲಿ ವಿಸ್ಮಯ ಹುಟ್ಟಿಸುತ್ತವೆ.

ಆದರೆ ಈ ಕೌಶಲ್ಯದ ಹಿಂದೆ ವರ್ಷಗಳ ಶ್ರಮ ಅಡಗಿದೆ. ಪ್ರತಿದಿನದ ಅಭ್ಯಾಸ, ಬೆವರು, ಏಕಾಗ್ರತೆ ಮತ್ತು ಆತ್ಮವಿಶ್ವಾಸದ ಫಲವೇ ಈ ಪ್ರದರ್ಶನ.

‘ಮಲ್ಲಕಂಬದ ಮೇಲೆ ಹತ್ತಿ ದೇಹವನ್ನು ನಿಯಂತ್ರಿಸುವುದು ಸುಲಭದ ಮಾತಲ್ಲ. ಕ್ಷಣಮಾತ್ರದ ಹಿಂಜರಿಕೆಯೂ ಅಪಾಯಕ್ಕೆ ಕಾರಣವಾಗಬಹುದು. ಆದ್ದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ, ಧೈರ್ಯ ಮತ್ತು ಏಕಾಗ್ರತೆ ಬೆಳೆಯುತ್ತದೆ’ ಎಂದು ಪಾಲಕರಾದ ದೇವಕ್ಕ ಯಲಿವಾಳ ಹೇಳುತ್ತಾರೆ.

‘ಮಲ್ಲಕಂಬ ಮಕ್ಕಳಿಗೆ ಕೇವಲ ಕಸರತ್ತು ಕಲಿಸುವುದಿಲ್ಲ. ಬದುಕಿನಲ್ಲಿ ಬೀಳದೆ ನಿಲ್ಲುವುದನ್ನು ಕಲಿಸುತ್ತದೆ’ ಎನ್ನುವುದು ಸಾಂಬಯ್ಯ ಅವರ ನಂಬಿಕೆ.

ಮಲ್ಲಕಂಬದಲ್ಲಿ ಗಂಡು–ಹೆಣ್ಣು ಎಂಬ ಭೇದ ಇಲ್ಲಿ ಕಾಣಿಸುವುದಿಲ್ಲ. ಹೆಣ್ಮಕ್ಕಳಿಗೂ ಸಮಾನ ಅವಕಾಶ ದೊರೆಯುತ್ತದೆ.



ಸಾಂಬಯ್ಯ ಹಿರೇಮಠ

ಕ್ರೀಡೆಯಾಚೆಗಿನ ಪಾಠ

ಕಳೆದ ಐದು ವರ್ಷಗಳಲ್ಲಿ ಯುವಜನ ಹಾಗೂ ಸಾಂಸ್ಕೃತಿಕ ಕೇಂದ್ರದ ತಂಡದ ಮೂಲಕ ಇಲ್ಲಿನ ಮಕ್ಕಳು 500ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ.

ಆದರೆ ಹರ್ಲಾಪುರದ ನಿಜವಾದ ಸಾಧನೆ ಪದಕಗಳಲ್ಲಿ ಇಲ್ಲ. ಒಂದು ಗ್ರಾಮ ತನ್ನ ಮಕ್ಕಳನ್ನು ದುಶ್ಚಟಗಳಿಂದ ದೂರವಿಟ್ಟು, ಶಿಸ್ತಿನ ಬದುಕಿನತ್ತ ಕೊಂಡೊಯ್ಯಲು ಸಾಧ್ಯವಾಗಿದೆ. ಒಂದು ದೇಶಿ ಕ್ರೀಡೆಯನ್ನು ಉಳಿಸುವ ಮೂಲಕ ಸಮುದಾಯವನ್ನು ಒಗ್ಗೂಡಿಸಿದೆ. ಮಕ್ಕಳಲ್ಲಿ ಆತ್ಮವಿಶ್ವಾಸ, ಆರೋಗ್ಯ ಮತ್ತು ಕನಸುಗಳನ್ನು ಬೆಳೆಸಿದೆ.

ಅದಕ್ಕಾಗಿಯೇ ಶಿಕ್ಷಣ ಅಥವಾ ಉದ್ಯೋಗಕ್ಕಾಗಿ ಊರಿನಿಂದ ದೂರ ಹೋದ ಮಕ್ಕಳು ಹರ್ಲಾಪುರಕ್ಕೆ ಮರಳಿದಾಗ ಅವರ ಹೆಜ್ಜೆಗಳು ಸಹಜವಾಗಿಯೇ ಜಾನಪದ ಕ್ರೀಡಾ ರಂಗ ಕುಟೀರದತ್ತ ತಿರುಗುತ್ತವೆ. ಅಲ್ಲಿ ಅವರ ಬಾಲ್ಯದ ನೆನಪುಗಳು, ಸ್ನೇಹಿತರು ಮತ್ತು ಗುರುಗಳಿದ್ದಾರೆ.

ಆ ಕಂಬದಲ್ಲಿ ಅವರಿಗೆ ಕೇವಲ ಕ್ರೀಡೆ ಕಾಣಿಸುವುದಿಲ್ಲ. ತಮ್ಮ ಬಾಲ್ಯ, ತಮ್ಮ ಊರು ಮತ್ತು ತಮ್ಮ ಗುರುಗಳು ಕಾಣಿಸುತ್ತಾರೆ. ❖

ಸಿವೈಸಿಡಿ ತಂಡದಿಂದ ಲೋಟಸ್ ಪಿರಾಮಿಡ್ ಪ್ರದರ್ಶನ

ಚಿತ್ರಗಳು: ಗೋವಿಂದರಾಜ ಜವಳಿ

ಉಚಿತ ತರಬೇತಿ ಮುಂದುವರಿಯಲಿದೆ

‘ಮಕ್ಕಳನ್ನು ಮೊಬೈಲ್ ಮತ್ತು ದುಶ್ಚಟಗಳಿಂದ ದೂರವಿಡುವುದು ಇಂದು ದೊಡ್ಡ ಸವಾಲು. ನಮ್ಮ ಭಾಗದ ಬಹುತೇಕ ಕುಟುಂಬಗಳು ಬಡ ಹಾಗೂ ಮಧ್ಯಮ ವರ್ಗಕ್ಕೆ ಸೇರಿದವು. ಎಲ್ಲರಿಗೂ ದುಬಾರಿ ಕ್ರೀಡಾ ತರಬೇತಿ ಸಾಧ್ಯವಿಲ್ಲ. ಆದ್ದರಿಂದ ಗ್ರಾಮೀಣ ಮಕ್ಕಳ ಜೀವನಶೈಲಿಯನ್ನು ಉತ್ತಮಗೊಳಿಸುವುದರ ಜೊತೆಗೆ ದೇಶಿ ಕ್ರೀಡೆಯನ್ನು ಉಳಿಸುವ ಉದ್ದೇಶದಿಂದ ಮುಂದೆಯೂ ಉಚಿತ ತರಬೇತಿ ನೀಡುತ್ತೇವೆ’ ಎನ್ನುತ್ತಾರೆ ಮಲ್ಲಕಂಬ ಪಟುಗಳಾದ ಅಮೋಘ್ ಮತ್ತು ಅನನ್ಯ.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕ್ರೀಡಾ ವಿಭಾಗದಡಿ ಮಲ್ಲಕಂಬಕ್ಕೂ ಅವಕಾಶ ದೊರೆಯುತ್ತಿರುವುದರಿಂದ ಸರ್ಕಾರಿ ಉದ್ಯೋಗಗಳಿಗೂ ಇದು ನೆರವಾಗುತ್ತಿದೆ. ‘ಮಲ್ಲಕಂಬ ಕೇವಲ ಸದೃಢ ದೇಹವನ್ನಷ್ಟೇ ನೀಡುವುದಿಲ್ಲ; ಉತ್ತಮ ಜೀವನಕ್ಕೂ ದಾರಿ ಮಾಡಿಕೊಡುತ್ತದೆ’ ಎನ್ನುವುದು ಈ ಅಣ್ಣ–ತಂಗಿಯ ವಿಶ್ವಾಸ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಕೈಮುಗಿದು ಕುಳಿತುಕೊಳ್ಳುವ ಬೇಟೆಗಾರ!

• ಪ್ರಕಾಶ್ ಕೆ ನಾಡಿಗ್

ಪ್ರಾರ್ಥನಾ ಕೀಟ

ಬೆಳೆಗಳಿಗೆ ಹಾನಿ ಮಾಡುವ ಕೀಟಗಳನ್ನು ನಿಯಂತ್ರಿಸುವ ಸಹಜ ಬೇಟೆಗಾರನಾಗಿ ಪ್ರಾರ್ಥನಾ ಕೀಟ ರೈತರ ಗೆಳೆಯನಾಗಿದೆ. ರಾಸಾಯನಿಕ ಕೀಟನಾಶಕಗಳ ಬಳಕೆಯನ್ನು ಕಡಿಮೆ ಮಾಡುವಲ್ಲಿ ನೆರವಾಗುವ ಈ ಕೀಟ ಪರಿಸರ ಸಮತೋಲನ ಕಾಪಾಡುವ ಮಹತ್ವದ ಜೀವಿಯೂ ಹೌದು.

ಗಿಡದ ಎಲೆಯ ಮೇಲೋ, ಮನೆಯ ತೋಟದ ಕೊಂಬೆಯ ಮೇಲೋ ಕೈಮುಗಿದು ಧ್ಯಾನಿಸುತ್ತಿರುವಂತೆ ಕುಳಿತಿರುವ ಒಂದು ವಿಚಿತ್ರ ಕೀಟವನ್ನು ನೀವು ನೋಡಿರಬಹುದು. ನೋಡಲು ಶಾಂತ ಸ್ವಭಾವದ ಯೋಗಿಯಂತೆ ಕಂಡರೂ, ಅದರ ಮುಂದಿನ ಕ್ಷಣವೇ ಮಿಂಚಿನ ವೇಗದಲ್ಲಿ ಬೇಟೆ ಹಿಡಿಯುವ ಕೌಶಲ ಇದಕ್ಕಿದೆ. ಅದೇ ಪ್ರಾರ್ಥನಾ ಕೀಟ ಅಥವಾ ‘ಪ್ರೇಯಿಂಗ್ ಮ್ಯಾಂಟಿಸ್’.

ಪ್ರಕೃತಿಯ ಸೂಕ್ಷ್ಮ ವಿನ್ಯಾಸಗಳಲ್ಲೊಂದು ಎನ್ನಬಹುದಾದ ಈ ಕೀಟ ಇಂದು ಕೇವಲ ಜೀವವಿಜ್ಞಾನದ ಕುತೂಹಲ ಮಾತ್ರವಲ್ಲ, ಪರಿಸರ ಸಮತೋಲನದ ಸಂಕೇತವಾಗಿಯೂ ಗಮನ ಸೆಳೆಯುತ್ತಿದೆ. ಕೃಷಿಭೂಮಿ ರಾಸಾಯನಿಕಗಳಿಂದ ತುಂಬುತ್ತಿರುವ, ಕೀಟಗಳ ವೈವಿಧ್ಯ ಕಡಿಮೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಪ್ರಾರ್ಥನಾ ಕೀಟದ ಅಸ್ತಿತ್ವವೇ ಪರಿಸರ ಆರೋಗ್ಯದ ಸೂಚಕವಾಗಿದೆ.

ಸುಮಾರು 2400ಕ್ಕೂ ಹೆಚ್ಚು ಪ್ರಭೇದಗಳಲ್ಲಿ ಕಂಡುಬರುವ ಈ ಕೀಟದ ಮೂಲ ಇತಿಹಾಸವೇ ಅಚ್ಚರಿಯದ್ದು. ಡೈನೋಸಾರ್‌ಗಳು ಭೂಮಿಯಲ್ಲಿ ಸಂಚರಿಸುತ್ತಿದ್ದ ಕಾಲದಲ್ಲೇ ಇದರ ಪೂರ್ವಜರು ಬದುಕಿದ್ದರು ಎಂದು ವಿಜ್ಞಾನಿಗಳು ಹೇಳುತ್ತಾರೆ. ಜಿರಳೆ ಮತ್ತು ಗೆದ್ದಲುಗಳ ಜೊತೆಗಿನ ಸಂಬಂಧ ಹೊಂದಿರುವ ಈ ಕೀಟ ಲಕ್ಷಾಂತರ ವರ್ಷಗಳಿಂದ ತನ್ನ ಬೇಟೆಯಾಡುವ ಕೌಶಲವನ್ನು ಉಳಿಸಿಕೊಂಡಿದೆ.

ಪ್ರಾರ್ಥನಾ ಕೀಟವನ್ನು ವಿಶೇಷಗೊಳಿಸುವುದು ಅದರ ದೇಹರಚನೆ. ತ್ರಿಕೋನಾಕಾರದ ತಲೆ, ಉಬ್ಬಿದ ಕಣ್ಣುಗಳು, ಮುಳ್ಳುಗಳಿರುವ ಮುಂದಿನ ಕಾಲುಗಳು ಮತ್ತು ಚಲನೆಯ ಮೇಲೆ ಕಣ್ಣಿಡುವ ಸಾಮರ್ಥ್ಯ– ಇವೆಲ್ಲವೂ ಅದನ್ನು ಸಮರ್ಥ ಬೇಟೆಗಾರನನ್ನಾಗಿಸಿವೆ. ಇತರ ಕೀಟಗಳಿಗೆ ಹೋಲಿಸಿದರೆ ಇದರ ತಲೆ ಸುಮಾರು 180 ಡಿಗ್ರಿವರೆಗೆ ತಿರುಗಬಲ್ಲದು. ಇದರಿಂದ ಸುತ್ತಲಿನ ಚಲನೆಗಳನ್ನು ಸುಲಭವಾಗಿ ಗಮನಿಸಬಹುದು.

ಇದು ಗಂಟೆಗಟ್ಟಲೆ ಚಲಿಸದೆ ಕುಳಿತಿರಬಲ್ಲದು. ಆ ಭಂಗಿಯೇ ದೇವರಿಗೆ ಕೈಮುಗಿದಂತೆ ಕಾಣುವುದರಿಂದ ‘ಪ್ರೇಯಿಂಗ್ ಮ್ಯಾಂಟಿಸ್’ ಎಂಬ ಹೆಸರು ಬಂದಿದೆ. ಆದರೆ ಆ ಮೌನದ ಹಿಂದೆ ಬೇಟೆಯ ತಂತ್ರ ಅಡಗಿದೆ. ಹತ್ತಿರ ಬರುವ ಕೀಟವನ್ನು ಕ್ಷಣಾರ್ಧದಲ್ಲಿ ಹಿಡಿಯುವ ಇದರ ಚುರುಕುತನ ಅಚ್ಚರಿ ಮೂಡಿಸುತ್ತದೆ. ಮುಳ್ಳಿನಂತಿರುವ ಅದರ ಮುಂದಿನ ಕಾಲುಗಳ ಮಧ್ಯೆ ಸಿಕ್ಕಿಬಿದ್ದ ಕೀಟ ತಪ್ಪಿಸಿಕೊಳ್ಳುವುದು ಬಹುತೇಕ ಅಸಾಧ್ಯ.

ಆಹಾರದ ವಿಷಯದಲ್ಲಿ ಇದು ಸಂಪೂರ್ಣ ಮಾಂಸಾಹಾರಿ. ಜೇನುಹುಳು, ಚಿಟ್ಟೆ, ಮಿಡತೆ, ಕಣಜ ಮೊದಲಾದ ಕೀಟಗಳನ್ನು ಬೇಟೆಯಾಡುತ್ತದೆ. ಕೆಲವೊಮ್ಮೆ ತನಗಿಂತ ದೊಡ್ಡ ಗಾತ್ರದ ಜೀವಿಗಳ ಮೇಲೂ ದಾಳಿ ನಡೆಸುತ್ತದೆ. ಸಂಜೆ ಮತ್ತು ರಾತ್ರಿ ಇದರ ಚಟುವಟಿಕೆ ಹೆಚ್ಚಾಗಿರುತ್ತದೆ. ಅಲ್ಟ್ರಾ ಸೌಂಡ್ ತರಂಗಗಳನ್ನು ಗುರುತಿಸುವ ಸಾಮರ್ಥ್ಯ ಇರುವುದರಿಂದ ಬಾವಲಿಗಳ ದಾಳಿಯಿಂದ ತಪ್ಪಿಸಿಕೊಳ್ಳಲು ಸಹ ಸಾಧ್ಯವಾಗುತ್ತದೆ.

ಪ್ರಾರ್ಥನಾ ಕೀಟದ ಸಂತಾನೋತ್ಪತ್ತಿ ಪ್ರಕ್ರಿಯೆ ವಿಜ್ಞಾನಿಗಳಲ್ಲಿ ಅಪಾರ ಕುತೂಹಲ ಹುಟ್ಟಿಸಿದೆ. ಹೆಣ್ಣು ಕೀಟ ಹೊರಸೂಸುವ ಫೆರಮೋನ್‌ಗಳ ಆಕರ್ಷಣೆಗೆ ಗಂಡು ಕೀಟಗಳು ಬರುತ್ತವೆ. ಆದರೆ ಹೆಣ್ಣಿನ ಹತ್ತಿರ ಸೇರುವುದು ಗಂಡಿಗೆ ಜೀವಪಣದ ಕೆಲಸ. ಹಲವು ಸಂದರ್ಭಗಳಲ್ಲಿ ಮಿಲನದ ವೇಳೆ ಹೆಣ್ಣು ಗಂಡನ್ನೇ ಆಹಾರವಾಗಿಸಿಕೊಳ್ಳುವುದು ಕಂಡುಬಂದಿದೆ. ಈ ಕಾರಣಕ್ಕೇ ಈ ಕೀಟದ ಬಗ್ಗೆ ಜನರಲ್ಲಿ ವಿಚಿತ್ರ ಕಲ್ಪನೆಗಳೂ ಬೆಳೆದಿವೆ.

ಮೊಟ್ಟೆ ಇಡುವ ವಿಧಾನವೂ ವಿಶೇಷ. ಹೆಣ್ಣು ಕೀಟ ಹೊರಸೂಸುವ ನೊರೆ ರೂಪದ ದ್ರವ ಕೆಲವೇ ಕ್ಷಣಗಳಲ್ಲಿ ಗಟ್ಟಿಯಾಗಿ ‘ಊಥಿಕಾ’ ಎಂಬ ರಕ್ಷಣಾತ್ಮಕ ಹೊದಿಕೆಯಾಗುತ್ತದೆ. ಅದರೊಳಗೆ ನೂರಾರು ಮೊಟ್ಟೆಗಳು ಸುರಕ್ಷಿತವಾಗಿರುತ್ತವೆ. ಮರಿಗಳು ಹೊರಬಂದ ಕೂಡಲೇ ಓಡಿಹೋಗುತ್ತವೆ. ಒಂದೇ ಜಾಗದಲ್ಲಿ ಉಳಿದರೆ ಪರಸ್ಪರ ಬೇಟೆಯಾಗುವ ಅಪಾಯ ಇರುವುದರಿಂದ ಇದು ಅವುಗಳ ಬದುಕುಳಿಯುವ ತಂತ್ರವಾಗಿದೆ.

ಪ್ರಾರ್ಥನಾ ಕೀಟಕ್ಕೂ ಶತ್ರುಗಳ ಕೊರತೆಯಿಲ್ಲ. ಕೆಲವು ಪರಾವಲಂಬಿ ಕಣಜಗಳು ಇದರ ಮೊಟ್ಟೆಗಳೊಳಗೆ ತಮ್ಮ ಮೊಟ್ಟೆಗಳನ್ನು ಇಡುತ್ತವೆ. ನಂತರ ಹೊರಬರುವ ಕಣಜದ ಮರಿಗಳು ಪ್ರಾರ್ಥನಾ ಕೀಟದ ಭ್ರೂಣಗಳನ್ನು ತಿನ್ನುತ್ತವೆ. ಪ್ರಕೃತಿಯ ಆಹಾರ ಸರಪಳಿಯಲ್ಲಿ ಪ್ರತಿಯೊಂದು ಜೀವಿಯೂ ಮತ್ತೊಂದರ ಬದುಕಿನೊಂದಿಗೆ ಹೇಗೆ ಬೆಸೆದುಕೊಂಡಿದೆ ಎಂಬುದಕ್ಕೆ ಇದು ಉದಾಹರಣೆ.

ಇಂದು ಜಗತ್ತಿನ ಹಲವೆಡೆ ರೈತರು ಬೆಳೆಗಳಿಗೆ ಹಾನಿ ಮಾಡುವ ಕೀಟಗಳನ್ನು ನಿಯಂತ್ರಿಸಲು ಪ್ರಾರ್ಥನಾ ಕೀಟದ ಊಥಿಕಾಗಳನ್ನೇ ಖರೀದಿಸುತ್ತಿದ್ದಾರೆ. ರಾಸಾಯನಿಕ ಕೀಟನಾಶಕಗಳಿಗೆ ಪರ್ಯಾಯವಾಗಿ ಇಂತಹ ಸಹಜ ಬೇಟೆಗಾರ ಕೀಟಗಳ ಮಹತ್ವ ಹೆಚ್ಚುತ್ತಿದೆ. ಇದೇ ಕಾರಣಕ್ಕೆ ಪರಿಸರ ವಿಜ್ಞಾನಿಗಳು ಪ್ರಾರ್ಥನಾ ಕೀಟವನ್ನು ‘ಪರಿಸರ ಸ್ನೇಹಿ ಕೀಟ’ವೆಂದೂ ಕರೆಯುತ್ತಾರೆ.

ನಗರೀಕರಣ, ರಾಸಾಯನಿಕ ಬಳಕೆ ಮತ್ತು ಕೀಟನಾಶಕಗಳ ಅತಿಯಾದ ಉಪಯೋಗದಿಂದ ಇಂತಹ ಅನೇಕ ಉಪಕಾರಿ ಕೀಟಗಳ ಬದುಕು ಅಪಾಯದಲ್ಲಿದೆ. ಒಂದು ಕಾಲದಲ್ಲಿ ಮನೆ ಸುತ್ತಲಿನ ಗಿಡಗಂಟಿಗಳಲ್ಲಿ ಸಾಮಾನ್ಯವಾಗಿ ಕಾಣುತ್ತಿದ್ದ ಪ್ರಾರ್ಥನಾ ಕೀಟ ಈಗ ಹಲವೆಡೆ ಅಪರೂಪವಾಗುತ್ತಿದೆ. ಪ್ರಕೃತಿಯ ಸೂಕ್ಷ್ಮ ಸಮತೋಲನ ಉಳಿಯಬೇಕಾದರೆ ಇಂತಹ ಜೀವಿಗಳ ಉಳಿವು ಅಗತ್ಯ ಎಂಬುದನ್ನು ವಿಜ್ಞಾನಿಗಳು ಎಚ್ಚರಿಸುತ್ತಿದ್ದಾರೆ.

ಜೀವಲೋಕದ ತುಡಿತಗಳನ್ನು ಆಳವಾಗಿ ಅರ್ಥಮಾಡಿಕೊಂಡಿದ್ದ ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರಕೃತಿಯ ಪ್ರತಿಯೊಂದು ಜೀವಿಯಲ್ಲೂ ಕಥೆಯೊಂದಿದೆ ಎಂದು ಹೇಳುತ್ತಿದ್ದರು. ಪ್ರಾರ್ಥನಾ ಕೀಟವೂ ಅಂತಹ ಜೀವಿಗಳಲ್ಲೊಂದು. ಕೈಮುಗಿದು ಮೌನವಾಗಿ ಕುಳಿತಿರುವ ಅದರೊಳಗೆ ಪ್ರಕೃತಿಯ ಕ್ರೂರತೆಯೂ ಇದೆ, ಸೌಂದರ್ಯವೂ ಇದೆ, ಬದುಕುಳಿಯುವ ಅದ್ಭುತ ತಂತ್ರವೂ ಇದೆ. ❖

ಮುನ್ನೋಟ 14-06-2026 ರಿಂದ 20-06-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕ್ರೀಡಾಪಟುಗಳಿಗೆ ಉತ್ತಮ ಬೇಡಿಕೆ ಬರುತ್ತದೆ. ಬಯಸಿದ ಆಸ್ತಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ. ರಕ್ತ ಸಂಬಂಧಿ ತೊಂದರೆಗಳು ಕೆಲವರನ್ನು ಕಾಡಬಹುದು. ಸಂಗಾತಿಯಿಂದ ಸಂಸಾರದಲ್ಲಿ ನೆಮ್ಮದಿ ಇರುತ್ತದೆ. ಕೃಷಿಯಿಂದ ನಿರೀಕ್ಷಿತ ಲಾಭವಿರುತ್ತದೆ. ವೃತ್ತಿಯಲ್ಲಿ ಕೆಲಸದ ಒತ್ತಡ ಹೆಚ್ಚಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಮನಸ್ಸಿನಲ್ಲಿ ಹೊಸ ಉತ್ಸಾಹ ತುಂಬಿರುತ್ತದೆ. ಆದಾಯವು ನಿರೀಕ್ಷೆಯ ಹತ್ತಿರ ಬರಬಹುದು. ಬಂಧುಗಳಲ್ಲಿನ ಹಿರಿಯರು ನಿಮ್ಮ ಸಹಾಯಕ್ಕೆ ಬರುವರು. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ. ಉಷ್ಣಸ್ಥಾವರಗಳಲ್ಲಿ ಕೆಲಸ ಮಾಡುವವರು ಬಹಳ ಎಚ್ಚರವಾಗಿ ಮಾಡಿ. ಸಂಗಾತಿಯ ಜೊತೆ ಮುಸುಕಿನ ಗುದ್ದಾಟಗಳಾಗಬಹುದು. ನಿಮ್ಮ ಹಿರಿಯರಿಂದ ಆರ್ಥಿಕ ಸಹಕಾರ ಸಿಗುವ ಸಾಧ್ಯತೆಗಳಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ನಿರೀಕ್ಷೆಗೆ ಮೀರಿ ಇರುತ್ತದೆ. ನಿಮ್ಮ ಒಳಿತಿನ ಕೆಲಸಗಳಿಗೆ ಬಂಧುಗಳು ಸಹಕಾರ ನೀಡುವರು. ಆಸ್ತಿ ಮಾರಾಟ ಮಾಡುವ ಮಧ್ಯವರ್ತಿಗಳಿಗೆ ಹೆಚ್ಚಿನ ಆದಾಯವಿರುತ್ತದೆ. ಸಂಗೀತಗಾರರಿಗೆ ಬೇಡಿಕೆ ಹೆಚ್ಚಾಗಿ, ಆದಾಯವು ಹೆಚ್ಚುತ್ತದೆ. ಭಾಷಣಕಾರರಿಗೆ ಉತ್ತಮ ಬೇಡಿಕೆ ಮತ್ತು ವೇದಿಕೆ ದೊರೆಯುತ್ತದೆ. ಮೂಳೆ ವೈದ್ಯರಿಗೆ ಬೇಡಿಕೆ ಹೆಚ್ಚಾಗುತ್ತದೆ. ವೃತ್ತಿಯಲ್ಲಿ ಬರುವ ತೊಂದರೆಗಳನ್ನು ನಿಭಾಯಿಸಿ ಜಯಗಳಿಸುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆದಾಯವು ಕಡಿಮೆ ಇರುತ್ತದೆ. ಬಂಧುಗಳು ನಿಮಗೆ ಸಮಯ ನೋಡಿ ಕೈಕೊಡುವರು. ಆಸ್ತಿ ವ್ಯವಹಾರದಿಂದ ಲಾಭ ಬರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಗತಿಯ ಫಲಿತಾಂಶವಿರುತ್ತದೆ. ಬಾಯಿಯಲ್ಲಿ ಅಥವಾ ಹಲ್ಲಿನಲ್ಲಿ ತೊಂದರೆ ಕಾಣಿಸಬಹುದು. ಸಂಗಾತಿ ಕಡೆಯ ಹಿರಿಯರು ನಿಮಗೆ ಸೂಕ್ತ ಸಹಕಾರ ನೀಡುತ್ತಾರೆ. ಕೃಷಿಯಲ್ಲಿ ಹಿರಿಯರ ಸಲಹೆಗಳು ಬಹಳ ಅಮೂಲ್ಯವಾಗಿರುತ್ತವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆದಾಯವು ಸ್ವಲ್ಪ ಉತ್ತಮವಾಗುತ್ತದೆ. ಒಳ್ಳೆಯ ಜನ ಬೆಂಬಲ ಪಡೆಯುವಿರಿ. ಮಹಿಳೆಯರಿಂದ ನಿಮಗೆ ಸಹಕಾರ ಸಿಗುವುದು ಕಷ್ಟ. ಆಸ್ತಿ ವ್ಯವಹಾರ ಮಾಡುವವರು ಎಚ್ಚರದಿಂದಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶ ದೊರೆಯುತ್ತದೆ. ಕೆಲವೊಂದು ವಿಚಾರಗಳಲ್ಲಿ ಸಂಗಾತಿಯ ಪ್ರತಿರೋಧ ಬಹಳ ಹೆಚ್ಚಿರುತ್ತದೆ. ಮಾಡುವ ಕೆಲಸಗಳಲ್ಲಿ ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಹಿರಿಯರ ಕೃಷಿ ಜಮೀನಿನಿಂದ ನಿಮಗೆ ಹೆಚ್ಚು ಆದಾಯ ಬರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ಮಾತು ಮತ್ತು ನಡವಳಿಕೆಯಲ್ಲಿ ಬಹಳ ವ್ಯಾವಹಾರಿಕತೆ ಇರುತ್ತದೆ. ಆದಾಯವು ಚೇತರಿಕೆಯತ್ತ ಹೊರಳುತ್ತದೆ. ನಿಮ್ಮ ನಡವಳಿಕೆಯಿಂದ ಬಂಧುಗಳ ವಿರೋಧವನ್ನು ಕಟ್ಟಿಕೊಳ್ಳುವಿರಿ. ಆಸ್ತಿ ವ್ಯವಹಾರ ಮಾಡುವವರ ವ್ಯವಹಾರ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕಿಂತ ಕಡಿಮೆ ಫಲ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನೀವು ಮಾಡುವ ಕೆಲಸಗಳಿಗೆ ಸಾಕಷ್ಟು ಪ್ರತಿರೋಧ ಇರುತ್ತದೆ. ನಿಮ್ಮ ಮಾತು ಕೆಲವು ಸಲ ನಡೆಯದಿರಬಹುದು. ಈಗ ಆದಾಯವು ಕಡಿಮೆ ಇರುತ್ತದೆ. ಖರ್ಚಿನ ಮೇಲೆ ಹತೋಟಿ ಇರಲಿ. ಬಂಧುಗಳು ನಿಮ್ಮ ಜೊತೆ ಸಹಕರಿಸಲು ಹಿಂದೇಟು ಹಾಕುವರು. ವಿದೇಶದಲ್ಲಿ ಓದಬೇಕೆಂದು ಆಶಿಸುತ್ತಿದ್ದವರಿಗೆ ಅನುಕೂಲವಾಗುತ್ತದೆ. ಜೀರ್ಣಕ್ರಿಯೆಯಲ್ಲಿ ಸ್ವಲ್ಪ ವ್ಯತ್ಯಾಸವಾಗುವ ಸಾಧ್ಯತೆಗಳಿವೆ. ಸರ್ಕಾರಿ ಕೆಲಸಗಳಲ್ಲಿ ಸ್ವಲ್ಪ ಹಿನ್ನಡೆಯಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಯಾವುದೇ ಕೆಲಸ ಮಾಡಲು ಮನಸಿರುವುದಿಲ್ಲ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಕೆಲವು ಹಿರಿಯರಿಂದ ನಿಮ್ಮ ಕೆಲಸಗಳಿಗೆ ಸಹಕಾರ ದೊರೆಯುತ್ತದೆ. ವಿದೇಶದಲ್ಲಿರುವವರಿಗೆ ಆಸ್ತಿ ಮಾಡಿಕೊಳ್ಳುವ ಯೋಗವಿದೆ. ಕೆಲವರಿಗೆ ತಲೆನೋವು ಕಾಣಿಸಬಹುದು. ನಿಮ್ಮ ಪ್ರೀತಿ ಪ್ರೇಮಗಳಿಗೆ ಹಿರಿಯರ ಒಪ್ಪಿಗೆ ಸಿಗುತ್ತದೆ. ಗಣಿಗಾರಿಕೆ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಹಿರಿಯರಿಂದ ಆರ್ಥಿಕ ಸಹಕಾರ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬಣ್ಣದ ಮಾತುಗಳನ್ನಾಡಿ ವಶೀಲಿ ಮಾಡುವವರಿಂದ ದೂರವಿರಿ. ಆದಾಯವು ಕಡಿಮೆ ಇದ್ದರೂ, ತೊಂದರೆ ಇರುವುದಿಲ್ಲ. ನಿಮಗೆ ವಿದೇಶಕ್ಕೆ ಹೋಗಲು, ಅಲ್ಲಿರುವ ಬಂಧುಗಳು ಸಹಕಾರ ನೀಡುವರು. ಗಣಿಗಾರಿಕೆ ಮಾಡುವವರಿಗೆ ಭೂಮಿ ದೊರೆಯುತ್ತದೆ. ನೇತ್ರ ತಜ್ಞರಿಗೆ ಬೇಡಿಕೆ ಹೆಚ್ಚಾಗಿ, ಆದಾಯವು ಹೆಚ್ಚುತ್ತದೆ. ಸಂಗಾತಿಯು ಮಾಡುವ ವ್ಯವಹಾರಗಳಲ್ಲಿ ಲಾಭ ಹೆಚ್ಚಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮಲ್ಲಿ ಹೊಸ ಪರಾಕ್ರಮ ತುಂಬಿರುತ್ತದೆ. ಪಾಶ್ಚಿಮಾತ್ಯ ಸಂಗೀತ ಕಲಿಸುವವರ ಆದಾಯ ಹೆಚ್ಚುತ್ತದೆ. ಶತ್ರುಗಳು ನಿಮ್ಮ ತಂಟೆಗೆ ಬರುವುದನ್ನು ಕಡಿಮೆ ಮಾಡುವರು. ಆಸ್ತಿ ವ್ಯವಹಾರ ಮಾಡುವುದರಿಂದ ಹೆಚ್ಚಿನ ಲಾಭಗಳಿಸಬಹುದು. ವಿದ್ಯಾರ್ಥಿಗಳಿಗೆ ಅನುಕೂಲವಿರುತ್ತದೆ. ಔದ್ಯೋಗಿಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚು ಅಭಿವೃದ್ಧಿ ಇದೆ. ನರ ದೌರ್ಬಲ್ಯ ಇರುವವರು ಹೆಚ್ಚು ಎಚ್ಚರವಹಿಸಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಿದೇಶದಲ್ಲಿ ನೆಲೆಸಿರುವವರಿಗೆ ಹೆಚ್ಚು ಅನುಕೂಲವಾಗುತ್ತದೆ. ಪುರಾತತ್ವ ಇಲಾಖೆಯಲ್ಲಿ ಕೆಲಸ ಮಾಡುವವರ ಆದಾಯ ಹೆಚ್ಚುತ್ತದೆ. ಬಹಳ ಚುರುಕಾಗಿ ಓಡಾಡಿ ಎಲ್ಲರ ಗಮನ ಸೆಳೆಯುವಿರಿ. ಸರ್ಕಾರಿ ಸಂಸ್ಥೆ ಮಧ್ಯವರ್ತಿಗಳ ಆದಾಯ ಹೆಚ್ಚುತ್ತದೆ. ಸಂವಹನ ತಂತ್ರಜ್ಞಾನವನ್ನು ಓದುತ್ತಿರುವವರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ಕೆಲವು ಮಹಿಳೆಯರಿಗೆ ಅನಾರೋಗ್ಯ ಕಾಡಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಮಾತಿನಲ್ಲಿ ಬಹಳ ಒರಟುತನ ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ನಿಮ್ಮ ಮಾತಿನಿಂದ ಕೆಲವು ಬಂಧುಗಳು ದೂರವಾಗುವರು. ಈಗ ರಿಯಲ್ ಎಸ್ಟೇಟ್ ಉದ್ಯಮಗಳಿಗೆ ಹೆಚ್ಚು ಲಾಭವಾಗುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ.

ಪದಬಂಧ 2948



ಮೇಲಿಂದ ಕೆಳಕ್ಕೆ

1. ಜ್ಯೋತಿಷ್ಯದಲ್ಲಿ ಮೊಸಳೆ ರಾಶಿ 3
2. ಭಾರತದ ಪೂರ್ವೋತ್ತರ ಭಾಗದ ಮೂರು ಊರುಗಳನ್ನು ಒಟ್ಟಾಗಿಸುವ ರಾಜ್ಯ 3
3. ಮಂಗಳಕಾರ್ಯಗಳಲ್ಲಿ ಹಿಡಿಯುವ ಪೂರ್ಣ ಕುಂಭ 3
5. ದೇವಾನುದೇವತೆಗಳ ಒಡೆಯನಾದ ವಿಘ್ನೇಶ್ವರ 5
7. ಒಂದು ದಿವಸದ ದುಡಿಮೆಯ ಫಲ 5
9. ಆಕಾಶಕಾಯಗಳು ಚಲಿಸುವ ವೇಗ ನಮ್ಮ ಮೇಲಾಗುವ ಪರಿಣಾಮ 4
11. ಅಯೋಧ್ಯಾಪತಿಯ ಜೊತೆ ಲಂಕಾಧಿಪತಿ 5
13. ನೂರು ಸಲ ಮಹಾಶಿವನ ಮಂತ್ರ ಜಪ 4
14. ಗಂಡಸರಲ್ಲಿ ಅತಿ ಶ್ರೇಷ್ಠನಾದವನನ್ನು ಅಧಿಕ ಮಾಸದಲ್ಲಿ ಸ್ಮರಿಸಿ 5
20. ಸದ್ಬುದ್ಧಿಯುಳ್ಳವಳು 3
21. ಇಸ್ಪೀಟಾಟದಲ್ಲಿ ರಾಜ ರಾಣಿಯರ ಅಡಿಯಾಳು 3
22. ಹಂದಿಯ ರೂಪದಲ್ಲಿ ವಿಷ್ಣುವಿನ ಅವತಾರ 3

ಎಡದಿಂದ ಬಲಕ್ಕೆ

1. ಜೇನಿನಂತೆ ಸವಿಯಾದ ಹಿತವಾದ ಸ್ನೇಹ 5
3. ಕರ್ನಾಟಕಕ್ಕೆ ಹತ್ತಿರವಾದ ಏಡಿಯ ರಾಶಿ 4
4. ಮತ್ತೆ ಮತ್ತೆ ಭೂಮಿಗೆ ಹತ್ತಿರವಾಗುವ ನಕ್ಷತ್ರ 4
6. ಸೂರ್ಯನ ಜೊತೆ ಅವನ ಛಾಯಾ ರೂಪ ಶಶಿ ವಿರಳವಾಗಿದ್ದಾನೆ 5
8. ಎಲ್ಲವೂ ಸೇರಿದಂತೆ, ಒಟ್ಟಾಗಿ 3
10. ಹರನಲ್ಲಿ ಜಾರತ್ವತಂದ ವಿಶಾಲ ಅಂಗಳ ದೀರ್ಘವಾಗಿದೆ 3
12. ಗುಂಪುಗಳ ಒಡೆಯನಾದ ಶಿವಪುತ್ರ 3
14. ಸುರ ಹೊನ್ನೆಯ ಹೂವಿನಂತಹ ಗಂಡು ಹಾವು 3
15. ವೃಕ್ಷದಿಂದ ಆರಂಭಗೊಂಡು ಮತ್ತೆ ವಾಪಸ್ಸು 3
16. ವರೆಗೆ ಅನ್ನುವುದಕ್ಕೆ ಬದಲಿ ಇದು 3
17. ಮೂರಳೆ ಉದ್ದವಾದ ಚೈನಿಗೆ ಇದೇ ಹೆಸರು 3
18. ಕಮಲ ಅರಳಲು ಬೇಕಾದ ರಾಡಿ 3
19. ರಸರೂಪದಲ್ಲಿ ಜಿನುಗಿ ಇಳಿ 3
21. ವ್ಯಕ್ತಿತ್ವವನ್ನು ಸೂಚಿಸುವ ನೀತಿ, ನಡತೆ, ಲಕ್ಷಣ 5
23. ಪೂಸುಗಳನ್ನು ಒಟ್ಟಿಗೆ ಸೇರಿಸಿ ಎಳೆದ ಹಾರ 4
24. ಆಡಳಿತದಲ್ಲಿ ಅರಸನ ಸೂಕ್ಷ್ಮ ತಂತ್ರ 4
25. ಬಯಕೆಯನ್ನು ಹಿಡಿದಿಡುವ ಅಂತರಂಗದ ಹತೋಟಿ 5

ಪದಬಂಧ ಉತ್ತರ -2947

ಮೇಲಿಂದ ಕೆಳಕ್ಕೆ

2. ಗಮಕ 3.ಪಾಲಕ 5.ನವಜ್ಞಾನ 7.ನ್ಯಾಯಾಂಗ 9.ಳವಹ 11.ತಿರುವು 12.ಮಣಿಸು 13.ಸುವರ್ಣ 14.ಸದನ 18.ಳಿರಾವ 20.ಪರಿಷತ್ತು 22.ರಜನಿ 24.ಕವನ 25.ಮಹಿಪ

ಎಡದಿಂದ ಬಲಕ್ಕೆ

1. ಮಾಯಾಮೃಗ 3.ಪಾದಪ 4.ಮದನಗೋಪಾಲ 6.ಕನ್ಯಾಸುಂಕ 8.ಕಳತ್ರ 10.ಜಗತಿ 12.ಮನಸು 14.ಸಹನೆ 15.ರುದ್ರಾಣಿ 16.ವರದ 17.ಸುಳಿವು 19.ಸುಪರ್ಣ 21.ನರಳು 23.ಪಾವಕ 25.ಮದನಿಕೆ 26.ವಕಾಲತ್ತುಸಹಿ 27.ತಿಲ್ಲಾನ 28.ಪರಾತ್ಪರ

ಪರಿಸರ ಕಾಳಜಿಗೆ ಭರತನಾಟ್ಯದ ಸ್ಪರ್ಶ

ಪ್ರಕೃತಿಯ ವೈಭವ, ಮಾನವನ ಸ್ವಾರ್ಥ ಮತ್ತು ಪರಿಸರ ವಿನಾಶದ ಅಪಾಯಗಳನ್ನು ನೃತ್ಯದ ಭಾಷೆಯಲ್ಲಿ ಕಟ್ಟಿಕೊಡುವ 'ಬೀಜ-ಭೂಮಿ' ಪ್ರಸ್ತುತಿಯಲ್ಲಿ ಮಾಳವಿಕಾ ಸರುಕಾಯ್ ಪರಿಸರ ಜಾಗೃತಿಯ ಸಂದೇಶ ಸಾರುತ್ತಾರೆ. ಈ ವಿಶಿಷ್ಟ ಭರತನಾಟ್ಯ ಪ್ರಯೋಗದ ಅವಲೋಕನ ಇಲ್ಲಿದೆ.

ಮಾಳವಿಕಾ ಸರುಕಾಯ್

• ಪ್ರತಿಭಾ ನಂದಕುಮಾರ್

ಪದ್ಮಶ್ರೀ ಮಾಳವಿಕಾ ಸರುಕಾಯ್ ಸಮಕಾಲೀನ ಭರತನಾಟ್ಯದ ಪ್ರಮುಖ ಹೆಸರುಗಳಲ್ಲಿ ಒಬ್ಬರು. ಶಾಸ್ತ್ರೀಯ ನೃತ್ಯದ ಚೌಕಟ್ಟಿನೊಳಗೇ ನಿರಂತರ ಪ್ರಯೋಗಗಳನ್ನು ನಡೆಸುತ್ತಾ ತಮ್ಮದೇ ಆದ ಕಲಾಭಾಷೆಯನ್ನು ರೂಪಿಸಿಕೊಂಡಿರುವ ಕಲಾವಿದೆ. ಅವರ ಪ್ರತಿಯೊಂದು ನೃತ್ಯ ಪ್ರಸ್ತುತಿಯೂ ಪ್ರೇಕ್ಷಕರನ್ನು ಮರುಳುಗೊಳಿಸದೇ ಬಿಡದು. ತಮ್ಮ ಅರವತ್ತೇಳನೇ ವಯಸ್ಸಿನಲ್ಲಿಯೂ ಯೌವನೋತ್ಸಾಹ ಪುಟಿಯುವಂತೆ ಅಂಗಸೌಷ್ಟವವನ್ನು ಕಾಪಾಡಿಕೊಂಡಿದ್ದಾರೆ. ಅವರ ಇತ್ತೀಚಿನ ನೃತ್ಯ ಪ್ರಸ್ತುತಿ 'ಬೀಜ-ಭೂಮಿ'. ಪ್ರಕೃತಿ, ಅದರ ವೈಭವ, ಮಾನವನ ಸ್ವಾರ್ಥದಿಂದಾಗಿ ಅದು ನಾಶವಾಗುತ್ತಿರುವುದು ಹಾಗೂ ಅದನ್ನು ಉಳಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯ ಎಂಬ ಆಶಯವನ್ನು ಆಧರಿಸಿ ಮಾಳವಿಕಾ ಅವರು ಈ ನೃತ್ಯ ಸಂಯೋಜನೆಯನ್ನು ರೂಪಿಸಿದ್ದಾರೆ. ಉತ್ಕೃಷ್ಟ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸತತವಾಗಿ ಆಯೋಜಿಸುತ್ತಿರುವ ಭೂಮಿಜಾ ಸಂಸ್ಥೆ ಈ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಪ್ರಕೃತಿ ಎಂದ ಕೂಡಲೇ ಅದರ ಸೃಷ್ಟಿಯ ಮಾಂತ್ರಿಕತೆಯ ಬಗ್ಗೆ ಮಾತ್ರ ಮಾತನಾಡುವ ದಿನಗಳು ಕಳೆದುಹೋಗಿವೆ. ಪರಿಸರ ನಾಶವೇ ಇಂದು ಜಾಗತಿಕ ಮಟ್ಟದಲ್ಲಿ ಮುನ್ನೆಲೆಯ ವಿಷಯವಾಗಿದೆ. ಪ್ರಕೃತಿ ಆರಾಧನೆ ಈಗ ಕೇವಲ ಆಧ್ಯಾತ್ಮಿಕ ಪಥವಲ್ಲ; ವಿನಾಶದ ಅಂಚಿಗೆ ತಲುಪಿರುವ ಭೂಮಿಯ ಕುರಿತ ಕಳಕಳಿ ಮತ್ತು ಪರಿಸರ ರಾಜಕಾರಣದ ಭಾಗವಾಗಿದೆ. ಕಲೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಈ ಕುರಿತು ಚರ್ಚೆಗಳು ನಡೆಯುತ್ತಿವೆ. ಇದು ಎಷ್ಟು ಹೇಳಿದರೂ ಸಾಕಾಗದ ಸಂಗತಿ. ಮುಂದಿನ ಪೀಳಿಗೆಗೆ ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾಧ್ಯವಾದ ಎಲ್ಲ ಮಾಧ್ಯಮಗಳ ಮೂಲಕ ತಿಳಿಸಬೇಕಾಗಿದೆ.

ಮಾಳವಿಕಾ ಅವರು ಒಂದು ಸಂದರ್ಭದಲ್ಲಿ, 'ನೃತ್ಯದ ಕೇಂದ್ರಸ್ಥಿತಿ ಭಾವನೆಗಳು; ಅದು ಅಭಿವ್ಯಕ್ತವಾಗದಿದ್ದರೆ ಪ್ರಸ್ತುತಿ ಕೇವಲ ಮೂಕಾಭಿನಯವಾಗಿ ಉಳಿಯುತ್ತದೆ. ನೃತ್ಯದಲ್ಲಿ ದೇಹವು ತನ್ನ ಸಕಲ ಸಂವೇದನೆಗಳನ್ನು ಬುದ್ಧಿವಂತಿಕೆಯಲ್ಲಿ ನಿರೂಪಿಸುತ್ತಿರುತ್ತದೆ. ಆಗಲೇ ನೃತ್ಯ ಸಂಯೋಜನೆಯು ತನ್ನ ಪರಿಮಿತಿಗಳನ್ನು ವಿಸ್ತರಿಸುತ್ತದೆ' ಎಂದು ಹೇಳಿದ್ದರು. ತಮ್ಮ ಹಿಂದಿನ ಎಲ್ಲ ಪ್ರಯೋಗಗಳಲ್ಲಿಯೂ ಅವರು ಕಲೆಯ ಪರಿಧಿಯನ್ನು ವಿಸ್ತರಿಸುತ್ತಲೇ ಬಂದಿದ್ದಾರೆ. ಹಾಗಾಗಿ ಈ ವಿಷಯವನ್ನು ಅವರು ಯಾವ ಹೊಸ ದೃಷ್ಟಿಕೋನದಿಂದ ಕಾಣಿಸಬಹುದು ಎಂಬ ನಿರೀಕ್ಷೆಯೂ ಇತ್ತು. ಪರಿಸರ ನಾಶದ ಕುರಿತು ಸಮಕಾಲೀನ ನೃತ್ಯ ಪ್ರಸ್ತುತಿಗಳು ಸಾಕಷ್ಟು ಬಂದಿರುವುದರಿಂದ, ಭರತನಾಟ್ಯದ ಭಾಷೆಯಲ್ಲಿ ಈ ಸಮಕಾಲೀನ ಸಮಸ್ಯೆಯನ್ನು ಅವರು ಹೇಗೆ ರೂಪಿಸುತ್ತಾರೆ ಎಂಬ ಕುತೂಹಲವೂ ಇತ್ತು. ಪ್ರಕೃತಿಯ ಅಸೀಮ ನೀಡಿಕೆ, ಮಾನವನ ಸ್ವಾರ್ಥ ಮತ್ತು ಪರಿಸರ ವಿನಾಶದ ಸಂಕೀರ್ಣ ಮಜಲುಗಳನ್ನು ತಮ್ಮ ಸೂಕ್ಷ್ಮ ಕಲಾದೃಷ್ಟಿಯ ಮೂಲಕ ಅನುಸಂಧಾನಿಸುತ್ತಾ ಮಾಳವಿಕಾ 'ಬೀಜ-ಭೂಮಿ'ಯನ್ನು ಸಂಯೋಜಿಸಿ ಪ್ರಸ್ತುತಪಡಿಸಿದರು.

ಭೂಸೂಕ್ತದಿಂದ ಆರಂಭವಾದ ಪ್ರಸ್ತುತಿ ಪೃಥ್ವಿಯ ಆರಾಧನೆಯೊಂದಿಗೆ ಸಾಗಿತು. ಬೀಜವು ತನ್ನ ಗುಣವೈಶಿಷ್ಟ್ಯವನ್ನು ಹೇಳಿಕೊಳ್ಳುವ ನಿರೂಪಣೆಯ ಮೂಲಕ ಭೂಮಿಯ ವರ್ಚಸ್ಸು ಮತ್ತು ಸೃಷ್ಟಿಯ ವಿಸ್ಮಯವನ್ನು ತೆರೆದಿಟ್ಟರು. ಕಾಡು, ಮರ, ಜಿಂಕೆ, ಹಂಸ ಸೇರಿದಂತೆ ಜೀವಸಂಕುಲದ ವೈವಿಧ್ಯವನ್ನು ಭರತನಾಟ್ಯದ ಭಾಷೆಯಲ್ಲಿ ಅತ್ಯಂತ ಸೊಗಸಾಗಿ ಅಭಿನಯಿಸಿದರು. ಯಾಂತ್ರೀಕರಣ, ಪರಿಸರ ಮಾಲಿನ್ಯ ಮತ್ತು ಮಾನವನ ಸ್ವಾರ್ಥದ ಚಿತ್ರಣಕ್ಕಾಗಿ ವಾಹನಗಳು ಹಾಗೂ ಕಾರ್ಖಾನೆಗಳ ಕರ್ಕಶ ಶಬ್ದಗಳನ್ನು ಬಳಸಲಾಯಿತು. ಅದಕ್ಕೆ ಪೂರಕವಾಗಿ ಬೆಳಕಿನ ವಿನ್ಯಾಸವೂ ಕೆಲಸ ಮಾಡಿತು. ಈ ಎಲ್ಲದರ ನಡುವೆ ಬೀಜದ ಅಸ್ತಿತ್ವ ಅಪಾಯದಲ್ಲಿದೆ, ಅದನ್ನು ಉಳಿಸಿಕೊಳ್ಳಬೇಕು ಎಂಬ ಸಂದೇಶದೊಂದಿಗೆ ಪ್ರಸ್ತುತಿ ಮುಕ್ತಾಯಗೊಂಡಿತು.

ಸಂಗೀತ ಸಂಯೋಜನೆ, ನಿರ್ಮಾಣ ಮತ್ತು ಶಬ್ದ ವಿನ್ಯಾಸವನ್ನು ಸಾಯಿ ಶ್ರವಣಂ ನಿರ್ವಹಿಸಿದ್ದರು. ಬೆಳಕಿನ ವಿನ್ಯಾಸ ಮತ್ತು ತಾಂತ್ರಿಕ ನಿರ್ದೇಶನ ನಿರಂಜನ್ ಗೋಖಲೆ ಅವರದು. ಕೃತಿಕಾ ಅರವಿಂದ್ ಮತ್ತು ಮೃದಂಗ ವಾದಕ ನೆಲ್ಲೈ ಬಾಲಾಜಿ ಲೈವ್ ಸಂಗೀತದಲ್ಲಿ ಜೊತೆಯಾಗಿದ್ದರು. ಹಿನ್ನೆಲೆ ಸಾಹಿತ್ಯ ಮತ್ತು ನಿರೂಪಣೆಯನ್ನು ಸುಮಂತ್ರ ಘೋಷಲ್ ಒದಗಿಸಿದ್ದರು. ಭರತನಾಟ್ಯಕ್ಕೆ ಹೊಸ ಅನುಭವ ನೀಡುವ 360 ಡಿಗ್ರಿ ಇಮ್ಮರ್ಸಿವ್ ಸೌಂಡ್ ಹಾಗೂ ಅತ್ಯಾಧುನಿಕ ಬೆಳಕಿನ ವಿನ್ಯಾಸ ಈ ಪ್ರಸ್ತುತಿಯ ವಿಶೇಷತೆಗಳಾಗಿದ್ದವು.

ಮಾಳವಿಕಾ ಅವರು ವಿಶೇಷವಾಗಿ ಖ್ಯಾತರಾಗಿರುವುದು ಅವರ ಅಡವು ಮತ್ತು ನೃತ್ತಕ್ಕಾಗಿ. ಆದರೆ 'ಬೀಜ-ಭೂಮಿ'ಯಲ್ಲಿ ತಮ್ಮ ಹೆಗ್ಗುರುತಾದ ನೃತ್ತಕ್ಕೆ ತುಲನಾತ್ಮಕವಾಗಿ ಕಡಿಮೆ ಅವಕಾಶ ನೀಡಿ, ಆಂಗಿಕ ಚಲನೆಗಳಿಗೆ ಹೆಚ್ಚಿನ ಒತ್ತು ನೀಡಿರುವುದು ಸ್ವಲ್ಪ ನಿರಾಸೆ ಮೂಡಿಸಿತು. ರೌದ್ರವನ್ನು ವ್ಯಕ್ತಪಡಿಸಲು ರಾಕ್ಷಸ ನರ್ತನ, ಕೆಂಪು ಬೆಳಕು ಮತ್ತು ಕರ್ಕಶ ಹಿನ್ನೆಲೆ ಶಬ್ದಗಳನ್ನು ಬಳಸಿರುವುದು ಕ್ಲೀಷೆಯ ಕಡೆಗೆ ವಾಲುವ ಸಾಧ್ಯತೆಯನ್ನೂ ಹೊಂದಿತ್ತು. ಆದರೆ ಮಾಳವಿಕಾ ಅವರು ಅದನ್ನು ಜಾಣ್ಮೆಯಿಂದ ತಪ್ಪಿಸಿದ್ದಾರೆ.

ತಾಂತ್ರಿಕವಾಗಿ ಬೆಳಕಿನ ವಿನ್ಯಾಸ ಆಕರ್ಷಕವಾಗಿದ್ದರೂ, ಪ್ರೇಕ್ಷಕರು ಮಾಳವಿಕಾ ಅವರ ಅಭಿನಯದ ಸೂಕ್ಷ್ಮತೆಗಳನ್ನು ಸಂಪೂರ್ಣವಾಗಿ ಆಸ್ವಾದಿಸಲು ಕೆಲವೆಡೆ ಮಂದ ಬೆಳಕು ಅಡ್ಡಿಯಾಯಿತು. ಇಂತಹ ಸಣ್ಣಪುಟ್ಟ ಮಿತಿಗಳ ನಡುವೆಯೂ 'ಬೀಜ-ಭೂಮಿ' ಪರಿಸರ ಸಂರಕ್ಷಣೆಯ ಮಹತ್ವವನ್ನು ಪರಿಣಾಮಕಾರಿಯಾಗಿ ಸಾರುವಲ್ಲಿ ಯಶಸ್ವಿಯಾಗಿದೆ. ಪರಿಸರದ ಪ್ರಶ್ನೆಗಳನ್ನು ಕಲೆಯ ಮೂಲಕ ಚಿಂತನೆಗೆ ಹಚ್ಚುವ ಈ ಪ್ರಸ್ತುತಿಯನ್ನು ವಿಶೇಷವಾಗಿ ಯುವಜನತೆ ನೋಡಬೇಕಾಗಿದೆ. ❖

ನಾಟಕದ ದೃಶ್ಯ
ಚಿತ್ರಗಳು: ವಲ್ಲುವ ಆಕಾಶ್

ರಂಗದ ಮೇಲೆ ವಿಭಿನ್ನ ಪ್ರಯೋಗ ಎಲ್ ಬಿ ಡಬ್ಲ್ಯು

ಹದಿಹರಯದವರ ಲೋಕವನ್ನು ಕಟ್ಟಿಕೊಡುವ ಒಂದು ಮುಖ್ಯ ಪ್ರಯತ್ನ 'ಎಲ್ ಬಿ ಡಬ್ಲ್ಯು'. ಸಂಚಾರಿ ಥಿಯೇಟರ್ ರಂಗಕ್ಕೆ ತಂದ ಈ ನಾಟಕದಲ್ಲಿ ಕ್ರಿಕೆಟ್ ಕನಸನ್ನು ಬೆನ್ನತ್ತಿದ ಇಬ್ಬರು ತರುಣರ ಪಯಣವಿದೆ. ಆ ಮೂಲಕ ದೇಶದ ತುಂಬಾ ಕನಸುಗಂಗಳನ್ನು ಹೊತ್ತ ಹಲವರ ಕಥೆಯನ್ನು ಈ ನಾಟಕ ಸಮರ್ಥವಾಗಿ ರಂಗಕ್ಕೆ ತಂದಿದೆ.

• ಜಿ ಎನ್ ಮೋಹನ್

'ಯಂಗ್ ಅಡಲ್ಟ್'ಗೆ ಬೇಕಾದ್ದು ಎಲ್ಲಿದೆ? ಎನ್ನುವ ಪ್ರಶ್ನೆ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ. ಮಕ್ಕಳಿಗೆ, ಹಿರಿಯರಿಗೆ ಬೇಕಾದಷ್ಟು ಆಯ್ಕೆ ಸಾಹಿತ್ಯದಲ್ಲೂ ಇದೆ. ಸಾಂಸ್ಕೃತಿಕ ಕ್ಷೇತ್ರದಲ್ಲೂ ಇದೆ. ಆದರೆ 'ಹದಿಹರಯ' ಎನ್ನುವ ವರ್ಗವನ್ನು ಸ್ಪಷ್ಟವಾಗಿ ಗುರುತಿಸಿದ್ದು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಸಾಹಿತ್ಯ ಲೋಕದಲ್ಲಿ ಇತ್ತೀಚೆಗೆ ಹದಿಹರಯದವರನ್ನೇ ಗುರಿಯಾಗಿಟ್ಟುಕೊಂಡ ಸಾಕಷ್ಟು ಬರಹಗಳು ಬರುತ್ತಿವೆ. ರಂಗಭೂಮಿಯೂ ಈ ಬಗ್ಗೆ ಯೋಚಿಸುತ್ತಿದೆ ಎನ್ನುವುದಕ್ಕೆ ಪುರಾವೆ ಸಿಕ್ಕಿದ್ದು ಸಂಚಾರಿ ಥಿಯೇಟರ್ ರಂಗಕ್ಕೆ ತಂದ 'ಎಲ್ ಬಿ ಡಬ್ಲ್ಯು' ನಾಟಕದಲ್ಲಿ.

ಕ್ರಿಕೆಟ್ ಅನ್ನೇ ಉಸಿರಾಗಿಸಿಕೊಂಡ ಇಬ್ಬರು ಹದಿಹರಯದವರ ಕಥನ ಇದು. ಎರಡು ಭಿನ್ನ ವರ್ಗಗಳಿಂದ ಬಂದ ಇಬ್ಬರು ತರುಣರು ಕ್ರಿಕೆಟ್ ಅಂಗಳದಲ್ಲಿ, ಶಾಲೆಯಲ್ಲಿ, ಬದುಕಿನಲ್ಲಿ ಕೆಲವೊಮ್ಮೆ ಫುಲ್‌ಟಾಸ್‌ಗಳನ್ನು ಎದುರಿಸುವ ಧೈರ್ಯ ಮಾಡುತ್ತಾರೆ. ಇನ್ನು ಕೆಲವೊಮ್ಮೆ ಬದುಕನ್ನೇ ಸಿಕ್ಸರ್‌ಗೆ ಎತ್ತುತ್ತಾರೆ. ಯಶಸ್ಸು ಕಾಲಬುಡದಲ್ಲಿದೆ ಎನ್ನುವಾಗ ಗೊತ್ತಿಲ್ಲದೆ ಎಲ್ ಬಿ ಡಬ್ಲ್ಯು ಆಗಿಬಿಡುತ್ತಾರೆ.

ಬದುಕನ್ನು ಕ್ರಿಕೆಟ್ ಕಣ್ಣುಗಳ ಮೂಲಕವೇ ನೋಡುವ ಇಬ್ಬರ ಕಥನ ಇದಾದರೂ ಇಡೀ ನಾಟಕ ಎಲ್ಲಾ ಹದಿಹರಯದವರ ತುಮುಲಗಳನ್ನ ಒಳಝರಿಯಾಗಿ ಕಟ್ಟಿಕೊಂಡೇ ಸಾಗುತ್ತದೆ. ಯಂಗ್ ಅಡಲ್ಟ್ ಕಾಲವೇ ಒಂದು ಮಾಯಕದ ಕಾಲ. ಮರೀಚಿಕೆಯನ್ನು ಬೆನ್ನತ್ತುವ ಕಾಲ. ಕ್ರಿಕೆಟ್ ಕ್ಯಾನ್ವಾಸ್‌ನಲ್ಲಿ ಇಡೀ ಆ ಲೋಕವನ್ನು ಈ ನಾಟಕ ಬಿಚ್ಚಿಡುತ್ತಾ ಸಾಗುತ್ತದೆ.

ರಂಗಭೂಮಿ ಹಾಗೂ ಚಲನಚಿತ್ರ ಎರಡರಲ್ಲೂ ಸಮಾನವಾಗಿ ತೊಡಗಿಸಿಕೊಂಡಿರುವ ಬಿ ವಿ ಶೃಂಗ ಈ ನಾಟಕದ ಕರ್ತೃ.

ಕ್ರಿಕೆಟ್ ಕುರಿತ ನಾಟಕ ರಂಗಕ್ಕೆ ಬಂದಿರುವುದು ಕಡಿಮೆ. ಇಡೀ ನಾಟಕ ಕ್ರಿಕೆಟ್ ಭಿತ್ತಿಯನ್ನೇ ಹೊಂದಿದ್ದು ರಂಗಕ್ಕೆ ತರುವುದು ಸವಾಲೇ ಆಗಿತ್ತು. ಅದನ್ನು ನಿರ್ದೇಶಕಿ ಎನ್ ಮಂಗಳಾ ಸಮರ್ಥವಾಗಿ ನಿಭಾಯಿಸಿದ್ದಾರೆ. ಮಂಗಳಾ ಇದನ್ನು ಕೇವಲ ಕ್ರಿಕೆಟ್ ಲೋಕದ ಕಥೆಯಾಗಿ ಮೀಸಲಾಗಿರಲು ಬಿಡದೆ ಯೌವ್ವನಿಗರ ಲೋಕದ ಒಳಗೆ ಹೊಕ್ಕು ಅವರ ಮನೋವ್ಯಾಪಾರವನ್ನು ಹೊರತಂದಿದ್ದಾರೆ. ಈ ನಾಟಕ ನೇರವಾಗಿ ಸ್ವಪ್ನಸ್ಖಲನದಂತಹ ವಿಷಯವನ್ನೂ ಚರ್ಚಿಸುತ್ತದೆ. 'ಇದು ಗಂಡು ಹುಡುಗರೇ ಇರುವ ನಾಟಕ, ಗಂಡು ಲೋಕದ ಒಳಗೆ ನಾನು ಹೊಕ್ಕು ಅದನ್ನು ಅರ್ಥ ಮಾಡಿಕೊಳ್ಳಲು ಅವಕಾಶ ಕೊಟ್ಟ ನಾಟಕ' ಎಂದು ಮಂಗಳಾ ಹೇಳಿದ್ದಾರೆ.

ಈ ನಾಟಕ ಬ್ಯಾಟ್ ಇಲ್ಲದ ಕಥೆಯಿಂದ ಆರಂಭವಾಗಿ ಬ್ಯಾಟ್ ಕೈತಪ್ಪಿ ಹೋಗುವ ಮೂಲಕ ಮುಕ್ತಾಯವಾಗುತ್ತದೆ. ಕ್ರಿಕೆಟ್ ಕನಸನ್ನು ಹಂಚಿಕೊಳ್ಳುವುದರಿಂದ ಆರಂಭವಾಗಿ ಕ್ರಿಕೆಟ್ ಕನಸನ್ನೇ ಕಿತ್ತುಕೊಳ್ಳುವವರೆಗಿನ ಓಟವನ್ನು ಮಂಗಳಾ ಸಮರ್ಥವಾಗಿ ನಿಭಾಯಿಸಿದ್ದಾರೆ. ಹದಿಹರಯದ ಇಬ್ಬರು ಕ್ರಿಕೆಟ್ ಆಟಗಾರರ ಮನೆಯ ಕಥೆಗಳೂ ಬಿಚ್ಚಿಕೊಳ್ಳುತ್ತವೆ. ಅವರ ಪಾಲಕರ ಮನೋವ್ಯಾಪಾರವೂ ಬಯಲಾಗುತ್ತಾ ಹೋಗುತ್ತದೆ. ಆ ಮೂಲಕ ಕ್ರಿಕೆಟ್ ಆಡಲು ಹೊರಟಿರುವ ಎಲ್ಲರ ಮನೆ, ಮನದೊಳಗಿನ ಕಥೆ ಹೊರಗೆ ಇಣುಕುತ್ತದೆ.

ಇಡೀ ನಾಟಕದಲ್ಲಿ ಕ್ರಿಕೆಟ್ ಆಟದ ತುಣುಕು ಸಹ ತೆರೆಯ ಮೇಲೆ, ಮೇಲಿಂದ ಮೇಲೆ ಬಿತ್ತರವಾಗುತ್ತಾ ತಾನೂ ಒಂದು ಪಾತ್ರವೇ ಆಗಿಬಿಡುತ್ತದೆ. ಕ್ರಿಕೆಟ್ ಆಟಗಾರರಾಗಿ ರೋರವ್ ದೇವ್, ಸೂರಜ್ ಎಸ್.ನಾಯ್ಕ್, ಪೋಷಕರಾಗಿ ನಾಗರಾಜ್ ವಿ ಹಾಗೂ ಸಿಹಿಕಹಿ ಚಂದ್ರು ಅಭಿನಯ ಎಲ್ಲರ ಮನಸ್ಸು ಗೆಲ್ಲುತ್ತದೆ. ಗಜಾನನ ನಾಯ್ಕ್ ಸಂಗೀತ, ಅರುಣ್ ಡಿ ಟಿ ಬೆಳಕು ಕೂಡ ನಾಟಕವನ್ನು ಸಮರ್ಥವಾಗಿ ಕಟ್ಟಿಕೊಟ್ಟಿದೆ.

ಈ ನಾಟಕದ ಅಂತ್ಯವಂತೂ ಎಲ್ಲರನ್ನೂ ಕಾಡಿಬಿಡುತ್ತದೆ. ದಾರಿ ಬೇರೆಯಾದ ಗೆಳೆಯರು ವಿಮಾನ ನಿಲ್ದಾಣದಲ್ಲಿ ಸಂಧಿಸುತ್ತಾರೆ. ಇಬ್ಬರೊಳಗೂ ಆಡಬೇಕಾದ ನೂರಾರು ಮಾತುಗಳಿವೆ. ಆದರೆ ಅವರು ದಾಟಿ ಬಂದಿರುವ ದಾರಿ ಅವರ ಬಾಯನ್ನು ಕಟ್ಟಿ ಹಾಕಿದೆ. ಅವರಿಬ್ಬರ ಒಳಗೂ ಮೂಡುವ ತುಮುಲ ಪ್ರೇಕ್ಷಕನ ಎದೆಯನ್ನೂ ತಾಕಿ ನಿಟ್ಟುಸಿರೊಂದನ್ನು ಹೊರಚೆಲ್ಲುವಂತೆ ಮಾಡಿದೆ. ಕ್ರಿಕೆಟ್ ಲೋಕದ ಅರಳದೆ ಮುದುಡಿಹೋದ ಎಷ್ಟೋ ಕನಸುಗಳು ಈ ನಾಟಕದ ಮೂಲಕ ಉಸಿರು ಪಡೆಯುತ್ತವೆ. ❖

ಶತಾಯುಷಿ 'ಗಣಪೆ'ಯ ಸ್ವಗತ

• ಚಿತ್ರ–ಬರಹ: ದತ್ತಾತ್ರೇಯ ಭಟ್ಟ, ಕಣ್ಣಿಪಾಲ

ನನ್ನ ಆಕೃತಿ ನೋಡಿ ಬೆಚ್ಚಿಬಿದ್ದೀರಾ? ದೂರದಿಂದ ನೋಡಿದಾಗ ನನ್ನನ್ನು ಮರವೆಂದುಕೊಂಡಿರಾ? ಖಂಡಿತ ಅಲ್ಲ. ನಾನು ಮರದಂತೆಯೇ ಕಾಣುವ ಬಳ್ಳಿ. ನಡು ಮಧ್ಯೆ ತಿರುಗುತ್ತಾ, ಮುಗಿಲೆತ್ತರಕ್ಕೆ ಮುಖಮಾಡಿ ನಿಂತು ಅಂದಾಜು ನೂರು ವಸಂತಗಳನ್ನು ದಾಟಿದ್ದೇನೆ.

ಸುತ್ತಮುತ್ತಲಿನ ಹಸಿರು ಕಾಡಿನಲ್ಲಿ, ಬಿಸಿಲು ತಾಗದ ನೆರಳಿನ ನಡುವೆ ಮರದಂತೆ ಎತ್ತರಕ್ಕೆ ಬೆಳೆಯಲು ಅನೇಕ ಮರಗಳೇ ನನಗೆ ಆಸರೆ. ಆರಂಭದಲ್ಲಿ ಭರಣಿ ಜಾತಿಯ ಮರವನ್ನು ತಬ್ಬಿಕೊಂಡು ಬೆಳೆದ ನಾನು, ಈಗ ನನ್ನ ಅನೇಕ ಬಾಹುಗಳನ್ನು ಚಾಚಿ ಮತ್ತಿ, ಹೊನಗಲು, ಬಕುಲ, ಕಾನಜಂಬೆ, ಹೊಳೆಗೇರು, ದುಳ್ಳೆ, ಅರಿಸಿನಗೌರಿ, ವಾಟೆ, ಸಂಪಿಗೆ–ಹೀಗೆ ಹತ್ತಕ್ಕೂ ಹೆಚ್ಚು ಮರಗಳನ್ನು ಆವರಿಸಿಕೊಂಡಿದ್ದೇನೆ. ಕೊಂಬೆ ಕೊಂಬೆಗಳಲಿ ಗಂಟು ಬಿದ್ದು, ನೂರಾರು ಅಡಿ ಎತ್ತರದವರೆಗೆ ಬಾನಿನ ಬೆಳಕನ್ನು ತಲುಪಿರುವೆ ಎಂಬುದು ನನ್ನ ಹೆಮ್ಮೆ.

ನಾನು ಬೇರೂರಿದ ಜಾಗದಿಂದ ನನ್ನ ಸಂಪೂರ್ಣ ದೇಹವನ್ನು ಅಳೆಯಲು ಹೊರಟರೆ, ಮುನ್ನೂರು ಮೀಟರ್‌ಗಳೂ ಸಾಲದು. ನನ್ನ ಬುಡವೇ ಮೂರು ಅಡಿ ದಪ್ಪ. ನನ್ನೊಳಗಿಂದ ಹುಟ್ಟಿಕೊಂಡ ಹತ್ತಾರು ತಂತುಗಳು ಸುತ್ತಲಿನ ಹಿರಿಕಿರಿಯ ಮರಗಳಿಗೆ ಆಸರೆಯಾಗಿವೆ. ಮಲೆನಾಡಿನ ಮಳೆಗಾಳಿಯ ಬಲ ನಿಮಗೆ ಗೊತ್ತೇ ಇದೆ. ಮರಗಳು ಧರೆಗುರುಳುವುದು ಅಚ್ಚರಿಯಲ್ಲ. ಆದರೆ ನಾನು ಈ ಮರಗಳ ಕೊರಳಿಗೆ ಬಿಗಿಯಾಗಿ ಅಂಟಿಕೊಂಡಿರುವುದರಿಂದ,



ಅವುಗಳು ಸುಲಭವಾಗಿ ಬೀಳಲಾರವು. ಹೀಗೆ ಮಳೆಗಾಳಿಗೆ ಎದೆಸೆಟೆದು ನಿಂತ ಮರಗಳಲ್ಲಿ ಹೂವು-ಹಣ್ಣುಗಳ ಸಂಭ್ರಮ, ಪ್ರಾಣಿ-ಪಕ್ಷಿಗಳ ವಾಸ. ಅಪರೂಪಕ್ಕೆ ನನ್ನ ಕೊಂಬೆಗಳಲ್ಲಿ ಕಟ್ಟುವ ಕಂಬಳಿಯಾಕಾರದ ಜೇನುಗೂಡು ನೋಡಿದಾಗ, ನನಗೂ ಆನಂದವೇ.

ಯಾವ ಮನುಷ್ಯನ ಕೊಡಲಿ-ಕತ್ತಿಗೂ ನಾನು ಕೊರಳು ಒಡ್ಡದೇ ಇಲ್ಲಿಯವರೆಗೆ ಬದುಕಿ ಬಂದಿದ್ದೇನೆ. ವರ್ಷಕ್ಕೊಮ್ಮೆ ಹೂಬಿಟ್ಟು, ಮೀಟರ್ ಉದ್ದದ ಸೋಡಿಗೆಯಂತೆ ಫಲ ಕೊಡುವೆ. ಅದರೊಳಗೆ ಕಾಫಿ ಬಣ್ಣದ ಹತ್ತಾರು ಬೀಜಗಳು ಬೆಳೆದು, ಒಣಗಿದ ಮೇಲೆ ಮಳೆಗಾಲದಲ್ಲಿ ನೆಲಕ್ಕೆ ಉದುರುತ್ತವೆ. ಒಂದೊಂದು ಬೀಜ ನಾಲ್ಕು ಇಂಚು ಅಗಲವಿದ್ದು, ಹೊರ ಪದರ ಗಟ್ಟಿಯಾಗಿರುತ್ತದೆ. ನೆಲಕ್ಕಿಳಿದ ಬೀಜಗಳನ್ನು ಮಾನವರು ಕಲೆಹಾಕಿ ಮಣ್ಣಿನ ನೆಲ ನುಣುಪಾಗಿಸಲು ಬಳಸುತ್ತಾರೆ. ಕೆಲವು ಕುಚೇಷ್ಟೆ ವಿದ್ಯಾರ್ಥಿಗಳು ಅವನ್ನು ನೆಲಕ್ಕೆ ಉಜ್ಜಿ, ಸಹಪಾಠಿಗಳ ಮೇಲೆ ಎಸೆದು ಆಟವಾಡುತ್ತಾರೆ.

ಅಯ್ಯೋ, ನನ್ನ ಹೆಸರನ್ನೇ ಹೇಳಲು ಮರೆತಿದ್ದೆ ನೋಡಿ! ಯಾಕೆಂದರೆ, ವಯಸ್ಸಾಯಿತಲ್ಲ! ಮಲೆನಾಡಿನಲ್ಲಿ ನನಗೆ 'ಗಣಪೆ ಬಳ್ಳಿ' ಅಥವಾ 'ಹಲ್ಲೆ ಕಾಯಿ' ಎಂದು ಕರೆಯುತ್ತಾರೆ. ಸಂಸ್ಕೃತದಲ್ಲಿ 'ಗಿಲ್ಲಾ' ಎನ್ನುವರು. ವೈಜ್ಞಾನಿಕವಾಗಿ ನನ್ನನ್ನು Entada pursaetha ಎಂದು ಗುರುತಿಸುತ್ತಾರೆ. ನಾನು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಹೊನ್ನಗದ್ದೆ ಗ್ರಾಮದ ಕಾಡಿನಲ್ಲಿ ನೆಲೆಸಿದ್ದೇನೆ.

ಅಜ್ಜನ ಕಾಲದಿಂದಲೂ ನನ್ನನ್ನು ಕಾಪಾಡಿಕೊಂಡು ಬಂದವರು, ಮುಂದೆಯೂ ನನ್ನ ಸಂತತಿಯನ್ನು ಉಳಿಸಲಿ– ಇದೇ ನನ್ನ ಕೋರಿಕೆ. ❖

ಕಥೆ
ಶ್ರೀಧರ ಗಸ್ತಿ, ಧಾರವಾಡ ಅವರ ಶಬರಿಕೊಳ್ಳದಲ್ಲಿ ರಾಮಕ್ಕ
prajavani.net/short-story

ಕವನ
ಗುಂಡಪ್ಪ ರಾಠೋಡ್ ಅವರ ನಾನು ಬದುಕಬೇಕಿದೆ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು

ಕತೆಗಳ ಬೆನ್ನೇರಿ ಬಂದ ಕಲ್ಪನಾ ವಿಲಾಸ

ಬೇಸಿಗೆ ರಜೆ ಮುಗಿದು ಶಾಲೆಗಳ ಗಂಟೆ ಮತ್ತೆ ಮೊಳಗಲಾರಂಭಿಸಿದೆ. ಪುಸ್ತಕದ ಚೀಲ, ಹೋಮ್‌ವರ್ಕ್, ತರಗತಿಗಳ ನಡುವೆ ಮಕ್ಕಳು ಮತ್ತೆ ದಿನಚರಿಯೊಳಗೆ ಮರಳುತ್ತಿದ್ದಾರೆ. ಇಂಥ ಸಮಯದಲ್ಲಿ ಪಠ್ಯಪುಸ್ತಕಗಳ ಜೊತೆಗೆ ಓದಿನ ಆಸಕ್ತಿಯನ್ನು ಜೀವಂತವಾಗಿಡುವ ಕೆಲವು ಕನ್ನಡ ಪುಸ್ತಕಗಳನ್ನು ಮಕ್ಕಳ ಕೈಗೆ ಕೊಡುವುದು ಅಗತ್ಯವಾಗಿದೆ.

ಕನ್ನಡವನ್ನು ಎರಡನೇ ಅಥವಾ ಮೂರನೇ ಭಾಷೆಯಾಗಿ ಕಲಿಯುತ್ತಿರುವ ಮಕ್ಕಳಿಗೆ ಕನ್ನಡದ ಸೊಗಡು, ಅದರ ಭಾವಲೋಕ ಮತ್ತು ಬದುಕಿನ ಮೌಲ್ಯಗಳನ್ನು ಪರಿಚಯಿಸಲು ಈ ಪುಸ್ತಕಗಳು ನೆರವಾಗುತ್ತವೆ. ಶಾಲೆಯ ಓದಿನ ಒತ್ತಡದ ನಡುವೆಯೂ ಓದನ್ನು ಆನಂದವಾಗಿ ಕಾಣುವಂತೆ ಮಾಡುತ್ತವೆ.

ತಮ್ಮಣ್ಣ ಬೀಗಾರ ಅವರ ಅಪ್ಪಣ್ಣ ಮತ್ತು ಡಾಗಿ ಸಮಕಾಲೀನ ಬದುಕಿನ ನಡುವೆ ಮಾನವೀಯ ಸಂಬಂಧಗಳ ಮೌಲ್ಯವನ್ನು ನವಿರಾಗಿ ಕಟ್ಟಿಕೊಡುವ ಕಥಾಸಂಕಲನ. ಸಮಯದ ಬದಲು ವಸ್ತುಗಳು ಮತ್ತು ಮೊಬೈಲ್‌ಗಳನ್ನು ಮಕ್ಕಳಿಗೆ ನೀಡುತ್ತಿರುವ ಈ ಕಾಲದಲ್ಲಿ ಪಾಲಕರು–ಮಕ್ಕಳ ನಡುವಿನ ದೂರವನ್ನು ಈ ಕಥೆಗಳು ಸೂಕ್ಷ್ಮವಾಗಿ ತೆರೆದಿಡುತ್ತವೆ. ದಿನನಿತ್ಯದ ಘಟನೆಗಳಲ್ಲಿಯೇ ಮಮತೆ, ವಾತ್ಸಲ್ಯ ಮತ್ತು ಒಟ್ಟಾಗಿ ಬದುಕುವ ತೀವ್ರತೆಯನ್ನು ಕಟ್ಟಿಕೊಡುವ ಕಥೆಗಳು ಇಲ್ಲಿವೆ. ಮಕ್ಕಳ ಜೊತೆಗೆ ಪಾಲಕರೂ ಓದಬೇಕಾದ ಪುಸ್ತಕ ಇದಾಗಿದೆ.



ಅಪ್ಪ ಮತ್ತು ಡಾಗಿ
ಲೇ: ತಮ್ಮಣ್ಣ ಬೀಗಾರ
ಪ್ರ: ಅಭಿನವ ಪ್ರಕಾಶನ
ಸಂ: 9448804905
ಪುಟ: 112 ₹200

ವಸು ವತ್ಸಲೆ ಅವರ ಮಹಿ ಮಕ್ಕಳನ್ನು ನಿಗೂಢ ಮತ್ತು ಫ್ಯಾಂಟಸಿ ಲೋಕಕ್ಕೆ ಕರೆದೊಯ್ಯುವ ಕಾದಂಬರಿ. ಕರಡಿಗುಡ್ಡವೂ ಒಂದು ಜೀವಂತ ಪಾತ್ರವಾಗಿ ಕಾಣಿಸಿಕೊಳ್ಳುವ ಈ ಕಥೆಯಲ್ಲಿ ಸಾಹಸ, ಕುತೂಹಲ ಮತ್ತು ಕಲ್ಪನೆಯ ಪದರಗಳು ತೆರೆದುಕೊಳ್ಳುತ್ತವೆ. ಸುಲಭ ಕನ್ನಡ ಮತ್ತು ಆಕರ್ಷಕ ನಿರೂಪಣೆ ಮಕ್ಕಳಲ್ಲಿ ಓದಿನ ಆಸಕ್ತಿಯನ್ನು ಹೆಚ್ಚಿಸುತ್ತದೆ. ಪ್ರತಿದಿನ ಸ್ವಲ್ಪ ಹೊತ್ತಾದರೂ ಕನ್ನಡ ಓದುವ ಅಭ್ಯಾಸ ಬೆಳೆಸಲು ಇದು ಒಳ್ಳೆಯ ಆಯ್ಕೆ.



ಮಹಿ
ಲೇ: ವಸು ವತ್ಸಲೆ
ಪ್ರ: ಅವ್ಯಕ್ತ ಪ್ರಕಾಶನ
ಸಂ: 8792693438
ಪುಟ: 228 ₹275

ಮಾತನಾಡದ ಚುಕ್ಕಿ ಕಥಾಸಂಕಲನ ಗ್ರಾಮೀಣ ಮಕ್ಕಳ ಬದುಕಿನ ಮಿಡಿತಗಳನ್ನು ಹತ್ತಿರದಿಂದ ಹಿಡಿದಿಡುತ್ತದೆ. ಬಡತನ, ಸರ್ಕಾರಿ ಶಾಲೆಗಳ ಸ್ಥಿತಿಗತಿ, ಓದಿಗಾಗಿ ನಡೆಯುವ ಹೋರಾಟ ಎಲ್ಲವೂ ಕಥೆಗಳ ಮೂಲಕ ಜೀವಂತವಾಗುತ್ತವೆ. ಎಷ್ಟೇ ಕಷ್ಟಗಳಿದ್ದರೂ ಬದುಕನ್ನು ಪ್ರೀತಿಸುತ್ತಾ ಮುಂದೆ ಸಾಗುವ ಪಾತ್ರಗಳು ಮಕ್ಕಳಲ್ಲಿ ಧೈರ್ಯ ಮತ್ತು ಸಹಾನುಭೂತಿಯನ್ನು ಬೆಳೆಸುತ್ತವೆ. ಬಳ್ಳಾರಿ ಭಾಗದ ಭಾಷೆಯ ಸೊಗಡು ಕಥೆಗಳಿಗೆ ಇನ್ನಷ್ಟು ಜೀವ ತುಂಬಿದೆ.

ಶಾಲೆಗಳು ಆರಂಭವಾದರೂ ಮಕ್ಕಳ ಓದು ಪಠ್ಯಪುಸ್ತಕಗಳಿಗೆ ಮಾತ್ರ ಸೀಮಿತವಾಗಬಾರದು. ಕಥೆಗಳ ಮೂಲಕ ಲೋಕವನ್ನು ನೋಡುವ ಕೌಶಲ, ಸಹಾನುಭೂತಿ ಮತ್ತು ಕಲ್ಪನಾಶಕ್ತಿಯನ್ನು ಬೆಳೆಸುವಲ್ಲಿ ಇಂಥ ಪುಸ್ತಕಗಳು ಮಹತ್ವದ ಪಾತ್ರವಹಿಸುತ್ತವೆ.



ಮಾತನಾಡದ ಚುಕ್ಕಿ
ಲೇ: ಶೇಖರಯ್ಯ ಟಿ ಎಚ್ ಎಂ
ಸಂ: 91642 41520
ಪುಟ: 92 ₹200

ತೂಗುವ ತೊಟ್ಟಿಲಿಗೆ ಹಾಡಿನ ಹಿಮ್ಮೇಳ

ಕೆರೆಯ ದಂಡೆಯ ಮೇಲೆ ತೂಗುವ ತೊಟ್ಟಿಲಿನಂತೆ ಕಾಣುವ ಗೀಜದ ಗೂಡಿನ ಕಲಾತ್ಮಕತೆ, ಈ ಸಂಕಲನದ ಹಾಡುಗಳಲ್ಲಿಯೂ ಪ್ರತಿಫಲಿಸುತ್ತದೆ. ಗಾಯಕರಿಂದ ನೇರವಾಗಿ ಸಂಗ್ರಹಿಸಿದ ಹಾಡುಗಳನ್ನು ಮೂಲ ರೂಪದಲ್ಲಿಯೇ ದಾಖಲಿಸಿರುವುದು ವಿಶೇಷ. ಜೊತೆಗೆ, ಗಾಯಕರ ಪರಿಚಯ ಹಾಗೂ ಹಾಡುಗಳ ಕುರಿತ ಸಂಕ್ಷಿಪ್ತ ಟಿಪ್ಪಣಿಗಳು ಓದುಗರಿಗೆ ಅಗತ್ಯವಾದ ಹಿನ್ನೆಲೆ ಮತ್ತು ಸಂದರ್ಭವನ್ನು ಒದಗಿಸುತ್ತವೆ.

ನಾಲ್ಕೈದು ದಶಕಗಳ ಹಿಂದೆ ಸಂಗ್ರಹಿಸಿದ ಈ ಹಾಡುಗಳಲ್ಲಿ ಅನೇಕ ಜನಪ್ರಿಯ ಗೀತೆಗಳೂ ಸೇರಿವೆ. ಆದರೆ ಅವುಗಳ ಪಠ್ಯದಲ್ಲಿ ಕಂಡುಬರುವ ವ್ಯತ್ಯಾಸಗಳು ಜನಪದ ಸಾಹಿತ್ಯದ ಬಹುರೂಪಿತ್ವವನ್ನು ಅನಾವರಣಗೊಳಿಸುತ್ತವೆ. ಇದು ಗಾಯಕರ ಸೃಜನಶೀಲತೆಯೋ, ಅಥವಾ ಪ್ರದೇಶದಿಂದ ಪ್ರದೇಶಕ್ಕೆ ಪಠ್ಯ ರೂಪಾಂತರಗೊಳ್ಳುವ ಜನಪದದ ಸಹಜ ಗುಣವೋ ಎಂಬ ಕುತೂಹಲವನ್ನು ಹುಟ್ಟಿಸುತ್ತದೆ. ಜನಪದ ಸಾಹಿತ್ಯದ ಜೀವಂತಿಕೆಯೂ ಇಂತಹ ರೂಪಾಂತರಗಳಲ್ಲಿಯೇ ಅಡಗಿದೆ.

ಒಟ್ಟು 103 ಹಾಡುಗಳನ್ನು ಒಳಗೊಂಡಿರುವ ಈ ಸಂಕಲನದಲ್ಲಿ ಅಧ್ಯಾತ್ಮ, ಕುಟುಂಬ, ಸಾಮಾಜಿಕ ಹಾಗೂ ಆರಾಧನಾ ನೆಲೆಯ ಗೀತೆಗಳಿವೆ. ಹಾಡುಗಳನ್ನು ವಿವಿಧ ವಿಭಾಗಗಳಾಗಿ ವರ್ಗೀಕರಿಸಿರುವುದು ಜನಪದ ಸಾಹಿತ್ಯದ ವ್ಯಾಪ್ತಿ, ವೈವಿಧ್ಯ ಮತ್ತು ಅಭಿವ್ಯಕ್ತಿಯ ಶ್ರೀಮಂತಿಕೆಯನ್ನು ಅರಿಯಲು ನೆರವಾಗುತ್ತದೆ.

ಆದರೆ, ಕೆಲವು ಪದಗಳ ಅರ್ಥವಿವರಣೆ ಮತ್ತು ಪಠ್ಯ ಸಂಪಾದನೆಯಲ್ಲಿ ಕಂಡುಬರುವ ಸಣ್ಣಪುಟ್ಟ ದೋಷಗಳು ಗಮನ ಸೆಳೆಯುತ್ತವೆ. ಗಾಯನ ಪ್ರಧಾನ ಸಾಹಿತ್ಯದಲ್ಲಿ ಇಂತಹ ತಪ್ಪುಗಳು ಅರ್ಥ ಮತ್ತು ಭಾವದ ಸೂಕ್ಷ್ಮತೆಯನ್ನು ಕುಂದಿಸಬಹುದು. ಆದಾಗ್ಯೂ, ಜನಪದ ಗೀತೆಗಳ ವಿವಿಧ ಪಠ್ಯರೂಪಗಳನ್ನು ದಾಖಲಿಸಿ ಸಂರಕ್ಷಿಸಿರುವ ಈ ಸಂಕಲನ, ಜನಪದ ಅಧ್ಯಯನ, ಸಂಶೋಧನೆ ಮತ್ತು ಆಸಕ್ತ ಓದುಗರಿಗಾಗಿ ಮಹತ್ವದ ಕೊಡುಗೆಯಾಗಿ ಉಳಿಯುತ್ತದೆ.



ಗೀಜುಗದರಮನೆ
ಸಂ: ಕುರುವ ಬಸವರಾಜ್
ಪ್ರ: ಗೀತಾಂಜಲಿ ಪಬ್ಲಿಕೇಷನ್ಸ್
ಸಂ: 9448553375
ಪುಟ: 272 ₹300

• ಚಿತ್ರ-ಬರಹ: ಶೇಖರ್ ಗೌಳೇರ್

ಪ್ರವಾಸ

'ಸ್ಯಾಂಟೋರಿನಿ ಕಾಲ್ಡೇರಾ'ದ ಸುಂದರ ಕ್ಷಣಗಳು

ಬಿಳಿ ಕೋಡುಗಲ್ಲು

ಸ್ಯಾಂಟೋರಿನಿ – ಏಜಿಯನ್ ಸಮುದ್ರದಲ್ಲಿ ಇರುವ ಗ್ರೀಸ್‌ನ ದ್ವೀಪ ಪ್ರದೇಶ. ವಿಭಿನ್ನ ವಾಸ್ತುಶಿಲ್ಪದ ಕಟ್ಟಡಗಳು, ನೀಲಿ ಗೋಪುರವುಳ್ಳ ಚರ್ಚ್‌ಗಳು ಹೀಗೆ ವಿಭಿನ್ನ ಮತ್ತು ಐತಿಹಾಸಿಕ ಹಿನ್ನಲೆಯ ಈ ಭೂಮಿ 16ನೇ ಶತಮಾನದಲ್ಲಿ ಜ್ವಾಲಾಮುಖಿಯಿಂದ ಮೂಡಿರುವ ದ್ವೀಪ. ಇಲ್ಲಿನ ಪ್ರಕೃತಿ ಸೌಂದರ್ಯದ ಚಿತ್ರ-ಅಕ್ಷರ ನೋಟ ಇಲ್ಲಿದೆ.

ಗ್ರೀಸ್ ನೋಡಬೇಕೆಂದು ನಕ್ಷೆ ತೆರೆದಾಗ, ನನ್ನ ಅಂಗೈಬೆರಳು ಏಜಿಯನ್ ಸಮುದ್ರದೊಳಗೆ ನುಗ್ಗಿದಂತೆ ಅನಿಸಿತು. ನೀಲಿಕಡಲಿನಲ್ಲಿ ಹರಿದ ಬಿಳಿ ಹಾಳೆಚೂರುಗಳಂತೆ ಸಾವಿರಾರು ದ್ವೀಪಗಳು ತೇಲುತ್ತಿದ್ದವು. ಪಾಶ್ಚಾತ್ಯ ನಾಗರಿಕತೆಯ ತೊಟ್ಟಿಲು, ಮೂರು ಸಾವಿರ ವರ್ಷಗಳ ಇತಿಹಾಸ, ತತ್ವಜ್ಞಾನಿಗಳ ನೆಲೆ, ಅಲೆಕ್ಸಾಂಡರ್ ಚಕ್ರವರ್ತಿಯ ಹೆಜ್ಜೆ ಗುರುತುಗಳು, ವಿಶ್ವ ಪಾರಂಪರಿಕ ತಾಣಗಳ ವೈಭವಗಳೆಲ್ಲವೂ ನನ್ನನ್ನು ದೂರದಿಂದಲೇ ಕೈಬೀಸಿ ಕರೆಯುತ್ತಿದವು. ಪಾಠ್ಯಪುಸ್ತಕಗಳಲ್ಲಿ ಓದಿದ್ದ ಗ್ರೀಸ್ ಅಂದು ನಕ್ಷೆಯೊಳಗಿಂದ ಹೊರಬಂದು ನನ್ನ ಎದುರಿಗೇ ನಿಂತಂತಿತ್ತು.

ಒಂದು ವಾರದ ಪ್ರವಾಸ ಯೋಜನೆ ಸಿದ್ಧಪಡಿಸಿ ಗ್ರೀಸ್ ಕಡೆ ಹೊರಟೆ. ಅಥೆನ್ಸ್‌ನ ಅವಶೇಷಗಳು, ಡೆಲ್ಫಿಯ ಪರ್ವತದ ಮೌನ, ಮಿಕಿನೋಸ್‌ನ ಸಂಭ್ರಮ ಇವೆಲ್ಲವನ್ನು ದಾಟಿದ ಬಳಿಕ ನನ್ನ ಮನಸ್ಸು ಮಾತ್ರ ಇನ್ನೊಂದು ಕನಸಿನತ್ತ ಓಡುತ್ತಿತ್ತು; ಅದೇ ಸ್ಯಾಂಟೋರಿನಿ.

ಮಿಕಿನೋಸ್ ವಾಟರ್‌ಫ್ರಂಟ್‌ನಲ್ಲಿ 'ಸೀಜೆಟ್ ಚಾಂಪಿಯನ್' ಎಂಬ ಹೈಸ್ಪೀಡ್ ಕ್ರೂಸ್ ಲಂಗರು ಹಾಕಿ ನಿಂತಿತ್ತು. ನವದಂಪತಿಗಳು, ಬೆನ್ನಿಗೆ ಬ್ಯಾಗ್ ಹೊತ್ತ ಸಾಹಸಿಗಳು, ಕ್ಯಾಮೆರಾ ಹಿಡಿದ ಪ್ರವಾಸಿಗರೂ ಅದೇ ಕನಸಿನ ದ್ವೀಪದತ್ತ ಹೊರಟವರೇ. ಕ್ರೂಸ್ ನೀಲಿಕಡಲನ್ನು ಚಿಮ್ಮುತ್ತ ಸಾಗತೊಡಗಿತು.

ಸಮುದ್ರದ ಗಾಳಿ ಮುಖಕ್ಕೆ ಅಪ್ಪಳಿಸುತ್ತಿತ್ತು. ಹಡಗಿನ ಅಂಚಿನಲ್ಲಿ ನಿಂತು ದೂರದ ದ್ವೀಪಗಳನ್ನು ನೋಡುವುದೇ ಒಂದು ಧ್ಯಾನದಂತಿತ್ತು. ಫಾರೋಸ್, ನ್ಯಾಕ್ಸೋಸ್, ಲೋಸ್, ಮಿಲೋಸ್ ದ್ವೀಪಗಳು ಒಂದೊಂದಾಗಿ ಕಣ್ಣಮುಂದೆ ಸರಿಯುತ್ತಿದ್ದವು. ಕಪ್ಪು ಬೆಟ್ಟಗಳ ಇಳಿಜಾರಿನಲ್ಲಿ ಹಬ್ಬಿದ್ದ ಆಲಿವ್ ತೋಟಗಳು, ದ್ರಾಕ್ಷಿಯ ಸಾಲುಗಳು, ಚೆರ್ರಿ ಟೊಮೆಟೊಗಳ ಹೊಲಗಳು ಸಮುದ್ರದ ನೀಲಿಗೆ ಹಸಿರಿನ ಅಂಚು ಹೊದಿಸುತ್ತಿದ್ದವು. ದೂರದಲ್ಲಿ ವಿಂಡ್ ಸರ್ಫಿಂಗ್ ಹಾಗೂ ಕೈಟ್ ಸರ್ಫಿಂಗ್ ದೋಣಿಗಳು ಗಾಳಿಯೊಂದಿಗೆ ಓಟ ಹಾಕುತ್ತಿದ್ದವು. ಕೆಲವೆಡೆ ಬಿಳಿ ಮನೆಗಳು ಬೆಟ್ಟದ ಎದೆಯ ಮೇಲೆ ಅಂಟಿಸಿದ ಶಂಖಗಳಂತೆ ಕಾಣುತ್ತಿದ್ದವು.

ಒಯಾ ಸಿಟಿ

ಸುಮಾರು ಎರಡು ಗಂಟೆಗಳ ಪ್ರಯಾಣದ ಬಳಿಕ ಸ್ಯಾಂಟೋರಿನಿ ದ್ವೀಪ ಕಣ್ಣಮುಂದೆ ಉದಯಿಸಿತು. ಅದು ಮೊದಲ ನೋಟದಲ್ಲೇ ನನ್ನನ್ನು ಬೆರಗುಗೊಳಿಸಿತು.

ಕಪ್ಪು ಅಗ್ನಿಪರ್ವತ ಬಂಡೆಗಳ ಅಂಚಿನಲ್ಲಿ ಹಾಲುಬಿಳಿ ಮನೆಗಳು ಸಾಲಾಗಿ ನಿಂತಿದ್ದವು. ಸಮುದ್ರದ ಮೇಲೆ ಕೋಟೆಗೋಡೆಯಂತೆ ಎದ್ದಿದ್ದ ಆ ಬಂಡೆಗಳ ನಡುವೆ ಮನುಷ್ಯ ತನ್ನ ಕನಸನ್ನೇ ಕಟ್ಟಿಕೊಂಡಂತೆ ಕಾಣುತ್ತಿತ್ತು. ಥಿರಾದಲ್ಲಿದ್ದ ನಮ್ಮ ಹೋಟೆಲ್ ಕಡೆ ಹೋಗುವ ಅಂಕುಡೊಂಕಾದ ರಸ್ತೆ ಆಗುಂಬೆ ಘಾಟಿಯ ನೆನಪನ್ನು ಮೂಡಿಸಿತು. ಕೆಳಗೆ ಆಳವಾದ ನೀಲಿ ಸಮುದ್ರ, ಮೇಲೆ ಬೆಟ್ಟದ ತುದಿಯಲ್ಲಿ ಅಂಟಿಕೊಂಡ ಮನೆಗಳಿದ್ದವು.

ಸ್ಯಾಂಟೋರಿನಿ ಸಾಮಾನ್ಯ ದ್ವೀಪವಲ್ಲ. ಅದು ಸಮುದ್ರದೊಳಗೆ ಮುಳುಗಿದ ಅಗ್ನಿಪರ್ವತದ ಗಾಯದ ಗುರುತು.

ಸುಮಾರು 3,600 ವರ್ಷಗಳ ಹಿಂದೆ, ಕಂಚಿನ ಯುಗದಲ್ಲಿ ಇಲ್ಲಿ ಭೀಕರ ಜ್ವಾಲಾಮುಖಿ ಸಂಭವಿಸಿತ್ತು. ಆಫ್ರಿಕನ್ ಟೆಕ್ಟಾನಿಕ್ ಪ್ಲೇಟ್ ಯುರೇಷಿಯನ್ ಪ್ಲೇಟ್ ಕೆಳಗೆ ನುಗ್ಗಿದ ಪರಿಣಾಮ ಸಮುದ್ರದ ತಳದಲ್ಲಿದ್ದ ಅಗ್ನಿಪರ್ವತ ಉಕ್ಕಿ ಹರಿದಿತ್ತು. ವಿಜ್ಞಾನಿಗಳ ಪ್ರಕಾರ, ಅದರ ತೀವ್ರತೆ ಕ್ರಕಟೋವಾ ಸ್ಫೋಟಕ್ಕಿಂತಲೂ ಭಯಾನಕವಾಗಿತ್ತು.

ಲಾವಾ, ಬೂದಿ, ಬಿಸಿ ಹಬೆ, ಕಲ್ಲು ಎಲ್ಲವೂ ಆಕಾಶಕ್ಕೇ ಚಿಮ್ಮಿದವು. ಸುನಾಮಿ ಅಲೆಗಳು ದೂರದ ಇಸ್ರೇಲ್ ಮತ್ತು ಲೆಬನಾನ್ ಕರಾವಳಿಗಳವರೆಗೂ ತಲುಪಿದವು. ಮಿನೋನ್ ನಾಗರಿಕತೆಯ ಹಳ್ಳಿಗಳು ಮಣ್ಣಿನಡಿ ಮಣ್ಣಿನೊಳಗೆ ಹೂತುಹೋಗಿದ್ದವು. ಅಂತಿಮವಾಗಿ ದ್ವೀಪದ ಮಧ್ಯಭಾಗವೇ ಕುಸಿದು ಸಮುದ್ರ ತುಂಬಿಕೊಂಡಿತು. ಅದೇ ಇಂದಿನ ಕಾಲ್ಡೇರಾ.

ಪ್ರಕೃತಿಯ ಆ ಮಹಾಸ್ಫೋಟದ ನೆನಪಿನ ಮಧ್ಯೆ ಇಂದು ಮನುಷ್ಯ ಸೌಂದರ್ಯದ ಹಬ್ಬವನ್ನೇ ಕಟ್ಟಿಕೊಂಡಿದ್ದಾನೆ.

ಸ್ಯಾಂಟೋರಿನಿಯ ಬಣ್ಣದ ಬೀಚುಗಳು ನನ್ನ ಮುಂದಿನ ಗುರಿಯಾಗಿದ್ದವು. ಕಮಾರಿ ಬೀಚಿಗೆ ಕಾಲಿಟ್ಟ ಕ್ಷಣವೇ ಪಾದಗಳಿಗೆ ಬೆಂಕಿ ತಗುಲಿದಂತಾಯಿತು. ಕಪ್ಪು ಬಸಾಲ್ಟ್ ಮರಳು ಮಧ್ಯಾಹ್ನದ ಬಿಸಿಲಿನಲ್ಲಿ ಕೆಂಡದಂತೆ ಕಾದಿತ್ತು. ಅಲೆಗಳು ಮಾತ್ರ ತಂಪಿನ ಸ್ಪರ್ಶ ನೀಡುತ್ತಿದ್ದವು. ಆಕ್ರೋಟರಿ ಸಮೀಪದ ಕೆಂಪು ಮತ್ತು ಬಿಳಿ ಬೀಚುಗಳು ಮತ್ತೊಂದು ಲೋಕದಂತೆ ಕಂಡವು.

ಕೆಂಪು ಬಂಡೆಗಳು, ಕಂದು ಶಿಲೆಗಳು, ಬಿಳಿ ಸುಣ್ಣದ ಕಲ್ಲುಗಳೆಲ್ಲವೂ ಅಗ್ನಿಪರ್ವತದ ಸಾವಿರಾರು ವರ್ಷದ ಕಥೆಯನ್ನು ಮೌನವಾಗಿ ಹೇಳುತ್ತಿದ್ದವು. ಪ್ರಕೃತಿಯ ಬಣ್ಣದ ಪ್ಯಾಲೆಟ್ ಅಲ್ಲಿ ಕರಾವಳಿಯಾಗಿ ಹರಡಿಕೊಂಡಂತಿತ್ತು.

ಬೀಚುಗಳಲ್ಲಿ ಪ್ರವಾಸಿಗರ ಹಬ್ಬವೇ ನಡೆಯುತ್ತಿತ್ತು. ಯಾರೋ ಸೂರ್ಯಸ್ನಾನ ಮಾಡುತ್ತಿದ್ದರು. ಕೆಲವರು ನೀಲಿಕಡಲಿನಲ್ಲಿ ತೇಲುತ್ತಿದ್ದರು. ಇನ್ನೂ ಕೆಲವರು ಅಲೆಗಳ ಮೇಲೆ ಸರ್ಫಿಂಗ್ ಮಾಡುತ್ತಿದ್ದರು. ಕೆಫೆಗಳಲ್ಲಿ ವೈನ್ ಗ್ಲಾಸ್‌ಗಳು ಮಿನುಗುತ್ತಿದ್ದವು. ಗ್ರೀಕ್ ಸಂಗೀತದ ಮೃದುವಾದ ಸ್ವರ ಗಾಳಿಯಲ್ಲಿ ತೇಲುತ್ತಿತ್ತು.

ಪಲಿಯಾ ಕಮೇನಿ

ಆ ಸಂಜೆ ಹಳೆಯ ಸಕಲಾ ಬಂದರಿನಿಂದ ಕಟ್ಟಿಗೆಯ ಹಡಗೊಂದರಲ್ಲಿ ನಿಯಾ ಕಮೇನಿಯತ್ತ ಹೊರಟೆವು.

ನಿಯಾ ಕಮೇನಿ ಅಂದರೆ 'ಹೊಸ ಅಗ್ನಿಪರ್ವತ'.

ಕಪ್ಪು ಶಿಲೆಗಳ ನಡುವೆ ನಡೆದು ಹೋಗುವಾಗ ಭೂಮಿ ಇನ್ನೂ ಒಳಗಿನಿಂದ ಉಸಿರಾಡುತ್ತಿರುವ ಅನುಭವವಾಗುತ್ತಿತ್ತು. ಕೆಲವೆಡೆ ನೆಲ ಬಿಸಿಯಾಗಿತ್ತು. ಅಗ್ನಿಪರ್ವತ ಸತ್ತಿಲ್ಲ; ಕೇವಲ ನಿದ್ರಿಸುತ್ತಿದೆ ಎಂಬ ಭಾವನೆ ಮೂಡುತ್ತಿತ್ತು. ಮೇಲೇರಿದಾಗ ಸುತ್ತಲಿನ ದ್ವೀಪಗಳು ಅರ್ಧಚಂದ್ರಾಕೃತಿಯಲ್ಲಿ ಹರಡಿಕೊಂಡಿದ್ದವು. ನೀಲಿಕಡಲಿನ ಮಧ್ಯೆ ಕಪ್ಪು ಅಗ್ನಿಪರ್ವತ ಶಿಲೆಗಳು ಭೂಮಿಯ ಆದಿಕಾಲದ ಚಿತ್ರವನ್ನೇ ನೆನಪಿಸುತ್ತಿದ್ದವು.

ಅಲ್ಲಿಂದ ಪಲಿಯಾ ಕಮೇನಿಯತ್ತ ಸಾಗಿದ್ದೆವು. ಸಮುದ್ರದ ಮಧ್ಯೆ ಹಡಗು ನಿಂತ ಕೂಡಲೇ ಹಲವರು ನೀರಿಗೆ ಹಾರಿದರು. ನಾನೂ ಅವರ ಜೊತೆ ಈಜುತ್ತ ಬಿಸಿನೀರಿನ ಬುಗ್ಗೆಗಳತ್ತ ತಲುಪಿದೆ.

ಗಂಧಕದ ಘಾಟು ವಾಸನೆ ಮೂಗಿಗೆ ಬಡಿಯಿತು. ಕಬ್ಬಿಣಾಂಶಯುಕ್ತ ಬಿಸಿನೀರು ದೇಹವನ್ನು ಆವರಿಸಿತು. ಸಮುದ್ರದ ಮಧ್ಯೆ ಪ್ರಕೃತಿಯೇ ನಿರ್ಮಿಸಿದ ಬಿಸಿನೀರಿನ ಸ್ನಾನಗೃಹದಲ್ಲಿ ಮೈ ಮುಳುಗಿಸಿದ ಅನುಭವ ಮರೆಯಲಾಗದು. ನೀರಿನ ಮೇಲ್ಮೈಯಲ್ಲಿ ಸೂರ್ಯಾಸ್ತದ ಬೆಳಕು ಚಿತ್ತಾರ ಬಿಡಿಸುತ್ತಿತ್ತು.

ಆದರೆ ಸ್ಯಾಂಟೋರಿನಿಯ ನಿಜವಾದ ಮಂತ್ರ ಸಂಜೆ ವೇಳೆ ಅರಿವಾಗುತ್ತದೆ. ❖

ಒಯಾ

ಜಗತ್ತಿನ ಅತ್ಯಂತ ಸುಂದರ ಸೂರ್ಯಾಸ್ತ ತಾಣವೆಂದು ಹೆಸರು ಪಡೆದ ಆ ಹಳ್ಳಿಗೆ ತಲುಪುವಷ್ಟರಲ್ಲಿ ಸಾವಿರಾರು ಜನ ಈಗಾಗಲೇ ಆಯಕಟ್ಟಿನ ಸ್ಥಳ ಹಿಡಿದುಕೊಂಡಿದ್ದರು. ಕಪ್ಪು ಬಂಡೆಗಳ ಇಳಿಜಾರಿನಲ್ಲಿ ಕಟ್ಟಿದ ಬಿಳಿಮನೆಗಳು ಸಂಜೆಯ ಬೆಳಕಿನಲ್ಲಿ ಬಂಗಾರದ ಬಣ್ಣ ತಾಳುತ್ತಿದ್ದವು. ನೀಲಿ ಗುಮ್ಮಟಗಳ ಚರ್ಚುಗಳು, ಗಾಳಿಚಕ್ರಗಳು, ಹೂವಿನ ತೋಟಗಳು, ಗುಹೆಯಾಕಾರದ ಮನೆಗಳು ಕನಸಿನ ಚಿತ್ರವನ್ನೇ ಹೋಲುತ್ತಿದ್ದವು.

ಸೂರ್ಯ ನಿಧಾನವಾಗಿ ಏಜಿಯನ್ ಸಮುದ್ರದೊಳಗೆ ಜಾರಲಾರಂಭಿಸಿದ. ಆ ಕ್ಷಣದಲ್ಲಿ ಸುತ್ತಮುತ್ತ ಸಾವಿರಾರು ಜನ ಇದ್ದರೂ ವಿಚಿತ್ರ ಮೌನ ಆವರಿಸಿತು. ಎಲ್ಲರೂ ತಮ್ಮ ತಮ್ಮ ಕ್ಯಾಮೆರಾಗಳನ್ನು ಎತ್ತಿಕೊಂಡಿದ್ದರೂ, ಕಣ್ಣಲ್ಲಿ ಮಾತ್ರ ಒಂದೇ ಭಾವ; ಆ ಕ್ಷಣ ಕಳೆದುಹೋಗಬಾರದು ಎಂಬ ಹಂಬಲ.

ಕೆಂಬಣ್ಣದ ಸೂರ್ಯ ಸಮುದ್ರದ ಅಂಚಿನಲ್ಲಿ ಕರಗುತ್ತಿದ್ದಂತೆ, ನನ್ನ ಕ್ಯಾಮೆರಾ ಕೊನೆಯ ಚಿತ್ರವನ್ನು ಸೆರೆಹಿಡಿದಿತು. ನಿಜ ಹೇಳಬೇಕೆಂದರೆ, ಆ ಸೂರ್ಯಾಸ್ತ ಕ್ಯಾಮೆರಾದಲ್ಲಿ ಸೆರೆಯಾಗಲಿಲ್ಲ. ಅದು ಮನಸ್ಸಿನೊಳಗೆ ಮಾತ್ರ ಉಳಿಯಿತು.

ಕಾಪು ಸಮುದ್ರತೀರ

ನಾಯಿಯ ಕೊರಳ 'ಕರಗಸ'ದ ಸುತ್ತ...

8ನೇ ಪುಟದಿಂದ...

ತೋಳ, ಕರಡಿ, ಚಿರತೆ ಅಥವಾ ಇತರೆ ಕಾಡು ಪ್ರಾಣಿಗಳು ನಾಯಿಯ ಮೇಲೆ ದಾಳಿ ಮಾಡಿದಾಗ ಮೊದಲು ನೇರವಾಗಿ ಕುತ್ತಿಗೆಗೆ ಕೈ ಹಾಕುತ್ತವೆ. ಆಗ ಕರಗಸದ ಪಟ್ಟಿಯಲ್ಲಿನ ಮೊಳೆಗಳು ಪ್ರಾಣಿಗಳಿಗೆ ಹರಿತವಾಗಿ ಚುಚ್ಚುವುದರಿಂದ ಪ್ರಾಣಹಾನಿ ಮಾಡಲು ಸಾಧ್ಯವಾಗುವುದಿಲ್ಲ. ಪ್ರಾಣಿಗಳ ಬಾಯಿ ಅಥವಾ ಹಲ್ಲುಗಳಿಗೆ ಮೊಳೆಗಳು ಚುಚ್ಚುತ್ತವೆ.

ಕೊಪ್ಪಳ ಜಿಲ್ಲೆಯ ಸುತ್ತಮುತ್ತಲ ಭಾಗದಲ್ಲಿ ಕಲ್ಲಂಗಡಿ, ಮೆಕ್ಕೆಜೋಳ, ಟೊಮೆಟೊ, ಪಪ್ಪಾಯ, ಹೂಕೋಸು ಬೆಳೆಯುವುದು ಸಾಕಷ್ಟಿದೆ. ಕಾಡು ಪ್ರಾಣಿಗಳು ಬೆಳೆಗಳನ್ನು ಹಾಳು ಮಾಡುತ್ತವೆ. ರಾತ್ರಿ ಹೊತ್ತಿನಲ್ಲಿ ಹೊಲದ ಹಾಗೂ ಮನೆಯ ಮಾಲೀಕನ ಕಾವಲುಗಾರನಾಗಿ ಕೊರಳ ಕರಗಸ ಹೊಂದಿರುವ ನಾಯಿಗಳು ಕೆಲಸ ಮಾಡುತ್ತವೆ. ಆದ್ದರಿಂದ ಕುರಿಹಿಂಡಿನ ಬಳಿ ಕರಗಸದ ನಾಯಿಗಳಿದ್ದರೆ ಅಪರಿಚಿತರು ಬರಲು ಹಿಂದೇಟು ಹಾಕುತ್ತಾರೆ. ರಾತ್ರಿ ಪರಿಚಿತರು ಹಟ್ಟಿಗೆ ಬಂದರೆ ಅಲ್ಲಿನ ಕುಟುಂಬದವರನ್ನು ಮಾತನಾಡಿಸಿಕೊಂಡೇ ಬರಬೇಕು, ಅಲ್ಲಿಗೆ ಬೇರೆ ನಾಯಿಗಳು ಬಂದರು ಕೂಡ ಕರಗಸ ಕಟ್ಟಿಕೊಂಡ ನಾಯಿಗಳು ದಾಳಿ ಮಾಡುತ್ತವೆ. ಕಾಡು ಪ್ರಾಣಿಗಳು ಕನಿಷ್ಠ ಅರ್ಧ ಕಿ.ಮೀ. ದೂರದಿಂದ ಬರುವುದನ್ನೂ ಈ ನಾಯಿಗಳು ಪತ್ತೆ ಹಚ್ಚುತ್ತವೆ.

ಕೊರಳ ಕರಗಸದ ನಾಯಿಗಳಿಗೆ ಗಟ್ಟಿಮುಟ್ಟಾದ ಸಾತ್ವಿಕ ಆಹಾರವನ್ನೇ ಮಾಲೀಕರು ನೀಡುತ್ತಾರೆ. ಜೋಳ, ಮೆಕ್ಕೆಜೋಳದ ಸಂಗಟಿ ಹಾಗೂ ಕುರಿಗಳ ಹಾಲು ನೀಡುತ್ತಾರೆ. ಯಾವ ಕಾರಣಕ್ಕೂ ಮಾಂಸಹಾರ ನೀಡುವುದಿಲ್ಲ. ಒಂದು ವೇಳೆ ಮಾಂಸ ನೀಡಿದರೆ ಅವು ಕುರಿಗಳ ಮೇಲೆಯೇ ದಾಳಿ ಮಾಡುತ್ತವೆ. ಅಪರಿಚಿತರು ಹಾಗೂ ಕಾಡು ಪ್ರಾಣಿಗಳು ಬಂದರೆ ಸಾಹಸಿಗನಂತೆ ಕೆಲಸ ಮಾಡುವ ಈ ರೀತಿಯ ನಾಯಿಗಳು ಮಧ್ಯರಾತ್ರಿಯಲ್ಲಿ ಕಾಡುಪ್ರಾಣಿಗಳನ್ನು ಹೆದರಿಸಿ ಓಡಿಸಿ ಧೈರ್ಯ ಮೆರೆಯುತ್ತವೆ. ಅದೇ ತಮ್ಮ ಮಾಲೀಕನ ಕುಟುಂಬದ ಮಕ್ಕಳಿಂದ ಹಿಡಿದು ಹಿರಿಯರ ತನಕ ಚಿನ್ನಾಟವಾಡುತ್ತ ಆತ್ಮೀಯತೆ ತೋರಿಸುತ್ತವೆ.

ಕಾಡುಪ್ರಾಣಿಗಳಿಂದ ರಕ್ಷಣೆ ಒದಗಿಸುವ ಬೀರನಂಥ ಕೊರಳ ಕರಗಸದ ನಾಯಿಗಳ ಜೊತೆ ಸಂಕಟದ ಸಮಯದಲ್ಲಿ ಕುರಿಗಾರರು ಕೂಡ ಸಂಕಷ್ಟದ ಪರಿಸ್ಥಿತಿ ಎದುರಿಸುವುದು ಹೊಸದೇನಲ್ಲ.

ಮನೆಯಿಂದ ಹೊರಗಡೆ ನಿಂತು ಜೀವಹಿಂಡುವ ಪ್ರಾಣಿಗಳ ಜೊತೆ ಬೀರನಂಥವರು ನೇರಾನೇರ ಗುದ್ದಾಡಿದರೆ ಮನೆಯೊಳಗಿರುವ ರೈತರು ಹಲವು ತಂತ್ರಗಳನ್ನು ಬಳಸಿ ಪ್ರಾಣಿಗಳನ್ನು ಓಡಿಸಲು ಪ್ರಯತ್ನಿಸುತ್ತಾರೆ. ಕಾಡು ಪ್ರಾಣಿಗಳು ಬಂದಾಕ್ಷಣ ಜೋರಾಗಿ ನಾಯಿ ಒದರಲು ಶುರುಮಾಡುತ್ತಾರೆ. ಮಧ್ಯರಾತ್ರಿ ನಿದ್ದೆಯಿಂದ ಎದ್ದೇಳುವ ರೈತರು ಮನೆಯಲ್ಲಿಯೇ ಹಾಳೆಗೆ ಬೆಂಕಿ ಹಚ್ಚುವುದು, ಕಟ್ಟಿಗೆಯಿಂದ ಜೋರಾಗಿ ಸದ್ದು ಕೇಳುವಂತೆ ನೆಲಕ್ಕೆ ಹೊಡೆಯುವುದು, ಊಟದ ತಟ್ಟೆಗಳನ್ನು ಸೌಟಿನಿಂದ ಬಾರಿಸುವುದು, ಕೇಕೆ ಹೊಡೆಯುವುದು ಹೀಗೆ ಪ್ರಾಣಿಗಳು ಹಟ್ಟಿಯ ಜಾಗ ಬಿಟ್ಟು ಹೋಗುವ ತನಕ ಸದ್ದು ಮಾಡುತ್ತಲೇ ಇರುತ್ತಾರೆ. ಇದು ಹಲವು ಬಾರಿ ಮಧ್ಯರಾತ್ರಿಯಿಂದ ಬೆಳಗಿನ ಜಾವದ ತನಕವೂ ನಡೆದ ನಿದರ್ಶನಗಳಿವೆ ಎಂದು ಸ್ಮರಿಸುತ್ತಾರೆ ಹುಚ್ಚಪ್ಪ. ಕರಗಸ ಧರಿಸಿದ ನಾಯಿಗಳಿಂದಲೇ ರೈತನ ಜೀವ ಹಾಗೂ ಆತನ ಬೆಳೆಗಳು ಉಳಿಯುತ್ತದೆ. ಆ ಬೆಳೆಗಳೇ ರೈತನಿಗೆ ವರ್ಷಪೂರ್ತಿ ಅನ್ನಕ್ಕೆ ಆಸರೆಯಾಗುತ್ತದೆ.

ಪ್ರಾಣಿಗಳ ದಾಳಿಯಿಂದ ರಕ್ಷಣೆ ಪಡೆದುಕೊಳ್ಳಲು ಈ ಎಲ್ಲಾ ಕಸರತ್ತುಗಳನ್ನು ಮಾಡುವುದು ಹಟ್ಟಿಯಲ್ಲಿ ನೆಲೆಸಿರುವ ರೈತಾಪಿ ವರ್ಗಕ್ಕೆ ರೂಢಿಯಾಗಿದೆ. ಕೊರಳ ಕರಗಸ ಧರಿಸಿದ ನಾಯಿಗಳು ಕುರಿಗಾರರಿಗೆ ದೊಡ್ಡ ಶಕ್ತಿಯಾಗಿವೆ. ಇದರಲ್ಲಿ ರೈತರ ಬದುಕಿನ ಸಂಕಟವಿದೆ. ಕಾಡುಪ್ರಾಣಿಗಳನ್ನು ಓಡಿಸುವ ಸವಾಲಿನ ಕೆಲಸವೂ ಇರುವುದು ಅವರಿಗೆ ಬೇಸರ ಹಾಗೂ ಖುಷಿಯ ಭಾವ ಒಟ್ಟೊಟ್ಟಿಗೆ ತಂದೊಡ್ಡುತ್ತದೆ. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಒಂದೇ ರೀತಿಯ ಶಬ್ದಗಳಿಗೆ ಅಕ್ಷರ ಪಟ್ಟಿಯಿಂದ ಆಯ್ದು ತುಂಬಿ ಬೇರೆ ಬೇರೆ ಪದಗಳನ್ನು ಮಾಡಿ.

1	ಸಂ		ಲ	ನ	11	ಸಂ		ಲ	ನ
2	ಸ		ಚಾ	ರ	12	ಸ		ಚಾ	ರ
3	ಸ		ಕಾ	ರ	13	ಸ		ಕಾ	ರ
4	ಹು		ಕಾ	ಟ	14	ಹು		ಕಾ	ಟ
5	ದ		ಪ	ತಿ	15	ದ		ಪ	ತಿ
6	ಬ		ಗಾ	ರ	16	ಬ		ಗಾ	ರ
7	ಗು		ಗ	ಳು	17	ಗು		ಗ	ಳು
8	ಅ		ಕಾ	ರ	18	ಅ		ಕಾ	ರ
9	ಅ		ಮಾ	ನ	19	ಅ		ಮಾ	ನ
10	ಅ		ಮಾ	ನ	20	ಅ		ಮಾ	ನ

ಅಕ್ಷರ ಪಟ್ಟಿ

ಹ	ಡು	ಮಾ	ಭಿ	ಪ	ಣ	ಕ	ದಾ
ರು	ರ	ಲಿ	ಣ	ಚ	ಧಿ	ನ	ಲಂ
				ನು	ಳ	ವ	ಳೆ

ಜಾಣಪದ ಆಟ 2

ಇಲ್ಲಿ ಕೊಟ್ಟಿರುವ 'ತರ' ಎಂಬ ಎರಡಕ್ಷರಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡು ಅಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1	ತ	ರ		
2	ತ	ರ		
3	ತ	ರ		
4	ತ	ರ		
5	ತ	ರ		

ಅಕ್ಷರ ಪಟ್ಟಿ

ಬೇ	ಕಾ	ತಿ	ರಿ	ತಿ
ಗ	ವಾ	ತ	ಡು	ಮ

ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಜೂನ್ ತಿಂಗಳಿನಲ್ಲಿ ನಾವು ಪರಿಸರ ಜಾಗೃತಿ ಕೆಲಸಗಳನ್ನು ಮಾಡಬೇಕೆಂದು ಶಾಲೆಯಲ್ಲಿ ಗುರುಗಳು ಹೇಳಿದ್ದರು. ಅದನ್ನು ಕೇಳಿಸಿಕೊಂಡು ಹೊರಬಂದ ಗುಂಡನಿಗೆ ಹೊರಗೊಂದು ಮರ ಕತ್ತರಿಸಿರುವುದು ಕಂಡಿತು. ಆ ಜಾಗದಲ್ಲಿ ಇನ್ನೊಂದು ಗಿಡ ಬೆಳೆಸಬೇಕೆಂದು ಅವನು ನಿರ್ಧರಿಸಿದ. ಕುಂಡದಲ್ಲಿನ ಗಿಡವನ್ನು ತಂದು ಕತ್ತರಿಸಿದ ಮರದ ಮೇಲಿಟ್ಟ. ಅದಕ್ಕೆ ನೀರೆರೆದು ಪೋಷಿಸಿದ. ಗಿಡ ದೊಡ್ಡದಾದರೂ ಗುಂಡ ಕುಂಡವನ್ನು ಮಾತ್ರ ತೆಗೆಯಲಿಲ್ಲ. ಕೊನೆಗೆ ಬೇರುಗಳೇ ಕುಂಡದಿಂದ ಆಚೆ ಬರಲು ಪ್ರಾರಂಭಿಸಿತು. ಇದನ್ನು ಕಂಡ ಗುಂಡ ಬೆರಗಾಗಿ ನಿಂತ.

ಪರಿಸರ ಕಾಳಜಿ!

ಶಬ್ದಾಟ

ಇಲ್ಲಿರುವ ಶಬ್ದಕ್ಕೆ ಕೊಟ್ಟಿರುವ ಒಂದಕ್ಷರ ಸೇರಿಸಿ ಹೊಸ ಪದ ಮಾಡಿ

ದ್ರಾಕ್ಷಿಮಾರು
+
ಲೆ

ಉತ್ತರ: ______________

9 ರ ಗಮ್ಮತ್ತು

11X9 =99
12X9 =108
13X9 =117
14X9 =126
15X9 =135
16X9 =144
17X9 =153
18X9 =162
19X9 =171
20X9 =180

ಉತ್ತರದಲ್ಲಿ ಇಳಿಕೆ ಕ್ರಮದ ಗಮ್ಮತ್ತನ್ನು ಗಮನಿಸಿ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ವಶ	+	ಕೇಡಿ	+	ಗು	=	
2	ಜೋಳ	+	ನಗು	+	ಗು	=	
3	ಸೇವೆ	+	ತುತೂ	+	ಗು	=	
4	ಜಗ	+	ಸಾರ	+	ಲ	=	
5	ಸಖಿ	+	ಜಮ	+	ಮು	=	

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಹಾಜೀರಾ ಮುಜಾಹಿದ್
ರಾಣೆಬೆನ್ನೂರು

ವಿಹಾ ಮಂಜುನಾಥ
ಹಾಸನ

ತನುಶ್ರೀ
ಬಾದಾಮಿ

ಪ್ರಾಪ್ತಿ ಬಡಾನಿಡಿಯೂರು
ಉಡುಪಿ

ಅಭಿಮನ್ಯು
ಬನ್ನೇರುಘಟ್ಟ

ವಿಕ್ರಂ ದಳವಾಯಿ
ಸಿಂದಗಿ

ಹುಡುಕಾಟ

ಇಲ್ಲಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಓರ್ವ ಪ್ರಸಿದ್ಧ ಕಾದಂಬರಿಕಾರರ ಹೆಸರು ಹುಡುಕಿ

1	ಸುಕೃತಪುಣ್ಯ	5	ಜಿಪುಣತನ
2	ಉಷ್ಣವಲಯ	6	ವಿರಾಜಮಾನ
3	ಅಮೂಲ್ಯವಸ್ತು	7	ಅಣಿಗೊಳಿಸು
4	ಕಾರ್ತಿಕಮಾಸ	8	ಅಂಕಗಣಿತ

ವರ್ಡ್ ಗೇಮ್

ಈ ಅಕ್ಷರಗಳನ್ನು ಬಳಸಿಕೊಂಡು 'ನೀರು' ಎಂಬ ಅರ್ಥ ಬರುವಂತೆ ಹೇಗೆ ಮಾಡುವಿರಿ.

HIJKLMNO

'0'ದಿಂದ '10'ರವರೆಗೆ

0	ಶೂನ್ಯ ಸಂಪಾದನೆ ಒಂದು ಮಹತ್ವದ ಗ್ರಂಥ
1	ಕುಟುಂಬದಂತೆ ನಾವೆಲ್ಲರೂ ಬಾಳಬೇಕು
2	ಬಗೆಯಬೇಡ ಜೀವನದಲ್ಲಿ
3	ಖಿನ್ನಾಗಬೇಡ ಜೀವನದಲ್ಲಿ
4	ನರಕಗಳು ಇಲ್ಲಿಯೇ ಇವೆ
5	ದಳದ ಪತ್ರ ಶ್ರೇಷ್ಠ
6	ನಾನೆಂದು ತಿಳಿದು ನಡೆ
7	ಎದ್ದೇಳು ಗುರಿ ಮುಟ್ಟುವ ತನಕ ನಿಲ್ಲದಿರು
8	ಎದೆಯ ಭಂಟನಾಗು
9	ಒಂಬತ್ತು ಗಮ್ಮತ್ತು
10	ವಿಜಯದ ಮೆಟ್ಟಲು

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಸಾವಿರ ಗೋವು 2.ಗಜವದನ 3.ಮೊದಲದಿನ 4.ಗುರುನಾನಕ 5.ಜಮೀನುಮಾರು

ಜಾಣಪದ ಆಟ 1: 1.ನರಕ 2.ವರದಿ 3.ಸರತಿ 4.ಕರಡಿ 5.ಮರಣ 6.ಹರವಿ 7.ಶರಣ 8.ಜರಡಿ 9.ಬರಹ 10.ಗರಡಿ

ಜಾಣಪದ ಆಟ 2: 1.ಸಮಾರಂಭ 2.ಸಮಾರೋಪ 3.ಸಮಾಲೋಕ 4.ಸಮಾವೇಶ 5.ಸಮಾಹಿತ

ಮೋಜಿನ ಇಂಗ್ಲಿಷ್: 1.DICE 2.PRICE 3.TWICE 4.MICE 5.RICE 6.VOICE 7.NICE 8.SLICE

ವರ್ಡ್ ಗೇಮ್: DIAMOND

ಒಗಟುಗಳು: 1.ತುಟಿಗಳು 2.ಕುಂಬಳಕಾಯಿ ಬಳ್ಳಿ 3.ಅರಪಾವು, ಚಟಾಕು 4.ಆಕಾಶ, ಚುಕ್ಕಿ 5.ಹೊಸ್ತಿಲು 6.ಪೊರಕೆ

ಅಮೆರಿಕ ತಂಡದ ಭರ್ಜರಿ ಆರಂಭ

ಫ್ಲೊರಿನ್ ಬಾಲೋಗನ್ ಅವಳಿ ಗೋಲು
● ಪರಗ್ವೆ ವಿರುದ್ಧ 4–1 ಅಂತರದ ಗೆಲುವು

ಲಾಸ್ ಏಂಜಲೀಸ್ (ಎಎಫ್‌ಪಿ/ ಪಿಟಿಐ): ಜಂಟಿ ಆತಿಥೇಯ ಅಮೆರಿಕ ತಂಡ ಫಿಫಾ ವಿಶ್ವಕಪ್ ಅಭಿಯಾನವನ್ನು ಭರ್ಜರಿಯಾಗಿ ಆರಂಭಿಸಿತು. ಹಾಲಿವುಡ್ ದಿಗ್ಗಜರ ಸಮ್ಮುಖದಲ್ಲಿ ನಡೆದ ಪಂದ್ಯದಲ್ಲಿ ಫ್ಲೊರಿನ್ ಬಾಲೋಗನ್ ಅವರ ಅವಳಿ ಗೋಲಿನ ನೆರವಿನಿಂದ ಅಮೆರಿಕ ಶುಕ್ರವಾರ 4–1 ಗೋಲುಗಳಿಂದ ಪರಗ್ವೆ ತಂಡವನ್ನು ಸೋಲಿಸಿತು.

ಆತಿಥೇಯರು 'ಡಿ' ಗುಂಪಿನ ಪಂದ್ಯದ ಆರಂಭದಲ್ಲೇ ಉಡುಗೊರೆ ಗೋಲು ಗಳಿಸಿದರಲ್ಲದೇ, ಮೊದಲಾರ್ಧದ ಉದ್ದಕ್ಕೂ ಪ್ರಭುತ್ವ ಮೆರೆದು ವಿರಾಮದ ವೇಳೆ 3-0 ಮುನ್ನಡೆ ಸಾಧಿಸಿದರು. ಈ ಅವಧಿಯಲ್ಲಿ ಅಭಿಮಾನಿಗಳು ಸಂಭ್ರಮದಲ್ಲಿ ಮುಳುಗಿದ್ದರು.

ಈ ಹಿಂದಿನ ಕತಾರ್ ವಿಶ್ವಕಪ್‌ನಲ್ಲಿ ಅಮೆರಿಕ ನಾಲ್ಕು ಪಂದ್ಯಗಳಲ್ಲಿ ಒಟ್ಟು ಮೂರು ಗೋಲುಗಳನ್ನಷ್ಟೇ ಗಳಿಸಿತ್ತು. ಆದರೆ ಹೊಸ ಕೋಚ್ ಮೌರಿಸಿಯೊ ಪೊಚೆಟ್ಟಿನೊ ಮಾರ್ಗದರ್ಶನದಲ್ಲಿ ತಂಡ ಉತ್ಸಾಹದಿಂದ ಆಡಿತು. 16 ವರ್ಷಗಳಲ್ಲಿ ಮೊದಲ ಬಾರಿ ವಿಶ್ವಕಪ್ ಪಂದ್ಯ ಆಡಿದ ದಕ್ಷಿಣ ಅಮೆರಿಕದ ದೇಶ ಪರಗ್ವೆ ಒತ್ತಡಕ್ಕೆ ಒಳಗಾಯಿತು.

ಸೋಫಿ ಕ್ರೀಡಾಂಗಣದಲ್ಲಿದ್ದ 70,500 ಮಂದಿ ಪ್ರೇಕ್ಷಕರು ತವರು ತಂಡಕ್ಕೆ ಒಕ್ಕೊರಲಿನ ಬೆಂಬಲ ನೀಡಿದರು. ಹಾಲಿವುಡ್ ತಾರೆಯರಾದ ಟಾಮ್ ಕ್ರೂಸ್, ಲಿಯೊನಾರ್ಡೊ ಡಿ ಕ್ಯಾಪ್ರಿಯೊ, ಪ್ಯಾರಿಸ್ ಹಿಲ್ಟನ್, ಜಾರ್ಜ್ ಲುಕಾಸ್ ಜೊತೆಗೆ ಎನ್‌ಬಿಎ ದಿಗ್ಗಜ ಕರೀಮ್ ಅಬ್ದುಲ್ ಜಬ್ಬಾರ್, ಮೈಕ್ರೊಸಾಫ್ಟ್ ಸಹ ಸ್ಥಾಪಕ ಬಿಲ್ ಗೇಟ್ಸ್ ಸೇರಿದಂತೆ ಹಲವು ಗಣ್ಯಾತಿಗಣ್ಯರು ಪಂದ್ಯ ವೀಕ್ಷಿಸಿದರು.

ಅಮೆರಿಕ ಫಾರ್ವರ್ಡ್‌ಗಳು ಆರಂಭದಿಂದಲೇ ಅಲೆಯೋಪಾದಿಯಲ್ಲಿ ದಾಳಿಗಳನ್ನು ನಡೆಸಿದರು. ಏಳನೇ ನಿಮಿಷ ಮಿಡ್‌ಫೀಲ್ಡರ್ ಕ್ರಿಶ್ಚಿಯನ್ ಪುಲಿಸೆಚ್ ಅವರಿಂದ ದೊರೆತ ಉತ್ತಮ ಪಾಸ್‌ನಲ್ಲಿ ವೆಸ್ಟನ್ ಮೆಕ್‌ಕೆನ್ನಿ ಗೋಲಿನತ್ತ ಚೆಂಡು ಹೊಡೆದರು. ಕಾಲು ಚಾಚಿ ತಡೆಯಲು ಮುಂದಾದ ಪರಗ್ವೆ ರಕ್ಷಣ ಆಟಗಾರ ಜೂನಿಯರ್ ಅಲೊನ್ಸೊ ಅವರಿಗೆ ತಾಗಿದ ಚೆಂಡು ಗೋಲಿನೊಳಕ್ಕೆ ನುಗ್ಗಿದಾಗ ಕ್ರೀಡಾಂಗಣದಲ್ಲಿ ಸಂಚಲನವಾಯಿತು.

31ನೇ ನಿಮಿಷ ಕ್ರಿಶ್ಚಿಯನ್ ಪುಲಿಸೆಚ್ ಅವರ ಅಸಿಸ್ಟ್‌ನಲ್ಲಿ ಬಾಲೋಗನ್ ಗೋಲು ಹೊಡೆದು ಮುನ್ನಡೆ ಹೆಚ್ಚಿಸಿದರು.

ಮೊದಲಾರ್ಧದ 'ಇಂಜುರಿ ಅವಧಿ'ಯಲ್ಲಿ (45 + 5) ಬಾಲೋಗನ್ ಮತ್ತೊಂದು ಗೋಲು ಹೊಡೆದರು. ನ್ಯೂಯಾರ್ಕ್‌ನಲ್ಲಿ ಜನಿಸಿ ಲಂಡನ್‌ನಲ್ಲಿ ಬೆಳೆದ ಬಾಲೋಗನ್ ಮೂರು ವರ್ಷಗಳ ಹಿಂದಷ್ಟೇ ಅಮೆರಿಕಕ್ಕೆ ಆಡುವ ನಿರ್ಧಾರ ಕೈಗೊಂಡಿದ್ದರು. ವಿರಾಮದ ನಂತರ ಪುಲಿಸೆಚ್ ಬದಲು ಸೆಬಾಸ್ಟಿಯನ್ ಬೆರ್ಹಾಲ್ಟರ್ ಆಟಕ್ಕಿಳಿದರು. ಪ್ರಮುಖ ಆಟಗಾರ ಪುಲಿಸೆಚ್ ಗಾಯಗೊಂಡಿದ್ದರೆ ಅದು ಏನೆಂಬುದು ಸ್ಪಷ್ಟವಾಗಿಲ್ಲ. ಇದರಿಂದ ಅಮೆರಿಕ ಆತಂಕ ತುರುಸು ಹೊಂಚಿತ್ತಿತು.

73ನೇ ನಿಮಿಷ, ಜೂಲಿಯೊ ಎನ್ಸಿಸೊ ಅವರಿಂದ ದೊರೆತ ಪಾಸ್‌ನಲ್ಲಿ ಬ್ರೈಲ್ ಸಂಜಾತ ಮೌರಿಸಿಯೊ ಅವರು ಅಮೆರಿಕದ ಗೋಲಿನ ಬಲೆ ಉಂಡಾದ ಗೋಲದಲ್ಲಿ ನಡುವೆ ಪರಗ್ವೆ ತಂಡದ ಮೊದಲ ಗೋಲು ಗಳಿಸಿದರು.

ಆದರೆ ಪಂದ್ಯ ಮುಗಿಯಲು ಕ್ಷಣಗಳಿರುವಾಗ ಜೆಯೊ ರೆಯ್ನಾ ಅವರು ಅವರಿಂದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಪಂದ್ಯಗಳು

ಆಸ್ಟ್ರೇಲಿಯಾ	V/s	ಟರ್ಕಿ
ಭಾನುವಾರ ಬೆಳಿಗ್ಗೆ 9.30		
ಜರ್ಮನಿ	V/s	ಕ್ಯುರಸಾವೊ
ಭಾನುವಾರ ರಾತ್ರಿ 10.30		
ನೆದರ್ಲೆಂಡ್ಸ್	V/s	ಜಪಾನ್
ಭಾನುವಾರ ರಾತ್ರಿ 1.30		
ಐವರಿ ಕೋಸ್ಟ್	V/s	ಈಕ್ವೆಡಾರ್
ಸೋಮವಾರ ನಸುಕಿನ ಜಾವ 4.30		

ಲೈವ್: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಆ್ಯಪ್

ಪರಗ್ವೆ ತಂಡದ ವಿರುದ್ಧ ಅವಳಿ ಗೋಲು ದಾಖಲಿಸಿದ ಅಮೆರಿಕ ತಂಡದ ಫ್ಲೊರಿನ್ ಬಾಲೋಗನ್ (ಎಡದಿಂದ ಎರಡನೆಯವರು) ಸಹ ಆಟಗಾರರೊಂದಿಗೆ ಸಂಭ್ರಮಿಸಿದರು — ಎಎಫ್‌ಪಿ ಚಿತ್ರ

ಬೋಸ್ನಿಯಾ ಮತ್ತು ಹರ್ಜೆಗೋವಿನಾ ತಂಡದ ಜೊತೆ ಡ್ರಾ
ಮೊದಲ ಅಂಕ ಪಡೆದ ಕೆನಡಾ

ಟೊರಾಂಟೊ (ಎಎಫ್‌ಪಿ): ಜಂಟಿ ಆತಿಥೇಯ ಕೆನಡಾ ತಂಡವು ಉತ್ತರಾರ್ಧದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಬೋಸ್ನಿಯಾ ಮತ್ತು ಹರ್ಜೆಗೋವಿನಾ ತಂಡದ ಜೊತೆ 1-1 ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು. ಇದು ಇದುವರೆಗಿನ ವಿಶ್ವಕಪ್ ಇತಿಹಾಸದಲ್ಲಿ ಕೆನಡಾ ಗಳಿಸಿದ ಮೊದಲ ಪಾಯಿಂಟ್ ಆಗಿದೆ.

ಈ ಹಿಂದೆ ಕೆನಡಾ ಎರಡು ವಿಶ್ವಕಪ್‌ಗಳಲ್ಲಿ (1986ರಲ್ಲಿ ಮೆಕ್ಸಿಕೊ ಮತ್ತು 2022ರಲ್ಲಿ ಕತಾರ್‌ನಲ್ಲಿ) ಆಡಿತ್ತು. ಆದರೆ ಆಡಿದ ಎಲ್ಲ ಆರೂ ಪಂದ್ಯಗಳಲ್ಲಿ ಸೋಲನುಭವಿಸಿತ್ತು.

ಇದು ಕೆನಡಾ ನೆಲದಲ್ಲಿ ನಡೆದ ಮೊತ್ತಮೊದಲ ವಿಶ್ವಕಪ್ ಪಂದ್ಯ ಸಹ. ಪೂರ್ವಾರ್ಧದ ಆಟದಲ್ಲಿ ಜೊವೊ ಲುಕಿಕ್ ಗಳಿಸಿದ ಗೋಲಿನಿಂದ ಬೋಸ್ನಿಯಾ ಮುನ್ನಡೆ ಪಡೆದಿತ್ತು. ಆದರೆ ಪಂದ್ಯದ 78ನೇ ನಿಮಿಷ ಕೈಲ್ ಲ್ಯಾರಿನ್ ಗಳಿಸಿದ ಗೋಲಿನಿಂದ ಕೆನಡಾ ಸ್ಕೋರ್ ಸಮ ಮಾಡಿಕೊಂಡಿತು. ಈ ಗೋಲು ಟೊರಾಂಟೊ ಕ್ರೀಡಾಂಗಣದಲ್ಲಿ ಕಿಕ್ಕಿರಿದಿದ್ದ ಪ್ರೇಕ್ಷಕರಲ್ಲಿ ರೋಮಾಂಚನ ಮೂಡಿಸಿತು.

ಕೆನಡಾ –ಬೋಸ್ನಿಯಾ ಮತ್ತು ಹರ್ಜೆಗೋವಿನಾ ನಡುವಣ ಪಂದ್ಯದಲ್ಲಿ ಆಟಗಾರರು ಚೆಂಡಿಗಾಗಿ ಸೆಣಸಿದರು — ಎಎಫ್‌ಪಿ ಚಿತ್ರ

ಪುಟ್ಟ ದ್ವೀಪ ಕ್ಯುರಸಾವೊಕ್ಕೆ ಇಂದು ಜರ್ಮನಿ ಸವಾಲು

ನವದೆಹಲಿ (ಪಿಟಿಐ): ಆನ್ಸನ್ ವಿಲ್ಲೆಂದ ಮಿಡ್‌ಫೀಲ್ಡರ್ ಲಿಯಾಂಡ್ರೊ ಬಕುನಾ, ಅವರ ತಮ್ಮ ಜುನಿನ್ಹೊ, ಶೆಫೀಲ್ಡ್ ಯುನೈಟೆಡ್‌ನ ಫಾರ್ವರ್ಡ್ ತಹಿತ್ ಚೊಂಗ್ ಅವರು ಭಾನುವಾರ ಫಿಫಾ ವಿಶ್ವಕಪ್ ಪಂದ್ಯದಲ್ಲಿ ಪ್ರಬಲ ಜರ್ಮನಿ ತಂಡವನ್ನು ಎದುರಿಸಲಿರುವ ಸಂದರ್ಭವು ಪುಟ್ಟ ದ್ವೀಪ ಕ್ಯುರಸಾವೊ ಪಾಲಿಗೆ ಚಾರಿತ್ರಿಕ ಕ್ಷಣ.

ಹೌಸ್ಟನ್‌ನಲ್ಲಿ ರಾತ್ರಿ 10.30ಕ್ಕೆ (ಭಾರತೀಯ ಕಾಲಮಾನ) ನಡೆಯಲಿರುವ ಈ ಪಂದ್ಯದ ಮೂಲಕ, ಈ ಪುಟ್ಟ ದ್ವೀಪದ ತಂಡವು ವಿಶ್ವಕಪ್‌ನ ಪದಾರ್ಪಣೆ ಮಾಡಲಿದೆ. ಕೇವಲ 1.80 ಲಕ್ಷ ಜನಸಂಖ್ಯೆ ಈ ದೇಶ ಸ್ವಾಯತ್ತ ದೇಶವಾಗಿ 16 ವರ್ಷಗಳಷ್ಟೇ ಆಗಿವೆ.

ವಿಮಾನ ನಿಲ್ದಾಣವಾಗಿರುವ ಹ್ಯಾಟ್ಟಿಗೆ ಈ ದೇಶ ಪ್ರಸಿದ್ಧ. ಕೆರಿಬಿಯನ್ ದ್ವೀಪ ಸಮೂಹದಲ್ಲಿ ಇದ್ದರೂ ಯುರೋಪ್ ಪ್ರಭಾವ ದಟ್ಟವಾಗಿದೆ. 8,000 ಮೈಲಿ ದೂರದಲ್ಲಿರುವ ನೆದರ್ಲೆಂಡ್ ಈ ದ್ವೀಪವನ್ನು ಶತಮಾನಗಳ ಕಾಲ ಆಳಿತ್ತು. ನಂತರ 'ನೆದರ್ಲೆಂಡ್ಸ್ ಆ್ಯಂಟಿಲ್ಸ್' ದೇಶದ ಭಾಗವಾಗಿತ್ತು. 2010ರಿಂದ ಪ್ರತ್ಯೇಕವಾಗಿ ಕ್ಯುರಸಾವೊ ಎನಿಸಿಕೊಂಡಿದೆ.

ಈ ತಂಡದ ಕೋಚ್ ಡಿಕ್ ಅಡ್ವೊಕಾಟ್ ಅವರಿಗೆ 78 ವರ್ಷ. ಅತಿ ಚಿಕ್ಕ ತಂಡದ ಈ ಕೋಚ್ ಹಾಲಿ ವಿಶ್ವಕಪ್‌ನ ಅತಿ ಹಿರಿಯ ತರಬೇತುದಾರ ಎನಿಸಿದ್ದಾರೆ. ಅವರು 2002ರ ವಿಶ್ವಕಪ್‌ನಲ್ಲಿ ಸೆಮಿಫೈನಲ್ ತಲುಪಿದ್ದ ದಕ್ಷಿಣ ಕೊರಿಯಾ ತಂಡಕ್ಕೆ ಕೋಚ್ ಆಗಿದ್ದರು. ಈ ಬಾರಿ ತಂಡ ವಿಶ್ವಕಪ್‌ಗೆ ಅರ್ಹತೆ ಪಡೆಯುವಲ್ಲೂ ಅವರ ಪಾತ್ರ ಮಹತ್ವದ್ದು.

ಅಮೆರಿಕಕ್ಕೆ ಬಂದಿಳಿದ ಪೋರ್ಚುಗಲ್ ತಂಡ

ರೊನಾಲ್ಡೊ

ನ್ಯೂಯಾರ್ಕ್ (ಎಪಿ): 'ಸೂಪರ್ ಸ್ಟಾರ್' ಕ್ರಿಸ್ಟಿಯಾನೊ ರೊನಾಲ್ಡೊ ಅವರ ಪೋರ್ಚುಗಲ್ ಫುಟ್‌ಬಾಲ್ ತಂಡವು ಮೊದಲ ಪಂದ್ಯ ಆಡಲು ಶನಿವಾರ ಅಮೆರಿಕ ದೇಶಕ್ಕೆ ಬಂದಿಳಿದಿದೆ.

41 ವರ್ಷದ ರೊನಾಲ್ಡೊ ಅವರಿಗೆ ಇದು ಆರನೇ ವಿಶ್ವಕಪ್ ಟೂರ್ನಿಯಾಗಿದೆ. ಕೆ ಗುಂಪಿನಲ್ಲಿರುವ ತಂಡವು ಬುಧವಾರ ತನ್ನ ಮೊದಲ ಪಂದ್ಯವನ್ನು ಹೂಸ್ಟನ್‌ನಲ್ಲಿ ಕಾಂಗೊ ವಿರುದ್ಧ ಆಡಲಿದೆ. ಜೂನ್ 23ರಂದು ಎರಡನೇ ಪಂದ್ಯದಲ್ಲಿ ಉಜ್ಬೇಕಿಸ್ತಾನ ಮತ್ತು 27ರಂದು ಮಿಯಾಮಿಯಲ್ಲಿ ಕೊಲಂಬಿಯಾ ಎದುರು ಆಡಲಿದೆ. ಪೋರ್ಚುಗಲ್ ತಂಡಕ್ಕೆ ಇದು 9ನೇ ವಿಶ್ವಕಪ್ ಟೂರ್ನಿಯಾಗಿದೆ. 1966ರಲ್ಲಿ ಮೂರನೇ ಮತ್ತು 2006ರಲ್ಲಿ ನಾಲ್ಕನೇ ಸ್ಥಾನ ಪಡೆದಿತ್ತು. 2022ರಲ್ಲಿ ಪೋರ್ಚುಗಲ್ ತಂಡವು ಕ್ವಾರ್ಟರ್‌ಫೈನಲ್ ಪ್ರವೇಶಿಸಿತ್ತು. ಆದರೆ 0–1ರಿಂದ ಮೊರಾಕ್ಕೊ ವಿರುದ್ಧ ಸೋತಿತ್ತು.

ಆಟಗಾರನಿಗೆ ಸಿಗದ ಕೆನಡಾ ವೀಸಾ: ಘಾನಾ ಪ್ರತಿಭಟನೆ

ಅಕ್ರಾ (ಎಎಫ್‌ಪಿ): ಘಾನಾ ತಂಡದ ಮಿಡ್‌ಫೀಲ್ಡರ್ ಥಾಮಸ್ ಪಾರ್ಟೆ ಅವರಿಗೆ ಕೆನಡಾ ವೀಸಾ ನಿರಾಕರಿಸಿದೆ. ಈ ಬಗ್ಗೆ ತಂಡವು, ಕೆನಡಾಕ್ಕೆ ತನ್ನ ಪ್ರತಿಭಟನೆ ಸಲ್ಲಿಸಿದೆ. ಘಾನಾ ತನ್ನ ಪಂದ್ಯಗಳನ್ನು ಕೆನಡಾ ಮತ್ತು ಅಮೆರಿಕದಲ್ಲಿ ಆಡಲಿದೆ.

ಬ್ರಿಟನ್‌ನಲ್ಲಿ ಅತ್ಯಾಚಾರ ಆರೋಪದ ತನಿಖೆ ಎದುರಿಸುತ್ತಿರುವ 32 ವರ್ಷದ ಪಾರ್ಟೆ ಅವರಿಗೆ ವೀಸಾ ನೀಡಲು ಕೆನಡಾ ನಿರಾಕರಿಸಿದೆ. 'ಇದು ದಬ್ಬಾಳಿಕೆ ಮತ್ತು ಅನ್ಯಾಯದ ಪರಮಾವಧಿ' ಎಂದು ಘಾನಾದ ವಿದೇಶಾಂಗ ಸಚಿವ ಸ್ಯಾಮ್ ಒಕುಡ್‌ಝೆಟೊ ಸಾಮಾಜಿಕ ಮಾಧ್ಯಮದಲ್ಲಿ ಬರೆದಿದ್ದಾರೆ.

ಈ ಹಿಂದೆ ಥಾಮಸ್ ಅವರು ಅರ್ಸೆನಲ್ ಕ್ಲಬ್‌ಗೆ ಆಡುತ್ತಿದ್ದ ವೇಳೆ 2020 ರಿಂದ 2022ರ ಅವಧಿಯಲ್ಲಿ ಪಾರ್ಟೆ ವಿರುದ್ಧ ನಾಲ್ವರು ಮಹಿಳೆಯರು ದೂರು ಸಲ್ಲಿಸಿದ್ದು ಏಳು ಅತ್ಯಾಚಾರ ಮತ್ತು ಒಂದು ಲೈಂಗಿಕ ದೌರ್ಜನ್ಯ ಪ್ರಕರಣದ ದೂರು ದಾಖಲಾಗಿವೆ.

ಸೆಮಿಫೈನಲ್‌ನಲ್ಲಿ ಎಡವಿದ ಸಿಂಧು

ಸಿಡ್ನಿ (ಪಿಟಿಐ): ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ್ತಿ ಪಿ.ವಿ. ಸಿಂಧು ಅವರ ಪ್ರಶಸ್ತಿ ಕಾಯುವಿಕೆ ಮುಂದುವರಿಯಿತು.

ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಅವರು ಅಗ್ರ ಶ್ರೇಯಾಂಕದ ಅಕಾನೆ ಯಮಾಗುಚಿ ಅವರಿಗೆ ಶನಿವಾರ ನೇರ ಆಟಗಳಲ್ಲಿ ಮಣಿದರು.

ಮೂರನೇ ಶ್ರೇಯಾಂಕದ ಭಾರತದ ಆಟಗಾರ್ತಿ 20–22, 12–21 ರಲ್ಲಿ ಯಮಾಗುಚಿ ಅವರಿಗೆ 43 ನಿಮಿಷಗಳ ವರೆಗೆ ನಡೆದ ಸೆಣಸಾಟದಲ್ಲಿ ಸೋತರು. ಸಿಂಧು ನಿರ್ಗಮನದೊಡನೆ ಸೂಪರ್ 500 ಶ್ರೇಣಿಯ ಈ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಪ್ರಶಸ್ತಿಗಾಗಿ ಭಾನುವಾರ ನಡೆಯುವ ಸೆಣಸಾಟದಲ್ಲಿ ಯಮಾಗುಚಿ ಅವರು ಥಾಯ್ಲೆಂಡ್‌ನ ಪಾರ್ನ್‌ಪವೀ ಚೊಚುವಾಂಗ್ ಅವರನ್ನು ಎದುರಿಸಲಿದ್ದಾರೆ. ಎರಡನೇ ಶ್ರೇಯಾಂಕದ ಪಾರ್ನ್‌ಪವೀ ಇನ್ನೊಂದು ಸೆಮಿಫೈನಲ್‌ನಲ್ಲಿ 21–18, 11–21, 21–12 ರಿಂದ ಜಪಾನ್‌ನ ನೊಝೊಮಿ ಒಕುಹಾರ ಅವರ ಸವಾಲನ್ನು ಬದಿಗೊತ್ತಿದರು.

ಸಿಂಧು 2024ರ ಡಿಸೆಂಬರ್‌ನಲ್ಲಿ ಸೈಯ್ಯದ್ ಮೋದಿ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಕೊನೆಯ ಬಾರಿ ಬಿಡಬ್ಲ್ಯುಎಫ್ ಟೂರ್ ಪ್ರಶಸ್ತಿ ಗೆದ್ದಿದ್ದರು. ಈ ವರ್ಷ ಅವರು ಎರಡನೇ ಸೆಮಿಫೈನಲ್ ಆಡಿದಂತಾಯಿತು.

ಗುರ್ಬಾಜ್ ಶತಕ; ಪದಾರ್ಪಣೆಯಲ್ಲಿ ಮಿಂಚಿದ ಗುರ್ನೂರ್, ಹರ್ಷ್
ಶುಭಮನ್ ಬಳಗ ಶುಭಾರಂಭ

ಧರ್ಮಶಾಲಾ (ಪಿಟಿಐ): ಹಿಮಾಲಯ ಪರ್ವತಗಳ ಮಡಿಲಲ್ಲಿರುವ ಸುಂದರ ಕ್ರೀಡಾಂಗಣದಲ್ಲಿ ಶನಿವಾರ ಅಫ್ಗಾನಿಸ್ತಾನ ತಂಡದ ಪಾಲಿಗೆ ರೆಹಮಾನುಲ್ಲಾ ಗುರ್ಬಾಜ್ ಸೊಗಸಾದ ಶತಕವು ಹೆಮ್ಮೆಯ ನೆನಪಾಗಿ ಉಳಿಯಿತು. ಆದರೆ ಅನುಭವಿ ಆಟಗಾರರು ಇರುವ ಆತಿಥೇಯ ಭಾರತ ತಂಡವು ಪಂದ್ಯ ಗೆದ್ದಿತು.

ಇದರೊಂದಿಗೆ ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಭಾರತ 1–0 ಮುನ್ನಡೆ ಸಾಧಿಸಿತು. ಮಳೆಯಿಂದಾಗಿ ವಿಳಂಬವಾಗಿ ಆರಂಭವಾದ ಪಂದ್ಯವನ್ನು 25–25 ಓವರ್‌ಗಳಿಗೆ ನಿಗದಿ ಮಾಡಲಾಯಿತು. ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಗುರ್ಬಾಜ್ ಎದೆಗುಂದಲಿಲ್ಲ. 51 ಎಸೆತಗಳಲ್ಲಿ 102 ರನ್ ಗಳಿಸಿದರು. ಇದರಿಂದಾಗಿ ತಂಡವು 24.5 ಓವರ್‌ಗಳಲ್ಲಿ 194 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಭಾರತ ತಂಡವು ಶುಭಮನ್ ಗಿಲ್ (ಔಟಾಗದೆ 84) ಬ್ಯಾಟಿಂಗ್ ಬಲದಿಂದ 22.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 195 ರನ್ ಗಳಿಸಿ, 7 ವಿಕೆಟ್‌ಗಳಿಂದ ಗೆದ್ದಿತು.

ಈ ಪಂದ್ಯದ ಮೂಲಕ ಅಂತರ ರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಆರೂವರೆ ಅಡಿ ಎತ್ತರದ ಗುರ್ನೂರ್ ಬ್ರಾರ್ (4.5–0–27–3) ಅಮೋಘ ಬೌಲಿಂಗ್ ಮಾಡಿದರು. ಅಫ್ಗನ್ ತಂಡಕ್ಕೆ ಆರಂಭದಲ್ಲಿಯೇ ಪೆಟ್ಟುಕೊಟ್ಟರು. ಇದರಿಂದಾಗಿ ತಂಡವು 26 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು.

'ಟೆಸ್ಟ್ ಪಂದ್ಯದ (ಮುಲ್ಲನಪುರ) ನಂತರ ನಾನು ಭಾರತದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರನ್ನು ಭೇಟಿಯಾದೆ. ಬ್ಯಾಟಿಂಗ್ ಮಾಡುವಾಗ ಹೊಡೆತಗಳನ್ನು ಆಯ್ಕೆ ಮಾಡಿಕೊಳ್ಳುವ ಕೌಶಲ ಸುಧಾರಣೆಗೆ ಮಾರ್ಗದರ್ಶನ ನೀಡಿದರು. ಅದರಿಂದಾಗಿ ನನಗೆ ಇವತ್ತು ಶತಕ ಬಾರಿಸಲು ಸಾಧ್ಯವಾಯಿತು' ಎಂದು ಗುರ್ಬಾಜ್ ಅವರು ಇನಿಂಗ್ಸ್ ನಂತರ ಅಧಿಕೃತ ಪ್ರಸಾರಕರಿಗೆ ನೀಡಿದ ಸಂದರ್ಶನದಲ್ಲಿ ಹೇಳಿದರು.

ಪಿಚ್‌ನಲ್ಲಿ ಚೆಂಡಿನ ಚಲನೆಯು ಉತ್ತಮವಾಗಿತ್ತು. ಆದರೂ ಗುರ್ಬಾಜ್ ಅವರು ಅನುಭವಿ ಅರ್ಷದೀಪ್ ಸಿಂಗ್ ಅವರಿಗೂ ಬಿಸಿ ಮುಟ್ಟಿಸಿದರು. ಅವರ ಎಸೆತವೊಂದನ್ನು ಸಿಕ್ಸರ್‌ಗೆತ್ತಿದರು. ಗುರ್ಬಾಜ್ ಮತ್ತು ಹಷ್ಮತ್‌ವುಲ್ಲಾ ಶಹೀದಿ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 116 (66ಎ) ರನ್ ಸೇರಿಸಿದರು.

ಇದೇ ಪಂದ್ಯದಲ್ಲಿ ಪದಾರ್ಪಣೆ ಮಾಡಿದ ಇನ್ನೊಬ್ಬ ಬೌಲರ್ ಹರ್ಷ್ ದುಬೆ (47ಕ್ಕೆ3) ಕೂಡ ಈ ಪಂದ್ಯವನ್ನು ಅವಿಸ್ಮರಣೀಯಗೊಳಿಸಿಕೊಂಡರು.

ಭಾರತ ತಂಡಕ್ಕೆ ರೋಹಿತ್ ಶರ್ಮಾ ಮತ್ತು ಗಿಲ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 46 ರನ್ ಸೇರಿಸುವ ಮೂಲಕ ಉತ್ತಮ ಆರಂಭ ನೀಡಿದರು. ಆದರೆ, ಆರನೇ ಓವರ್‌ನಲ್ಲಿ ರೋಹಿತ್ ರನ್ ಔಟ್ ಆದರು. ಇದರೊಂದಿಗೆ ರನ್ ಗಳಿಕೆಯ ವೇಗ ತುಸು ಕುಂಠಿತವಾಯಿತು. ಗಿಲ್ ಅವರು ಇಶಾನ್ ಕಿಶನ್ ಜೊತೆಗೆ ಎರಡನೇ ವಿಕೆಟ್‌ಗೆ 70 ರನ್ ಸೇರಿಸಿದರು. ಇಶಾನ್ ಅವರ ವಿಕೆಟ್ ಉರುಳಿಸಿದ ಸ್ಪಿನ್ನರ್ ರಶೀದ್ ಖಾನ್ ಸಂಭ್ರಮಿಸಿದರು. ಗಿಲ್ ಮತ್ತು ಶ್ರೇಯಸ್ ಅಯ್ಯರ್ ಅವರೊಂದಿಗೆ ದೊಡ್ಡ ಜೊತೆಯಾಟ ಕಟ್ಟುವತ್ತ ಚಿತ್ತನೆಟ್ಟಿದ್ದರು. ಆದರೆ ಶ್ರೇಯಸ್ ಬೇಗನೆ ನಿರ್ಗಮಿಸಿದರು. ಕ್ರೀಸ್‌ಗೆ ಬಂದ ಕನ್ನಡಿಗ ಕೆ.ಎಲ್. ರಾಹುಲ್ (39ರನ್) ಅವರು ವಿಕೆಟ್ ಪತನಕ್ಕೆ ಅವಕಾಶವನ್ನೇ ನೀಡಲಿಲ್ಲ. ಗಿಲ್ ಜೊತೆಗೂಡಿದ ಅವರು ಮುರಿಯದ ನಾಲ್ಕನೇ ವಿಕೆಟ್ ಜತೆಯಾಟದಲ್ಲಿ 53 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 24.5 ಓವರ್‌ಗಳಲ್ಲಿ 194 (ರೆಹಮಾನುಲ್ಲಾ ಗುರ್ಬಾಜ್ 102, ಹಷ್ಮತ್‌ವುಲ್ಲಾ ಶಹೀದಿ 27, ಅಜ್ಮತ್‌ಉಲ್ಲಾ ಒಮರ್‌ಜೈ 26; ಅರ್ಷದೀಪ್ ಸಿಂಗ್ 27ಕ್ಕೆ 2, ಗುರ್ನೂರ್ ಬ್ರಾರ್ 27ಕ್ಕೆ 3, ಹರ್ಷ್ ದುಬೆ 47ಕ್ಕೆ 3, ನಿತೀಶ್ ಕುಮಾರ್ ರೆಡ್ಡಿ 31ಕ್ಕೆ 2). ಭಾರತ: 22.5 ಓವರ್‌ಗಳಲ್ಲಿ 3 ವಿಕೆಟ್‌ಗೆ 195 (ಶುಭಮನ್ ಗಿಲ್ ಔಟಾಗದೇ 84, ಇಶಾನ್ ಕಿಶನ್ 34, ಕೆ.ಎಲ್.ರಾಹುಲ್ ಔಟಾಗದೇ 39). ಪಂದ್ಯದ ಆಟಗಾರ: ಶುಭಮನ್ ಗಿಲ್

16,000
ಭಾರತ ತಂಡದ ರೋಹಿತ್ ಶರ್ಮಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆರಂಭಿಕ ಬ್ಯಾಟರ್ ಆಗಿ 16 ಸಾವಿರ ರನ್ ಮೈಲಿಗಲ್ಲು ತಲುಪಿದರು

3,000
ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಏಕದಿನ ಕ್ರಿಕೆಟ್‌ನಲ್ಲಿ 3 ಸಾವಿರ ರನ್ (62 ಇನಿಂಗ್ಸ್) ಗಡಿ ದಾಟಿದರು

ರೆಹಮಾನುಲ್ಲಾ ಗುರ್ಬಾಜ್

ಶುಭಮನ್ ಗಿಲ್ — ಎಎಫ್‌ಪಿ ಚಿತ್ರ

ಪ್ರಾಬಲ್ಯ ಸಾಧಿಸುವತ್ತ ಕೌರ್ ಪಡೆ ಚಿತ್ತ
ಟಿ20 ವಿಶ್ವಕಪ್: ಭಾರತ– ಪಾಕ್ ಮುಖಾಮುಖಿ ಇಂದು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಮಹಿಳೆಯರ ಕ್ರಿಕೆಟ್ ತಂಡವು ಹತ್ತನೇ ಟಿ20 ವಿಶ್ವಕಪ್ ಟೂರ್ನಿಯಲ್ಲಿ 'ಬದ್ಧ ಎದುರಾಳಿ' ಪಾಕಿಸ್ತಾನ ಬಳಗದ ಎದುರಿನ ಪಂದ್ಯದೊಂದಿಗೆ ತನ್ನ ಅಭಿಯಾನ ಆರಂಭಿಸಲಿದೆ.

ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಉತ್ತಮ ಸಮತೋಲನ ಹೊಂದಿರುವ ಭಾರತವು ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರಿಂದ ಉತ್ತಮ ಆರಂಭದ ನಿರೀಕ್ಷೆಯಲ್ಲಿದೆ. ಹೋದ ವರ್ಷ ಏಕದಿನ ಮಾದರಿಯ ಕ್ರಿಕೆಟ್ ವಿಶ್ವಕಪ್ ಜಯಿಸಿದ ಹುಮ್ಮಸ್ಸಿನಲ್ಲಿ ಭಾರತ ತಂಡವಿದೆ. ಅಲ್ಲದೇ ಪಾಕ್ ಎದುರು ಬಲಾಬಲದಲ್ಲಿ ಭಾರತದ್ದೇ ಪಾರಮ್ಯ ಇದೆ. 13–3ರ ದಾಖಲೆಯನ್ನು ಭಾರತದ ವನಿತೆಯರು ಹೊಂದಿದ್ದಾರೆ.

2024ರಲ್ಲಿ ದುಬೈನಲ್ಲಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಆಗ ಭಾರತ ತಂಡವು 6 ವಿಕೆಟ್‌ಗಳಿಂದ ಗೆದ್ದಿತ್ತು. ಅದರ ನಂತರ ಈಗಲೇ ಎದುರುಬದುರಾಗುತ್ತಿವೆ.

ಆದರೆ ಕಳೆದ ಎರಡು ವರ್ಷಗಳಲ್ಲಿ ಭಾರತ ತಂಡವು ಪ್ರಗತಿಪಥ ದಲ್ಲಿ ಮುನ್ನುಗ್ಗುತ್ತಿದೆ. ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ಶ್ರೀಲಂಕಾ ಎದುರಿನ ಸರಣಿಗಳಲ್ಲಿ ಅಮೋಘವಾಗಿ ಆಡಿದೆ. ಅಲ್ಲದೇ ವಿದೇಶಿ ಪಿಚ್‌ಗಳಲ್ಲಿಯೂ ಸ್ಥಿರ ಪ್ರದರ್ಶನ ನೀಡಿದೆ. ಆದರೆ ಈಚೆಗೆ ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ಎದುರು ಸರಣಿ ಸೋಲುಗಳಿಂದ ಪಾಠ ಕಲಿತಿರುವುದು ಇಲ್ಲಿ ಉಪಯುಕ್ತವಾಗಬಹುದು.

ಚುಟುಕು ಮಾದರಿಯಲ್ಲಿ ಆರಂಭಿಕ ಬ್ಯಾಟರ್‌ಗಳ ಪಾತ್ರ ಮಹತ್ವದ್ದು. ಪವರ್‌ಪ್ಲೇಯಲ್ಲಿ ಶಫಾಲಿ ಮತ್ತು ಸ್ಮೃತಿ ಅವರು ರನ್ ಕಲೆಹಾಕಬೇಕು. ಆದರೆ ಸ್ಮೃತಿ ಅವರು ಹೋದ ಫೆಬ್ರುವರಿಯಲ್ಲಿ ಅಡಿಲೇಡ್‌ನಲ್ಲಿ ಆಸ್ಟ್ರೇಲಿಯಾ ಎದುರು 82 ರನ್ ಗಳಿಸಿದ್ದರು. ಅದರ ನಂತರದ ಆರು ಇನಿಂಗ್ಸ್‌ಗಳಲ್ಲಿ (13, 12, 37, 0, 32 ಮತ್ತು 8) ನಿರಾಶೆ ಅನುಭವಿಸಿ ದ್ದಾರೆ. ಶಫಾಲಿ ಅವರದ್ದೂ ಇದೇ ಕತೆ. ಬಲಗೈ ಬ್ಯಾಟರ್ ದಕ್ಷಿಣ ಆಫ್ರಿಕಾ ಎದುರಿನ ಸರಣಿಯ ಪಂದ್ಯದಲ್ಲಿ ಜೋಹಾನೆಸ್ ಬರ್ಗ್‌ನಲ್ಲಿ 64 ರನ್ ಹೊಡೆದಿದ್ದರು. ಅದರ ನಂತರದ ಇನಿಂಗ್ಸ್‌ಗಳಲ್ಲಿ (9, 4, 2, 22 ಮತ್ತು 11) ಲಯ ತಪ್ಪಿದ್ದರು.

ಗಾಯಗೊಂಡಿರುವ ಅಮನ್ಜೋತ್ ಕೌರ್ ಮತ್ತು ಕಶ್ವಿ ಗೌತಮ್ ಅವರ ಅನುಪಸ್ಥಿತಿಯಲ್ಲಿ ಮಧ್ಯಮ ಕ್ರಮಾಂಕದಲ್ಲಿ ಹರ್ಮನ್‌ಪ್ರೀತ್, ಜೆಮಿಮಾ ರಾಡ್ರಿಗಸ್, ಭಾರತಿ ಫೂಲ್ಮಾಲಿ, ರಿಚಾ ಘೋಷ್, ಯಸ್ತಿಕಾ ಭಾಟಿಯಾ ಅವರ ಮೇಲಿನ ಹೊಣೆ ಹೆಚ್ಚಿದೆ. ಆಲ್‌ರೌಂಡರ್ ದೀಪ್ತಿ ಶರ್ಮಾ, ಬೌಲರ್‌ಗಳಾದ ಕ್ರಾಂತಿ ಗೌಡ್, ಅರುಂಧತಿ ರೆಡ್ಡಿ, ರೇಣುಕಾಸಿಂಗ್ ಅವರು ತಮ್ಮ ಸಾಮರ್ಥ್ಯ ಮೆರೆಯಲು ಇದು ಉತ್ತಮ ಅವಕಾಶ. ಶ್ರೇಯಾಂಕಾ ಪಾಟೀಲ ಅವರಿಗೂ ಅವಕಾಶ ಸಿಗಬಹುದು.

ಪಾಕ್ ತಂಡದಲ್ಲಿ ನಾಯಕಿ ಸನಾ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಸನಾ ಅವರು ಕರಾಚಿಯಲ್ಲಿ ಈಚೆಗೆ ನಡೆದಿದ್ದ ಜಿಂಬಾಬ್ವೆ ಎದುರಿನ ಟಿ20 ಪಂದ್ಯದಲ್ಲಿ 15 ಎಸೆತಗಳಲ್ಲಿ ಅರ್ಧಶತಕ ಹೊಡೆದಿದ್ದರು. ಅವರು ಭಾರತದ ಬೌಲರ್‌ಗಳಿಗೆ ಸವಾಲೊಡ್ಡಬಲ್ಲರು.

ಹರ್ಮನ್‌ಪ್ರೀತ್ ಮತ್ತು ಸ್ಮೃತಿ ಮಂದಾನ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಇಂದಿನ ಪಂದ್ಯ

ಬಾಂಗ್ಲಾದೇಶ	V/s	ನೆದರ್ಲೆಂಡ್ಸ್
ತಾಣ: ಎಜ್‌ಬಾಸ್ಟನ್, ಆರಂಭ: ಮಧ್ಯಾಹ್ನ 3		
ಭಾರತ	V/s	ಪಾಕಿಸ್ತಾನ
ತಾಣ: ಎಜ್‌ಬಾಸ್ಟನ್, ಆರಂಭ: ಸಂಜೆ 7		

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಸ್ಕಾಟ್ಲೆಂಡ್‌ಗೆ ಜಯ

ನಾಯಕಿ ಕ್ಯಾಥರಿನ್ ಬ್ರೈಸ್ (60 ರನ್; 19ಕ್ಕೆ 2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಸ್ಕಾಟ್ಲೆಂಡ್ ತಂಡವು ವಿಶ್ವಕಪ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ಶನಿವಾರ ಐರ್ಲೆಂಡ್ ತಂಡವನ್ನು 40 ರನ್‌ಗಳಿಂದ ಮಣಿಸಿತು.

ಸಂಕ್ಷಿಪ್ತ ಸ್ಕೋರು: ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 161 (ಕ್ಯಾಥರಿನ್ ಬ್ರೈಸ್ 60, ಸಾರಾ ಬ್ರೈಸ್ 49; ಅವಾ ಕ್ಯಾನಿಂಗ್ 27ಕ್ಕೆ 3). ಐರ್ಲೆಂಡ್: 19.1 ಓವರ್‌ಗಳಲ್ಲಿ 121 (ಆಮಿ ಹಂಟರ್ 39, ; ಕ್ಯಾಥರಿನ್ ಬ್ರೈಸ್ 19ಕ್ಕೆ 2, ಕಿರ್ಸ್ಟಿ ಗಾರ್ಡನ್ 16ಕ್ಕೆ 3, ಕ್ಯಾಥರಿನ್ ಫ್ರೇಸರ್ 19ಕ್ಕೆ 3). ಪಂದ್ಯದ ಆಟಗಾರ್ತಿ: ಕ್ಯಾಥರಿನ್ ಬ್ರೈಸ್

ಡ್ಯಾನಿ ಶತಕ: ಇಂಗ್ಲೆಂಡ್ ಶುಭಾರಂಭ

ಲಂಡನ್ (ಎಎಫ್‌ಪಿ): ಆರಂಭಿಕ ಬ್ಯಾಟರ್ ಡ್ಯಾನಿ ವ್ಯಾಟ್ ಹಾಜ್ (ಔಟಾಗದೇ 105;62ಎ) ಅವರ ಅಮೋಘ ಶತಕದ ನೆರವಿನಿಂದ ಇಂಗ್ಲೆಂಡ್ ತಂಡವು ಟಿ20 ಮಹಿಳಾ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಬರ್ಮಿಂಗ್‌ಹ್ಯಾಮ್‌ನಲ್ಲಿ ಶುಕ್ರವಾರ ತಡರಾತ್ರಿ ನಡೆದ ಉದ್ಘಾಟನಾ ಪಂದ್ಯದಲ್ಲಿ (ಡಿ ಗುಂಪು) ಇಂಗ್ಲೆಂಡ್ 87 ರನ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿತು. ಟಾಸ್ ಗೆದ್ದ ಲಂಕಾ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಡ್ಯಾನಿ ಮತ್ತು ಆ್ಯಮಿ ಜಾನ್ಸ್ (53;38ಎ) ಅವರು ಮೊದಲ ವಿಕೆಟ್‌ಗೆ 135 ರನ್ ಸೇರಿಸಿ ಇಂಗ್ಲೆಂಡ್ ತಂಡಕ್ಕೆ ಭದ್ರ ಅಡಿಪಾಯ ಹಾಕಿದರು. ನಂತರ ನಾಟ್ ಶಿವರ್ ಬ್ರಂಟ್ (ಔಟಾಗದೇ 46;22ಎ) ಮಿಂಚಿನ ಆಟವಾಡಿದರು. ಹೀಗಾಗಿ ತಂಡವು 1 ವಿಕೆಟ್‌ಗೆ 219 ರನ್ ಗಳಿಸಿತು.

ಇದು ಟಿ20 ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ತಂಡದ ಅತ್ಯಧಿಕ ಮೊತ್ತವಾಗಿದೆ. 2023ರಲ್ಲಿ ಪಾಕಿಸ್ತಾನ ವಿರುದ್ಧ 5 ವಿಕೆಟ್‌ಗೆ 213 ರನ್ ಗಳಿಸಿದ್ದು ಈವರೆಗಿನ ದಾಖಲೆಯಾಗಿತ್ತು.

ಲಂಕಾ ತಂಡವು 20 ಓವರ್‌ಗಳಲ್ಲಿ 132 ರನ್ ಗಳಿಸಿ ಹೋರಾಟ ಮುಗಿಸಿತು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 20 ಓವರ್‌ಗಳಲ್ಲಿ 1 ವಿಕೆಟ್‌ಗೆ 219 (ಡ್ಯಾನಿ ವ್ಯಾಟ್ ಹಾಜ್ ಔಟಾಗದೇ 105, ಆ್ಯಮಿ ಜಾನ್ಸ್ 53, ನಾಟ್ ಶಿವರ್ ಬ್ರಂಟ್ ಔಟಾಗದೇ 46. ಶ್ರೀಲಂಕಾ: 20 ಓವರ್‌ಗಳಲ್ಲಿ 132 (ನೀಲಾಕ್ಷಿಕಾ ಸಿಲ್ವಾ 39; ಫ್ರೇಯಾ ಕೆಂಪ್ 22ಕ್ಕೆ 4, ಚಾರ್ಲಿ ಡೀನ್ 18ಕ್ಕೆ 2, ಸೋಫಿ ಎಕ್ಲೆಸ್ಟೋನ್ 27ಕ್ಕೆ 2). ಪಂದ್ಯದ ಆಟಗಾರ್ತಿ: ಡ್ಯಾನಿ ವ್ಯಾಟ್ ಹಾಜ್

ಆಸ್ಟ್ರೇಲಿಯಾಕ್ಕೆ ಮಣಿದ ದಕ್ಷಿಣ ಆಫ್ರಿಕಾ

ಆಸ್ಟ್ರೇಲಿಯಾ ವನಿತೆಯರ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ ತನ್ನ ಏಳನೇ ಪ್ರಶಸ್ತಿಗೆ ಅಭಿಯಾನವನ್ನು ಆರಂಭಿಸಿತು. ಸೋಫಿ ಮಾಲಿನೆ ಬಳಗವು ಶನಿವಾರ ಮ್ಯಾಂಚೆಸ್ಟರ್‌ನಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ಹಾಲಿ ರನ್ನರ್ಸ್ ಅಪ್ ದಕ್ಷಿಣ ಆಫ್ರಿಕಾ ತಂಡವನ್ನು 65 ರನ್‌ಗಳಿಂದ ನಿರಾಯಾಸವಾಗಿ ಮಣಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆಕೊಂಡ ಆಸ್ಟ್ರೇಲಿಯಾ ತಂಡವು ಫೋಬಿ ಲಿಚ್‌ಫೀಲ್ಡ್ (50;24ಎ) ಅವರ ಮಿಂಚಿನ ಅರ್ಧಶತಕದ ನೆರವಿನಿಂದ 8 ವಿಕೆಟ್‌ಗೆ 172 ರನ್ ಗಳಿಸಿತು. ತಂಡವು 24 ರನ್ ಗಳಿಸುವಷ್ಟರಲ್ಲಿ ಆರಂಭಿಕ ಆಟಗಾರ್ತಿಯರಾದ ಬೆತ್ ಮೂನಿ ಮತ್ತು ಜಾರ್ಜಿಯಾ ವೋಲ್ ಡಗೌಟ್ ಸೇರಿಕೊಂಡರು. ನಂತರ ಲಿಚ್‌ಫೀಲ್ಡ್ ಮತ್ತು ಎಲಿಸ್ ಪೆರಿ (36) ತಂಡಕ್ಕೆ ಉಪಯುಕ್ತ ಚೇತರಿಕೆ ನೀಡಿದರು. ಕೊನೆಯಲ್ಲಿ ಜಾರ್ಜಿಯಾ ವೇರ್‌ಹ್ಯಾಮ್ (32) ಮತ್ತು ಅನ್ನಾಬೆಲ್ ಸದರ್ಲೆಂಡ್ (21) ತಂಡದ ಮೊತ್ತ ಹಿಗ್ಗಿಸಲು ನೆರವಾದರು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು ವೇರ್‌ಹ್ಯಾಮ್ (13ಕ್ಕೆ3), ಸೋಫಿ ಮಾಲಿನೆ (17ಕ್ಕೆ2) ಅವರ ಪರಿಣಾಮಕಾರಿ ದಾಳಿಯಿಂದಾಗಿ 16.4 ಓವರ್‌ಗಳಲ್ಲಿ 107 ರನ್‌ಗಳಿಗೆ ಕುಸಿಯಿತು. ನಾಯಕಿ ಲಾರಾ ವೋಲ್ವಾರ್ಟ್ ಹೊರತುಪಡಿಸಿ ಉಳಿದವರು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 172 (ಫೋಬಿ ಲಿಚ್‌ಫೀಲ್ಡ್ 50, ಎಲಿಸ್ ಪೆರಿ 36, ಜಾರ್ಜಿಯಾ ವೇರ್‌ಹ್ಯಾಮ್ 32; ಅಯಾಬೊಂಗಾ ಕಾಕಾ 33ಕ್ಕೆ 2, ನಾನ್‌ಕುಲುಲೆಕೊ ಮ್ಲಾ 22ಕ್ಕೆ 2, ನದೀನ್ ದಿ ಕರ್ಕ್ 35ಕ್ಕೆ 2). ದಕ್ಷಿಣ ಆಫ್ರಿಕಾ: 16.4 ಓವರ್‌ಗಳಲ್ಲಿ 107 (ಲಾರಾ ವೋಲ್ವಾರ್ಟ್ 44, ನದೀನ್ ಡಿ ಕ್ಲರ್ಕ್ 25; ಸೋಫಿ ಮಾಲಿನೆ 17ಕ್ಕೆ 2, ಅಲೆನಾ ಕಿಂಗ್ 26ಕ್ಕೆ 2, ಜಾರ್ಜಿಯಾ ವೇರ್‌ಹ್ಯಾಮ್ 13ಕ್ಕೆ 3). ಪಂದ್ಯದ ಆಟಗಾರ್ತಿ: ಜಾರ್ಜಿಯಾ ವೇರ್‌ಹ್ಯಾಮ್

'ಅಹಮದಾಬಾದ್‌ನಲ್ಲಿ ಹೆಚ್ಚು ಜನರು ಐಪಿಎಲ್ ಪಂದ್ಯ ವೀಕ್ಷಿಸಿದರು'

ಹುಬ್ಬಳ್ಳಿ: 'ಐಪಿಎಲ್ ಫೈನಲ್ ಪಂದ್ಯ ಬೆಂಗಳೂರು ಬದಲು ಅಹಮದಾಬಾದ್‌ನಲ್ಲಿ ನಡೆದಿದ್ದರಿಂದ ಕೆಎಸ್‌ಸಿಎಗೆ ಆದಾಯ ನಷ್ಟವಾಗಿದೆ ಎಂದು ಹೇಳಲಾಗದು. ಅಲ್ಲಿ ಪಂದ್ಯ ನಡೆದಿದ್ದರಿಂದ ಹೆಚ್ಚು ಜನರಿಗೆ ವೀಕ್ಷಿಸಲು ಸಾಧ್ಯವಾಯಿತು' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ವೆಂಕಟೇಶ ಪ್ರಸಾದ್ ಹೇಳಿದರು.

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ಕುರಿತು ಶನಿವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್‌ಸಿಬಿ ತಂಡ ಹಾಲಿ ಚಾಂಪಿಯನ್ ಆಗಿದ್ದರಿಂದ ಬೆಂಗಳೂರಿನಲ್ಲಿಯೇ ಫೈನಲ್ ನಡೆಯಬೇಕಿತ್ತು. ಇಲ್ಲಿ ಪಂದ್ಯ ನಡೆದಿದ್ದರೆ 35 ಸಾವಿರ ಟಿಕೆಟ್‌ಗಳನ್ನು ಮಾತ್ರ ಮಾರಾಟ ಮಾಡಬಹುದಿತ್ತು. ಅಹಮದಾಬಾದ್‌ನಲ್ಲಿ 85 ಸಾವಿರಕ್ಕೂ ಹೆಚ್ಚು ಟಿಕೆಟ್ ಮಾರಾಟ ಮಾಡಲಾಗಿದೆ. ಇದರಿಂದ ಸಾಕಷ್ಟು ಜನರಿಗೆ ಅವಕಾಶ ಸಿಕ್ಕಿತು. ಇದರಲ್ಲಿ ಲಾಭ, ನಷ್ಟದ ಪ್ರಶ್ನೆ ಬರುವುದಿಲ್ಲ' ಎಂದರು.

'ಮುಂದಿನ ವರ್ಷ ಐಪಿಎಲ್ ಫೈನಲ್ ಪಂದ್ಯವನ್ನು ಬೆಂಗಳೂರಿನಲ್ಲಿ ನಡೆಸುವ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ವಿಷಯದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಹಾಗೂ ಫ್ರಾಂಚೈಸಿಗಳ ಮಾಲೀಕರು ನಿರ್ಧಾರ ಕೈಗೊಳ್ಳುತ್ತಾರೆ' ಎಂದು ಹೇಳಿದರು.

'ರಾಜ್ಯ ತಂಡಕ್ಕೆ ಆಟಗಾರರನ್ನು ಆಯ್ಕೆ ಮಾಡುವ ವಿಷಯದಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂಬ ತಾರತಮ್ಯ ಮಾಡುವುದಿಲ್ಲ. ಉತ್ತಮ ಪ್ರದರ್ಶನ, ಪ್ರತಿಭೆ ಇದ್ದರೆ ಖಂಡಿತವಾಗಿಯೂ ರಣಜಿ ತಂಡದಲ್ಲಿ ಅವಕಾಶ ಸಿಗುತ್ತದೆ. ರಾಜ್ಯದಲ್ಲಿ ಎರಡನೇ ರಣಜಿ ತಂಡ ರಚನೆ ಬಗ್ಗೆ ಬಿಸಿಸಿಐ ಮಾತ್ರ ನಿರ್ಣಯ ಕೈಗೊಳ್ಳಬೇಕು' ಎಂದರು.

ಬ್ಲಾಸ್ಟರ್ಸ್ ಜರ್ಸಿ ಬಿಡುಗಡೆ

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಜರ್ಸಿಯನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರು ಶುಕ್ರವಾರ ಬಿಡುಗಡೆ ಮಾಡಿದರು. (ಎಡದಿಂದ) ಕೆಎಸ್‌ಸಿಎ ಆಡಳಿತ ಸಮಿತಿಯ ಸದಸ್ಯ ಅವಿನಾಶ್ ವೈದ್ಯ, ವಕ್ತಾರ ವಿನಯ್ ಮೃತ್ಯುಂಜಯ, ಕಲ್ಯಾಣಿ ಮೋಟರ್ಸ್ ಸಿಇಒ ವೆಂಕಟೇಶ್ವರ ರಾವ್, ಕಲ್ಯಾಣಿ ಸಮೂಹದ ನಿರ್ದೇಶಕಿ ಪ್ರಿಯಾಂಕಾ ಎಂ. ರಾಜು ಹಾಗೂ ಲೀಗ್‌ನ ಆಡಳಿತ ಮಂಡಳಿ ಸದಸ್ಯ ಎ.ವಿ.ಶಶಿಧರ್ ಭಾಗವಹಿಸಿದ್ದರು

ಗಾಲ್ಫ್: ಅನ್ವಿತಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ಅನ್ವಿತಾ ನರೇಂದರ್ ಇಲ್ಲಿ ಶನಿವಾರ ಮುಕ್ತಾಯಗೊಂಡ 'ಹೀರೊ ಮಹಿಳಾ ವೃತ್ತಿಪರ ಗಾಲ್ಫ್ ಟೂರ್ನಿ' (ಡಬ್ಲ್ಯುಪಿಜಿಟಿ) 7ನೇ ಹಂತದ ಟೂರ್ನಿಯ ಪ್ಲೇ ಆಫ್‌ನಲ್ಲಿ ರೋಚಕ ಗೆಲುವಿನೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯುಜಿಸಿ) ಮೈದಾನದಲ್ಲಿ ನಡೆದ ಟೂರ್ನಿಯ ಮೂರು ದಿನಗಳ ಆಟದ ಅಂತ್ಯಕ್ಕೆ ಅನ್ವಿತಾ ಹಾಗೂ ಅನುಭವಿ ಆಟಗಾರ್ತಿ ವಾಣಿ ಕಪೂರ್ ತಲಾ 209 ಸ್ಕೋರ್‌ನೊಂದಿಗೆ ಜಂಟಿ ಅಗ್ರ ಸ್ಥಾನ ಹಂಚಿಕೊಂಡಿದ್ದರು. ಇದರಿಂದಾಗಿ ವಿಜೇತರನ್ನು ನಿರ್ಧರಿಸಲು 'ಪ್ಲೇ-ಆಫ್' ಮೊರೆ ಹೋಗಲಾಯಿತು.

ಒತ್ತಡದ ನಡುವೆಯೂ ಅದ್ಭುತ ಪ್ರದರ್ಶನ ನೀಡಿದ ಅನ್ವಿತಾ, 2ನೇ ಹೋಲ್‌ನಲ್ಲಿ ವಾಣಿ ಕಪೂರ್ ಅವರಿಗೆ ಆಘಾತ ನೀಡಿದರು. ಈ ಗೆಲುವಿನೊಂದಿಗೆ ₹2.3 ಲಕ್ಷ ಬಹುಮಾನ ಜೇಬಿಗಿಳಿಸಿಕೊಂಡರು.

ಅಂತಿಮ ದಿನ 64ರ ಅತ್ಯುತ್ತಮ ಸ್ಕೋರ್ ಕಲೆಹಾಕಿದ ವಾಣಿ ರನ್ನರ್ ಅಪ್ ಆದರು. ರಿಯಾ ಜಾದನ್ (210) ಮೂರನೇ ಸ್ಥಾನ ಪಡೆದರು. ಮೈಸೂರಿನ ಪ್ರತಿಭೆ ವಿಧಾತ್ರಿ ಅರಸ್ 212 ಅಂಕಗಳೊಂದಿಗೆ ಖುಷಿ ಹಾಗೂ ಅಮನ್‌ದೀಪ್ ದ್ರಾಲ್ ಅವರೊಂದಿಗೆ ನಾಲ್ಕನೇ ಸ್ಥಾನವನ್ನು ಹಂಚಿಕೊಂಡರು.

ಚಾಂಪಿಯನ್ ಅನ್ವಿತಾ (ಎಡ) ಹಾಗೂ ರನ್ನರ್ ಅಪ್ ವಾಣಿ ಕಪೂರ್

ಏಷ್ಯನ್ ಕ್ರೀಡಾಕೂಟ: ಲಕ್ಷ್ಯ, ಸಿಂಧು, ಆಯುಷ್ ಕಣಕ್ಕೆ

ನವದೆಹಲಿ (ಪಿಟಿಐ): ಅನುಭವಿ ಆಟಗಾರರಾದ ಲಕ್ಷ್ಯ ಸೇನ್ ಹಾಗೂ ಪಿ.ವಿ.ಸಿಂಧು ಅವರು ಈ ವರ್ಷದ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿರುವ 20ನೇ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಬ್ಯಾಡ್ಮಿಂಟನ್ ತಂಡದ ಸವಾಲನ್ನು ಮುನ್ನಡೆಸಲಿದ್ದಾರೆ.

ಕನ್ನಡಿಗ ಆಯುಷ್ ಶೆಟ್ಟಿ ಅವರು ಪುರುಷರ ಸಿಂಗಲ್ಸ್‌ನಲ್ಲಿ (ವೈಯಕ್ತಿಕ) ಸೇನ್ ಅವರೊಂದಿಗೆ ಸ್ಥಾನ ಪಡೆದಿದ್ದಾರೆ. ಹಾಲಿ ಚಾಂಪಿಯನ್ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಡಬಲ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಕೂಟವು ಜಪಾನ್‌ನ ಐಚಿ–ನಗೊಯಾ ನಗರದಲ್ಲಿ ಸೆ. 19ರಿಂದ ಅ. 4ರ ವರೆಗೆ ನಡೆಯಲಿದೆ. ಕ್ರಿಕೆಟ್, ಟೆನಿಸ್, ಕಬಡ್ಡಿ, ಬ್ಯಾಡ್ಮಿಂಟನ್, ಅಥ್ಲೆಟಿಕ್ಸ್ ಸೇರಿ 41 ಸ್ಪರ್ಧೆಗಳು ಇರಲಿವೆ.

ಆಯುಷ್ ಶೆಟ್ಟಿ

ಭಾರತ ಬ್ಯಾಡ್ಮಿಂಟನ್ ಸಂಸ್ಥೆಯು ಶನಿವಾರ ಪ್ರಕಟಿಸಿರುವ ತಂಡ ಹೀಗಿದೆ: ವೈಯಕ್ತಿಕ ಚಾಂಪಿಯನ್‌ಷಿಪ್: ಸಿಂಗಲ್ಸ್: ಪುರುಷರು: ಲಕ್ಷ್ಯ ಸೇನ್, ಆಯುಷ್ ಶೆಟ್ಟಿ; ಮಹಿಳೆಯರು: ಪಿ.ವಿ.ಸಿಂಧು, ಉನ್ನತಿ ಹೂಡಾ. ಡಬಲ್ಸ್: ಪುರುಷರು: ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ, ಹರಿಹರನ್ ಅಮ್ಸಕರುಣನ್– ಎಂ.ಆರ್.ಅರ್ಜುನ್; ಮಹಿಳೆಯರು: ಟ್ರೀಸಾ ಜೋಲಿ– ಗಾಯತ್ರಿ ಗೋಪಿಚಂದ್, ಕವಿಪ್ರಿಯ ಸೆಲ್ವಂ– ಸಿಮ್ರನ್ ಸಿಂಘಿ. ಮಿಶ್ರ ಡಬಲ್ಸ್: ಧ್ರುವ್ ಕಪಿಲ– ತನಿಷಾ ಕ್ರಾಸ್ಟೊ. **ಟೀಂ ಚಾಂಪಿಯನ್‌ಷಿಪ್:** ಪುರುಷರು: ಲಕ್ಷ್ಯ ಸೇನ್, ಆಯುಷ್ ಶೆಟ್ಟಿ, ಎಚ್.ಎಸ್.ಪ್ರಣಯ್, ಕಿದಂಬಿ ಶ್ರೀಕಾಂತ್, ತರುಣ್ ಮನ್ನೆಪಲ್ಲಿ, ಸಾತ್ವಿಕ್, ಚಿರಾಗ್ ಶೆಟ್ಟಿ, ಹರಿಹರನ್, ಎಂ.ಆರ್.ಅರ್ಜುನ್ ಹಾಗೂ ಧ್ರುವ್ ಕಪಿಲ. ಮಹಿಳೆಯರು: ಪಿ.ವಿ.ಸಿಂಧು, ಉನ್ನತಿ ಹೂಡ, ದೇವಿಕಾ ಸಿಹಾಗ್, ತನ್ವಿ ಶರ್ಮಾ, ಇಶಾರಾಣಿ ಬರೂವಾ, ಟ್ರೀಸಾ ಜೋಲಿ, ಗಾಯತ್ರಿ, ಕವಿಪ್ರಿಯ ಸೆಲ್ವಂ, ಸಿಮ್ರನ್ ಸಿಂಘಿ, ತನಿಷಾ ಕ್ರಾಸ್ಟೊ.